ಅರ್ಥ–8

ಏಪ್ರಿಲ್ 2026



ಯುದ್ಧದ ಆರ್ಥಿಕ ಪರಿಣಾಮ
ಹೊಸ ಜಿಡಿಪಿ ಲೆಕ್ಕಾಚಾರ

ಆತ್ಮೀಯರೆ,

ಅರ್ಥ ಎಂಟನೆಯ ಸಂಚಿಕೆ ಈಗ ನಿಮ್ಮ ಮುಂದಿದೆ. ಈ ನಡುವೆ ಹಲವು ಬೆಳವಣಿಗೆಗಳಾಗಿವೆ. ಇರಾನ್ ಮೇಲಿನ ಯುದ್ಧ ಮುಂದುವರಿಯುತ್ತಲೇ ಇದೆ. ನಿಲ್ಲುವ ಸೂಚನೆಗಳು ಕಾಣುತ್ತಿಲ್ಲ. ಪರಿಣಾಮ ತೀವ್ರವಾಗುವ ಸಾಧ್ಯತೆಗಳೇ ಹೆಚ್ಚು. ಸಹಜವಾಗಿಯೇ ಆತಂಕ ಹೆಚ್ಚುತ್ತಿದೆ. ಈ ಬಗ್ಗೆ ಹಲವು ಪ್ರಖ್ಯಾತರ ಪ್ರತಿಕ್ರಿಯೆಗಳು ಈ ಸಂಚಿಕೆಯಲ್ಲಿದೆ.

ಜಿಡಿಪಿ ಯಾವಾಗಲೂ ವಿವಾದದ ವಿಷಯವೇ ಆಗಿದೆ. ಜಿಡಿಪಿಯನ್ನು ಬೆಳವಣಿಗೆಯ ಮಾಪನವನ್ನಾಗಿ ಬಳಸುವ ಬಗ್ಗೆಯೇ ಅನುಮಾನಗಳು ವ್ಯಾಪಕವಾಗಿದೆ. ಜೊತೆಗೆ ಭಾರತದಲ್ಲಿ ಅದನ್ನು ಲೆಕ್ಕಾಚಾರ ಮಾಡುವ ವಿಧಾನ ಹಾಗೂ ಅದಕ್ಕೆ ಬಳಸುವ ದತ್ತಾಂಶದ ಬಗ್ಗೆಯೇ ಅನುಮಾನಗಳಿವೆ. ಸಂತೋಷದ ವಿಷಯ ಅಂದರೆ ಭಾರತೀಯ ಸಾಂಖ್ಯಿಕ ಮಂತ್ರಾಲಯ ಜಿಡಿಪಿಯನ್ನು ಅಂದಾಜು ಮಾಡುವ ವಿಧಾನದಲ್ಲಿ ಸಾಕಷ್ಟು ಪರಿಷ್ಕರಣೆ ಮಾಡಿ, ಹೊಸ ಜಿಡಿಪಿ ಅಂದಾಜನ್ನು ಬಿಡುಗಡೆ ಮಾಡಿದೆ. ಜಿಡಿಪಿಯನ್ನು ಕುರಿತು ಇದ್ದ ಅನುಮಾನಗಳು, ಪರಿಷ್ಕೃತ ಜಿಡಿಪಿಯ ಬಗ್ಗೆ ಮಾಹಿತಿ, ವಿಶ್ಲೇಷಣೆ ಇತ್ಯಾದಿಗಳನ್ನು ಕುರಿತಂತೆ ವಿಭಿನ್ನ ದೃಷ್ಟಿಕೋನದ ಬರಹಗಳು ಈ ಸಂಚಿಕೆಯಲ್ಲಿವೆ.

16ನೇ ಹಣಕಾಸು ಆಯೋಗದ ವರದಿಯ ಬಗ್ಗೆ ಹಿರಿಯರಾದ ಸಿ ರಂಗರಾಜನ್ ಪ್ರತಿಕ್ರಿಯಿಸಿದ್ದಾರೆ. ಆಡಂ ಸ್ಮಿತ್ ಅವರ ವೆಲ್ತ್ ಆಫ್ ನೇಷನ್ ಪುಸ್ತಕದ 250ನೇ ವರ್ಷ ಹಾಗೂ ಮಹಿಳಾ ದಿನಾಚರಣೆಯ ನೆನಪಿಗೆ, ಹಿರಿಯರ ಬರಹಗಳನ್ನು ಕನ್ನಡಿಸಿ ನೀಡಲಾಗಿದೆ.

ಅಮರ್ತ್ಯ ಸೇನರ ಬರಹದ ಮುಂದುವರಿಕೆಯಾಗಿ ಅವರ 'ಸಾಮಾಜಿಕ ಆಯ್ಕೆ' ಸಿದ್ಧಾಂತವನ್ನು ಪರಿಚಯಿಸಲಾಗಿದೆ. ಭಾರತೀಯ ಅರ್ಥಶಾಸ್ತ್ರಜ್ಞರ ಮಾಲಿಕೆಯಲ್ಲಿ ಡಾ. ಬಿ ಆರ್ ಅಂಬೇಡ್ಕರ್ ಅವರ ಚಿಂತನೆಗಳನ್ನು ಪರಿಚಯಿಸಲು ಪ್ರಯತ್ನಿಸಲಾಗಿದೆ.

ಲೇಖನಗಳನ್ನು ಬಳಸಿಕೊಳ್ಳುವುದಕ್ಕೆ ಜಯನ್ ಜೋಸ್ ಥಾಮಸ್, ಅಶೋಕ್ ಗುಲಾಟಿ, ಅಶೋಕ್ ಮೋದಿ, ಅರವಿಂದ್ ಸುಬ್ರಮಣಿಯನ್, ಸಿ ರಂಗರಾಜನ್, ಹಿಮಾಂಶು ಇವರೆಲ್ಲಾ ಪ್ರೀತಿಯಿಂದ ಅನುಮತಿ ನೀಡಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆಗಳು.

ಕನ್ನಡದಲ್ಲಿ ಅರ್ಥಶಾಸ್ತ್ರದ ಬಗ್ಗೆ ಹೆಚ್ಚೆಚ್ಚು ಅರಿವು ಮೂಡಬೇಕು, ಚರ್ಚೆಯಾಗಬೇಕೆನ್ನುವ ಆಸೆ ಇದೆ. ಇದು ಉಪಯೋಗವಾಗುತ್ತಿದೆಯೋ, ಇಲ್ಲವೋ ತಿಳಿಯದು. ಪ್ರತಿಕ್ರಿಯಿಸಿ. ನಿಮ್ಮ ಅಭಿಪ್ರಾಯ ಪತ್ರಿಕೆಯನ್ನು ಹೆಚ್ಚು ಉಪಯುಕ್ತವಾಗಿಸುವುದಕ್ಕೆ ಅನುಕೂಲ. ಯಾವುದೇ ಸಲಹೆಯೂ ಸ್ವಾಗತಾರ್ಹ.

ಆಸಕ್ತ ಗೆಳೆಯರೊಂದಿಗೆ ಹಂಚಿಕೊಳ್ಳಿ. ಇಮೇಲ್ ತಲುಪಿಸಿದರೆ ಅವರಿಗೂ ತಲುಪಿಸಬಹುದು. 'ಅರ್ಥ' ಪತ್ರಿಕೆಯ ಹಳೆಯ ಸಂಚಿಕೆಗಳಿಗೆ ಮತ್ತು ನಮ್ಮ ಇತರ ಪುಸ್ತಕ ಹಾಗೂ ಬರಹಗಳಿಗೆ **www.lokayatha.com** ನೋಡಿ.

ಪ್ರೀತಿಯಿಂದ

ಟಿ ಎಸ್ ವೇಣುಗೋಪಾಲ್

statsvenugopal@gmail.com

9900082773



ಒಳ ಪುಟಗಳಲ್ಲಿ

ಸುಂಕ ಹಾಗೂ ಯುದ್ಧ : ನಲುಗುತ್ತಿರುವ ಭಾರತ

ಅರ್ಥ ಬಳಗ

ಇಂದು ಜಗತ್ತಿನಲ್ಲಿ ಎಲ್ಲವೂ ಅನಿಶ್ಚಿತ. ಆರ್ಥಿಕತೆ, ರಾಜಕೀಯ, ಎಲ್ಲವೂ ಕ್ಷಣಕ್ಷಣಕ್ಕೆ ಬದಲಾಗುತ್ತಿವೆ. ದೇಶಗಳ ನಡುವಿನ ಸಂಬಂಧಗಳು ಬದಲಾಗುತ್ತಿವೆ. ಇಂದು ಮಿತ್ರರಾಗಿದ್ದ ದೇಶಗಳು, ನಾಳೆ ಶತ್ರುಗಳು. ಭಾರತವನ್ನು ಅಮೆರಿಕೆ ಈವರೆಗೆ ಚೀನಾದ ವಿರುದ್ಧದ ಒಂದು ಶಕ್ತಿಯಾಗಿ ಭಾವಿಸಿತ್ತು. ಈಗ ಅದು ಅಮೇರಿಕೆಯ ಸರಕು ಮತ್ತು ಸೇವೆಗಳಿಗೆ ಒಂದು ದೊಡ್ಡ ಮಾರುಕಟ್ಟೆ. ಅಮೆರಿಕ ಹೆಚ್ಚೆಚ್ಚು ಸಾಮ್ರಾಜ್ಯಶಾಹಿ ರೂಪ ಪಡೆದುಕೊಳ್ಳುತ್ತಿದೆ. ತನ್ನ ಸ್ವಂತ ಹಿತಾಸಕ್ತಿಗಾಗಿ ಸುಂಕ, ಸೈನ್ಯ, ಯಾವುದು ಬೇಕಾದರೂ ಅದಕ್ಕೆ ಅಸ್ತ್ರವಾಗಬಹುದು. ಇದರ ಬಗ್ಗೆ ಅದಕ್ಕೆ ಯಾವುದೇ ಮುಚ್ಚುಮರೆ ಇಲ್ಲ. ಇತ್ತೀಚೆಗೆ ಮ್ಯೂನಿಚ್ ಭದ್ರತಾ ಸಮ್ಮೇಳನದಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೋ ಇದನ್ನು ಸ್ಪಷ್ಟವಾಗಿ ಹೇಳಿದ್ದಾನೆ.

"ಮಹಾನ್ ಪಾಶ್ಚಾತ್ಯ ಸಾಮ್ರಾಜ್ಯಗಳು ಅವನತಿ ಹೊಂದುತ್ತಿವೆ, ನಿರೀಶ್ವರವಾದಿ ಕಮ್ಯುನಿಸ್ಟ್ ಕ್ರಾಂತಿಗಳು ಮತ್ತು ವಸಾಹತುಶಾಹಿ ವಿರೋಧಿ ದಂಗೆಗಳು ಜಗತ್ತನ್ನು ಬದಲಿಸಿವೆ". ಈಗ ನಾವು ಮತ್ತೆ ಪಾಶ್ಚಾತ್ಯ ಜಗತ್ತನ್ನು ದೊಡ್ಡ ಶಕ್ತಿಯನ್ನಾಗಿ ಮಾಡಬೇಕು. ಅಧ್ಯಕ್ಷ ಡೊನಾಲ್ಡ್ ಟ್ರಂಪ್ 'ಅಮೆರಿಕವನ್ನು ಮತ್ತೆ ಮಹಾನ್ ದೇಶವನ್ನಾಗಿ' ಮಾಡಹೊರಟಿರುವುದರ ಹಿಂದಿನ ಉದ್ದೇಶವೇ "ಪಾಶ್ಚಾತ್ಯ ಜಗತ್ತನ್ನು ಮತ್ತೆ ಮಹಾನ್ ಆಗಿಸುವುದು". ರೂಬಿಯೋ ಅವರ 'ಮ್ಯೂನಿಚ್ ಪ್ರಣಾಳಿಕೆ', 'ಕ್ರೈಸ್ತ ಪಾಶ್ಚಾತ್ಯ' ದೇಶಗಳ ನಾಗರಿಕತೆಯ ಏಕತೆಯ ಘೋಷಣೆಯೂ ಹೌದು. 'ನಿರೀಶ್ವರವಾದಿ ಕಮ್ಯುನಿಸ್ಟರು' ಹಾಗೂ 'ಜಾಗತಿಕ ದಕ್ಷಿಣದ' 'ವಸಾಹತುಶಾಹಿ ವಿರೋಧಿಗಳ' ವಿರುದ್ಧದ ಸಮರ ಘೋಷಣೆಯೂ ಹೌದು. ಇಂದು ಅಮೆರಿಕ ಎರಡನೆಯ ಮಹಾಯುದ್ಧದ ನಂತರ ಗಳಿಸಿದ ಅಧಿಪತ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಕ್ಯೂಬಾ, ವೆನೆಜುವೆಲಾ, ಇರಾನ್ ಮೇಲಿನ ದಾಳಿಗಳನ್ನು ಇಂತಹ ಪ್ರಯತ್ನಗಳಾಗಿ ನೋಡಬಹುದು. ತನ್ನ ಸಾಮ್ರಾಜ್ಯಶಾಹಿ ಆಡಳಿತಕ್ಕೆ ಪೂರಕವಲ್ಲದ ಆಡಳಿತವನ್ನು ಬದಲಿಸುವ ಅಧಿಕಾರವನ್ನು ತನ್ನ ಕೈಗೆತ್ತಿಕೊಂಡಿದೆ. ಅಂತರರಾಷ್ಟ್ರೀಯ ಕಾನೂನಿನ ನಿಯಮಗಳನ್ನೆಲ್ಲಾ ಉಲ್ಲಂಘಿಸಿ, ನೇರ ಮಿಲಿಟರಿ ಹಸ್ತಕ್ಷೇಪ ನಡೆಸುತ್ತಿದೆ. ದಶಕಗಳ ಕಾಲ ವಸಾಹತುಶಾಹಿ ವಿರೋಧಿ ಚಳುವಳಿಗಳಿಂದ ಸಂಪಾದಿಸಿದ್ದ ಸ್ವಾತಂತ್ರ್ಯವನ್ನು ತೃತೀಯ ಜಗತ್ತಿನ ರಾಷ್ಟ್ರಗಳಿಂದ ಕಸಿದುಕೊಳ್ಳುವ ಪ್ರಯತ್ನಗಳು ತೀವ್ರವಾಗಿ ನಡೆಯುತ್ತಿವೆ. ರಷ್ಯಾದಿಂದ ಪೆಟ್ರೋಲ್ ಕೊಳ್ಳಲು ಅಮೆರಿಕದ 'ಅನುಮತಿ' ಪಡೆದುಕೊಳ್ಳಬೇಕಾದ ಸ್ಥಿತಿ ನಮ್ಮಂಥ ದೇಶಗಳಿಗೆ ನಿರ್ಮಾಣವಾಗಿದೆ.

ಹಿಂದೆ ತನಗೆ ಪಾವತಿ ಕೊರತೆ ಎದುರಾಗಿದ್ದಾಗ ಬ್ರಿಟನ್ ವಸಾಹತುಗಳಿಂದ ಲೂಟಿ ಮಾಡಿ ಕೊರತೆಯನ್ನು ನೀಗಿಸಿಕೊಂಡಿತ್ತು. ಈಗ ಅಮೆರಿಕದ ಆರ್ಥಿಕತೆ ತೀವ್ರ ಬಿಕ್ಕಟ್ಟಿನಲ್ಲಿದೆ. ವಿಶ್ವದ ಅತಿ ದೊಡ್ಡ ಸಾಲಗಾರ ದೇಶವಾಗಿದೆ. ಈವರೆಗೆ ಡಾಲರನ್ನು ಮುದ್ರಿಸಿ ಬಿಕ್ಕಟ್ಟನ್ನು ನಿರ್ವಹಿಸಿಕೊಳ್ಳುತ್ತಿದ್ದ ಅಮೆರಿಕ ಬೇರೆ ದಾರಿ ಕಂಡುಕೊಳ್ಳಬೇಕಾಗಿದೆ. ವಸಾಹತುಗಳಿಲ್ಲದೆ ಸಾಮ್ರಾಜ್ಯಶಾಹಿಗೆ ಅಸ್ತಿತ್ವವಿಲ್ಲ. ಜಗತ್ತಿನ ಎಲ್ಲಾ ಕಡೆ ತನ್ನ ಮಾತು ಕೇಳುವ ತನ್ನ 'ಆರ್ಥಿಕ, ರಾಜಕೀಯ ಹಾಗೂ ಮಿಲಿಟರಿ ಹಿತಾಸಕ್ತಿಗೆ ಹೊಂದಿಕೊಳ್ಳುವ' ಸರ್ಕಾರಗಳನ್ನು ನೇಮಿಸಬೇಕಾಗಿದೆ. ನಿರಂತರ ಮಾರುಕಟ್ಟೆಗೆ, ಕಚ್ಚಾ ಪದಾರ್ಥಗಳಿಗೆ ಅದಕ್ಕೆ ವಸಾಹತುಗಳು ಬೇಕು. ವೆನೆಜುವೆಲಾ, ಇರಾನಿನಂತಹ ತೈಲಸಂಪದ್ಭರಿತ ದೇಶಗಳ ಮೇಲಿನ ದಾಳಿಯ ಹಿಂದಿನ ಉದ್ದೇಶವೂ ಇದೇ. "ವೆನೆಜುವೆಲಾದಲ್ಲಿ ನಾನು ಆಡಳಿತ ನಡೆಸುತ್ತೇನೆ, ಅಲ್ಲಿಯ ತೈಲವನ್ನು ವಶಕ್ಕೆ ತೆಗೆದುಕೊಳ್ಳುತ್ತೇನೆ" ಎಂದು ಟ್ರಂಪ್ ನೇರವಾಗಿ ಹೇಳಿದ್ದಾನೆ. ಇನ್ನು ಮುಂದೆ ಅಮೆರಿಕದ ಕಂಪೆನಿಗಳು ಅವುಗಳ ಮಾಲೀಕರಾಗುತ್ತವೆ.

ಟ್ರಂಪ್ ತನ್ನ ಅಧ್ಯಕ್ಷತೆಯ ಮೊದಲ ಅವಧಿಯಲ್ಲೇ ಸುಂಕ ವಿಧಿಸಲು ಪ್ರಾರಂಭಿಸಿದ್ದ. "ಸುಂಕ ಅನ್ನುವುದು ಶಬ್ದಕೋಶದಲ್ಲಿ ಅತ್ಯಂತ ಸುಂದರವಾದ ಪದ" ಎಂದು ಬಿಂಕದಿಂದ ಹೇಳಿಕೊಳ್ಳುತ್ತಿದ್ದ. ತನ್ನ ಎರಡನೆ ಅವಧಿಯಲ್ಲಿ ಅದನ್ನು ಹೆಚ್ಚು ತೀವ್ರಗೊಳಿಸಿದ. ಮೊದಲು ಮೆಕ್ಸಿಕೋ, ಕೆನಡಾ ಮತ್ತು ಚೀನಾದ ಮೇಲೆ ಶೇಕಡಾ 10 ರಿಂದ 25 ರಷ್ಟು ಸುಂಕ ಹಾಕಿದ. ಆ ದೇಶಗಳಿಂದ ಮಾದಕ ವಸ್ತುವಾದ ಫೆಂಟಾನಿಲ್ ಅಮೆರಿಕಕ್ಕೆ ಸರಬರಾಜಾಗುತ್ತಿದೆ, ಅದನ್ನು ತಡೆಯುವುದಕ್ಕಾಗಿ ಸುಂಕ ಹಾಕುತ್ತಿರುವುದಾಗಿ ಘೋಷಿಸಿದ. ಎಲ್ಲಾ ದೇಶಗಳು ಅಮೆರಿಕದ ಮೇಲೆ ಸುಂಕ ಹಾಕಿ ತಮ್ಮನ್ನು ದೋಚುತ್ತಿವೆ, ಅದರಿಂದ ತಮ್ಮ ಕೈಗಾರಿಕೆಗಳು ನಾಶವಾಗಿವೆ, ತಾನು ಅಧ್ಯಕ್ಷನಾಗಿರುವುದು ಅಮೆರಿಕದ ಪುಣ್ಯ, ಅಮೆರಿಕವನ್ನು ದೋಚುವುದರಲ್ಲಿ ಎಲ್ಲಾ ದೇಶಗಳು ಭಾಗಿಯಾಗಿವೆ, ಹಾಗಾಗಿ ಎಲ್ಲಾ ದೇಶಗಳ ಮೇಲೆ ಪ್ರತಿಸುಂಕ ಹಾಕುತ್ತೇನೆ, ಮತ್ತೆ ಅಮೆರಿಕದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುತ್ತೇನೆ ಎಂದು ಘೋಷಿಸಿದ. ಎಲ್ಲಾ ದೇಶಗಳ ಮೇಲೆ 10% ಸುಂಕ ಹಾಕಿ ಏಪ್ರಿಲ್ 2ನ್ನು ಅಮೆರಿಕದ ವಿಮೋಚನೆಯ ದಿನವನ್ನಾಗಿ ಘೋಷಿಸಿದ. ಅಷ್ಟೇ ಅಲ್ಲ ಚೀನಾ, ಬ್ರಿಟನ್, ಇಂಡಿಯಾ ಮುಂತಾದ ದೇಶಗಳು ಹೆಚ್ಚು ಅನ್ಯಾಯ ಮಾಡಿವೆ ಅನ್ನುವ ಕಾರಣಕ್ಕೆ ಅವುಗಳ ಮೇಲೆ ವಿಶೇಷ ಸುಂಕಗಳನ್ನು ಹಾಕಿದ. ಭಾರತದ ಮೇಲೆ 26%, ಚೀನಾದ ಮೇಲೆ 34% ಹೀಗೆ ಸುಂಕದ ಪಟ್ಟಿ ಬೆಳೆಯುತ್ತಾ ಹೋಯಿತು. ಅಲ್ಲಿಗೆ ನಿಲ್ಲಲಿಲ್ಲ ಟ್ರಂಪ್ ಸುಂಕದ ದಾಳಿ, ಪ್ರತಿವಾರ ಒಂದಿಲ್ಲೊಂದು ಹೊಸ ಸುಂಕಗಳನ್ನು ತನಗೆ ತೋಚಿದ ಕಾರಣಕ್ಕೆ ವಿಧಿಸುತ್ತಾ ಹೋದ. ಅಮೆರಿಕ ಗಡೀಪಾರು ಮಾಡಿದ ವಲಸಿಗರನ್ನು





ವಾಪಸ್ ಪಡೆಯಲು ನಿರಾಕರಿಸಿದ್ದಕ್ಕೆ ಕೊಲಂಬಿಯಾ ಮೇಲೆ, ತಮ್ಮ ಸ್ನೇಹಿತ ಮಾಜಿ ಅಧ್ಯಕ್ಷ ಜೈರ್ ಬೋಲ್ಸನಾರೊ ಅವರನ್ನು ವಿಚಾರಣೆಗೆ ಒಳಪಡಿಸಿದ್ದಕ್ಕಾಗಿ ಬ್ರೆಜಿಲ್ ಮೇಲೆ, ರಷ್ಯಾದಿಂದ ತೈಲವನ್ನು ಖರೀದಿಸುತ್ತಿದೆ ಅನ್ನುವ ಕಾರಣಕ್ಕೆ ಭಾರತದ ಮೇಲೆ, ಡಾಲರನ್ನು ಮೀಸಲು ಕರೆನ್ಸಿಯಾಗಿ ಬಳಸುತ್ತಿಲ್ಲ ಅನ್ನುವ ಕಾರಣಕ್ಕೆ ಇನ್ನೊಂದು ದೇಶದ ಮೇಲೆ ಹೀಗೆ ಸುಂಕ ಹಾಕುತ್ತಾ ಹೋದ. ಇದಕ್ಕೆ ಯಾವ ತರ್ಕವೂ ಇರಲಿಲ್ಲ.

ಈ ದೇಶಗಳು ಅಮೆರಿಕದೊಂದಿಗೆ ಮಾತುಕತೆ ನಡೆಸಿ ಒಪ್ಪಂದ ಮಾಡಿಕೊಳ್ಳಬೇಕು. ಅಮೆರಿಕದ ಮೇಲೆ ಹಾಕಿರುವ ಸುಂಕವನ್ನು ತೆಗೆಯಬೇಕು. ಅಮೆರಿಕದ ಸರಕುಗಳಿಗೆ ತಮ್ಮ ಮಾರುಕಟ್ಟೆಯನ್ನು ತೆರೆಯಬೇಕು. ಅಮೆರಿಕದಲ್ಲಿ ಹೂಡಿಕೆಯನ್ನು ಮಾಡಬೇಕು. ಮತ್ತೆ ಅಲ್ಲಿ ಉತ್ಪಾದನೆಯಾಗುವಂತೆ ನೋಡಿಕೊಳ್ಳಬೇಕು, ಇವು ಟ್ರಂಪ್ ಉದ್ದೇಶವಾಗಿತ್ತು. ಹಲವು ದೇಶಗಳು ಅಮೆರಿಕದ ಇಂಗಿತಕ್ಕೆ ಅನುಗುಣವಾಗಿ ಒಪ್ಪಂದಗಳನ್ನು ಮಾಡಿಕೊಂಡವು. ಅದಕ್ಕೆ ಪ್ರತಿಯಾಗಿ ಅಮೆರಿಕ ತನ್ನ ಸುಂಕದಲ್ಲೂ ಒಂದಿಷ್ಟು ಕಡಿತ ಮಾಡಿತು. ಯುರೋಪಿಯನ್ ಯೂನಿಯನ್, ಜಪಾನ್ ಮತ್ತು ದಕ್ಷಿಣ ಕೊರಿಯ ಇವುಗಳಿಗೆ ಶೇಕಡಾ 15%, ವಿಯೆಟ್ನಾಂ ಮತ್ತು ತೈವಾನ್‌ಗೆ 20%, ಇಂಡೋನೇಷ್ಯಾ, ಥೈಲ್ಯಾಂಡ್ ಮತ್ತು ಫಿಲಿಪೈನ್ಸ್‌ಗೆ 19% ಹೀಗೆ ಸುಂಕದ ದರಗಳನ್ನು ನಿಗದಿಪಡಿಸಲಾಗಿತ್ತು.

ಭಾರತವೂ ಒಪ್ಪಂದ ಮಾಡಿಕೊಂಡಿತು

ಭಾರತ ಕೂಡ ಕಳೆದ ತಿಂಗಳು, ಅಮೆರಿಕದೊಂದಿಗೆ ಒಂದು ಜಂಟಿ ಹೇಳಿಕೆಗೆ ಸಹಿ ಹಾಕಿತ್ತು. ಒಪ್ಪಂದ ಇನ್ನೂ ಅಂತಿಮವಾಗಿರಲಿಲ್ಲ. ಆದರೆ ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ "ನರೇಂದ್ರ ಮೋದಿಯವರು ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸಿ, ಅಮೆರಿಕದಿಂದ ಹೆಚ್ಚಿನ ತೈಲವನ್ನು ಖರೀದಿಸಲು ಒಪ್ಪಿಕೊಂಡಿದ್ದಾರೆ; ಅಮೆರಿಕದ ಸರಕು ಸೇವೆಗಳ ಮೇಲಿನ ಸುಂಕವನ್ನು ಭಾರತ ರದ್ದುಗೊಳಿಸುತ್ತದೆ, ಅದಕ್ಕೆ ಪ್ರತಿಯಾಗಿ ಅಮೆರಿಕ ಭಾರತೀಯ ಸರಕುಗಳ ಮೇಲೆ ಸುಂಕವನ್ನು 18%ಗೆ ಇಳಿಸುತ್ತದೆ ಮತ್ತು ಅಮೆರಿಕದಿಂದ 500 ಬಿಲಿಯನ್ ಡಾಲರ್ ಮೌಲ್ಯದ ಅಮೆರಿಕನ್ ಉತ್ಪನ್ನಗಳನ್ನು ಖರೀದಿಸಲು ಮೋದಿ ಒಪ್ಪಿಕೊಂಡಿದ್ದಾರೆ" ಎಂದು ಪ್ರಕಟಿಸಿದ್ದ. ಜೊತೆಗೆ ರಷ್ಯಾದಿಂದ ತೈಲವನ್ನು ಖರೀದಿಸಿದ್ದಕ್ಕೆ ವಿಧಿಸಿದ್ದ 25% ದಂಡದ ಸುಂಕಗಳನ್ನು ಅಮೆರಿಕ ಹಿಂತೆಗೆದುಕೊಳ್ಳುವುದಕ್ಕೆ ಒಪ್ಪಿತ್ತು. ಆದರೆ ಭಾರತ ಮುಂದೆ ರಷ್ಯಾದಿಂದ ನೇರವಾಗಿ ಅಥವಾ ಪರೋಕ್ಷವಾಗಿ ತೈಲ ಖರೀದಿಸಿದರೆ ಮತ್ತೆ 25% ಸುಂಕವನ್ನು ವಿಧಿಸಲಾಗುತ್ತದೆ. ಭಾರತದ ತೈಲ ಬಳಕೆಯ ಮೇಲೆ ನಿಗಾ ಇಡುವುದಕ್ಕೆ ಅಮೆರಿಕದ ಒಂದು ಉನ್ನತ ಅಧಿಕಾರಿಗಳ ಸಮಿತಿಯನ್ನು ರಚಿಸುವುದಾಗಿ ತಿಳಿಸಲಾಯಿತು.

ನಮ್ಮ ವಿದೇಶಾಂಗ ಸಚಿವರು ಅಮೆರಿಕದ ಒತ್ತಡವನ್ನು ಅನ್ಯಾಯ, ಅತಾರ್ಕಿಕ, ಅಸಮಂಜಸ ಎಂದು ಈ ಮೊದಲು ಖಂಡಿಸಿದ್ದರು. ಭಾರತ ತನ್ನ ಸ್ವಾಭಿಮಾನ, ಸ್ವಾಯತ್ತತೆ ಹಾಗೂ ಜನತೆಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತದೆ ಎಂದು ಅವರು ಸ್ಪಷ್ಟವಾಗಿ ಹೇಳಿದ್ದರು. ಈಗ ಭಾರತ ಈ ನಿಲುವಿನಿಂದ ಹಿಂದೆ ಸರಿದಂತೆ ಕಾಣುತ್ತದೆ. ರಷ್ಯಾದಿಂದ ತೈಲ ಖರೀದಿಯನ್ನು ಕಡಿಮೆ ಮಾಡಲು ಪ್ರಾರಂಭಿಸಿದೆ. 2024ರಲ್ಲಿ ನಮ್ಮ ಒಟ್ಟು ತೈಲದಲ್ಲಿ ಶೇಕಡ 40ರಷ್ಟು ರಷ್ಯಾದಿಂದ ಬರುತ್ತಿತ್ತು. 2025ರಲ್ಲಿ ಅದು 25%ಗೆ ಇಳಿದಿದೆ. ಹಿಂದೆ ಇರಾನ್ ಹಾಗೂ ವೆನೆಜುವೆಲಾದಿಂದ ತೈಲ ಕೊಳ್ಳುವ ವಿಷಯದಲ್ಲೂ ಭಾರತ ಅಮೆರಿಕದ ಒತ್ತಡಕ್ಕೆ ಮಣಿದಿತ್ತು. ಇರಾನ್ ಜೊತೆ ಎಲ್ಲಾ ವ್ಯಾಪಾರವನ್ನು ನಿಲ್ಲಿಸಿತ್ತು. ಈಗ ಭಾರತ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಮೆರಿಕದ ರಾಷ್ಟ್ರೀಯ ಸುರಕ್ಷತೆ, ವಿದೇಶಿ ನೀತಿ ಹಾಗೂ ಆರ್ಥಿಕ ವಿಷಯಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಸಿದ್ಧವಾಗಿದೆ ಎಂದು ಬೇರೆ ಹೇಳಿಕೊಂಡಿದೆ.

ಈ ಒಪ್ಪಂದದ ಪ್ರಕಾರ ಭಾರತ ಮುಂದಿನ 5 ವರ್ಷಗಳಲ್ಲಿ ಅಮೆರಿಕದಿಂದ 500 ಶತಕೋಟಿ ಡಾಲರ್ ಮೌಲ್ಯದ 'ಇಂಧನ ಉತ್ಪನ್ನಗಳು, ವಿಮಾನ ಮತ್ತು ವಿಮಾನದ ಬಿಡಿಭಾಗಗಳು, ಅಮೂಲ್ಯ ಲೋಹಗಳು, ತಂತ್ರಜ್ಞಾನದ ಉತ್ಪನ್ನಗಳು' ಖರೀದಿಸುವ 'ಇಂಗಿತ'ವನ್ನು ವ್ಯಕ್ತಪಡಿಸಿದೆ. ಸದ್ಯಕ್ಕೆ ಭಾರತ ಪ್ರತಿವರ್ಷ ಸುಮಾರು 50 ಶತಕೋಟಿ ಡಾಲರ್ ಮೌಲ್ಯದ ಸರಕುಗಳನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತಿದೆ. ಈ ಒಪ್ಪಂದಕ್ಕೆ ನಾವು ಬದ್ಧರಾದರೆ ಇದರ ಎರಡು ಪಟ್ಟು ಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ ಇದು ಆರ್ಥಿಕತೆಗೆ ಹೊರೆಯಾಗುತ್ತದೆ. ನಮ್ಮ ಆರ್ಥಿಕತೆಗೆ ಅನುಕೂಲವಾಗುವ ಯಾವ ಸರಕುಗಳನ್ನು ನಾವು ಅಮೆರಿಕದಿಂದ ಕೊಳ್ಳಬಹುದು ಅನ್ನುವುದು ಸ್ಪಷ್ಟವಿಲ್ಲ. ಅಂತಿಮವಾಗಿ ರಷ್ಯಾದ ತೈಲದ ಬದಲಿಗೆ ಅಮೆರಿಕದಿಂದ ಹೆಚ್ಚಿನ ಬೆಲೆ ತೆತ್ತು ತೈಲವನ್ನೋ, ಶಸ್ತ್ರಾಸ್ತ್ರಗಳನ್ನೋ ಖರೀದಿ ಮಾಡಬೇಕಾಗುತ್ತದೆ. ಅಮೆರಿಕದಿಂದ ಸರಕುಗಳನ್ನು ಕೊಳ್ಳುವುದಕ್ಕೆ 50 ಶತಕೋಟಿ ಡಾಲರಿಗಿಂತ ಹೆಚ್ಚಿನ ಹಣವನ್ನು ಖರ್ಚು ಮಾಡಿಬಿಟ್ಟರೆ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುವ ಪ್ರಮಾಣವನ್ನು ತಗ್ಗಿಸಬೇಕಾಗುತ್ತದೆ. ಯುರೋಪ್, ನ್ಯೂಜಿಲ್ಯಾಂಡ್ ಇತ್ಯಾದಿ ದೇಶಗಳೊಂದಿಗೆ ನಾವು ಮಾಡಿಕೊಂಡಿರುವ ವ್ಯಾಪಾರ ಒಪ್ಪಂದವನ್ನು ಮಾನ್ಯ ಮಾಡುವುದಕ್ಕೂ ಕಷ್ಟವಾಗುತ್ತದೆ. ಇದು ಸಮಾನ ಒಪ್ಪಂದವೂ ಅಲ್ಲ. ನಿರ್ಬಂಧ ಇರುವುದು ಭಾರತಕ್ಕೆ ಮಾತ್ರ, ಅಮೆರಿಕಕ್ಕೆ ಯಾವ ನಿರ್ಬಂಧವೂ ಇಲ್ಲ. ಒಪ್ಪಂದದಲ್ಲಿ 'ಎರಡು ದೇಶಗಳೂ ಗಣನೀಯವಾಗಿ ತಾಂತ್ರಿಕ ಉತ್ಪನ್ನಗಳ ವ್ಯಾಪಾರವನ್ನು ಹೆಚ್ಚಿಸುತ್ತವೆ' ಎಂದು ಉಲ್ಲೇಖಿಸಲಾಗಿದೆ. ಆದರೆ ಹಾಗೆ ಸಿದ್ಧಪಡಿಸಿದ ತಾಂತ್ರಿಕ ಉತ್ಪನ್ನಗಳ ಪಟ್ಟಿಯಲ್ಲಿ ಇರುವುದೆಲ್ಲಾ ಅಮೆರಿಕ ರಫ್ತು ಮಾಡುವ ವಸ್ತುಗಳು!

ಈವರೆಗೆ ಆಹಾರ ಮತ್ತು ಕೃಷಿ ಉತ್ಪನ್ನಗಳನ್ನು ಅಂತರಾಷ್ಟ್ರೀಯ ವ್ಯಾಪಾರ ಒಪ್ಪಂದಗಳಿಂದ ಹೊರಗಿಡಲಾಗುತ್ತಿತ್ತು. ಅಮೆರಿಕದ ಒತ್ತಡಕ್ಕೆ ಮಣಿದಿದ್ದೇವೆ, ಮೊದಲ ಬಾರಿಗೆ ಅವು ಒಪ್ಪಂದದ ಭಾಗವಾಗಿವೆ. ಅಮೆರಿಕ ಅದಕ್ಕಾಗಿ ಒತ್ತಾಯ ಮಾಡುವುದರಲ್ಲಿ ಆಶ್ಚರ್ಯವೂ ಇಲ್ಲ. ಅದು ನಿರೀಕ್ಷಿತ. ಚೀನಾ ಅಮೆರಿಕದ ಮೆಕ್ಕೆಜೋಳ ಹಾಗೂ ಸೋಯಾವನ್ನು ಕೊಳ್ಳುತ್ತಿಲ್ಲ. ಅಮೆರಿಕಕ್ಕೆ ಪರ್ಯಾಯ ಮಾರುಕಟ್ಟೆ ಬೇಕಾಗಿದೆ. ಭಾರತ ಅಮೆರಿಕದ ಕೃಷಿ ಉತ್ಪನ್ನಗಳಿಗೆ ಒಳ್ಳೆಯ ಮಾರುಕಟ್ಟೆ, ಅದು ವಿಸ್ತಾರವೂ ಆಗುತ್ತಿದೆ. ಆದರೆ ಸದ್ಯಕ್ಕೆ ಭಾರತ ಜಿಎಂ ತಳಿಗಳಿಗೆ ಅವಕಾಶ ನೀಡುತ್ತಿಲ್ಲ. ಒಪ್ಪಂದದ ಪ್ರಕಾರ ಭಾರತವು ಅಮೆರಿಕದ ಎಲ್ಲಾ ಕೈಗಾರಿಕಾ ಸರಕುಗಳು ಮತ್ತು ಪಶುಗಳ ಆಹಾರಕ್ಕಾಗಿ ಬಳಸುವ ಒಣಗಿಸಿದ ಡಿಸ್ಟಿಲರಿ ಧಾನ್ಯಗಳು (DDGS), ಕೆಂಪು ಜೋಳ, ಗೋಡಂಬಿ-ಬಾದಾಮಿ, ತಾಜಾ ಮತ್ತು ಸಂಸ್ಕರಿಸಿದ ಹಣ್ಣುಗಳು, ಸೋಯಾಬೀನ್ ಎಣ್ಣೆ, ವೈನ್ ಮತ್ತು ಸ್ಪಿರಿಟ್ ಹಾಗೂ ಇನ್ನಿತರ ಉತ್ಪನ್ನಗಳ ಮೇಲಿನ ಸುಂಕಗಳನ್ನು ತೆಗೆದುಹಾಕಬೇಕು ಅಥವಾ ಕಡಿಮೆ ಮಾಡಬೇಕು.

ಅಮೆರಿಕದಲ್ಲಿ ಬೆಳೆಯುವ ಮೆಕ್ಕೆಜೋಳ ಮತ್ತು ಸೋಯಾ ಕಾಳುಗಳು ಜಿಎಂ ತಳಿಗಳಾದ್ದರಿಂದ ನಮ್ಮಲ್ಲಿ ಮಾರುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಆದರೆ ಜೋಳಕ್ಕೆ ನಮ್ಮ ಮಾರುಕಟ್ಟೆಯನ್ನು ತೆರೆಯಲಾಗಿದೆ. ನಾವು ಜೋಳವನ್ನು ಹೆಚ್ಚಾಗಿ ರಫ್ತು ಮಾಡುತ್ತಿದ್ದೇವೆ. ಬೇರೆ ದೇಶಗಳಿಂದ ಅಗ್ಗದ ಜೋಳ ನಮ್ಮ ಮಾರುಕಟ್ಟೆಯನ್ನು ಪ್ರವೇಶಿಸುವುದನ್ನು ತಪ್ಪಿಸುವುದಕ್ಕೆ ಜೋಳದ ಮೇಲೆ 57.75% ಸುಂಕ ವಿಧಿಸಲಾಗುತ್ತಿದೆ. ಈಗ ಅದಕ್ಕೆ ಅವಕಾಶವಿಲ್ಲ. ಜಗತ್ತಿನಲ್ಲೇ ಅತಿ ಹೆಚ್ಚು ಜೋಳ ರಫ್ತು ಮಾಡುತ್ತಿರುವ ದೇಶ ಅಮೆರಿಕ. ಅಮೆರಿಕದಲ್ಲಿ ವಿಪರೀತ ಸಬ್ಸಿಡಿ ಪಡೆದು ಬೆಳೆದ ಜೋಳವನ್ನು ಯಾವುದೇ ಸುಂಕವಿಲ್ಲದೆ ಭಾರತದಲ್ಲಿ ಮಾರುವುದಕ್ಕೆ ಬಾಗಿಲು ತೆರೆಯುತ್ತಿದ್ದೇವೆ. ಇದರಿಂದ ಖಂಡಿತವಾಗಿ ಜೋಳ ಬೆಳೆಯುವ ರಾಜ್ಯಗಳಿಗೆ ಸಮಸ್ಯೆಯಾಗುತ್ತದೆ.

ಮೆಕ್ಕೆಜೋಳಕ್ಕೆ ಅವಕಾಶವಿಲ್ಲದಿದ್ದರೂ ಅದರಿಂದ ಇಥನಾಲ್ ತಯಾರಿಸಿ ಉಳಿದ ಹಿಂಡಿಯನ್ನು ಅಂದರೆ ಒಣಗಿಸಿದ ಡಿಸ್ಟಿಲ್ಡ್ ಮೆಕ್ಕೆಜೋಳದ (DDGs) ಮಾರಾಟಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದನ್ನು ಹಸು, ಕೋಳಿ ಇತ್ಯಾದಿಗಳ ಮೇವಾಗಿ ಬಳಸಲಾಗುತ್ತದೆ. ಈಗ ಅಮೆರಿಕದ ಜಿಎಂ ಮೆಕ್ಕೆಜೋಳ DDGs ರೂಪದಲ್ಲಿ ಭಾರತವನ್ನು ಪ್ರವೇಶಿಸಲಿದೆ.

ಭಾರತವು ಅಮೆರಿಕಕ್ಕೆ ನೀಡಿರುವ ಈ ವಿನಾಯಿತಿಗಾಗಿ ತಾನು ಭಾರತದ ಸರಕುಗಳ ಮೇಲೆ ವಿಧಿಸಿರುವ ಸುಂಕದಲ್ಲಿ 7% ತಗ್ಗಿಸುವುದಕ್ಕೆ ಅಮೆರಿಕೆ ಒಪ್ಪಿಕೊಂಡಿದೆ. ಇದರಿಂದ ಬೇರೆ ದೇಶಗಳ ಜೊತೆಗೆ ನಮ್ಮ ಬಟ್ಟೆ ಇತ್ಯಾದಿ ಉತ್ಪಾದಕರಿಗೆ ಅಮೆರಿಕದ ಮಾರುಕಟ್ಟೆಯಲ್ಲಿ ಸ್ಪರ್ಧಿಸುವುದಕ್ಕೆ ಅನುಕೂಲವಾಗುತ್ತದೆ ಎನ್ನಲಾಗಿದೆ. ಆದರೆ ಬಾಂಗ್ಲಾದೇಶದ ಮೇಲಿನ ಸುಂಕವನ್ನು ಅಮೆರಿಕೆ ಈಗ 19%ಗೆ ಇಳಿಸಿದೆ. ಜೊತೆಗೆ ಅಮೆರಿಕದ ಹತ್ತಿ ಮತ್ತು ನೂಲನ್ನು ಖರೀದಿಸಿದರೆ ಸುಂಕವನ್ನು ಪೂರ್ತಿಯಾಗಿ ರದ್ದು ಮಾಡುವುದಾಗಿ ತಿಳಿಸಿದೆ. ಬಾಂಗ್ಲಾದೇಶ ಕಳೆದ ವರ್ಷ ಭಾರತದಿಂದ 1.6 ಬಿಲಿಯನ್ ಡಾಲರ್ ನೂಲನ್ನು ಖರೀದಿಸಿತ್ತು, ಇನ್ನು ಮುಂದೆ ಅದು ಅಮೆರಿಕದಿಂದ ಖರೀದಿಸಬಹುದು. ಅಮೆರಿಕದಿಂದ ನೂಲನ್ನು ಕೊಂಡು ಬಟ್ಟೆ ತಯಾರಿಸಿದರೆ ಭಾರತಕ್ಕೂ ಸುಂಕ ಇರುವುದಿಲ್ಲ ಎಂದು ನಮ್ಮ ವಾಣಿಜ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಆಗ ನಮ್ಮ ನೂಲು ಮತ್ತು ಹತ್ತಿಯನ್ನು ಕೊಳ್ಳುವವರು ಯಾರು?

ಒಟ್ಟಾರೆಯಾಗಿ ನೋಡಿದರೆ ನಾವು ಈ ಒಪ್ಪಂದದಿಂದ ಪಡೆದುಕೊಂಡಿದ್ದಕ್ಕಿಂತ ಬಿಟ್ಟುಕೊಟ್ಟಿದ್ದೇ ಹೆಚ್ಚು. ಟ್ರಂಪ್ ನಮ್ಮ ಆತ್ಮೀಯ ಗೆಳೆಯರು ಅಂತ ನಮ್ಮ ಪ್ರಧಾನಿಯವರು ಹೇಳಿಕೊಂಡರೂ, ವಾಸ್ತವದಲ್ಲಿ ಅಮೆರಿಕೆ ಭಾರತದ ಹಿತಾಸಕ್ತಿಯನ್ನು ಕಡೆಗಣಿಸುತ್ತಲೇ ಬಂದಿದೆ. ಚೀನಾ, ಟರ್ಕಿ ಇತ್ಯಾದಿ ದೇಶಗಳು ರಷ್ಯಾದಿಂದ ತೈಲವನ್ನು ಆಮದು ಮಾಡಿಕೊಳ್ಳುತ್ತಿದ್ದರೂ ಕೇವಲ ಭಾರತದ ಮೇಲೆ ಸುಂಕವನ್ನು ವಿಧಿಸಿದೆ. ಹಾಗೆಯೇ ಪಾಕಿಸ್ತಾನ ಹಾಗೂ ಬಾಂಗ್ಲಾದೇಶದೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳಲ್ಲೂ ಭಾರತದ ಹಿತಾಸಕ್ತಿಯನ್ನು ನಿರ್ಲಕ್ಷಿಸಲಾಗಿದೆ. ದಿನದಿಂದ ದಿನಕ್ಕೆ ಟ್ರಂಪ್ ಒತ್ತಡ ಹೆಚ್ಚುತ್ತಿದೆ, ಹೊಸ ಹೊಸ ಬೇಡಿಕೆಗಳನ್ನು ಇಡಲಾಗುತ್ತಿದೆ. ಮುಂದೆ ಬೇಳೆಕಾಳುಗಳು, ಸೋಯಾಬೀನ್, ಮೆಕ್ಕೆಜೋಳ ಇವುಗಳಿಗೂ ಭಾರತದಲ್ಲಿ ಮಾರುಕಟ್ಟೆ ತೆರೆಯಲು ಒತ್ತಡ ಹೆಚ್ಚುತ್ತದೆ. ಹಾಗೆಯೇ ಡಿಜಿಟಲ್ ಸೇವೆಗಳ ಮೇಲೆ ಸುಂಕವನ್ನು ತೆಗೆಯುವುದಕ್ಕೂ ಒತ್ತಡ ಬರುತ್ತದೆ.

ಟ್ರಂಪ್ ಸುಂಕದ ನೀತಿ ಕಾನೂನುಬದ್ಧವಲ್ಲ ಅನ್ನುವುದು ಸ್ಪಷ್ಟ. ಅದನ್ನು ಅಮೆರಿಕದ ಉನ್ನತ ನ್ಯಾಯಾಲಯವೇ ಹೇಳಿದೆ. ಎಲ್ಲಾ ದೇಶಗಳ ಮೇಲೆ ಸುಂಕವನ್ನು ಹಾಕುವುದಕ್ಕೆ ಅಂತರಾಷ್ಟ್ರೀಯ ತುರ್ತು ಆರ್ಥಿಕ ಶಕ್ತಿಗಳ ಕಾಯ್ದೆಯನ್ನು (IEEPA) ಬಳಸಿಕೊಳ್ಳಲಾಗಿತ್ತು. ತುರ್ತು ಪರಿಸ್ಥಿತಿಯನ್ನು ಘೋಷಿಸಿ, ಯಾವುದೇ ದೇಶದ ಮೇಲೆ, ಯಾವುದೇ ಕಾರಣಕ್ಕಾಗಿ, ಮನಸ್ಸಿಗೆ ಬಂದಷ್ಟು, ಅದೂ ಅನಿರ್ದಿಷ್ಟ ಕಾಲ ಸುಂಕ ಹಾಕಬಹುದು ಅನ್ನುವುದು ಅವರ ವಾದವಾಗಿತ್ತು. ಅಧ್ಯಕ್ಷರಿಗೆ ಮನಸೋಯಿಚ್ಛೆ ಸುಂಕಗಳನ್ನು ವಿಧಿಸುವ ಅಧಿಕಾರವನ್ನು ಆ ಕಾಯ್ದೆ ನೀಡುವುದಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಸುಂಕಗಳನ್ನು 'ಅಸಂವಿಧಾನಿಕ' ಎಂದು ರದ್ದುಗೊಳಿಸಿದೆ.

ಉನ್ನತ ನ್ಯಾಯಾಲಯದ ತೀರ್ಪನ್ನು ಟ್ರಂಪ್ ತೀವ್ರವಾಗಿ ಖಂಡಿಸಿದರು. ಸುಂಕವನ್ನು ಉಳಿಸಿಕೊಳ್ಳುವುದಕ್ಕೆ ಬೇರೆ ದಾರಿಗಳನ್ನು ನೋಡುತ್ತಿದ್ದಾರೆ. ಅವರು ಸೆಕ್ಷನ್ 201, 301 ಮತ್ತು 232 ಕಾಯ್ದೆಗಳನ್ನು ಬಳಸಿಕೊಂಡು ಸುಂಕವನ್ನು ವಿಧಿಸುವ ಪ್ರಯತ್ನದಲ್ಲಿದ್ದಾರೆ. ಸುಪ್ರೀಂ ಕೋರ್ಟ್‌ನ ತೀರ್ಪು ಬಂದ ಕೂಡಲೇ 1974ರ ವ್ಯಾಪಾರ ಕಾಯ್ದೆಯ ಸೆಕ್ಷನ್ 122ರ ಅಡಿಯಲ್ಲಿ ಎಲ್ಲಾ ಸರಕುಗಳ ಮೇಲೆ 10% ಸುಂಕ ಘೋಷಿಸಿದರು. ಈ ಸುಂಕವನ್ನು ಯಾವುದೋ ಒಂದು ದೇಶಕ್ಕೆ ಸೀಮಿತಗೊಳಿಸುವುದಕ್ಕೆ ಸಾಧ್ಯವಿಲ್ಲ, ಇದು ಎಲ್ಲಾ ದೇಶಗಳಿಗೂ ಸಮಾನವಾಗಿ ಅನ್ವಯವಾಗುತ್ತದೆ. ಈ ನಿಯಮವು ಅಮೆರಿಕಾದ ಪಾವತಿ ಸಮತೋಲನದ ಸಮಸ್ಯೆಯನ್ನು ನಿಭಾಯಿಸುವುದಕ್ಕಾಗಿ ಅಧ್ಯಕ್ಷರಿಗೆ 150 ದಿನಗಳವರೆಗೆ ಗರಿಷ್ಠ 15% ವರೆಗೆ ಸುಂಕಗಳನ್ನು ವಿಧಿಸಲು ಅನುವು ಮಾಡಿಕೊಡುತ್ತದೆ. 150 ದಿನಗಳ ನಂತರವೂ ಮುಂದುವರಿಸಬೇಕಾದರೆ ಕಾಂಗ್ರೆಸ್ ಅನುಮೋದನೆ ಬೇಕು. ಜೊತೆಗೆ ಅಮೆರಿಕಕ್ಕೆ ಈಗ ಪಾವತಿ ಸಮತೋಲನದ ಸಮಸ್ಯೆ ಇಲ್ಲ, ಹಾಗಾಗಿ ಇದಕ್ಕೆ ಕಾನೂನಿನ ಸಮರ್ಥನೆ ಸಾಧ್ಯವಿಲ್ಲ. ಈ ಕಾಯ್ದೆಯನ್ನು ಕೂಡ ಸುಪ್ರೀಂ ಕೋರ್ಟ್ ಒಪ್ಪದೇ ಇರಬಹುದು.

ಸಮಸ್ಯೆಯೆಂದರೆ ಅಮೆರಿಕದೊಂದಿಗೆ ಈಗಾಗಲೇ ಹಲವು ದೇಶಗಳು ಒಪ್ಪಂದ ಮಾಡಿಕೊಂಡಿವೆ. ಅದರಲ್ಲಿ ಹಲವು ದೇಶಗಳ ಮೇಲೆ ವಿಧಿಸಿರುವ ಸುಂಕ 10%ಗಿಂತ ಹೆಚ್ಚಿದೆ. ಉದಾಹರಣೆಗೆ ಭಾರತ 18% ಸುಂಕಕ್ಕೆ ಒಪ್ಪಿಕೊಂಡಿತ್ತು. ಸುಪ್ರೀಂ ಕೋರ್ಟ್ ತೀರ್ಪಿನ ನಂತರ ಈಗ ಆ ಪ್ರಮಾಣದ ಸುಂಕ ಸಾಧ್ಯವಿಲ್ಲ. ಅಷ್ಟೇ ಅಲ್ಲ, ಒಪ್ಪಂದ ಮಾಡಿಕೊಂಡರೂ ಮಾಡಿಕೊಳ್ಳದಿದ್ದರೂ ಎಲ್ಲಾ ದೇಶಗಳಿಗೂ ಈಗ ಏಕರೂಪದ ಸುಂಕ (10%) ಅನ್ವಯವಾಗುತ್ತಿದೆ. ಹಾಗಾಗಿ ಒಪ್ಪಂದವಿಲ್ಲದೆಯೇ ಹೆಚ್ಚು ಅನುಕೂಲವಾದ ಪರಿಸ್ಥಿತಿ ಈ ದೇಶಗಳಿಗೆ ಇದೆ. ತಮ್ಮ ದೇಶದ ಹಿತಾಸಕ್ತಿಯನ್ನು ಬದಿಗೊತ್ತಿ ಅಮೆರಿಕಕ್ಕೆ ಯಾವುದೇ ವಿಶೇಷ ರಿಯಾಯಿತಿಯನ್ನು ತೋರಿಸುವ ಅವಶ್ಯಕತೆ ಈ ದೇಶಗಳಿಗಿಲ್ಲ.

ದೇಶಗಳ ಮೇಲೆ ಹೆಚ್ಚಿನ ಸುಂಕ ವಿಧಿಸುವುದಕ್ಕೆ ಟ್ರಂಪ್ ಬಳಸಲು ಪ್ರಯತ್ನಿಸುತ್ತಿರುವ ಇನ್ನೊಂದು ಕಾಯ್ದೆ ಸೆಕ್ಷನ್ 301. ಅಮೆರಿಕದೊಂದಿಗೆ ವ್ಯಾಪಾರ ಮಾಡುತ್ತಿರುವ ಯಾವುದೇ ದೇಶ ಅನ್ಯಾಯದ ವ್ಯಾಪಾರ ಪದ್ಧತಿಗಳಲ್ಲಿ ತೊಡಗಿದೆ ಎಂದು ಅಮೆರಿಕದ ಸರ್ಕಾರಕ್ಕೆ ಕಂಡುಬಂದರೆ ಆ ದೇಶಗಳ ಮೇಲೆ ಸುಂಕ ವಿಧಿಸಲು ಇದು ಅವಕಾಶ ನೀಡುತ್ತದೆ. ಭಾರತ, ಚೀನಾ ಸೇರಿದಂತೆ ಹಲವು ದೇಶಗಳ ಮೇಲೆ ಈ ಕಾಯ್ದೆಯ ಅನ್ವಯ ವಿಚಾರಣೆಯನ್ನು ಅಮೆರಿಕೆ ಈಗಾಗಲೇ ಪ್ರಾರಂಭಿಸಿದೆ. ಮಾರ್ಚ್ 2026ರಲ್ಲಿ ಅಮೆರಿಕೆ ಎರಡು ಪ್ರಮುಖ ತನಿಖೆಗಳನ್ನು ಘೋಷಿಸಿದೆ. ಮೊದಲನೆಯದು ಆ ದೇಶಗಳು ಬಳಸುತ್ತಿರುವ ಕೈಗಾರಿಕಾ ನೀತಿಗಳಿಂದಾಗಿ ಆ ದೇಶಗಳಲ್ಲಿ ಉತ್ಪಾದನಾ ಸಾಮರ್ಥ್ಯ ವಿಪರೀತ ಹೆಚ್ಚಾಗಿದೆಯೇ? ಮತ್ತು ಅದರಿಂದ ಅಮೆರಿಕದ ಕೈಗಾರಿಕೆಗಳಿಗೆ ಹಾನಿಯಾಗುತ್ತಿದೆಯೇ ಎನ್ನುವುದನ್ನು ಪರಿಶೀಲಿಸುವುದು.

ಎರಡನೆಯ ವಿಚಾರಣೆಯ ಉದ್ದೇಶ ಸುಮಾರು 60 ದೇಶಗಳಲ್ಲಿ ಕಾರ್ಮಿಕರನ್ನು ಬಲವಂತವಾಗಿ ದುಡಿಸಿಕೊಂಡು ಸರಕುಗಳನ್ನು ತಯಾರಿಸಲಾಗುತ್ತಿದೆಯೇ ಮತ್ತು ಅದರಿಂದ ಜಾಗತಿಕ ವ್ಯಾಪಾರಕ್ಕೆ ತೊಂದರೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವುದು. ಇದನ್ನು ಬಳಸಿಕೊಂಡು ಈ ದೇಶಗಳ ಮೇಲೆ ಒತ್ತಡ ಹೇರುವ ಪ್ರಯತ್ನ ನಡೆಯುತ್ತಿದೆ. ಈ ಕಾಯ್ದೆಯನ್ನು ಯಾವುದೇ ದೇಶಗಳ ಮೇಲೂ ಹೇರಬಹುದು, ಆದರೆ ಅದಕ್ಕೆ ತನಿಖೆ ಹಾಗೂ ಪುರಾವೆಗಳು ಬೇಕಾಗುತ್ತದೆ. ಚೀನಾದ ವಿರುದ್ಧ ಈಗಾಗಲೇ ಇದನ್ನು ಬಳಸಲಾಗುತ್ತಿದೆ.
ಟ್ರಂಪ್ ಬಳಸಿಕೊಳ್ಳಬಹುದಾದ ಇನ್ನೊಂದು ಕಾಯ್ದೆ ಅಂದರೆ ಸೆಕ್ಷನ್ 232. ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಅಗತ್ಯವೆಂದು ವಾಣಿಜ್ಯ ಕಾರ್ಯದರ್ಶಿ ಭಾವಿಸಿದರೆ, ನಿರ್ದಿಷ್ಟ ವಲಯಗಳ ಮೇಲೆ ಸುಂಕ ವಿಧಿಸುವುದಕ್ಕೆ ಈ ಕಾಯ್ದೆಯಲ್ಲಿ ಅವಕಾಶವಿದೆ. ಉದಾಹರಣೆಗೆ ಉಕ್ಕು ಮತ್ತು ಅಲ್ಯೂಮಿನಿಯಂ ಮೇಲೆ ಶೇ. 50 ಸುಂಕ ಹಾಕಬಹುದು. ಆದರೆ ಇವು ಎಲ್ಲಾ ದೇಶಗಳಿಗೂ ಸಮಾನವಾಗಿ ಅನ್ವಯವಾಗಬೇಕಿರುವುದರಿಂದ ನಿರ್ದಿಷ್ಟ ದೇಶಗಳ ಮೇಲೆ ಒತ್ತಡ ಹೇರಲು ಇವುಗಳಿಂದ ಸಾಧ್ಯವಿಲ್ಲ. ಜೊತೆಗೆ ಟ್ರಂಪ್ ಒಪ್ಪಂದಕ್ಕೆ ಬದ್ಧವಾಗಿರಲು ಭಾರತದಂತಹ ದೇಶಗಳ ಮೇಲೆ ಒತ್ತಡವನ್ನು ಹೇರತೊಡಗಿದ್ದಾನೆ. ಸುಪ್ರೀಂ ಕೋರ್ಟ್ ತೀರ್ಪನ್ನು ನೆಪವಾಗಿಟ್ಟುಕೊಂಡು ಆಟವಾಡಲು ಬಯಸುವ ಯಾವುದೇ ದೇಶವು ಈಗ ಒಪ್ಪಿಕೊಂಡಿರುವುದಕ್ಕಿಂತಲೂ ಹೆಚ್ಚಿನ ಸುಂಕ ಮತ್ತು ಕೆಟ್ಟ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾನೆ.

ದೇಶಗಳನ್ನು ನಿಯಂತ್ರಿಸುವುದಕ್ಕೆ ಒಂದು ಕಡೆ ಸುಂಕವನ್ನು ಅಸ್ತ್ರವನ್ನಾಗಿ ಪ್ರಯೋಗಿಸುತ್ತಿದ್ದರೆ ಇನ್ನೊಂದೆಡೆ ವೆನೆಜುವೆಲಾ, ಇರಾನ್ ದೇಶಗಳ ಮೇಲೆ ತಮ್ಮ ಮಾತನ್ನು ಕೇಳುವ ನಾಯಕರನ್ನು ಸ್ಥಾಪಿಸಲು ನೇರ ಮಿಲಿಟರಿ ದಾಳಿ ನಡೆಸುತ್ತಿದ್ದಾನೆ. ಅಲ್ಲಿಯ ಸಂಪನ್ಮೂಲಗಳ ಒಡೆತನಕ್ಕಾಗಿ ಪ್ರಯತ್ನಿಸುತ್ತಿದ್ದಾನೆ. ಸಾಮಾನ್ಯವಾಗಿ ಇಂತಹ ನಾಯಕರಿಗೆ ಜನಸಾಮಾನ್ಯರ ಚಿಂತೆ ಇರುವುದಿಲ್ಲ. ಇಂತಹ ಯುದ್ಧಗಳಿಂದ ಜನಸಾಮಾನ್ಯರ ಬದುಕು ಹೈರಾಣಾಗುತ್ತದೆ.

ಭಾರತದ ಮೇಲೆ ಯುದ್ಧದ ಪರಿಣಾಮ:

ಈಗ ಹೊರ್ಮುಜ್ ಜಲಸಂಧಿ ಸ್ಥಗಿತಗೊಂಡಿದೆ. ವಿಶ್ವದ ತೈಲ ಪೂರೈಕೆಯ ಐದನೇ ಒಂದು ಭಾಗ, ರಸಗೊಬ್ಬರದ ಮೂರನೇ ಒಂದು ಭಾಗ ಹೊರ್ಮುಜ್ ಜಲಸಂಧಿಯ ಮೂಲಕವೇ ಸರಬರಾಜಾಗುವುದು. ಜಾಗತಿಕ ಯೂರಿಯಾ ರಫ್ತಿನ 35% ಮತ್ತು ಗಂಧಕದ ರಫ್ತಿನ 45%ರಷ್ಟು ಅದನ್ನು ಹಾದುಕೊಂಡೇ ಬರುವುದು. ತೈಲದ, ಎಲ್‌ಪಿಜಿ ಕೊರತೆಯನ್ನು ಎಲ್ಲರೂ ಅನುಭವಿಸುತ್ತಿದ್ದಾರೆ, ಬೆಲೆಗಳು ಗಗನಕ್ಕೇರುತ್ತಿವೆ. ರಸ್ತೆಬದಿಯಲ್ಲಿ ಬೋಂಡಾ ಮಾರುವ ಅಂಗಡಿಗಳಿಂದ ಹಿಡಿದು ದೊಡ್ಡ ಹೋಟೆಲ್ಲುಗಳವರೆಗೆ



Photo: ANI

ಎಲ್ಲವನ್ನೂ ಮುಚ್ಚಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆಹಾರದ ಮೇಲೆ ಇನ್ನೊಂದು ರೀತಿಯಲ್ಲೂ ಹೊಡೆತ ಬೀಳುತ್ತಿದೆ. ಭಾರತಕ್ಕೆ ಪ್ರತಿ ತಿಂಗಳು ಸುಮಾರು 20 ಲಕ್ಷ ಟನ್ ವಿವಿಧ ರಸಗೊಬ್ಬರದ ಅವಶ್ಯಕತೆಯಿದೆ. ಭಾರತ ಬಹುತೇಕ ರಸಾಯನಿಕಗಳನ್ನು ಆಮದು ಮಾಡಿಕೊಳ್ಳುತ್ತದೆ. ಯೂರಿಯಾ, ಗಂಧಕ ಮತ್ತು ಅಮೋನಿಯಾ ಇವೆಲ್ಲಾ ಬಹುತೇಕ ತಯಾರಾಗುವುದು ಸೌದಿ ಅರೇಬಿಯಾ, ಕತಾರ್, ಓಮನ್ ಮತ್ತು ಯುಎಇ ರಾಷ್ಟ್ರಗಳಲ್ಲಿ. ಇರಾನ್ ಅಮೋನಿಯಾ ಉತ್ಪಾದನೆಯಲ್ಲಿ ವಿಶ್ವದಲ್ಲೇ ಮೂರನೇ ಸ್ಥಾನದಲ್ಲಿದೆ. ಯುದ್ಧ ಮುಂದುವರಿದರೆ ರಸಗೊಬ್ಬರದ ಪೂರೈಕೆ ಅಸ್ತವ್ಯಸ್ತಗೊಳ್ಳುತ್ತದೆ. ರಷ್ಯಾ ಈ ಕೊರತೆಯನ್ನು ತುಂಬಬಹುದಿತ್ತು, ಆದರೆ ಉತ್ಪಾದನಾ ಮಿತಿ ಮತ್ತು ರಫ್ತು ನಿರ್ಬಂಧಗಳಿಂದಾಗಿ ಅದು ಸಾಧ್ಯವಾಗುತ್ತಿಲ್ಲ. ಅಮೋನಿಯಾ ಕೊರತೆಯಾದರೆ ದೇಶೀಯ ಯೂರಿಯಾ ಉತ್ಪಾದನೆಗೂ ಹೊಡೆತ ಬೀಳುತ್ತದೆ. ಬಿತ್ತನೆಯ ಸಮಯದಲ್ಲಿ ರಸಗೊಬ್ಬರ ಸಿಗದಿದ್ದರೆ ಅದರ ಪರಿಣಾಮ ಇಳುವರಿಯ ಮೇಲೆ ಆಗುತ್ತದೆ. ಬೆಲೆ ಏರಿದರೆ ರೈತರು ಬಳಸುವ ಪ್ರಮಾಣವೂ ಕಡಿಮೆಯಾಗುತ್ತದೆ, ಅಂತಿಮವಾಗಿ ಇಳುವರಿ ಕಮ್ಮಿಯಾಗುತ್ತದೆ. ಪರಿಣಾಮವಾಗಿ ಬ್ರೆಡ್, ಮೊಟ್ಟೆ, ಮಾಂಸ ಮತ್ತು ಇತರ ಮೂಲಭೂತ ಆಹಾರ ಪದಾರ್ಥಗಳ ಬೆಲೆ ಗಗನಕ್ಕೇರುತ್ತದೆ. ಈಗ ನಾವು ಅನುಭವಿಸುತ್ತಿರುವ ಬಿಕ್ಕಟ್ಟು 2022ರ ರಷ್ಯಾ–ಉಕ್ರೇನ್ ಯುದ್ಧದಿಂದ ಉಂಟಾದ ಬಿಕ್ಕಟ್ಟಿಗಿಂತ ಹಲವು ಪಟ್ಟು ಹೆಚ್ಚಿದೆ ಅನ್ನುವ ಆತಂಕವಿದೆ. ಅಂತಿಮವಾಗಿ ಇದರ ಪರಿಣಾಮ ನಮ್ಮ ಅಡುಗೆ ಮನೆಯ ಮೇಲೂ ಆಗುತ್ತದೆ. ಇದು ನಮ್ಮ ಆಹಾರದ ಸುರಕ್ಷತೆಗೆ ದೊಡ್ಡ ಪೆಟ್ಟಾಗುತ್ತದೆ. ಬಾಸ್ಮತಿ ಅಕ್ಕಿ, ಚಹಾ ಇವೆಲ್ಲ ಇರಾನ್ ಮತ್ತು ಅದರ ನೆರೆಯ ರಾಷ್ಟ್ರಗಳಿಗೆ ರಫ್ತು ಆಗುತ್ತಿತ್ತು, ಈಗ ಅವೆಲ್ಲಾ ಸಂಕಷ್ಟದಲ್ಲಿ ಸಿಲುಕಿವೆ. ಹಾಗೆಯೇ ನಮಗೆ ಗಲ್ಫ್ ದೇಶಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಭಾರತಕ್ಕೆ ಹಣವನ್ನು ಕಳುಹಿಸುತ್ತಿದ್ದರು. ಅದು ದೊಡ್ಡ ಪ್ರಮಾಣದಲ್ಲೇ ಇತ್ತು. ಈಗ ಅದಕ್ಕೆ ಪೆಟ್ಟು ಬಿದ್ದಿದೆ. ಜೊತೆಗೆ ಅವರ ಉದ್ಯೋಗಕ್ಕೂ ತೊಂದರೆಯಾಗಬಹುದು. ಅವರು ಭಾರತಕ್ಕೆ ಮರಳಿದರೆ ಇಲ್ಲಿಯ ಉದ್ಯೋಗ ಪರಿಸ್ಥಿತಿಯ ಮೇಲೆ ಒತ್ತಡ ಇನ್ನೂ ತೀವ್ರವಾಗುತ್ತದೆ.

ಹೀಗೆ ಒಂದು ವ್ಯವಸ್ಥೆಯಲ್ಲಿ ಹಲವು ವಿಷಯಗಳು ಒಂದಕ್ಕೊಂದು ತೆಕ್ಕೆಹಾಕಿಕೊಂಡಿರುತ್ತವೆ, ಪರಿಣಾಮ ಎಲ್ಲೆಲ್ಲೋ ಆಗುತ್ತಿರುತ್ತವೆ. ಉದಾಹರಣೆಗೆ ಭಾರತದಲ್ಲಿ ರಸಗೊಬ್ಬರಕ್ಕೆ ಸಬ್ಸಿಡಿ ನೀಡಲಾಗುತ್ತಿದೆ. ಬೆಲೆ ಏರಿದರೆ ಸಬ್ಸಿಡಿಯ ಪ್ರಮಾಣವೂ ಹೆಚ್ಚುತ್ತದೆ. 2024–25ರಲ್ಲಿ ಸರ್ಕಾರವು ಸುಮಾರು 1.9 ಲಕ್ಷ ಕೋಟಿ ರೂಪಾಯಿಗಳನ್ನು ಸಬ್ಸಿಡಿಗಾಗಿ ವ್ಯಯಿಸಿದೆ. ಈಗ ಯೂರಿಯಾ ದರಗಳು ಶೇ. 30–40ರಷ್ಟು ಏರಿಕೆಯಾಗುವ ಸಾಧ್ಯತೆಯಿದ್ದು, ದೇಶದ ಬೊಕ್ಕಸಕ್ಕೆ ದೊಡ್ಡ ಹೊರೆಯಾಗಲಿದೆ. ಕಚ್ಚಾ ತೈಲದ ಬೆಲೆ 10 ಡಾಲರ್ ಏರಿದರೆ ಭಾರತದ ವಾರ್ಷಿಕ ಆಮದಿನ ವೆಚ್ಚ ಸುಮಾರು 13 ರಿಂದ 14 ಶತಕೋಟಿ ಡಾಲರ್‌ಗಳಷ್ಟು ಹೆಚ್ಚುತ್ತದೆ ಅನ್ನುವ ಅಂದಾಜು ಇದೆ. ಇದರಿಂದ ದೇಶದ ಚಾಲ್ತಿ ಖಾತೆ ಕೊರತೆ ಹೆಚ್ಚುತ್ತದೆ, ರೂಪಾಯಿ ಮೌಲ್ಯದ ಮೇಲೆ ಒತ್ತಡ ಹೆಚ್ಚುತ್ತದೆ. ಆಮದು ದುಬಾರಿಯಾಗುತ್ತದೆ, ಹಣದುಬ್ಬರ ಮತ್ತೂ ಹೆಚ್ಚಬಹುದು. ಹೀಗೆ ಪರಿಸ್ಥಿತಿ ಬಿಗಡಾಯಿಸುತ್ತದೆ.

ಹಾಗಾಗಿ ಭಾರತ ಇಂತಹ ಸಂಕಷ್ಟದ ಸಮಯದಲ್ಲಿ ತನ್ನ ಸ್ವಾಯತ್ತತೆಯನ್ನು, ಜನರ ಹಿತವನ್ನು ಗಮನದಲ್ಲಿಟ್ಟುಕೊಂಡು ಗಟ್ಟಿಯಾದ ನಿಲುವನ್ನು ತೆಗೆದುಕೊಳ್ಳಬೇಕು. ಭಾರತಕ್ಕೆ ಇಸ್ರೇಲ್–ಅಮೆರಿಕ ಪರವಾಗಿ ನಿಲ್ಲುವ ಅವಶ್ಯಕತೆಯಿರಲಿಲ್ಲ. ಭಾರತ ಅಮೆರಿಕದೊಂದಿಗೆ ವ್ಯಾಪಾರವನ್ನು ಸುಧಾರಿಸಿಕೊಳ್ಳುವ ನಿಟ್ಟಿನಲ್ಲಿ ಯೋಚಿಸುತ್ತಿರಬಹುದು. ವ್ಯಾಪಾರ ಎಲ್ಲರಿಗೂ ಒಳ್ಳೆಯದು, ಆದರೆ ಅಮೆರಿಕ ಎಲ್ಲವನ್ನೂ ತಾನೇ ಲಪಟಾಯಿಸಲು ಯೋಚಿಸುತ್ತಿದೆ. ಇದರಿಂದ ಯಾರಿಗೂ ಲಾಭವಿರುವುದಿಲ್ಲ. ತಮ್ಮ ಸರಕುಗಳಿಗೆ ಪರ್ಯಾಯ ಮಾರುಕಟ್ಟೆಯನ್ನು ಕಂಡುಕೊಳ್ಳುವುದಕ್ಕೆ ಭಾರತದಂತಹ ರಾಷ್ಟ್ರಗಳಿಗೆ ಸಾಧ್ಯವಿದೆ. ಆದರೆ ಅಮೆರಿಕೆಗೆ ತನಗೆ ಬೇಕಾದ ವಸ್ತುಗಳನ್ನೆಲ್ಲಾ ತನ್ನಲ್ಲೇ ತಯಾರಿಸಿಕೊಳ್ಳುವುದು ಕಷ್ಟ. ಹಿರಿಯರು ಸ್ಥಾಪಿಸಿದ ಸರ್ಕಾರಿ ಉದ್ದಿಮೆಗಳನ್ನು ಬಂಡವಾಳದ ಕ್ರೋಡೀಕರಣಕ್ಕಾಗಿ ನಾವು ಮಾರಿಕೊಳ್ಳುತ್ತಿದ್ದೇವೆ. ಹಿರಿಯರು ಗಳಿಸಿಕೊಟ್ಟಿರುವ ಸ್ವಾತಂತ್ರ್ಯವನ್ನೂ ಬಲಿಕೊಡುವುದು ಬೇಡ. ನೂರಾರು ಮಕ್ಕಳನ್ನು ಬಲಿ ಪಡೆದ ಯುದ್ಧ ಯಾವುದೇ ಸಮಸ್ಯೆಗೂ ಪರಿಹಾರವಲ್ಲ.

ಕೃಪೆ: ಹೊಸತು, ಮಾಸಪತ್ರಿಕೆ

ತೈಲ, ಅಧಿಕಾರ ಮತ್ತು ಅಸ್ಥಿರತೆಯ ರಾಜಕೀಯ

ಜಯನ್ ಜೋಸ್ ಥಾಮಸ್



ಪರ್ಷಿಯನ್ ಕೊಲ್ಲಿಯನ್ನು ಅರೇಬಿಯನ್ ಸಮುದ್ರಕ್ಕೆ ಜೋಡಿಸುವ ಹಾರ್ಮುಜ್ ಜಲಸಂಧಿಯ ನೀಲಿ ನೀರು ಜಾಗತಿಕ ಆರ್ಥಿಕತೆಯ ಜೀವನಾಡಿಯಾಗಿದೆ. ಇದೊಂದು ತೀರಾ ಕಿರಿದಾದ ಸಮುದ್ರ ಮಾರ್ಗ. ಕೆಲವು ಕಡೆ ಕೇವಲ 33 ಕಿ.ಮೀ ಅಗಲವಿದೆ. ಪ್ರಪಂಚದ ಒಟ್ಟು ತೈಲ ವ್ಯಾಪಾರದ ಸುಮಾರು ಐದನೇ ಒಂದು ಭಾಗದಷ್ಟು ತೈಲವು ಈ ಕಿರಿದಾದ ಮಾರ್ಗದ ಮೂಲಕ ಸಾಗುತ್ತದೆ. ಫೆಬ್ರವರಿ 28, 2026 ರಂದು ಇರಾನಿನ ಮೇಲೆ ಅಮೆರಿಕ ಮತ್ತು ಇಸ್ರೇಲ್ ಮಿಲಿಟರಿ ದಾಳಿ ನಡೆಸಿದ ನಂತರ, ಇರಾನ್ ಈ ಜಲಸಂಧಿಯ ಮೂಲಕ ಹಡಗುಗಳು ಸಂಚರಿಸದಂತೆ ತಡೆದಿದೆ. ಇದು ಇಂಧನ ಮಾರುಕಟ್ಟೆಯಲ್ಲಿ ತಲ್ಲಣವನ್ನುಂಟುಮಾಡಿದೆ. ಬೆಲೆಗಳು ಏರತೊಡಗಿವೆ.


ವಿಶ್ವದ ಒಟ್ಟು ಇಂಧನ ಪೂರೈಕೆಯಲ್ಲಿ ಅರ್ಧಕ್ಕಿಂತ ಹೆಚ್ಚು ಪಾಲು ತೈಲ ಮತ್ತು ನೈಸರ್ಗಿಕ ಅನಿಲದ್ದೇ ಆಗಿದೆ (ಉಳಿದ ಭಾಗ ಕಲ್ಲಿದ್ದಲು ಮತ್ತು ನವೀಕರಿಸಬಹುದಾದ ಇಂಧನಗಳಿಂದ ಬರುತ್ತದೆ). ಇವು ಟ್ರಕ್‌ಗಳಿಂದ ಹಿಡಿದು ವಿಮಾನಗಳವರೆಗೆ ಎಲ್ಲಾ ವಾಹನಗಳೂ ಇದೇ ಇಂಧನವನ್ನು ಬಳಸುವುದು. ವಿದ್ಯುತ್ ಮತ್ತು ಅಡುಗೆ ಅನಿಲವನ್ನು ತಯಾರಿಸುವುದಕ್ಕೂ ಈ ಇಂಧನ ಬೇಕು. ಹಾಗೆಯೇ ಕೈಗಾರಿಕೆಗಳಿಗೆ ಇವು ಕಚ್ಚಾ ವಸ್ತುಗಳನ್ನು ಒದಗಿಸುತ್ತವೆ.

ಪರ್ಷಿಯನ್ ಗಲ್ಫ್ ಸುತ್ತಾ ಇರುವ ಪಶ್ಚಿಮ ಏಷ್ಯಾದ ದೇಶಗಳಾದ ಸೌದಿ ಅರೇಬಿಯಾ, ಯುಎಇ ಮತ್ತು ಇರಾನ್ ಇತ್ಯಾದಿ ಪಶ್ಚಿಮ ಏಷಿಯಾದ ದೇಶಗಳು ವಿಶ್ವದಲ್ಲೇ ಅತಿ ಹೆಚ್ಚು ತೈಲ ಮತ್ತು ಅನಿಲವನ್ನು ಉತ್ಪಾದಿಸುವ ದೇಶಗಳು. ಹಾಗೆಯೇ ಅತಿ ಹೆಚ್ಚು ಇಂಧನ ಬಳಸುವ ಭಾರತ, ಚೀನಾ ಮತ್ತು ಜಪಾನ್‌ನಂತಹ ದೇಶಗಳು ಪೂರ್ವ ಹಾಗೂ ದಕ್ಷಿಣ ಏಷಿಯಾದಲ್ಲಿವೆ. ಆದರೆ ಈ ಏಷ್ಯಾದ ದೇಶಗಳಲ್ಲಿ ಬೆಳೆಯುತ್ತಿರುವ ಆರ್ಥಿಕತೆಗೆ ಇಂಧನವನ್ನು ಒದಗಿಸುವುದಕ್ಕೆ ಬೇಕಾದ ತೈಲ ಸಂಗ್ರಹ ಇಲ್ಲ. ಹಾಗಾಗಿ ಅವು ಕಚ್ಚಾ ಹಾಗೂ ನೈಸರ್ಗಿಕ ಅನಿಲಕ್ಕೆ ಪಶ್ಚಿಮ ಏಷಿಯವನ್ನು ಅವಲಂಬಿಸಿವೆ. ಅವು ಹಾರ್ಮುಜ್ ಜಲಸಂಧಿಯ ಮೂಲಕವೇ ಸಾಗಿ ಬರುವುದು.

ಅಮೆರಿಕ ಮತ್ತು ಪಶ್ಚಿಮ ಏಷ್ಯಾ

ತೈಲ ಸಂಪನ್ಮೂಲಗಳು ಕೆಲವೇ ಪ್ರದೇಶಗಳಲ್ಲಿ ಮಾತ್ರ ಕೇಂದ್ರೀಕೃತವಾಗಿದೆ. ಇದು ಜಾಗತಿಕ ಶಕ್ತಿಗಳ ನಡುವಿನ ಪೈಪೋಟಿಗೆ ಪ್ರಮುಖ ಕಾರಣ. ಅಮೆರಿಕ, ರಷ್ಯಾ, ವೆನೆಜುವೆಲಾ ಮತ್ತು ಕೆನಡಾ ಕೆಲವೇ ದೇಶಗಳಲ್ಲಿ ತೈಲ ಮತ್ತು ನೈಸರ್ಗಿಕ ಅನಿಲದ ಬೃಹತ್ ಸಂಗ್ರಹವಿದೆ.

ಅಮೆರಿಕವು ಇಂಧನ ಭೂರಾಜಕೀಯದಲ್ಲಿ ಪ್ರಧಾನ ಶಕ್ತಿಯಾಗಿದೆ. ಅದು ತೈಲ ಉತ್ಪಾದನೆ ಮತ್ತು ಬಳಕೆ ಎರಡರಲ್ಲೂ ಮುಂದಿದೆ. ಅಮೆರಿಕದ ಒಬ್ಬ ವ್ಯಕ್ತಿ ಬಳಸುವ ಇಂಧನವು ಒಬ್ಬ ಭಾರತೀಯನಿಗಿಂತ 10 ಪಟ್ಟು ಮತ್ತು ಚೀನಾದ ವ್ಯಕ್ತಿಗಿಂತ 2.4 ಪಟ್ಟು ಹೆಚ್ಚಿದೆ. ಈ ಇಂಧನದ ಹಸಿವೇ ಅಮೆರಿಕದ ಅಂತರಾಷ್ಟ್ರೀಯ ನೀತಿಗಳಿಗೆ ಮುಖ್ಯ ಕಾರಣ.



1950ರವರೆಗೆ, ಪಶ್ಚಿಮ ಏಷ್ಯಾದ ತೈಲದ ಮೇಲಿನ ನಿಯಂತ್ರಣವು ಅಮೆರಿಕ ಮತ್ತು ಯುರೋಪಿನ ದೊಡ್ಡ ಕಂಪನಿಗಳ ಕೈಯಲ್ಲಿತ್ತು. ನಂತರದಲ್ಲಿ ಆಯಾ ದೇಶಗಳ ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ತೈಲ ಕಂಪನಿಗಳು ತೈಲದ ಮೇಲಿನ ನಿಯಂತ್ರಣವನ್ನು ತಮ್ಮ ಕೈಗೆ ತೆಗೆದುಕೊಂಡವು. 1970ರ ದಶಕದಲ್ಲಿ ತೈಲ ಬೆಲೆಗಳು ತೀವ್ರವಾಗಿ ಏರಿಕೆಯಾದವು; ಈ ಸಮಯದಲ್ಲಿ 'ಒಪೆಕ್'ಸಂಸ್ಥೆಯಲ್ಲಿ ಅರಬ್ ರಾಷ್ಟ್ರಗಳು ಹೆಚ್ಚಿನ ಪ್ರಭಾವ ಬೀರಲು ಪ್ರಾರಂಭಿಸಿದವು.

ಇದಕ್ಕೆ ಅಮೆರಿಕವು ಎರಡು ರೀತಿಯಲ್ಲಿ ಪ್ರತಿಕ್ರಿಯಿಸಿತು. 2000ರ ದಶಕದ ಮಧ್ಯಭಾಗದಿಂದ ಅಮೆರಿಕವು ಹೆಚ್ಚೆಚ್ಚು ಶೆಲ್ ಆಯಿಲ್ ತೆಗೆಯುವ ಮೂಲಕ ದೇಶದೊಳಗಿನ ತೈಲ ಉತ್ಪಾದನೆಯನ್ನು ಹೆಚ್ಚಿಸಿತು. ಕ್ರಮೇಣ ವಿಶ್ವದ ಅತಿದೊಡ್ಡ ತೈಲ ಉತ್ಪಾದಕ ರಾಷ್ಟ್ರವಾಯಿತು.

ಎರಡನೆಯದಾಗಿ, ತನ್ನ ಹಿತಾಸಕ್ತಿಗೆ ಅನುಕೂಲವಾಗುವಂತೆ ಬೇರೆ ದೇಶಗಳಲ್ಲಿ ಹಸ್ತಕ್ಷೇಪ ಮಾಡತೊಡಗಿತು. ಇದರಲ್ಲಿ ಗಲ್ಫ್ ಯುದ್ಧ (1990–91), ಇರಾಕ್ ಯುದ್ಧ (2003–11), ಇತ್ತೀಚಿನ ವೆನೆಜುವೆಲಾದ ಮೇಲಿನ ಕ್ರಮಗಳು (2026), ಮತ್ತು ಪ್ರಸ್ತುತ ನಡೆಯುತ್ತಿರುವ ಇರಾನ್ ವಿರುದ್ಧದ ಯುಎಸ್–ಇಸ್ರೇಲ್ ಯುದ್ಧಗಳು ಸೇರಿವೆ.

ಪ್ರಸ್ತುತ ಉತ್ಪಾದನಾ ಮಟ್ಟವು ಸಾಧಾರಣವಾಗಿದೆ. ವಿಶ್ವದ ಒಟ್ಟು ಪ್ರಮಾಣಿತ ತೈಲ ನಿಧಿಯ 39% ಪಾಲನ್ನು ವೆನೆಜುವೆಲಾ ಮತ್ತು ಇರಾನ್ ಒಟ್ಟಾಗಿ ಹೊಂದಿವೆ. ಮುಂದಿನ ದಿನಗಳಲ್ಲಿ ಈ ದೇಶಗಳಲ್ಲಿ ಅಪಾರ ಪ್ರಮಾಣದಲ್ಲಿ ತೈಲ ಸಿಗುತ್ತದೆ ಅನ್ನುವ ಕಾರಣಕ್ಕಾಗಿ ಇವು ಇಂದು ಮುಖ್ಯ ದೇಶಗಳಾಗಿವೆ. ವಿಶೇಷವಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಲಾಭದ ಅಂದಾಜಿನಲ್ಲಿ ಇವುಗಳ ಪಾತ್ರ ಮಹತ್ವದ್ದು.

ಆದರೆ, ಹಾರ್ಮುಜ್ ಜಲಸಂಧಿ ಸ್ಥಗಿತವಾಗಿರುವುದರಿಂದ, ಕನಿಷ್ಠ ಅಲ್ಪಾವಧಿಗಾದರೂ ಟ್ರಂಪ್ ಅವರ ಲೆಕ್ಕಾಚಾರ ತಲೆಕೆಳಗಾಗಿದೆ. ಮತ್ತು ಈ ಇಂಧನ ಬಿಕ್ಕಟ್ಟಿನಿಂದ ಅನಿರೀಕ್ಷಿತವಾಗಿ ರಷ್ಯಾ ಲಾಭ ಮಾಡಿಕೊಳ್ಳುತ್ತಿದೆ. 2022ರ ರಷ್ಯಾ–ಉಕ್ರೇನ್ ಯುದ್ಧದ ನಂತರ, ರಷ್ಯಾ ಪಾಶ್ಚಿಮಾತ್ಯ ದೇಶಗಳಲ್ಲಿ ಬಹಿಷ್ಕಾರಕ್ಕೆ ಒಳಗಾಗಿತ್ತು ವಿಶೇಷವಾಗಿ ಯುರೋಪ್ ಅದಕ್ಕೆ ಬಹಿಷ್ಕಾರ ಹಾಕಿತ್ತು. ಮತ್ತು ವ್ಯಾಪಾರ ನಿರ್ಬಂಧಗಳಿಂದಾಗಿ ದೀರ್ಘಕಾಲದವರೆಗೆ ಅದರ ತೈಲ ವ್ಯವಹಾರಕ್ಕೆ ತೊಂದರೆಯಾಗಿತ್ತು.

ಆದರೆ ಇದ್ದಕ್ಕಿದ್ದಂತೆ, ಪಶ್ಚಿಮ ಏಷ್ಯಾದ ತೈಲ ಉತ್ಪಾದನಾ ಸಾಮರ್ಥ್ಯವು ಕುಸಿಯುತ್ತಿದ್ದಂತೆ, ಇಂಧನ ಬೆಲೆಗಳನ್ನು ಸ್ಥಿರಗೊಳಿಸಲು ರಷ್ಯಾದ ತೈಲ ಅನಿವಾರ್ಯವಾಗಿದೆ. ಪಶ್ಚಿಮ ಏಷ್ಯಾವನ್ನು ಹೊರತುಪಡಿಸಿದರೆ, ದೊಡ್ಡ ಪ್ರಮಾಣದಲ್ಲಿ ತೈಲದ ದಾಸ್ತಾನು ಇರುವುದು ರಷ್ಯಾದಲ್ಲಿ ಮಾತ್ರ.(ಕೋಷ್ಟಕ 1).

ರಷ್ಯಾದ ತೈಲ ಮತ್ತು ಭಾರತ

ತೈಲ ಮಾರುಕಟ್ಟೆಗಳು ಪರಸ್ಪರ ಬಲವಾಗಿ ತೆಕ್ಕೆ ಹಾಕಿಕೊಂಡಿರುತ್ತವೆ. ಮಾರುಕಟ್ಟೆಯ ಯಾವುದೋ ಮೂಲೆಯಲ್ಲಿ ಸೃಷ್ಟಿಯಾಗುವ ಒಂದು ಸಣ್ಣ ಅಲೆ ದೊಡ್ಡ ಬಿರುಗಾಳಿಯಾಗಿ ಬಿಡಬಹುದು. ಭಾರತವು ಕಚ್ಚಾ ತೈಲದ ವಿಶ್ವದ ಎರಡನೇ ಅತಿದೊಡ್ಡ ಆಮದುದಾರ ಮತ್ತು ಮೂರನೇ ಅತಿದೊಡ್ಡ ಗ್ರಾಹಕ ರಾಷ್ಟ್ರವಾಗಿದೆ. ಪೂರೈಕೆಯಲ್ಲಿ ತೊಂದರೆಯಾದರೆ ಭಾರತದಲ್ಲಿ ಅಗತ್ಯ ವಸ್ತುಗಳು ಮತ್ತು ಸೇವೆಗಳ ಬೆಲೆ ಏರಿಕೆಯಾಗುತ್ತದೆ. ಅಷ್ಟೇ ಅಲ್ಲ, ತೈಲ ಮಾರುಕಟ್ಟೆಯಲ್ಲಿ ಭಾರತದ ಕ್ರಮಗಳು ಜಾಗತಿಕ ತೈಲ ಬೆಲೆಗಳ ಮೇಲೆ ಗಮನಾರ್ಹ ಪ್ರಭಾವ ಬೀರುತ್ತವೆ.


ಯುರೋಪಿಯನ್ ರಾಷ್ಟ್ರಗಳಲ್ಲಿ ಮಿತವಾದ ಆಂತರಿಕ ತೈಲ ಮತ್ತು ನೈಸರ್ಗಿಕ ಅನಿಲ ನಿಕ್ಷೇಪಗಳಿವೆ. ಅವು ತಮ್ಮ ಶೀತಲ ಚಳಿಗಾಲವನ್ನು ಎದುರಿಸಲು ಮುಖ್ಯವಾಗಿ ಇಂಧನ ಆಮದನ್ನೇ, ಅದರಲ್ಲೂ ವಿಶೇಷವಾಗಿ ರಷ್ಯಾದ ತೈಲವನ್ನು ಅವಲಂಬಿಸಿದ್ದವು. ಆದರೆ 2022ರಿಂದ ರಷ್ಯಾದ ಉತ್ಪನ್ನಗಳ ಮೇಲೆ ನಿರ್ಬಂಧಗಳನ್ನು ಹೇರಿದ್ದರಿಂದ, ಯುರೋಪ್ ಈಗ ಮುಖ್ಯವಾಗಿ ಪಶ್ಚಿಮ ಏಷ್ಯಾವನ್ನು ಆಶ್ರಯಿಸಬೇಕಾಗಿ ಬಂತು.

ಈ ಸಂದರ್ಭದಲ್ಲಿ, ಭಾರತವು ರಷ್ಯಾದ ತೈಲವನ್ನು ರಿಯಾಯಿತಿ ದರದಲ್ಲಿ ಖರೀದಿಸಲು ಪ್ರಾರಂಭಿಸಿತು. ಭಾರತದ ಒಟ್ಟು ತೈಲ ಖರೀದಿಯಲ್ಲಿ ರಷ್ಯಾದ ಪಾಲು ಗಮನಾರ್ಹವಾಗಿ ಹೆಚ್ಚಾಯಿತು– ಅಂದರೆ 2021ರಲ್ಲಿ ಇದ್ದ 2.5% ರಿಂದ 2023ರ ವೇಳೆಗೆ 39.0% ಕ್ಕೆ ಏರಿತು. ಕಚ್ಚಾ ತೈಲವನ್ನು ಸಂಸ್ಕರಣಾಗಾರಗಳಲ್ಲಿ (refineries) ಸಂಸ್ಕರಿಸಿ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಮತ್ತು ಪೆಟ್ರೋಕೆಮಿಕಲ್ಸ್‌ಗಳಂತಹ ವಿವಿಧ ಉತ್ಪನ್ನಗಳಾಗಿ ಪರಿವರ್ತಿಸಲಾಗುತ್ತದೆ ಎಂಬುದು ಇಲ್ಲಿ ಗಮನಾರ್ಹ. ಕಚ್ಚಾ ತೈಲದ ಆಮದಿನ ಮೇಲೆ ಅವಲಂಬಿತವಾಗಿದ್ದರೂ, ಚೀನಾ ಮತ್ತು ಭಾರತವು ಬೃಹತ್ ಸಂಸ್ಕರಣಾ ಸಾಮರ್ಥ್ಯವನ್ನು ನಿರ್ಮಿಸಿವೆ ಮತ್ತು ತಮ್ಮ ಸಂಸ್ಕರಿಸಿದ ತೈಲ ಉತ್ಪನ್ನಗಳ ಒಂದು ಭಾಗವನ್ನು ರಫ್ತು ಮಾಡುತ್ತವೆ.

ಕೋಷ್ಟಕ 1: 2024 ರಲ್ಲಿ ತೈಲ ವ್ಯಾಪಾರ, ದಿನಕ್ಕೆ ಮಿಲಿಯನ್ ಬ್ಯಾರೆಲ್‌ಗಳಲ್ಲಿ

	ಕಚ್ಚಾ ತೈಲ ಮತ್ತು ಉತ್ಪನ್ನಗಳ ಆಮದು	ಕಚ್ಚಾ ತೈಲ ರಫ್ತು	ಉತ್ಪನ್ನಗಳ ರಫ್ತು	ನಿವ್ವಳ ರಫ್ತು
ಸೌದಿ ಅರೇಬಿಯಾ	0.4	6.4	1.2	7.2
ರಷ್ಯಾ	0.0	4.9	2.2	7.0
ಯುಎಇ	0.8	3.7	2.0	4.9
ಕೆನಡಾ	1.0	4.4	0.7	4.2
ಇರಾಕ್	0.1	3.6	0.5	4.0
ಅಮೆರಿಕ	8.4	4.0	5.9	1.4
ಭಾರತ	**6.0**	**0.0**	**1.9**	**-4.1**
ಚೀನಾ	13.4	0.0	1.2	-12.2
ವಿಶ್ವ	**69.4**	**43.2**	**26.2**	**0.0**

ಮೂಲ: ಜಾಗತಿಕ ಇಂಧನ ವಿಮರ್ಶೆ 2025, ಅಂತರರಾಷ್ಟ್ರೀಯ ಇಂಧನ ಸಂಸ್ಥೆ (IEA)



ಕೆಲವು ಭಾರತೀಯ ಸಂಸ್ಕರಣಾಗಾರಗಳು ರಿಯಾಯಿತಿ ದರದ ಕಚ್ಚಾ ತೈಲದಿಂದ ತಯಾರಿಸಿದ ಉತ್ಪನ್ನಗಳನ್ನು ರಫ್ತು ಮಾಡುವ ಮೂಲಕ ಭಾರಿ ಲಾಭ ಗಳಿಸಿವೆ.

ಪಾಶ್ಚಿಮಾತ್ಯ ನಾಯಕರು ಮೇಲ್ನೋಟಕ್ಕೆ ವಿರೋಧ ವ್ಯಕ್ತಪಡಿಸಿದರೂ, 2022ರಿಂದ ಭಾರತದ ಬೇಡಿಕೆಯು ಭಾಗಶಃ ನಿರ್ಬಂಧಿತ ರಷ್ಯಾದ ತೈಲದ ಕಡೆಗೆ ತಿರುಗಿದ್ದರಿಂದ ತೈಲ ಬೆಲೆಗಳಲ್ಲಿ ಉಂಟಾದ ಸ್ಥಿರತೆಯನ್ನು ಅವರು ಮೌನವಾಗಿ ಸ್ವಾಗತಿಸಿದರು.

ಇಂದು, ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟಿರುವುದು ಮತ್ತು ತೈಲ ಬೆಲೆಗಳು ಬ್ಯಾರೆಲ್‌ಗೆ $110 ದಾಟಿರುವುದರಿಂದ, ಮಾರುಕಟ್ಟೆಯನ್ನು ಶಾಂತಗೊಳಿಸಲು ಸಮುದ್ರದಲ್ಲೇ ಉಳಿದುಹೋಗಿರುವ ನಿರ್ಬಂಧಿತ ರಷ್ಯಾದ ತೈಲವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವುದನ್ನು ನೋಡಲು ಅಮೆರಿಕ ಹಪಹಪಿಸುತ್ತಿದೆ.

ಅಂತರಾಷ್ಟ್ರೀಯ ರಾಜಕೀಯದಲ್ಲಿ ಒಂದು ವಾರ ಎಂಬುದು ನಿಜಕ್ಕೂ ಸುದೀರ್ಘ ಸಮಯವಾಗಬಲ್ಲದು. ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಮುಂದುವರಿದಂತೆ, ಜಾಗತಿಕ ಇಂಧನ ವ್ಯವಸ್ಥೆಯು ಹೊಸ ರೂಪ ಪಡೆಯಬಹುದು.

(ಲೇಖಕರು: ಜಯನ್ ಜೋಸ್ ಥಾಮಸ್, ಅರ್ಥಶಾಸ್ತ್ರದ ಪ್ರಾಧ್ಯಾಪಕರು, ಐಐಟಿ ದೆಹಲಿ)

Originaly published in The Hindu.

ಮಾರ್ಚ್ 19, 2026



ಅಮೇರಿಕೆ ತನ್ನ ಹಿತಾಸಕ್ತಿಗೆ ಅನುಕೂಲವಾಗುವಂತೆ ಬೇರೆ ದೇಶಗಳಲ್ಲಿ ಹಸ್ತಕ್ಷೇಪ ಮಾಡತೊಡಗಿತು. ವೆನೆಜುವೆಲಾದ ಅಧ್ಯಕ್ಷರಾದ ನಿಕೊಲಸ್ ಮದುರೊ ಮತ್ತು ಅವರ ಪತ್ನಿಯನ್ನು ಅಮೇರಿಕೆಯ ವಿಶೇಷ ದಳ ಸೆರೆಹಿಡಿಯಿತು.

ಟ್ರಂಪ್ ಮಾಡ್ತಿರೋ ಇರಾನ್ ಎಡವಟ್ಟು ಅಮೆರಿಕನ್ನೇ ಮುಳುಗಿಸಬಹುದು!

ಡ್ಯಾರನ್ ಅಸಿಮೊಗ್ಲು

ನೋಬೆಲ್ ಪ್ರಶಸ್ತಿ ವಿಜೇತ ಡ್ಯಾರನ್ ಅಸಿಮೊಗ್ಲು ಡೊನಾಲ್ಡ್ ಟ್ರಂಪ್ ಇರಾನಿಗೆ ಸಂಬಂಧಿಸಿದಂತೆ ಮಾಡ್ತಿರೋ ಎಡವಟ್ಟು ಅಮೇರಿಕಾಕ್ಕೆ ಮುಳವಾಗಬಹುದು ಅಂತ ಅಭಿಪ್ರಾಯ ಪಟ್ಟಿದ್ದಾರೆ. ಅವರು ಇತ್ತೀಚೆಗೆ ಪ್ರಾಜೆಕ್ಟ್ ಸಿಂಡಿಕೇಟ್‌ನಲ್ಲಿ ಬರೆದ ಲೇಖನದಲ್ಲಿ "ಟ್ರಂಪ್ ಅಧ್ಯಕ್ಷರಾದ ಮೇಲೆ ಅಮೆರಿಕದ ವಿದೇಶಾಂಗ ನೀತಿ ತೀರಾ ಕೆಳಮಟ್ಟಕ್ಕೆ ಇಳಿದುಹೋಗಿದೆ. ವೆನೆಜುವೆಲಾದ ಡಿಕ್ಟೇಟರ್‌ನ ಕಿಡ್ನ್ಯಾಪ್ ಮಾಡಿದ ಬೆನ್ನಲ್ಲೇ, ಈಗ ಇರಾನ್ ಮೇಲೆ ಯುದ್ಧಕ್ಕೆ ನಿಂತಿರೋದು ಅಮೆರಿಕಕ್ಕೆ ದೊಡ್ಡ ಮಟ್ಟದ ಹೊಡೆತ ಕೊಡುತ್ತೆ. ಅಷ್ಟೇ ಅಲ್ಲ, ಇಡೀ ಜಗತ್ತು ಅಮೆರಿಕದ ಶಕ್ತಿಯನ್ನು ನೋಡೋ ರೀತಿಯೇ ಇದರಿಂದ ಬದಲಾಗಿಬಿಡುತ್ತದೆ" ಅಂತ ಹೇಳಿದ್ದಾರೆ.

ಅಮೆರಿಕ ಸರಿಯಾಗಿ ಪ್ಲಾನ್ ಮಾಡದೆ ಈ ತರಹ ಯೋಜನೆಯಿಲ್ಲದೆ ಬೇರೆ ದೇಶಗಳ ವಿಷಯದಲ್ಲಿ ತಲೆಹಾಕಿ ಕೈ ಸುಟ್ಟುಕೊಳ್ತಿರೋದು ಇದೇ ಮೊದಲೇನಲ್ಲ. ಹಿಂದೆಯೂ ಹೀಗೆ ಮಾಡಿದೆ. ಅಸಿಮೊಗ್ಲು ಹೇಳುವಂತೆ "ಇದಕ್ಕೆ ಒಂದು ಸೊಗಸಾದ ಉದಾಹರಣೆ ಅಂದ್ರೆ 1953ರಲ್ಲಿ ಇರಾನಿನ ಚುನಾಯಿತ ಜನಪ್ರಿಯ ಪ್ರಧಾನ ಮಂತ್ರಿ ಮೊಹಮ್ಮದ್ ಮೊಸಾದೆಘ್ ಬ್ರಿಟಿಷ್ ಒಡೆತನದ ತೈಲ ಉದ್ಯಮವನ್ನು ರಾಷ್ಟ್ರೀಕರಣಗೊಳಿಸಿದ್ದ. ಅದಕ್ಕೆ ಅಮೆರಿಕದ ಸಿಐಎ ಪ್ರಧಾನ ಮಂತ್ರಿ ಅವರನ್ನು ಅಧಿಕಾರದಿಂದ ಉರುಳಿಸಿತು. ಈ ಘಟನೆಯಿಂದಾಗಿಯೇ 1979ರಲ್ಲಿ ಇರಾನಿನಲ್ಲಿ ಕ್ರಾಂತಿಯಾಯಿತು ಅಂತ ಹೇಳುವುದಕ್ಕಾಗುವುದಿಲ್ಲ ನಿಜ. ಆದರೆ ಅವರು ಆರಿಸಿದ್ದ ಪ್ರಧಾನಿಯ ಜಾಗದಲ್ಲಿ ಅಮೆರಿಕ ತಂದು ಕೂರಿಸಿದ ಆ ರಾಜಪ್ರಭುತ್ವದ ಮೇಲೆ ಇರಾನಿನ ಜನರಲ್ಲಿ ಅಸಮಾಧಾನ ಮೂಡೋಕೆ ಸಿಐಎ ಮಾಡಿದ ಆ ಉದ್ಧಟತನದ ಕೆಲಸವೇ ಬಹುತೇಕ ಕಾರಣ ಅನ್ನೋದ್ರಲ್ಲಿ ಸಂಶಯವೇ ಇಲ್ಲ."

"ಇದೇ ಕಾರಣಕ್ಕೆ ಆಗ ಇರಾನಿನ ಕಮ್ಯುನಿಸ್ಟರು, ಸಂಪ್ರದಾಯವಾದಿಗಳು ಮತ್ತು ಲಿಬರಲ್‌ಗಳು ಸೇರಿದಂತೆ ಎಲ್ಲಾ ವರ್ಗದ ಜನರೂ ಸೇರಿ ಆ 'ಷಾ' ರಾಜನನ್ನು ಅಧಿಕಾರದಿಂದ ಕಿತ್ತಾಕೋದಕ್ಕೆ ಒಂದಾಗಿದ್ದು. ಆದ್ರೆ ದೊಡ್ಡ ದುರಂತ ಅಂದ್ರೆ, ಈ ಖೊಮೇನಿ ಎಲ್ಲರನ್ನೂ ಒಪ್ಪಿಸಿಕೊಂಡು ಹೋಗೋ ನಾಯಕ ಆಗಿರಲೇ ಇಲ್ಲ. ಅಧಿಕಾರಕ್ಕೆ ಬಂದ ಕೂಡಲೇ ತನ್ನ ಹಳೆಯ ಮಿತ್ರರ ಮೇಲೆಯೇ ತಿರುಗಿಬಿದ್ದ. ಜನರನ್ನು ಹತ್ತಿಕ್ಕೋ ಒಂದು ತೀವ್ರ ಧಾರ್ಮಿಕ ಆಡಳಿತವನ್ನ ತಂದ. ಅದೇ ಆಡಳಿತ ಇವತ್ತಿಗೂ ಅಲ್ಲಿ ಮುಂದುವರಿಯುತ್ತಿದೆ."

ಅಸಿಮೊಗ್ಲು ಹೇಳುವಂತೆ "ಇದರಿಂದ ನಾವು ಕಲಿಯಬೇಕಾದ ಪಾಠ ಅಂದ್ರೆ, ಅಮೆರಿಕ ಈ ತರಹ ಬೇರೆ ದೇಶಗಳ ವಿಷಯದಲ್ಲಿ ಮಧ್ಯಪ್ರವೇಶ ಮಾಡಿದಾಗಲೆಲ್ಲಾ ಅದರಿಂದ ಅಂದಾಜು ಮಾಡಲಿಕ್ಕಾಗದ ಪರಿಣಾಮಗಳು ಆಗುತ್ತವೆ. ಒಂದು ಕಡೆ ಇದರಿಂದ ಜನರ ಮನಸ್ಸಿನಲ್ಲಿ ದೀರ್ಘಕಾಲದ ಸಿಟ್ಟು ಉಳಿದುಬಿಡುತ್ತದೆ. ಇನ್ನೊಂದು ಕಡೆ ಅಮೆರಿಕದ 'ಸಾಫ್ಟ್ ಪವರ್' (ಅಂದ್ರೆ ಪ್ರೀತಿ ಮತ್ತು ಗೌರವದಿಂದ ಜಗತ್ತನ್ನು ಒಪ್ಪಿಸುವ ಶಕ್ತಿ) ಮಣ್ಣು ಪಾಲಾಗುತ್ತೆ. ಅಮೆರಿಕ ತನ್ನ ಪ್ರಾಬಲ್ಯ ಏನಿದ್ರೂ ಒಳ್ಳೆಯದಕ್ಕೇ ಬಳಸಲಾಗುತ್ತದೆ. ಮತ್ತು ಜಗತ್ತಿನಲ್ಲಿ ನೆಮ್ಮದಿ ಮತ್ತು ನಂಬಿಕೆ ಇರಬೇಕಂದ್ರೆ ಅದು ಅವಶ್ಯಕ ಅಂತ ನಂಬಿಸಿತ್ತು. ಹಾಗೆ ನಂಬಿಸಿ ಜಗತ್ತಿನ ತನ್ನೆಲ್ಲ ಮಿತ್ರ ರಾಷ್ಟ್ರಗಳನ್ನ ಒಟ್ಟಿಗೆ ಇಡೋಕೆ ಈ ಸಾಫ್ಟ್ ಪವರ್ ಅನ್ನೇ ಅದು ಇಷ್ಟು ದಿನ ನೆಚ್ಚಿಕೊಂಡಿತ್ತು."

ಅಸಿಮೊಗ್ಲು ಇದು ತುಂಬಾ ಮುಖ್ಯ ಅಂತ ಭಾವಿಸುತ್ತಾರೆ ಯಾಕೆ ಅಂದ್ರೆ, "ಒಬ್ಬ ಬಲಿಷ್ಠ ನಾಯಕ ಸುಮ್ಮನೆ ರೌಡಿಯ ತರ ಆಡೋಕೆ ಶುರು ಮಾಡಿದ್ರೆ ಜನರಿಗೆ ಅದು ಇಷ್ಟ ಆಗಲ್ಲ, ಅವ್ರು ಅದನ್ನ ವಿರೋಧಿಸ್ತಾರೆ. ಪದೇ ಪದೇ ಮತ್ತು ಅನಗತ್ಯವಾಗಿ ಸೈನ್ಯದ ಶಕ್ತಿ ತೋರಿಸೋದರಿಂದ, ಅಮೆರಿಕದ ಮೇಲಿರೋ ಮರ್ಯಾದೆಯನ್ನ ಮಣ್ಣುಪಾಲು ಮಾಡುತ್ತೆ. ಅದ್ರಲ್ಲೂ ಮಾಡ್ತಿರೋ ಕೆಲಸಕ್ಕೆ ಒಂದು ಸರಿಯಾದ ಕಾರಣ ಇಲ್ಲದಿದ್ದಾಗಲಂತೂ ಇದು ಇನ್ನೂ ಅಪಾಯ. ಶೀತಲ ಸಮರದ ಕಾಲದಲ್ಲಿ ಕಮ್ಯುನಿಸಂ ಹರಡೋದನ್ನ ತಡೆಯಬೇಕು ಅನ್ನೋ ಒಂದು ದೊಡ್ಡ ಉದ್ದೇಶವಾದ್ರೂ ಅಮೆರಿಕಕ್ಕಿತ್ತು, ಯಾಕಂದ್ರೆ ಅದು ಆಗ ನಿಜವಾದ ಭೀತಿಯಾಗಿತ್ತು."

ಆದ್ರೆ ಒಂದು ದೇಶದ ಗೌರವಕ್ಕೆ ಇದಕ್ಕಿಂತಲೂ ದೊಡ್ಡ ಪೆಟ್ಟು ಬೀಳೋದು ಯಾವಾಗ ಅಂದರೆ, ಯಾವುದೇ ಪ್ಲಾನ್ ಇಲ್ಲದೆ, ಅಲ್ಲಿನ ಜನರ ಜೀವದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದೆ ಯುದ್ಧಕ್ಕೆ ಹೋದಾಗ. ಈಗ ಮಿಡಲ್ ಈಸ್ಟ್‌ನಲ್ಲಿ ನಾವು ನೋಡ್ತಿರೋದು ಇದನ್ನೆ. ಟ್ರಂಪ್ ಅವರ ಈ ಆತುರದ ಮತ್ತು ಅಲೋಚನೆ ಇಲ್ಲದ ಯುದ್ಧದಿಂದ ಅಮೆರಿಕದ ಇಮೇಜ್ ಇತಿಹಾಸದಲ್ಲೇ ಅತ್ಯಂತ ಕೆಳಮಟ್ಟಕ್ಕೆ ಹೋಗೋದ್ರಲ್ಲಿ ಸಂಶಯವೇ ಇಲ್ಲ. ಅಷ್ಟೇ ಅಲ್ಲ, ಈ ಕಳೆದುಹೋದ ಗೌರವವನ್ನ ಮತ್ತೆ ಸರಿಮಾಡೋಕೆ ಅವರ ತಂಡದಲ್ಲಿ ಯಾರೊಬ್ಬರಿಗೂ ಕಾಳಜಿ ಇಲ್ಲ ಅನ್ನುವುದು ಅಸಿಮೊಗ್ಲು ಅವರ ಆತಂಕ.

ಈಗಿರೋ ವೈಟ್ ಹೌಸ್‌ಗೆ ವಿದೇಶಿ ನಾಯಕರ ಹಾಗೂ ಜನರ ಮನಸ್ಸು ಮತ್ತು ವಿಶ್ವಾಸ ಗೆಲ್ಲೋದು ಮುಖ್ಯ ಅನ್ನಿಸುತ್ತಿಲ್ಲ. ಅದರ ಬದಲು ಬರಿ ಬೆದರಿಕೆ ಹಾಕೋದು ಅಥವಾ ತಮ್ಮ ಲಾಭಕ್ಕೆ ವ್ಯವಹಾರ ಮಾಡಿಕೊಳ್ಳೋದೇ 'ಸರಿಯಾದ ದಾರಿ' ಅಂತ ಅವರು ಭಾವಿಸಿದ್ದಾರೆ.

ನಿಜ, ಇರಾನಿನ ಈ ಆಡಳಿತ ತುಂಬ ಕ್ರೂರವಾಗಿದೆ ಮತ್ತು ಜನರನ್ನು ಹತ್ತಿಕ್ಕುತ್ತಿದೆ. ಬಹುತೇಕ ಇರಾನಿಯನ್ನರಿಗೆ ಹೊಸ ಸುಪ್ರೀಂ ಲೀಡರ್ ಮೊಜ್ತಬಾ ಖೊಮೇನಿ ಮೇಲಾಗಲಿ, ಅಥವಾ ಇಸ್ಲಾಮಿಕ್ ಕ್ರಾಂತಿಕಾರಿ ರಕ್ಷಣಾ ಪಡೆಯ ಮೇಲಾಗಲಿ ಪ್ರೀತಿಯೇನೂ ಇಲ್ಲ. ಹಾಗೆಂದ ಮಾತ್ರಕ್ಕೆ ಆ ಆಡಳಿತ ಬಿದ್ದು ಹೋಗುತ್ತೆ ಅಂದುಕೊಳ್ಳೋದು ತಪ್ಪು. ಅಮೆರಿಕದ ಹಸ್ತಕ್ಷೇಪದಿಂದ ಅಲ್ಲಿ ಶಾಂತಿ ಹಾಗೂ ಸ್ಥಿರತೆ ಸಾಧ್ಯವಾಗುತ್ತೆ ಅನ್ನೋದು ಇನ್ನೂ ಸುಳ್ಳು.



'ಈ ಯುದ್ಧದಲ್ಲಿ ಆಶ್ಚರ್ಯದ ವಿಷಯ ಅಂದರೆ, ಯುದ್ಧವನ್ನು ಎಷ್ಟು ಕೆಟ್ಟದಾಗಿ ಪ್ಲಾನ್ ಮಾಡಿದ್ದಾರೆ ಅನ್ನೋದು! ಶೀತಲ ಸಮರದ ಕಾಲದಲ್ಲಿ ಸಿಐಎ ಮಾಡಿದ ಎಡವಟ್ಟುಗಳಿಗಿಂತಲೂ ಇದು ಕೆಟ್ಟದಾಗಿದೆ. ಅಮೇರಿಕ ಮತ್ತು ಇಸ್ರೇಲ್ ಹತ್ತಿರ ಒಳ್ಳೆಯ ಬಾಂಬ್‌ಗಳೇನೋ ಇವೆ, ಎಲ್ಲಿಗೆ ಹಾಕಬೇಕು ಅನ್ನೋ ಗುರಿಗಳೂ ಇವೆ; ಆದ್ರೆ ಯುದ್ಧ ಶುರು ಮಾಡಿದ ಮೇಲೆ ಅಲ್ಲಿಂದ ವಾಪಸ್ ಬರೋದು ಹೇಗೆ ಅನ್ನೋ ಪ್ಲಾನೇ ಇಲ್ಲ!

ಇರಾನಿನ ಉನ್ನತ ನಾಯಕರುಗಳನ್ನು ಕೊಂದ ತಕ್ಷಣ ಅಲ್ಲಿನ ಸರ್ಕಾರವೇನೂ ಕುಸಿದು ಬೀಳೊಲ್ಲ ಅಂತ ಅಸಿಮೊಗ್ಲು ಹೇಳುತ್ತಾರೆ. ಅವರು ಹೇಳುವಂತೆ "ಇರಾನ್ ಸುಮ್ಮನೆ ಕೂರಲ್ಲ, ಅದು ಖಂಡಿತ ತಿರುಗಿ ಬೀಳುತ್ತೆ. ಅದ್ರಲ್ಲೂ ಇಡೀ ಏಷ್ಯಾ ಪ್ರದೇಶದಲ್ಲಿ ಅಸ್ಥಿರತೆ ಮೂಡಿಸೋದು ಮತ್ತು ಪೆಟ್ರೋಲ್ ಬೆಲೆ ಏರಿಸೋದು ಇರಾನಿನ ಪ್ಲಾನ್ ಆಗಿರುತ್ತೆ. 'ಹಾರ್ಮುಜ್ ಜಲಸಂಧಿ' ಇರಾನ್ ಕೈಯಲ್ಲಿರೋ ಅತಿ ದೊಡ್ಡ ಬ್ರಹ್ಮಾಸ್ತ್ರ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಆದ್ರೆ ಟ್ರಂಪ್ ಸರ್ಕಾರ ಈ ಎಲ್ಲಾ ವಿಷಯಗಳನ್ನ ಪೂರ್ತಿ ಅಲಕ್ಷ್ಯ ಮಾಡಿದ ಹಾಗಿದೆ. ಕನಿಷ್ಠ ಅಲ್ಲಿಯ ಹಿರಿಯ ಅಧಿಕಾರಿಗಳ ಇತ್ತೀಚಿನ ಹೇಳಿಕೆಗಳನ್ನು ನೋಡಿದರೆ ಹಾಗೆ ತೋರುತ್ತದೆ."

ಇದರಿಂದಾಗಿ "ಇರಾನ್ ಸರ್ಕಾರ ತಾನು ಮೇಲುಗೈ ಸಾಧಿಸಿದ್ದೇನೆ ಅಂದುಕೂಳ್ಳುತ್ತಿದೆ. ಅಮೇರಿಕನ್ನರಿಗೆ ದೀರ್ಘಕಾಲ ಯುದ್ಧ ಮಾಡೋ ತಾಳ್ಮೆ ಇಲ್ಲ ಅಂತ ಅವರಿಗೆ ಚೆನ್ನಾಗಿ ಗೊತ್ತು. ಎಷ್ಟೇ ಕಷ್ಟ ಬಂದರೂ, ಜನರನ್ನು ಹತ್ತಿಕ್ಕಿಯಾದರೂ ಸರಿ, ಇಸ್ಲಾಮಿಕ್ ರಿಪಬ್ಲಿಕ್ಕಿನ ಅಧಿಕಾರವನ್ನು ಉಳಿಸಿಕೊಳ್ಳಲು ಅವರು ಸಿದ್ಧರಿದ್ದಾರೆ. ಇಡೀ ಜಾಗತಿಕ ಮಾರುಕಟ್ಟೆಯಲ್ಲಿ ಈಗಿರೋ ಆತಂಕವನ್ನು ನೋಡಿದ್ರೆ ಈ ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಅಂತ ಅರ್ಥವಾಗುತ್ತೆ." ಅಂತ ಅಸಿಮೊಗ್ಲು ಭಾವಿಸುತ್ತಾರೆ.

ಈಗಾಗಲೇ ಆರ್ಥಿಕತೆ ಸಂಕಷ್ಟದಲ್ಲಿದೆ. ಕೃತಕ ಬುದ್ಧಿಮತ್ತೆಯ ಗುಳ್ಳೆಯ ಬಗ್ಗೆ ವ್ಯಾಪಕವಾಗಿ ಕೇಳುತ್ತಿದ್ದೇವೆ. ಇಂದಿನ ಮಾರುಕಟ್ಟೆಯಲ್ಲಿನ ಗೊಂದಲ ಮತ್ತು ಜಾಗತಿಕ ಅನಿಶ್ಚಿತತೆ ತೀವ್ರತೆಯಿಂದ ಸಮಸ್ಯೆ ಬಿಗಡಾಯಿಸಬಹುದು. ತೈಲದ ಬೆಲೆ ಜಾಸ್ತಿ ಆದ್ರೆ ಹೂಡಿಕೆ ಮತ್ತು ಆರ್ಥಿಕ ಬೆಳವಣಿಗೆ ನಿಧಾನವಾಗುತ್ತದೆ. ಮತ್ತು ಎಲ್ಲದರ ಬೆಲೆ ಏರುತ್ತೆ. ಅಸಿಮೊಗ್ಲು ನೀಡಿರುವ ಎಚ್ಚರ ಈಗಾಗಲೇ ನಿಜ ಆಗಿದೆ.

ಇದರಿಂದಾಗಿ ಮುಂದೆ ಹೆಚ್ಚುವ ನಿರುದ್ಯೋಗ ಮತ್ತು ಬೆಲೆ ಏರಿಕೆಯಿಂದ ಅಧಿಕಾರದಲ್ಲಿರೋ ಸರ್ಕಾರಗಳಿಗೆ ಭಾರಿ ಹೊಡೆತ ಕೊಡುತ್ತೆ. ಯುರೋಪ್‌ನಲ್ಲೂ ಅಷ್ಟೇ, ಅಲ್ಲಿನ ಹಳೆ ಸರ್ಕಾರಗಳಿಗೆ ಈ 'ಬಲಪಂಥೀಯ' ಗುಂಪುಗಳಿಂದ ಈಗಾಗಲೇ ದೊಡ್ಡ ಸವಾಲು ಎದುರಾಗಿದೆ. ಯುರೋಪ್‌ನ ಯಾವೊಬ್ಬ ಲೀಡರ್‌ಗೂ ಈ ಯುದ್ಧ ಇಷ್ಟ ಇಲ್ಲ. ಟ್ರಂಪ್ ಅವರು 'ಬನ್ನಿ, ನಿಮ್ಮ ಯುದ್ಧ ಹಡಗುಗಳನ್ನು ಕಳುಹಿಸಿ' ಅಂತ ಕೇಳಿದ್ರೂ, ಅವರು ನೇರವಾಗಿ 'ಇಲ್ಲ' ಅಂತ ಹೇಳಿ ತಿರಸ್ಕರಿಸಿದ್ದಾರೆ."

ಇನ್ನು ಅಮೇರಿಕದಲ್ಲಂತೂ ನವೆಂಬರ್ ಎಲೆಕ್ಷನ್‌ನಲ್ಲಿ ಈ ಯುದ್ಧಕ್ಕೆ ಟ್ರಂಪ್ ಭಾರಿ ಬೆಲೆ ತೆರಬೇಕಾಗುತ್ತೆ ಅನ್ನುವ ಅನುಮಾನ ಇದೆ. ಅಸಿಮೊಗ್ಲು ಗುರುತಿಸಿರುವಂತೆ "ಆದ್ರೆ ಟ್ರಂಪ್ 'ಸಿಸ್ಟಂಗೆ ವಿರುದ್ಧ' ಇರೋ ನಾಯಕ ಅಂತ ಬಿಂಬಿತವಾಗಿದೆ. ಒಂದು ವೇಳೆ ಯುದ್ಧದಿಂದ ದೇಶದ ಆರ್ಥಿಕತೆ ಪೂರ್ತಿ ಹಾಳಾದರೂ ಅವರ ಕಟ್ಟಾ ಅಭಿಮಾನಿಗಳು "ಇದು ಟ್ರಂಪ್ ತಪ್ಪು" ಅಂತ ಯಾವತ್ತೂ ಒಪ್ಪಿಕೊಳ್ಳಲ್ಲ. ಅದರ ಬದಲು, "ನೋಡಿ, ಆ ಹಳೇ ಅಧಿಕಾರಿಗಳು ಅಥವಾ ಸಿಸ್ಟಮ್ ಟ್ರಂಪ್‌ಗೆ ಕೆಲಸ ಮಾಡೋಕೆ ಬಿಡ್ತಿಲ್ಲ, ಅದಕ್ಕೇ ದೇಶ ಹೀಗಾಯ್ತು" ಅಂತ ವ್ಯವಸ್ಥೆಯನ್ನು ಬೈತಾರೆ. ಅದು ದೇಶದ ಒಳಗಡೆ ಇನ್ನೂ ಜಾಸ್ತಿ ಜಗಳಕ್ಕೆ (Polarization) ದಾರಿ ಮಾಡಿಕೊಡುತ್ತೆ ಮತ್ತು ಅಮೇರಿಕದ ಒಳಗಿರೋ ವ್ಯವಸ್ಥೆಗಳನ್ನೇ ಹಾಳುಮಾಡುತ್ತೆ."

ಅಸಿಮೊಗ್ಲು ತಮ್ಮ ಲೇಖನದಲ್ಲಿ ಗುರುತಿಸುವ ಇನ್ನೊಂದು ಅಂಶವೆಂದರೆ "ಇನ್ನು ಟ್ರಂಪ್ ಅವರಂತೂ ಈ ಉರಿಯೋ ಬೆಂಕಿಗೆ ತುಪ್ಪ ಸುರಿಯೋ ಕೆಲಸ ಮಾಡ್ತಾರೆ! ರಿಪಬ್ಲಿಕನ್ ಮತ್ತು ಡೆಮಾಕ್ರೆಟ್‌ಗಳ ಮಧ್ಯೆ ಇನ್ನಷ್ಟು ಜಗಳ ಹಚ್ಚಿ, ಇಡೀ ದೇಶವನ್ನೇ ಎರಡು ಭಾಗ ಮಾಡೋಕೆ ನೋಡ್ತಾರೆ. ಅಷ್ಟೇ ಅಲ್ಲ, ದೇಶದ ಒಳಗಡೆ ಇನ್ನೂ ಶಾಂತಿ ಕೆಡಿಸೋ ಕೆಲಸಗಳನ್ನ ಮಾಡಬಹುದು. ಈಗಾಗಲೇ ಅಮೇರಿಕೆಯ ಒಳಗಡೆಯ ಸಂಸ್ಥೆಗಳು ದುರ್ಬಲವಾಗಿವೆ. ಅಧ್ಯಕ್ಷರ ಅಧಿಕಾರವನ್ನು ನಿಯಂತ್ರಣ ಮಾಡಬೇಕಿದ್ದ ಕಾನೂನುಗಳು ಸರಿಯಾಗಿ ಕೆಲಸ ಮಾಡ್ತಿಲ್ಲ. ಇದು ಟ್ರಂಪ್ ಅವರ ಕಾರ್ಯಯೋಜನೆಗೆ ತುಂಬಾ ಅನುಕೂಲ. ಅವರು ಸಿಕ್ಕ ಅವಕಾಶವನ್ನು ಬಳಸಿಕೊಂಡು ವ್ಯವಸ್ಥೆಗಳನ್ನು ಇನ್ನಷ್ಟು ದುರ್ಬಲಗೊಳಿಸುತ್ತಾರೆ.

ಈ ಕೆಟ್ಟದಾಗಿ ಯೋಜಿಸಿದ ವಿದೇಶಿ ಸಾಹಸದಿಂದ ಅಮೇರಿಕದ ಪ್ರಜಾಪ್ರಭುತ್ವಕ್ಕೆ ಮತ್ತು ಅದರ ಮರ್ಯಾದೆಗೆ (Soft Power) ಇನ್ನೆಷ್ಟು ತೊಂದರೆಯಾಗುತ್ತದೆ ಅನ್ನುವುದನ್ನು ಕಾದು ನೋಡಬೇಕು.

ಅಸಿಮೊಗ್ಲು ಅಂತಿಮವಾಗಿ ಹೇಳುವ ಮಾತು ಅಂದರೆ "ಇದರ ಪೆಟ್ಟನ್ನು ಅನುಭವಿಸಬೇಕಿರೋದು ಅಪ್ಪಟ ಅಮೇರಿಕನ್ನರೇ. ನಷ್ಟ ನಾವು ಊಹಿಸೋದಕ್ಕಿಂತಲೂ ದೊಡ್ಡ ಪ್ರಮಾಣದಲ್ಲಿರುತ್ತದೆ. ಅಮೇರಿಕದ ಪ್ರಜಾಪ್ರಭುತ್ವಕ್ಕೆ, ಸಾಮಾಜಿಕ ಸ್ಥಿರತೆಗೆ, ಮತ್ತು ಆರ್ಥಿಕ ಚೇತರಿಕೆಗೆ ಈ ಪ್ರಮಾಣದ ಅಪಾಯವನ್ನು ನಾವ್ಯಾರೂ ಈವರೆಗೆ ಕಂಡಿರಲಿಲ್ಲ.


ಡ್ಯಾರನ್ ಅಸೆಮೊಗ್ಲು ಅವರು 2024ರ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ವಿಜೇತರು ಮತ್ತು ಎಂಐಟಿಯಲ್ಲಿ (MIT) ಅರ್ಥಶಾಸ್ತ್ರದ ಇನ್ಸ್ಟಿಟ್ಯೂಟ್ ಪ್ರೊಫೆಸರ್ ಆಗಿದ್ದಾರೆ. ಇವರು ಜೇಮ್ಸ್ ಎ. ರಾಬಿನ್ಸನ್ ಅವರೊಂದಿಗೆ ಸೇರಿ 'ವೈ ನೇಷನ್ಸ್ ಫೇಲ್: ದಿ ಒರಿಜಿನ್ಸ್ ಆಫ್ ಪವರ್, ಪ್ರಾಸ್ಪೆರಿಟಿ ಅಂಡ್ ಪಾವರ್ಟಿ' (ಪ್ರೊಫೈಲ್, 2019) ಪುಸ್ತಕವನ್ನು ಮತ್ತು ಸೈಮನ್ ಜಾನ್ಸನ್ ಅವರೊಂದಿಗೆ ಸೇರಿ 'ಪವರ್ ಅಂಡ್ ಪ್ರೋಗ್ರೆಸ್: ಅವರ್ ಥೌಸಂಡ್ ಇಯರ್ ಸ್ಟ್ರಗಲ್ ಓವರ್ ಟೆಕ್ನಾಲಜಿ ಅಂಡ್ ಪ್ರಾಸ್ಪೆರಿಟಿ' (ಪಬ್ಲಿಕ್ ಅಫೇರ್ಸ್, 2023) ಪುಸ್ತಕವನ್ನು ಬರೆದಿದ್ದಾರೆ.

ಇರಾನ್ ಈಗ ಅಮೇರಿಕೆಯ ಮೇಲೆ ನಿರ್ಬಂಧ ಹೇರುತ್ತಿದೆ.

ಸೈಮನ್ ಜಾನ್ಸನ್, ಮಾರ್ಚ್ 20, 2026

ನೋಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಸೈಮನ್ ಜಾನ್ಸನ್ ಇತ್ತೀಚೆಗೆ ಪ್ರಾಜೆಕ್ಟ್ ಸಿಂಡಿಕೇಟ್‌ನಲ್ಲಿ ಒಂದು ಕುತೂಹಲಕಾರಿಯಾದ ಲೇಖನ ಬರೆದಿದ್ದಾರೆ. ಅದರಲ್ಲಿ ಅವರು ಇರಾನ್ ಈಗ ಅಮೇರಿಕೆಯ ಮೇಲೆ ನಿರ್ಬಂಧ ಹೇರುತ್ತಿದೆ ಎಂದು ಬರೆದಿದ್ದಾರೆ. "ಅಂತರರಾಷ್ಟ್ರೀಯ ನಿರ್ಬಂಧಗಳ (Sanctions) ಮುಖ್ಯ ಉದ್ದೇಶವೇ ಎದುರಾಳಿ ದೇಶಕ್ಕೆ ಆರ್ಥಿಕವಾಗಿ ಪೆಟ್ಟು ಕೊಡುವುದು. ಅಮೆರಿಕದ ವಿಷಯಕ್ಕೆ ಬಂದರೆ, ಅವರು ಬೇರೆ ದೇಶಗಳ ಆಸ್ತಿಗಳನ್ನು ಜಪ್ತಿ ಮಾಡುವ ಮೂಲಕ ಅಥವಾ ನಿರ್ದಿಷ್ಟ ದೇಶಗಳ ಜೊತೆಗಿನ ವ್ಯವಹಾರಗಳನ್ನು ನಿಷೇಧಿಸುವ ಮೂಲಕ ಇದನ್ನು ಮಾಡುತ್ತಾರೆ. ಹೆಚ್ಚಾಗಿ ಆಯಾ ದೇಶದ ಆಡಳಿತಕ್ಕೆ ಹತ್ತಿರವಿರುವ ವ್ಯಕ್ತಿಗಳನ್ನು ಅಥವಾ ಸಂಸ್ಥೆಗಳನ್ನು ಇವರು ಗುರಿಯಾಗಿಸುತ್ತಾರೆ. ಜಾಗತಿಕವಾಗಿ 'ಡಾಲರ್ ವ್ಯವಸ್ಥೆಗೆ ಇರುವ ಅಗಾಧ ಶಕ್ತಿಯಿಂದಾಗಿ, ಅಮೆರಿಕ ಹೇರುವ ನಿರ್ಬಂಧಗಳಿಗೆ ಜಗತ್ತಿನಾದ್ಯಂತ ಎಲ್ಲರೂ ಹೆದರುತ್ತಾರೆ." ಎಂದು ಬರೆಯುತ್ತಾ ಸೈಮನ್ ಆದರೆ ಈಗ ಪರಿಸ್ಥಿತಿ ಉಲ್ಟಾ ಆಗಿದೆ; ಇಂದು ಅಮೇರಿಕೆ ಪೆಟ್ಟು ತಿನ್ನುವ ಸ್ಥಿತಿಯಲ್ಲಿ ಸಿಲುಕಿದೆ." ಎನ್ನುತ್ತಾರೆ.

ಸೈಮನ್ ಹೇಳುವಂತೆ "ಇರಾನ್ ಈಗ ಅಮೆರಿಕಕ್ಕೆ ಅತಿ ದೊಡ್ಡ ಪೆಟ್ಟು ನೀಡಿದೆ. ಅಮೆರಿಕದ ಪರವಾಗಿರುವ ಪರ್ಷಿಯನ್ ಕೊಲ್ಲಿಯ ದೇಶಗಳ ತೈಲ ಪೂರೈಕೆಯನ್ನು ಹಾರ್ಮುಜ್ ಜಲಸಂಧಿಯಲ್ಲಿ ತಡೆಹಿಡಿದಿದೆ. ಆ ಮೂಲಕ ಇರಾನ್ ಅಮೆರಿಕದ ಮೇಲೆ ಅಘೋಷಿತ ನಿರ್ಬಂಧಗಳನ್ನು ಹೇರಿದೆ. ಆದರೆ ಇರಾನ್ ತನ್ನ ತೈಲವನ್ನು ಚೀನಾಗೆ ಮಾತ್ರ ಯಾವುದೇ ಅಡೆತಡೆಯಿಲ್ಲದೆ ಕಳಿಸುತ್ತಿದೆ. ಒಂದು ವೇಳೆ ಇರಾನಿನ ಈ ನಡೆ ಹೀಗೆಯೇ ಮುಂದುವರಿದರೆ, ಇದರಿಂದ ಸಾಮಾನ್ಯ ಅಮೆರಿಕನ್ನರಿಗೆ ಆರ್ಥಿಕವಾಗಿ ದೊಡ್ಡ ಹೊರೆಯಾಗುತ್ತದೆ. ಇದರಿಂದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬೆಂಬಲಿಗರ ಮೇಲೂ ಪರಿಣಾಮ ಆಗುತ್ತದೆ. ನವೆಂಬರ್‌ನಲ್ಲಿ ನಡೆಯಲಿರುವ ಮಧ್ಯಂತರ ಚುನಾವಣೆಗಳಲ್ಲಿ ಪ್ರಬಲ ಪರಿಣಾಮ ಉಂಟುಮಾಡಬಹುದು."



ಸೈಮನ್ ತಮ್ಮ ಲೇಖನದಲ್ಲಿ "ಸಾಮಾನ್ಯವಾಗಿ ಅಮೆರಿಕವು ಪರ್ಷಿಯನ್ ಕೊಲ್ಲಿಯ ದೇಶಗಳಿಂದ ನೇರವಾಗಿ ಹೆಚ್ಚು ತೈಲ ಖರೀದಿಸುವುದಿಲ್ಲ. ಆ ಭಾಗದ ಹೆಚ್ಚಿನ ತೈಲ ಏಷ್ಯಾಕ್ಕೆ ಮತ್ತು ರಷ್ಯಾ–ಉಕ್ರೇನ್ ಯುದ್ಧದ ನಂತರ ಯುರೋಪ್‌ಗೆ ರಫ್ತಾಗುತ್ತಿದೆ."

ಆದರೂ "ಜಾಗತಿಕ ತೈಲ ಮಾರುಕಟ್ಟೆ ಎಷ್ಟು ಬೆಸೆದುಕೊಂಡಿದೆ ಎಂದರೆ, ಜಗತ್ತಿನ ಯಾವುದೇ ಮೂಲೆಯಲ್ಲಿ ಕಚ್ಚಾ ತೈಲದ (Brent crude) ಬೆಲೆ ವ್ಯತ್ಯಾಸವಾದರೂ ಅದರ ಬಿಸಿ ಉತ್ತರ ಅಮೆರಿಕಾದ ಪೆಟ್ರೋಲ್ ಮತ್ತು ಡೀಸೆಲ್ ದರಗಳ ಮೇಲೆ ತಕ್ಷಣ ತಟ್ಟುತ್ತದೆ. ಅಮೆರಿಕದ ಇಂಧನ ಮಾಹಿತಿ ಸಂಸ್ಥೆಯ (EIA) ಅಂಕಿಅಂಶಗಳ ಪ್ರಕಾರ, ಫೆಬ್ರವರಿ 28ರಂದು ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ಶುರು ಮಾಡಿದಾಗಿನಿಂದ, ಡೀಸೆಲ್ ಬೆಲೆ ಪ್ರತಿ ಗ್ಯಾಲನ್‌ಗೆ ಸುಮಾರು ಒಂದು ಡಾಲರ್ ಹೆಚ್ಚಿದೆ. ಈಗ ಅದು ಐದು ಡಾಲರ್ ಗಡಿ ದಾಟಿದೆ." ಎಂದು ಬರೆಯುತ್ತಾರೆ.

ಅಷ್ಟೇ ಅಲ್ಲ "ಇಂಧನ ಬೆಲೆ ಏರಿಕೆಯ ಬಿಸಿ ಪ್ರತಿಯೊಬ್ಬ ವಾಹನ ಬಳಸುವವರಿಗೆಲ್ಲಾ ನೇರವಾಗಿ ತಟ್ಟುತ್ತದೆ. ಮಾರುಕಟ್ಟೆ ಸಮೀಕ್ಷೆಗಳ ಪ್ರಕಾರ, ಟ್ರಂಪ್ ಅವರ ಹೆಚ್ಚಿನ ಬೆಂಬಲಿಗರು ದೊಡ್ಡ ಪಿಕಪ್ ವಾಹನಗಳನ್ನು (Full-size pickups) ಬಳಸುತ್ತಾರೆ, ಹಾಗಾಗಿ ಅವರಿಗೆ ಇದು ನೇರ ಹೊಡೆತ. ಇತ್ತ ಡೀಸೆಲ್ ಮತ್ತು ರಸಗೊಬ್ಬರ ಬೆಲೆ ಏರಿಕೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ವಿಮಾನ ಇಂಧನದ ಬೆಲೆಯೂ ಗಗನಕ್ಕೇರಿರುವುದರಿಂದ ವಿಮಾನ ಪ್ರಯಾಣ ದರಗಳು ಏರಿಕೆಯಾಗುತ್ತಿವೆ. ಈ ಸಾಗಣೆ ವೆಚ್ಚದ ಏರಿಕೆ ಕೇವಲ ವಾಹನಗಳಿಗೆ ಸೀಮಿತವಾಗಿಲ್ಲ; ಇದರಿಂದ ಆಹಾರ ಪದಾರ್ಥಗಳು ಮತ್ತು ದಿನಬಳಕೆಯ ವಸ್ತುಗಳ ಬೆಲೆಗಳು ಏರುತ್ತವೆ. ಇದರಿಂದ ಜನರ ಒಟ್ಟಾರೆ ಜೀವನಮಟ್ಟ ಕುಸಿಯುತ್ತದೆ."

ಹಲವರು ಈಗಾಗಲೇ ಗುರುತಿಸಿರುವಂತೆ ಸೈಮನ್ ಕೂಡ ಹಣಕಾಸು ಮಾರುಕಟ್ಟೆಯ ಮೇಲೆ ಇದರಿಂದ ಆಗುವ ಗಂಭೀರವಾದ ಪರಿಣಾಮಗಳನ್ನು ಗುರುತಿಸುತ್ತಾರೆ. "ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಅಥವಾ ಅದಕ್ಕಿಂತ ಹೆಚ್ಚಿರುವಾಗ, ಅಮೆರಿಕದ 'ಫೆಡರಲ್ ರಿಸರ್ವ್'ಗೆ ಬಡ್ಡಿ ದರಗಳನ್ನು ಇಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ವೇಳೆ ಅವರಿಗೆ ಈ ಹಣದುಬ್ಬರದ ಒತ್ತಡವನ್ನು ತಡೆಯಲು ಸಾಧ್ಯವಾಗದೇ ಹೋದರೆ, ಪರಿಸ್ಥಿತಿ 1970ರ ದಶಕದ ಆರ್ಥಿಕ ದುರಂತದ ಹಾದಿ ಹಿಡಿಯಬಹುದು. ಅಂದು ಆರ್ಥರ್ ಬರ್ನ್ಸ್ ಅವರು ಫೆಡ್ ಅಧ್ಯಕ್ಷರಾಗಿದ್ದಾಗ ಕೈಗೊಂಡ ತಪ್ಪು ನಿರ್ಧಾರಗಳಿಂದಾಗಿ ಅಮೆರಿಕ ಭೀಕರ ಹಣದುಬ್ಬರ ಮತ್ತು ಆರ್ಥಿಕ ಸ್ಥಗಿತಕ್ಕೆ ಸಿಲುಕಿತ್ತು.

ಸದ್ಯಕ್ಕೆ ಕೆಲವು ಪರ್ಯಾಯ ದಾರಿಗಳಿವೆ. ಈ ಇಂಧನ ಸಂಬಂಧಿ ಮೂಲಸೌಕರ್ಯಗಳ ಮೇಲಿನ ದಾಳಿಯನ್ನು ಸ್ವಲ್ಪ ತಣ್ಣಗಾಗಿಸುವ (De-escalate) ಸೂಚನೆಯನ್ನು ಟ್ರಂಪ್ ನೀಡುತ್ತಿದ್ದಾರೆ. ಆದರೆ ಇರಾನ್ ಹೇರಿರುವ ಈ 'ಅಘೋಷಿತ ನಿರ್ಬಂಧಗಳು ಮುಂದುವರಿಯಬೇಕೆಂದರೆ, ಅದು 'ಹಾರ್ಮುಜ್ ಜಲಸಂಧಿ'ಯಲ್ಲಿ ಹಡಗುಗಳಿಗೆ ಬೆದರಿಕೆ ಹಾಕುತ್ತಿದ್ದರೆ ಸಾಕು. ಟ್ರಂಪ್ ಅವರು "ನಾವು ಗೆದ್ದೆವು" ಎಂದು ಘೋಷಿಸಿ ಮಿಸೈಲ್ ದಾಳಿಗಳನ್ನು ನಿಲ್ಲಿಸಬಹುದು. ಆದರೆ ಇದರಿಂದ ಇಸ್ರೇಲ್–ಇರಾನ್ ಸಂಘರ್ಷ ನಿಲ್ಲುತ್ತದೆಯೇ? ಅಥವಾ ಪರ್ಷಿಯನ್ ಕೊಲ್ಲಿಯಲ್ಲಿ ಹಡಗುಗಳ ಸಂಚಾರ ಮತ್ತೆ ಮೊದಲಿನಂತೆ ಸುರಕ್ಷಿತವಾಗುತ್ತದೆಯೇ? ಎಂಬ ಅನುಮಾನವನ್ನು ಸೈಮನ್ ವ್ಯಕ್ತಪಡಿಸಿದ್ದಾರೆ.

ಸೈಮನ್ ಹೇಳುವಂತೆ ಇರಾನಿಗೆ ಇನ್ನೂ ಒಂದು ಅನುಕೂಲ ಇದೆ. "ಇರಾನಿಗೆ ತನ್ನ ಸ್ವಂತ ಶಕ್ತಿಯ ಜೊತೆಗೆ ರಷ್ಯಾದ ಬೆಂಬಲವೂ ದೊಡ್ಡದಾಗಿದೆ. ವರದಿಗಳ ಪ್ರಕಾರ ಅಮೆರಿಕದ ಆಸ್ತಿಗಳ ಮೇಲೆ ದಾಳಿ ಮಾಡಲು ಬೇಕಾದ ಮಾಹಿತಿ ಮತ್ತು ಡ್ರೋನ್ ತಂತ್ರಜ್ಞಾನವನ್ನು ನೀಡಿ ರಷ್ಯಾ ಇರಾನನ್ನು ಹುರಿದುಂಬಿಸುತ್ತಿದೆ. ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳನ್ನು ದುರ್ಬಲಗೊಳಿಸುವುದು



ರಷ್ಯಾದ ಉದ್ದೇಶ. ಜೊತೆಗೆ ತೈಲ ಬೆಲೆ ಏರಿಕೆಯಾದರೆ ರಷ್ಯಾಗೆ ಭರ್ಜರಿ ಲಾಭ. ಇರಾನ್ ಜೊತೆಗಿನ ಸಂಘರ್ಷ ಹೆಚ್ಚಾದಂತೆ, ಅಮೆರಿಕವು ರಷ್ಯಾದ ತೈಲದ ಮೇಲಿದ್ದ ನಿರ್ಬಂಧಗಳನ್ನು ಸಡಿಲಗೊಳಿಸುತ್ತಾ ಬಂದಿದೆ. ಈ ಸಂಘರ್ಷ ಮುಂದುವರಿದರೆ ತಮಗೆ ಇನ್ನೂ ಹೆಚ್ಚಿನ ರಿಯಾಯಿತಿ ಸಿಗಬಹುದು ಎಂಬುದು ರಷ್ಯಾದ ಲೆಕ್ಕಾಚಾರ." ರಷ್ಯಾಕ್ಕೆ ಆರ್ಥಿಕವಾಗಿ ಅನುಕೂಲವಾಗುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ.

ಬ್ರೂಕಿಂಗ್ಸ್ ಇನ್‌ಸ್ಟಿಟ್ಯೂಷನ್‌ನ ರಾಬಿನ್ ಜೆ. ಬ್ರೂಕ್ಸ್ ಅವರು ಇರಾನ್ ತೈಲದ ಮೇಲೆ ಸಂಪೂರ್ಣ ನಿರ್ಬಂಧ ಹೇರಲು ಸಲಹೆ ನೀಡುತ್ತಿದ್ದಾರೆ. ವೆನೆಜುವೆಲಾದಲ್ಲಿ ಮಾಡಿದಂತೆ ಅಮೆರಿಕ ಈಗ ಇರಾನ್‌ನ ರಹಸ್ಯ ನೌಕೆಗಳನ್ನು (Shadow fleet) ತಡೆಯಲು ಸಿದ್ಧವಿರುವುದರಿಂದ ಇದು ಸಾಧ್ಯವೂ ಇದೆ. ಈ ಆಲೋಚನೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ, ಏಕೆಂದರೆ ಇದು ಚೀನಾಕ್ಕೆ ಹೋಗುವ ತೈಲವನ್ನು ತಡೆಯುತ್ತದೆ. ಆಗ ಚೀನಾ ಕೂಡ ಈ ಸಮಸ್ಯೆಯನ್ನು ಬಗೆಹರಿಸಲು ರಾಜತಾಂತ್ರಿಕವಾಗಿ ಮಧ್ಯಪ್ರವೇಶಿಸುವುದು ಅನಿವಾರ್ಯವಾಗುತ್ತದೆ. ಆದರೆ ಚೀನಾ ಈಗಾಗಲೇ ಸುಮಾರು 100 ದಿನಗಳಿಗಾಗುವಷ್ಟು ತೈಲವನ್ನು ಸಂಗ್ರಹಿಸಿಟ್ಟುಕೊಂಡಿದೆ.

ಸೈಮನ್ ಗುರುತಿಸುವಂತೆ "ಈಗ ನಿಜವಾದ ಪ್ರಶ್ನೆ ಎಂದರೆ ಯಾರು ಆರ್ಥಿಕ ಬಿಕ್ಕಟ್ಟನ್ನು ಹೆಚ್ಚು ದಿನ ತಡೆದುಕೊಳ್ಳಬಲ್ಲರು ಎಂಬುದು. ತೀವ್ರ ದಮನಕಾರಿ ಆಡಳಿತವಿರುವ ಇಸ್ಲಾಮಿಕ್ ರಿಪಬ್ಲಿಕ್ಕೋ ಅಥವಾ ಚುನಾವಣಾ ಪ್ರಜಾಪ್ರಭುತ್ವ ಇರುವ ಅಮೇರಿಕೆಯೊ?"

ಇನ್ನು ವೈಟ್ ಹೌಸ್‌ನಲ್ಲಿ ನಡೆಯುತ್ತಿರುವ ವಿಚಿತ್ರ ಚರ್ಚೆಗಳನ್ನು ಸೈಮನ್ ಉಲ್ಲೇಖಿಸುತ್ತಾರೆ, "ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನ ಮಾಜಿ ಸ್ಪೀಕರ್ ನ್ಯೂಟ್ ಗಿಂಗ್ರಿಚ್ ಅವರು "ಒಂದು ಡಜನ್ ಅಣುಬಾಂಬ್ ಸ್ಫೋಟಿಸಿ" ಹೊಸ ಕಾಲುವೆಯನ್ನೇ ಅಗೆಯಲು ಬಯಸುತ್ತಿದ್ದಾರೆ! ಇಂತಹ ವಿಚಿತ್ರ ನಿರ್ಮಾಣ ಪದ್ಧತಿ ಸಾಧ್ಯವೇ ಇಲ್ಲದಿದ್ದರೂ (ಇದು ನಿಕಿತಾ ಕ್ರುಶ್ಚೇವ್ ಅವರ ಹಳೆಯ ಹುಚ್ಚು ಪ್ಲಾನ್‌ಗಳನ್ನು ನೆನಪಿಸುತ್ತದೆ), ಹಾರ್ಮುಜ್ ಜಲಸಂಧಿಗೆ ಪರ್ಯಾಯವಾಗಿ ಅಗೆಯುವ ಯಾವುದೇ ಕಾಲುವೆಯ ಮೇಲೂ ಇರಾನ್ ಸುಲಭವಾಗಿ ಕ್ಷಿಪಣಿ ದಾಳಿಮಾಡಬಹುದು. ಏಕೆಂದರೆ ಇರಾನಿನ ಕ್ಷಿಪಣೆಗಳು ಸೌದಿ ಅರೇಬಿಯಾದ ಕೆಂಪು ಸಮುದ್ರದವರೆಗೂ ತಲುಪಬಲ್ಲವು.

ಜಲಸಂಧಿಯನ್ನು ಮತ್ತೆ ತೆರೆಯಲು ಉಕ್ರೇನ್‌ನ ಡ್ರೋನ್ ನಿರೋಧಕ ತಂತ್ರಜ್ಞಾನವನ್ನು ಬಳಸಿಕೊಳ್ಳುವುದು ಒಳ್ಳೆಯ ಆಲೋಚನೆ. ಆದರೆ ರಷ್ಯಾ ಅಂತಹ ತಜ್ಞರನ್ನು ಉಕ್ರೇನ್‌ನಲ್ಲೇ ಇರುವಂತೆ ನೋಡಿಕೊಳ್ಳುತ್ತದೆ. ತೈಲ ಬೆಲೆ ಏರಿಕೆಯಿಂದ ಬರುವ ಹೆಚ್ಚಿನ ಹಣವನ್ನು ರಷ್ಯಾ ಉಕ್ರೇನ್ ಮೇಲೆ ಇನ್ನೂ ಹೆಚ್ಚಿನ ಡ್ರೋನ್ ಮತ್ತು ಮಿಸೈಲ್ ದಾಳಿ ಮಾಡಲು ಬಳಸಿಕೊಳ್ಳುತ್ತದೆ.

ಸೈಮನ್ ಸಲಹೆ ನೀಡುವಂತೆ "ಅಮೆರಿಕ ಮತ್ತು ನ್ಯಾಟೋ (NATO) ದೇಶಗಳು ತಮ್ಮ ಡ್ರೋನ್ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಕೂಡ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಎಂಐಟಿಯ (MIT) ಪ್ರಯಾರಿಟಿ ಟೆಕ್ನಾಲಜಿ ಗ್ರೂಪ್ ಈಗಾಗಲೇ ಕೆಲಸ ಮಾಡುತ್ತಿದೆ. ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವುದರಿಂದ ಅಮೆರಿಕ ಮತ್ತು ಯುರೋಪ್‌ನಲ್ಲಿ ಉತ್ಪಾದನಾ ವಲಯದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಮತ್ತು ಪೂರೈಕೆ ಸರಪಳಿಯನ್ನು ಬಲಗೊಳ್ಳುತ್ತವೆ"

ಸೈಮನ್ ಗುರುತಿಸುವಂತೆ "ಈ ಎಲ್ಲಾ ಕ್ರಮಗಳು ಕಾರ್ಯರೂಪಕ್ಕೆ ಬರುವುದಕ್ಕೆ ಸಮಯ ಬೇಕು. ಅಮೆರಿಕದಲ್ಲಿ ಆರ್ಥಿಕ ಸಂಕಷ್ಟ ಹೆಚ್ಚಾಗುತ್ತಿದೆ. ನವೆಂಬರ್ ಚುನಾವಣೆ ಹತ್ತಿರ ಬರುತ್ತಿದೆ. ಅದರಿಂದ ಸಮಯ ತಮ್ಮ ಪರವಾಗಿದೆ ಎಂದು ಇರಾನ್ ನಾಯಕರು ನಂಬಿದ್ದಾರೆ."

ಲೇಖಕರ ಬಗ್ಗೆ:

ಸೈಮನ್ ಜಾನ್ಸನ್ ಅವರು 2024ರ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ವಿಜೇತರು ಮತ್ತು ಇಂಟರ್ನ್ಯಾಷನಲ್ ಮಾನಿಟರಿ ಫಂಡ್‌ನ ಮಾಜಿ ಮುಖ್ಯ ಅರ್ಥಶಾಸ್ತ್ರಜ್ಞರು. ಇವರು ಪ್ರಸ್ತುತ ಎಂಐಟಿ ಸ್ಲೋನ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಪ್ರೊಫೆಸರ್ ಆಗಿದ್ದಾರೆ. ಇವರು ಡ್ಯಾರನ್ ಅಸಿಮೊಗ್ಲು ಅವರೊಂದಿಗೆ ಸೇರಿ 'ಪವರ್ ಅಂಡ್ ಪ್ರೋಗ್ರೆಸ್'ಎಂಬ ಪ್ರಸಿದ್ಧ ಪುಸ್ತಕವನ್ನು ಬರೆದಿದ್ದಾರೆ.

ಪಶ್ಚಿಮ ಏಷ್ಯಾ ಯುದ್ಧದ ಎಚ್ಚರಿಕೆ: ರಸಗೊಬ್ಬರ ವಲಯದ ಸುಧಾರಣೆ ಇಂದಿನ ಅಗತ್ಯ

ಅಶೋಕ್ ಗುಲಾಟಿ ಮತ್ತು ರಿತಿಕಾ ಜುನೇಜಾ

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವು ಭಾರತದ ಇಂಧನ ಮತ್ತು ರಸಗೊಬ್ಬರ ಪೂರೈಕೆಯ ಮೇಲಾಗುವ ಪರಿಣಾಮಗಳ ಬಗ್ಗೆ ಎಚ್ಚರಿಕೆ ನೀಡಿದೆ. ಖ್ಯಾತ ಅರ್ಥಶಾಸ್ತ್ರಜ್ಞರಾದ ಅವರು ಬರೆದ ಈ ಲೇಖನದ ಸರಳ ಕನ್ನಡಾನುವಾದ ಇಲ್ಲಿದೆ:

"ಯಾವುದೇ ದೊಡ್ಡ ಬಿಕ್ಕಟ್ಟನ್ನು ಸುಮ್ಮನೆ ವ್ಯರ್ಥವಾಗಿ ಹೋಗುವುದಕ್ಕೆ ಬಿಡಬೇಡಿ" ಎಂಬ ಪ್ರಸಿದ್ಧ ಮಾತಿದೆ. 1991ರಲ್ಲಿ ಭಾರತಕ್ಕೆ ಪಾವತಿ ಸಮತೋಲನದ ಬಿಕ್ಕಟ್ಟು ಎದುರಾಗಿತ್ತು. ಅದು ದೇಶದಲ್ಲಿ ದೊಡ್ಡ ಆರ್ಥಿಕ ಸುಧಾರಣೆಗಳಿಗೆ ಕಾರಣವಾಯಿತು. ಇಂದು ಭಾರತದ ಬಳಿ 728 ಬಿಲಿಯನ್ ಡಾಲರ್‌ಗಳಿಗಿಂತ ಹೆಚ್ಚು ವಿದೇಶಿ ವಿನಿಮಯ ಮೀಸಲು ಇದೆ. ಇದರಿಂದ ನಮಗೆ ಬಾಹ್ಯ ಆಘಾತಗಳನ್ನು ತಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿದೆ. ಆದರೆ, ಇರಾನ್ ಮತ್ತು ಇಸ್ರೇಲ್–ಅಮೆರಿಕ ನಡುವೆ ನಡೆಯುತ್ತಿರುವ ಯುದ್ಧವು ಭಾರತದ ಇಂಧನ ಮತ್ತು ರಸಗೊಬ್ಬರ ಪೂರೈಕೆಯಲ್ಲಿರುವ ನಮ್ಮ ನ್ಯೂನತೆಗಳನ್ನು ನಮ್ಮ ಮುಂದೆ ತೆರೆದಿಟ್ಟಿದೆ. ಆಹಾರ ಭದ್ರತೆಯನ್ನು ಕಾಪಾಡಿಕೊಳ್ಳಲು ರಸಗೊಬ್ಬರ ವಲಯದಲ್ಲಿ ತಕ್ಷಣದ ಸುಧಾರಣೆಗಳಾಗಬೇಕೆಂದು ಇದು ಎಚ್ಚರಿಸುತ್ತಿದೆ. ಅಂತಹ ಸುಧಾರಣೆ ಈಗ ಬೇಕಾಗಿದೆ. ದೇಶದ ಆಹಾರ ಭದ್ರತೆಗಾಗಿ ರಸಗೊಬ್ಬರ ಕ್ಷೇತ್ರದಲ್ಲಿ ಹೊಸ ಯೋಜನೆಗಳನ್ನು ಮತ್ತು ಸುಧಾರಣೆಗಳನ್ನು ತರುವುದು ಇಂದಿನ ತುರ್ತು ಅಗತ್ಯವಾಗಿದೆ

ಹೆಚ್ಚುತ್ತಿರುವ ಯುದ್ಧದ ಭೀತಿ ಇಂಧನ ಮತ್ತು ರಸಗೊಬ್ಬರ ಪೂರೈಕೆಯನ್ನು ತೀವ್ರವಾಗಿ ಅಸ್ತವ್ಯಸ್ತಗೊಳಿಸಿದೆ. ಮುಖ್ಯವಾಗಿ 'ಹಾರ್ಮುಜ್ ಜಲಸಂಧಿ'ಯಂತಹ ಪ್ರಮುಖ ಸಮುದ್ರ ಮಾರ್ಗಗಳು ಇಂದು ಅಪಾಯದಲ್ಲಿವೆ. ವಿಶ್ವದ ಒಟ್ಟು ತೈಲ ಮತ್ತು ಅನಿಲ ವ್ಯಾಪಾರದ ಬಹುದೊಡ್ಡ ಪಾಲು ಈ ಮಾರ್ಗದ ಮೂಲಕವೇ ನಡೆಯುತ್ತಿರುವುದು. ಈ ಮಾರ್ಗಕ್ಕೆ ಯಾವುದೇ ರೀತಿಯಲ್ಲಿ ಅಡಚಣೆಯಾದರೂ ಅದರ ಪರಿಣಾಮ ಜಾಗತಿಕ ಮಾರುಕಟ್ಟೆಯ ಮೇಲೆ ತಕ್ಷಣವೇ ಆಗುತ್ತದೆ. ತೈಲ, ಅನಿಲ ಮತ್ತು ಯೂರಿಯಾ ರಸಗೊಬ್ಬರಗಳ ಬೆಲೆಯಲ್ಲಿ ಈಗಾಗಲೇ ತೀವ್ರ ಏರಿಕೆಯಾಗಿದೆ.


ಕಚ್ಚಾ ತೈಲ ಭಾರತ ಅತಿ ಹೆಚ್ಚು ಆಮದು ಮಾಡಿಕೊಳ್ಳುತ್ತಿರುವ ವಸ್ತು. ಅದು ತನ್ನ ಅಗತ್ಯದ ಶೇಕಡಾ 88ರಷ್ಟನ್ನು ಆಮದು ಮಾಡಿಕೊಳ್ಳುತ್ತಿದೆ. 2024–25ರ ಹಣಕಾಸು ವರ್ಷದಲ್ಲಿ ಭಾರತವು ಸುಮಾರು 137 ಬಿಲಿಯನ್ ಡಾಲರ್ ಕೊಟ್ಟು 2430 ಲಕ್ಷ ಟನ್ ತೈಲವನ್ನು ಆಮದು ಮಾಡಿಕೊಂಡಿದೆ. ಇದರಲ್ಲಿ ಅರ್ಧದಷ್ಟು ಭಾಗ ಮಧ್ಯಪ್ರಾಚ್ಯ ದೇಶಗಳಿಂದ ಹಾರ್ಮುಜ್ ಜಲಸಂಧಿಯ ಮೂಲಕವೇ ಬಂದಿರುವುದು. ಫೆಬ್ರವರಿ ಕೊನೆಯಲ್ಲಿ ಒಂದು ಬ್ಯಾರೆಲ್ ತೈಲದ ಬೆಲೆ 66 ಡಾಲರ್ ಇತ್ತು. ಆದರೆ ಕೇವಲ ಎರಡು ವಾರಗಳಲ್ಲಿ ಅದು 120 ಡಾಲರ್‌ಗೆ ಏರಿತು. ಮಾರ್ಚ್ 13ರ ಹೊತ್ತಿಗೆ ಇದು 100 ಡಾಲರ್ ಆಸುಪಾಸಿನಲ್ಲಿತ್ತು.

ತೈಲ ಮಾತ್ರವಲ್ಲದೆ ಅಡುಗೆ ಅನಿಲದ (LPG) ಮೇಲೂ ಇದರ ಪ್ರಭಾವ ಆಗಿದೆ. ಭಾರತವು ತನ್ನ ಬಳಕೆಯ ಮೂರನೇ ಎರಡರಷ್ಟು ಅಡುಗೆ ಅನಿಲವನ್ನು ಆಮದು ಮಾಡಿಕೊಳ್ಳುತ್ತದೆ. ಇದರ ಬಹುಪಾಲು ಇದೇ ಸಮುದ್ರ ಮಾರ್ಗದ ಮೂಲಕ ಬರುತ್ತದೆ. ಪೂರೈಕೆ ಕಡಿಮೆಯಾಗಿ ಆಮದು ವೆಚ್ಚ ಹೆಚ್ಚಾದ ಕಾರಣ, ದೇಶದಲ್ಲಿ ಪ್ರತಿ ಸಿಲಿಂಡರ್ ಬೆಲೆಯನ್ನು 60 ರೂಪಾಯಿಗಳಷ್ಟು ಹೆಚ್ಚಿಸಲಾಗಿದೆ.

ಭಾರತದ ದ್ರವೀಕೃತ ನೈಸರ್ಗಿಕ ಅನಿಲದ (LNG) ಆಮದಿನ ಮೇಲೂ ಯುದ್ಧ ಪರಿಣಾಮ ಬೀರಿದೆ. 2024–25ರಲ್ಲಿ ಭಾರತವು ಸುಮಾರು 15 ಬಿಲಿಯನ್ ಡಾಲರ್ ಮೌಲ್ಯದ 27 ಮಿಲಿಯನ್ ಟನ್ ಅನಿಲವನ್ನು ಆಮದು ಮಾಡಿಕೊಂಡಿದೆ. ಇದು ನಮ್ಮ ಒಟ್ಟಾರೆ ಅಗತ್ಯದ ಅರ್ಧಭಾಗ. ಇದರಲ್ಲಿ ಅರ್ಧದಷ್ಟು ಭಾಗ ಕತಾರ್ ದೇಶದಿಂದ ಬರುತ್ತದೆ. ಯುದ್ಧದ ಕಾರಣದಿಂದ ಕೇವಲ ಎರಡು ವಾರಗಳಲ್ಲಿ ಅನಿಲದ ಬೆಲೆ ಒಂದು ಯೂನಿಟ್‌ಗೆ 10 ಡಾಲರ್ ಇದ್ದುದು 25 ಡಾಲರ್ ಆಗಿದೆ.

ಪರಿಸ್ಥಿತಿಯನ್ನು ನಿಭಾಯಿಸಲು ಸರ್ಕಾರವು 'ಅಗತ್ಯ ವಸ್ತುಗಳ ಕಾಯ್ದೆ'ಯನ್ನು ಜಾರಿಗೆ ತಂದಿದೆ. ಈಗ ಮನೆಬಳಕೆಗೆ ಮತ್ತು ಸಾರಿಗೆಗೆ ಅನಿಲ ನೀಡಲು ಮೊದಲ ಆದ್ಯತೆ ನೀಡಲಾಗಿದೆ. ಇದರಿಂದ ರಸಗೊಬ್ಬರ ಕಾರ್ಖಾನೆಗಳಿಗೆ ಅಗತ್ಯವಿರುವ ಅನಿಲದಲ್ಲಿ ಕೇವಲ ಶೇ. 70ರಷ್ಟು ಮಾತ್ರ ಸಿಗುತ್ತಿದೆ. ಇದರಿಂದ ದೇಶದಲ್ಲಿನ ಯೂರಿಯಾ ಉತ್ಪಾದನೆಗೆ ಹೊಡೆತ ಬೀಳುವ ಸಾಧ್ಯತೆಯಿದೆ.

ಇದು ಗಂಭೀರವಾದ ವಿಷಯ. ಯಾಕೆಂದರೆ ಭಾರತದ ಆಹಾರ ಭದ್ರತೆಯು ರಸಗೊಬ್ಬರದ ಲಭ್ಯತೆಯ ಮೇಲೆ ನಿಂತಿದೆ. ಯೂರಿಯಾ ತಯಾರಿಕೆ ಅಂತರಾಷ್ಟ್ರೀಯ ಇಂಧನದ ಮಾರುಕಟ್ಟೆಯನ್ನು ಅವಲಂಬಿಸಿದೆ. ಭಾರತಕ್ಕೆ ಪ್ರತಿ ವರ್ಷ 40 ಮಿಲಿಯನ್ ಟನ್ ಯೂರಿಯಾ ಬೇಕು. ಆದರೆ ನಮ್ಮಲ್ಲಿ ಕೇವಲ 30 ಮಿಲಿಯನ್ ಟನ್ ಮಾತ್ರ ಉತ್ಪಾದನೆಯಾಗುತ್ತಿದೆ. ಹೀಗಾಗಿ ಉಳಿದದ್ದನ್ನು ನಾವು ಆಮದು ಮಾಡಿಕೊಳ್ಳಲೇಬೇಕು. ಮುಂದಿನ ವರ್ಷ





ಯೂರಿಯಾ ಆಮದು 10 ಮಿಲಿಯನ್ ಟನ್ ದಾಟುವ ಸಾಧ್ಯತೆಯಿದೆ. ಇದು ಕಳೆದ ವರ್ಷಕ್ಕೆ (5.6 ಮಿಲಿಯನ್ ಟನ್) ಹೋಲಿಸಿದರೆ ಸುಮಾರು ಎರಡರಷ್ಟು ಹೆಚ್ಚು. ಆಮದು ಮಾಡಿಕೊಳ್ಳುವ ಯೂರಿಯಾದಲ್ಲಿ ಶೇ. 60ರಷ್ಟು ಭಾಗ ಪರ್ಷಿಯನ್ ಕೊಲ್ಲಿಯ ರಾಷ್ಟ್ರಗಳಿಂದ ಬರುತ್ತದೆ. ಯುದ್ಧದ ಉದ್ವಿಗ್ನತೆಯಿಂದ ಕೇವಲ 10 ದಿನಗಳಲ್ಲಿ ಯೂರಿಯಾ ಬೆಲೆ ಶೇ. 35ರಷ್ಟು ಹೆಚ್ಚಾಗಿದೆ. ಒಂದು ಟನ್ ಯೂರಿಯಾ ಬೆಲೆ 484 ಡಾಲರ್ ಇದ್ದುದು 652 ಡಾಲರ್ ಆಗಿದೆ.. ಅನಿಶ್ಚತತೆ ಮುಂದುವರಿದಿರುವುದರಿಂದ ಅದು ಇನ್ನೂ ಹೆಚ್ಚಾಗಬಹುದು.

ಯೂರಿಯಾ ತಯಾರಿಸಲು ನೈಸರ್ಗಿಕ ಅನಿಲ ಅತಿ ಮುಖ್ಯವಾದ ಕಚ್ಚಾವಸ್ತು. ನಾವು ನಮ್ಮ ಉತ್ಪಾದನೆಗೆ ಬಳಸುವ ಶೇ. 85ರಷ್ಟು ಅನಿಲವನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ನೇರ ಯೂರಿಯಾ ಆಮದು ಮತ್ತು ಅನಿಲದ ಆಮದು ಎರಡನ್ನೂ ಲೆಕ್ಕ ಹಾಕಿದರೆ, ಯೂರಿಯಾ ವಿಷಯದಲ್ಲಿ ಭಾರತವು ಶೇ. 55ರಷ್ಟಕ್ಕೆ ವಿದೇಶವನ್ನು ಅವಲಂಬಿಸಿದೆ.

ಕೇವಲ ಯೂರಿಯಾ ಮಾತ್ರವಲ್ಲ, ಇತರ ರಸಗೊಬ್ಬರಗಳಿಗೂ ನಾವು ವಿದೇಶಗಳನ್ನೇ ನೆಚ್ಚಿಕೊಂಡಿದ್ದೇವೆ. ರಸಗೊಬ್ಬರ ತಯಾರಿಕೆಗೆ ಬೇಕಾದ ಶೇ. 80ರಷ್ಟು ಅಮೋನಿಯಾ ಮತ್ತು ಗಂಧಕ (Sulphur) ಪರ್ಷಿಯನ್ ಕೊಲ್ಲಿಯ ರಾಷ್ಟ್ರಗಳಿಂದಲೇ ಬರುತ್ತದೆ. ನಮ್ಮಲ್ಲಿ ಬಳಕೆಯಾಗುವ ಶೇ. 40ರಷ್ಟು ಡಿಎಪಿ (DAP) ಗೊಬ್ಬರ ಸೌದಿ ಅರೇಬಿಯಾದಿಂದ ಆಮದಾಗುತ್ತದೆ. ಇನ್ನು ಪೊಟ್ಯಾಶ್ ಗೊಬ್ಬರಕ್ಕಂತೂ (MOP) ನಾವು ಸಂಪೂರ್ಣವಾಗಿ ಆಮದನ್ನೇ ಅವಲಂಬಿಸಿದ್ದೇವೆ. ಹಾಗೆಯೇ ಫಾಸ್ಫೇಟಿಗೆ ಕಚ್ಚಾ ಪದಾರ್ಥಗಳಿಗೆ ಶೇಕಡ 90ರಿಂದ 95ರವರೆಗೆ ಆಮದನ್ನು ನೆಚ್ಚಿಕೊಂಡಿದ್ದೇವೆ.

ಒಟ್ಟಾರೆಯಾಗಿ ನೋಡಿದರೆ, 2024–25ರಲ್ಲಿ ಭಾರತದ ರಸಗೊಬ್ಬರ ಅಗತ್ಯದ ಶೇ. 68 ರಿಂದ 70 ರಷ್ಟು ಭಾಗ ಜಾಗತಿಕ ಪೂರೈಕೆಯನ್ನು ನೆಚ್ಚಿಕೊಂಡಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಯುದ್ಧಗಳು ಅಥವಾ ಬೆಲೆ ಏರಿಕೆಗಳು ನಮ್ಮ ದೇಶದ ಆಹಾರ ಭದ್ರತೆಗೆ ತೀವ್ರವಾಗಿ ಅಪಾಯವೊಡ್ಡಬಹುದು.

ಭಾರತ 2025–26ರಲ್ಲಿ ಮಧ್ಯಪ್ರಾಚ್ಯ ದೇಶಗಳಿಗೆ ಸುಮಾರು 11.8 ಬಿಲಿಯನ್ ಡಾಲರ್ ಮೌಲ್ಯದ ಕೃಷಿ ಉತ್ಪನ್ನಗಳನ್ನು ರಫ್ತು ಸಹ ಮಾಡುತ್ತಿದೆ. ಯುದ್ಧದ ಕಾರಣದಿಂದ ಈ ರಫ್ತಿಗೂ ಅಡೆತಡೆ ಉಂಟಾಗುತ್ತಿದೆ. ಆದರೆ ಎಲ್ಲಕ್ಕಿಂತ ದೊಡ್ಡ ಆತಂಕವೆಂದರೆ ತೈಲ, ಅನಿಲ ಮತ್ತು ರಸಗೊಬ್ಬರದ ಆಮದು ವೆಚ್ಚ. ಈಗಿನ ಬಿಕ್ಕಟ್ಟು ಹೀಗೆಯೇ ಮುಂದುವರಿದರೆ, 2026–27ರ ವೇಳೆಗೆ ರಸಗೊಬ್ಬರ ಸಬ್ಸಿಡಿ ವೆಚ್ಚವು 2 ಲಕ್ಷ ಕೋಟಿ ರೂಪಾಯಿ ದಾಟಬಹುದು. ಇದು ಸರ್ಕಾರ ನಿಗದಿಪಡಿಸಿದ್ದ ಬಜೆಟ್‌ಗಿಂತ (1.7 ಲಕ್ಷ ಕೋಟಿ) ಬಹಳ ಹೆಚ್ಚಾಗಲಿದೆ. ಹಾಗಾಗಿ ಈ ಕ್ಷೇತ್ರದಲ್ಲಿ ತಕ್ಷಣವೇ ಹಲವು ಸುಧಾರಣೆಗಳನ್ನು ಮಾಡಬೇಕಾಗಿದೆ. ಹೇಗೆ ಸುಧಾರಣೆಗಳನ್ನು ತರುವುದು?

ಮೊದಲನೆಯದಾಗಿ, ಭಾರತವು ಕೇವಲ ಕೊಲ್ಲಿ ರಾಷ್ಟ್ರಗಳ ಮೇಲೆ ಅವಲಂಬಿತವಾಗದೆ, ತನ್ನ ಆಮದು ಮೂಲಗಳನ್ನು ವೈವಿಧ್ಯಗೊಳಿಸಬೇಕು. ಇದರ ಜೊತೆಗೆ, ರಸಗೊಬ್ಬರಕ್ಕೆ ಬೇಕಾದ ಖನಿಜಗಳು ಮತ್ತು ಉತ್ಪಾದನಾ ಘಟಕಗಳ ಮೇಲೆ ವಿದೇಶಗಳಲ್ಲಿ ಹೂಡಿಕೆಯನ್ನು ಹೆಚ್ಚಿಸಬೇಕು. ಹಾಗೆಯೇ, ದೇಶದ ಒಳಗೂ ರಸಗೊಬ್ಬರ ಸಂಪನ್ಮೂಲಗಳನ್ನು ಹುಡುಕುವ (Exploration) ಕೆಲಸವನ್ನು ತ್ವರಿತಗೊಳಿಸಬೇಕು.

ಸುಮಾರು 1 ಬಿಲಿಯನ್ ಡಾಲರ್ ಮೊತ್ತದ ಪ್ರತ್ಯೇಕ 'ರಸಗೊಬ್ಬರ ಹೂಡಿಕೆ ನಿಧಿ'ಯನ್ನು ಸ್ಥಾಪಿಸುವುದರಿಂದ, ಭಾರತೀಯ ಕಂಪನಿಗಳು



ಜಾಗತಿಕ ಗಣಿಗಾರಿಕೆ ಯೋಜನೆಗಳಲ್ಲಿ ಪಾಲುದಾರಿಕೆ (Equity stakes) ಪಡೆಯಲು ಸಾಧ್ಯವಾಗುತ್ತದೆ. ಇದು ಭಾರತವನ್ನು ಕೇವಲ ಅನಿವಾರ್ಯ ಆಮದು ಅವಲಂಬನೆಯಿಂದ ಮುಕ್ತಗೊಳಿಸಿ, ಹೂಡಿಕೆಯ ಆಧಾರದ ಮೇಲೆ ಪೂರೈಕೆಯ ಭದ್ರತೆಯನ್ನು ಖಚಿತಪಡಿಸಿಕೊಳ್ಳುವತ್ತ ಕೊಂಡೊಯ್ಯುತ್ತದೆ.
ಎರಡನೆಯದಾಗಿ, ನ್ಯಾನೋ ಯೂರಿಯಾ ಮತ್ತು ಸಾವಯವ ಗೊಬ್ಬರಗಳ ಬಳಕೆಯನ್ನು ಪ್ರೋತ್ಸಾಹಿಸಬೇಕು. ಹಾಗೆಯೇ, ನಮ್ಮಲ್ಲಿರುವ ಹಳೆಯ ರಸಗೊಬ್ಬರ ಕಾರ್ಖಾನೆಗಳ ದಕ್ಷತೆಯನ್ನು ಹೆಚ್ಚಿಸುವುದು ಅನಿವಾರ್ಯ. ರಸಗೊಬ್ಬರ ಭದ್ರತೆಯು ಕೇವಲ ಆರ್ಥಿಕತೆಯ ಪ್ರಶ್ನೆಯಲ್ಲ, ಇದು ದೇಶದ ಆಹಾರ ಭದ್ರತೆ ಮತ್ತು ರಾಷ್ಟ್ರೀಯ ಸುರಕ್ಷತೆಯ ಪ್ರಮುಖ ಭಾಗವಾಗಿದೆ.

ಸುಧಾರಣೆಗೆ ಬೇಕಾದ ಹೊಸ ಯೋಜನೆಗಳು

ಈ ಸಂಕಷ್ಟದಿಂದ ಪಾರಾಗಲು ಭಾರತವು ತಕ್ಷಣವೇ ಕೆಲವು ಸುಧಾರಣೆಗಳನ್ನು ಮಾಡಬೇಕಿದೆ:

ಕೇವಲ ಕೊಲ್ಲಿ ರಾಷ್ಟ್ರಗಳ ಮೇಲೆ ಅವಲಂಬಿತವಾಗದೆ ಬೇರೆ ದೇಶಗಳಿಂದಲೂ ಆಮದು ಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ಇದಕ್ಕೆ ಪೂರಕವಾಗಿ ವಿದೇಶಗಳಲ್ಲಿರುವ ರಸಗೊಬ್ಬರ ಗಣಿಗಳು ಮತ್ತು ಉತ್ಪಾದನಾ ಘಟಕಗಳಲ್ಲಿ ಭಾರತೀಯ ಕಂಪನಿಗಳು ಪಾಲುದಾರಿಕೆ ಪಡೆಯಬೇಕು.

ಯೂರಿಯಾ ಬೆಲೆ ಏರಿಕೆಯು ಸರ್ಕಾರದ ಸಬ್ಸಿಡಿ (ಸಹಾಯಧನ) ಹೊರೆಯ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. 2024–25ರಲ್ಲಿ ಕೇಂದ್ರ ಸರ್ಕಾರವು ರಸಗೊಬ್ಬರ ಸಬ್ಸಿಡಿಗಾಗಿ ಒಟ್ಟು 1.64 ಲಕ್ಷ ಕೋಟಿ ರೂಪಾಯಿ ಖರ್ಚು ಮಾಡಿದೆ. ಇದರಲ್ಲಿ ಯೂರಿಯಾ ಒಂದಕ್ಕೇ ಸುಮಾರು 1.19 ಲಕ್ಷ ಕೋಟಿ ರೂಪಾಯಿ ವೆಚ್ಚವಾಗಿದೆ. ನೈಸರ್ಗಿಕ ಅನಿಲದ ಬೆಲೆ ಪ್ರತಿ 10 ಡಾಲರ್ ಹೆಚ್ಚಾದಾಗ, ಯೂರಿಯಾ ತಯಾರಿಕಾ ವೆಚ್ಚ ಪ್ರತಿ ಟನ್‌ಗೆ 25 ಡಾಲರ್ ಹೆಚ್ಚಾಗುತ್ತದೆ.

ಈಗ ಸರ್ಕಾರದ ಮುಂದೆ ದೊಡ್ಡ ಸವಾಲಿದೆ. ಹೆಚ್ಚಾದ ವೆಚ್ಚವನ್ನು ಸರ್ಕಾರವೇ ಭರಿಸಿದರೆ ಸಬ್ಸಿಡಿ ಹಣ ಜಾಸ್ತಿಯಾಗುತ್ತದೆ. ಒಂದು ವೇಳೆ ರೈತರಿಗೆ ಬೆಲೆ ಏರಿಸಿದರೆ, ಅದು ಕೃಷಿ ಉತ್ಪಾದನೆ ಮತ್ತು ಆಹಾರ ಪದಾರ್ಥಗಳ ಬೆಲೆಯ ಮೇಲೆ ನೇರ ಪರಿಣಾಮ ಬೀರುತ್ತದೆ.
ಈ ಸಮಸ್ಯೆಯನ್ನು ಎದುರಿಸಲು ಭಾರತವು ಎರಡು ಮುಖ್ಯ ದಾರಿಗಳನ್ನು ಅನುಸರಿಸಬೇಕಿದೆ. ಮೊದಲನೆಯದಾಗಿ, ಭಾರತವು ಕೇವಲ ಮಧ್ಯಪ್ರಾಚ್ಯ ದೇಶಗಳ ಮೇಲೆ ಅವಲಂಬಿತವಾಗಬಾರದು. ರಷ್ಯಾ, ಈಜಿಪ್ಟ್ ಮತ್ತು ಆಸ್ಟ್ರೇಲಿಯಾದಂತಹ ದೇಶಗಳೊಂದಿಗೆ ಹೊಸ ಒಪ್ಪಂದಗಳನ್ನು ಮಾಡಿಕೊಂಡು ಆಮದನ್ನು ವೈವಿಧ್ಯಗೊಳಿಸಬೇಕು.

ಎರಡನೆಯದಾಗಿ, ರಸಗೊಬ್ಬರದ ಬೆಲೆ ನಿಗದಿ ಮತ್ತು ಸಬ್ಸಿಡಿ (ಸಹಾಯಧನ) ನೀಡುವ ಕ್ರಮದಲ್ಲಿ ಸುಧಾರಣೆಗಳು ಬಹಳ ಅಗತ್ಯವಾಗಿವೆ. ಇವು ಈಗಾಗಲೇ ಸಾಕಷ್ಟು ತಡವಾಗಿವೆ. ರಸಗೊಬ್ಬರದ ಸಬ್ಸಿಡಿಯನ್ನು ನೇರವಾಗಿ ರೈತರ ಖಾತೆಗೆ ವರ್ಗಾಯಿಸಬೇಕು. ಇದರ ಜೊತೆಗೆ ಬೆಲೆಗಳ ಮೇಲಿನ ಸರ್ಕಾರದ ನಿಯಂತ್ರಣವನ್ನು ಹಂತ ಹಂತವಾಗಿ ಸಡಿಲಗೊಳಿಸಬೇಕು. ಇದರಿಂದ ರೈತರು ಸಾರಜನಕ (N), ರಂಜಕ (P) ಮತ್ತು ಪೊಟ್ಯಾಶ್ (K) ಗೊಬ್ಬರಗಳನ್ನು ಸರಿಯಾದ ಪ್ರಮಾಣದಲ್ಲಿ ಬಳಸಲು ಪ್ರೋತ್ಸಾಹ ಸಿಗುತ್ತದೆ. ಇದರಿಂದ ಸರ್ಕಾರದ ಹಣಕಾಸಿನ ಮೇಲಿನ ಒತ್ತಡವೂ ಕಡಿಮೆಯಾಗುತ್ತದೆ. ಸಬ್ಸಿಡಿ ಹಣದ ಸೋರಿಕೆಯನ್ನು (Leakage) ತಡೆಯಲು ಇದು ಅನಿವಾರ್ಯ. ಪ್ರಸ್ತುತ ಸುಮಾರು ಶೇ. 20ರಷ್ಟು ಸಬ್ಸಿಡಿ ಹಣ ದುರ್ಬಳಕೆಯಾಗುತ್ತಿದೆ. ಇದು ಸಣ್ಣ ಮೊತ್ತವೇನಲ್ಲ. ಒಂದು ವೇಳೆ ಇಂತಹ ದೊಡ್ಡ ಬದಲಾವಣೆಗಳು ತಕ್ಷಣಕ್ಕೆ ಕಷ್ಟವೆನಿಸಿದರೆ, ಪರ್ಯಾಯ ದಾರಿಯನ್ನು ಯೋಚಿಸಬಹುದು. ರೈತರ ಜಮೀನಿನ ವಿಸ್ತೀರ್ಣ, ಅವರು ಬೆಳೆಯುವ ಬೆಳೆಗಳು ಮತ್ತು ಕೃಷಿ ವಿಶ್ವವಿದ್ಯಾಲಯಗಳು ಶಿಫಾರಸು ಮಾಡುವ ಗೊಬ್ಬರದ ಪ್ರಮಾಣಕ್ಕೆ ಅನುಗುಣವಾಗಿ ರಸಗೊಬ್ಬರ ಮಾರಾಟದ ಮೇಲೆ ಮಿತಿ ಹೇರಬಹುದು.

ಸರ್ಕಾರವು ಈಗಾಗಲೇ 'ಅಗ್ರಿಸ್ಟಾಕ್' (AgriStack) ಎಂಬ ಡಿಜಿಟಲ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತಿದೆ. ಇದರ ಮೂಲಕ ಅರ್ಹ ರೈತರಿಗೆ ಅಗತ್ಯವಿರುವಷ್ಟು ಮಾತ್ರ ರಸಗೊಬ್ಬರ ಸಿಗುವಂತೆ ಮಾಡುವುದು ಇಂದಿನ ದಿನಗಳಲ್ಲಿ ಸುಲಭ ಮತ್ತು ಸಾಧ್ಯವಿದೆ.

ಮೂರನೆಯದಾಗಿ, ಮೇಲೆ ಹೇಳಿದ ಯಾವುದೇ ಬದಲಾವಣೆಗಳು ಸಾಧ್ಯವಾಗದಿದ್ದರೆ, ಕನಿಷ್ಠಪಕ್ಷ ಯೂರಿಯಾವನ್ನು 'ಪೋಷಕಾಂಶ ಆಧಾರಿತ ಸಬ್ಸಿಡಿ' (NBS) ಚೌಕಟ್ಟಿನೊಳಗೆ ತರಬೇಕು. ಇದರಿಂದ ಯೂರಿಯಾ ಬೆಲೆಯನ್ನು ಇತರ ರಸಗೊಬ್ಬರಗಳ (ರಂಜಕ ಮತ್ತು ಪೊಟ್ಯಾಶ್) ಬೆಲೆಗೆ ಅನುಗುಣವಾಗಿ ಸಮತೋಲನಗೊಳಿಸಲು ಸಾಧ್ಯವಾಗುತ್ತದೆ. ಇದು ಭೂಮಿಗೆ ಅಗತ್ಯವಿರುವ ಎಲ್ಲಾ ಪೋಷಕಾಂಶಗಳು ಸರಿಯಾದ ಪ್ರಮಾಣದಲ್ಲಿ ಸಿಗುವಂತೆ ಉತ್ತೇಜಿಸುತ್ತದೆ.
ಒಟ್ಟಾರೆಯಾಗಿ ಹೇಳುವುದಾದರೆ, ನಮ್ಮ ನೀತಿ ನಿರೂಪಕರು ಎರಡು ಪ್ರಮುಖ ಆಯಾಮಗಳಲ್ಲಿ ಕೆಲಸ ಮಾಡಬೇಕಿದೆ:

ಮೊದಲನೆಯದು: ರಸಗೊಬ್ಬರ ಮತ್ತು ಅದಕ್ಕೆ ಬೇಕಾದ ಕಚ್ಚಾ ವಸ್ತುಗಳ ಆಮದನ್ನು ಕೇವಲ ಗಲ್ಫ್ ರಾಷ್ಟ್ರಗಳಿಗೆ ಸೀಮಿತಗೊಳಿಸದೆ, ಬೇರೆ ದೇಶಗಳಿಗೂ ವಿಸ್ತರಿಸುವ ಮೂಲಕ ಪೂರೈಕೆಯನ್ನು ವೈವಿಧ್ಯಗೊಳಿಸುವುದು.

ಎರಡನೆಯದು: ರಸಗೊಬ್ಬರ ಕ್ಷೇತ್ರದಲ್ಲಿ ಆಳವಾದ ಸುಧಾರಣೆಗಳನ್ನು ತರುವುದು. ಅಂದರೆ ನೇರ ಸಬ್ಸಿಡಿ ವರ್ಗಾವಣೆ (DBT) ಮತ್ತು ಬೆಲೆಗಳ ಮೇಲಿನ ನಿಯಂತ್ರಣ ಸಡಿಲಗೊಳಿಸುವುದು, ಅಥವಾ ಮಾರಾಟದ ಮೇಲೆ ಮಿತಿ ಹೇರುವುದು, ಇಲ್ಲವೇ ಯೂರಿಯಾವನ್ನು NBS ಯೋಜನೆಗೆ ಸೇರಿಸುವುದು.

ಒಂದು ವೇಳೆ ಪ್ರಧಾನಿ ನರೇಂದ್ರ ಮೋದಿಯವರು ಈ ಬಿಕ್ಕಟ್ಟನ್ನು ರಸಗೊಬ್ಬರ ವಲಯದ ಸುಧಾರಣೆಗೆ ಒಂದು ಅವಕಾಶವನ್ನಾಗಿ ಬಳಸಿಕೊಂಡರೆ, ಅದು ದೇಶಕ್ಕೆ ದೀರ್ಘಕಾಲೀನ ಲಾಭ ತರಲಿದೆ. ಆದರೆ ಅವರು ಈ ದಿಟ್ಟ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆಯೇ?


Ashok Gulati is distinguished professor at ICRIER and Juneja is research fellow at ICRIER.

Originally published in The indian express

ಭಾರತದ ನಕಲಿ ಬೆಳವಣಿಗೆಯ ಕಥೆ

ಅಶೋಕ್ ಮೋದಿ

[ಈ ಲೇಖನವನ್ನು ಸೆಪ್ಟೆಂಬರ್ 6, 2023ರಲ್ಲಿ ಅಶೋಕ್ ಮೋದಿಯವರು ಬರೆದದ್ದು. ಆಗ ಜಿಡಿಪಿಯನ್ನು ಕುರಿತು ನಡೆಯುತ್ತಿದ್ದ ಚರ್ಚೆ, ಜಿಡಿಪಿ ಅಳೆಯುವ ಕ್ರಮದಲ್ಲಿ, ಬಳಸುವ ದತ್ತಾಂಶದಲ್ಲಿ ಇದ್ದ ಸಮಸ್ಯೆ ಇವನ್ನೆಲ್ಲಾ ಅರ್ಥಮಾಡಿಕೊಳ್ಳುವುದಕ್ಕೆ ಅನುಕೂಲವಾಗಬಹುದು ಅನ್ನುವ ದೃಷ್ಟಿಯಿಂದ ಇಲ್ಲಿ ಕೊಡಲಾಗಿದೆ.]



ದೆಹಲಿಯಲ್ಲಿ ಈ ತಿಂಗಳು ನಡೆಯಲಿರುವ ಜಿ20 ಶೃಂಗಸಭೆಯ ಪ್ರಚಾರಕ್ಕಾಗಿ ಹಾಕಿರುವ ದೊಡ್ಡ ದೊಡ್ಡ ಫಲಕಗಳ (Billboards) ಹಿಂದೆ ಕೊಳೆಗೇರಿಗಳಿವೆ. ಅಲ್ಲಿನ ನಿವಾಸಿಗಳಿಗೆ ಈಗ ಜೀವನೋಪಾಯಕ್ಕೆ ದಾರಿಯೇ ಇಲ್ಲದಂತಾಗಿದೆ. ಅವರು ರಸ್ತೆ ಬದಿಯಲ್ಲಿ ಇಟ್ಟುಕೊಂಡಿದ್ದ ಅಂಗಡಿ ಮುಗ್ಗಟ್ಟುಗಳನ್ನು ಧ್ವಂಸಗೊಳಿಸಲಾಗಿದೆ. ಅಭಿವೃದ್ಧಿ ಹೊಂದುತ್ತಿರುವ ಭಾರತದ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯವರು ಬಹಳ ಎಚ್ಚರಿಕೆಯಿಂದ ರೂಪಿಸುತ್ತಿರುವ ಚಿತ್ರಣಕ್ಕೆ ಇವೆಲ್ಲವೂ ಧಕ್ಕೆಯಾಗಬಹುದು ಎನ್ನುವ ಆತಂಕವೇ ಇದಕ್ಕೆ ಕಾರಣ.

ಈ "ಬ್ರಾಂಡಿಂಗ್ ಮತ್ತು ಸೌಂದರ್ಯೀಕರಣ" ಪ್ರಕ್ರಿಯೆಯ ಭಾಗವಾಗಿ ಭಾರತದ ಜಿಡಿಪಿ (GDP) ಅಂಕಿಅಂಶಗಳನ್ನೂ ಪ್ರದರ್ಶಿಸಲಾಗುತ್ತಿದೆ. ಈ ವರ್ಷದ ಎರಡನೇ ತ್ರೈಮಾಸಿಕದಲ್ಲಿ ವಾರ್ಷಿಕ ಶೇ. 7.8ರಷ್ಟು ಬೆಳವಣಿಗೆ ಸಾಧಿಸಿ, ಭಾರತವು ವಿಶ್ವದ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಂತೆ ಕಾಣುತ್ತಿದೆ. ಆದರೆ, ಆ ಫಲಕಗಳ ಹಿಂದೆ ಜನ ಬೃಹತ್ ಪ್ರಮಾಣದಲ್ಲಿ ಬದುಕಿಗಾಗಿ ಹೋರಾಡುತ್ತಿದ್ದಾರೆ. ವಾಸ್ತವವೇನೆಂದರೆ, ಬೆಳವಣಿಗೆಯು ತುಂಬಾ ಕಡಿಮೆ ಇದೆ, ಅಸಮಾನತೆ ಹೆಚ್ಚುತ್ತಿದೆ ಮತ್ತು ಉದ್ಯೋಗದ ಕೊರತೆಯು ತೀವ್ರವಾಗಿದೆ.

ಭಾರತದ ಇತ್ತೀಚಿನ ಜಿಡಿಪಿ ಅಂಕಿಅಂಶವನ್ನು ಸಾರುವ ಜಿ20 ಪ್ರೇರಿತ ಫಲಕಗಳಲ್ಲಿ "ವ್ಯತ್ಯಾಸಗಳು" (Discrepancies) ಎಂಬ ನಿಗೂಢ ಸಾಲೊಂದಿದೆ. ಇದು ಸಾಮಾನ್ಯವಾಗಿ ರಾಷ್ಟ್ರೀಯ ಲೆಕ್ಕಪತ್ರಗಳಲ್ಲಿ ವರದಿ ಮಾಡುವಾಗ ಬಳಸುವ ಒಂದು ಸಾಮಾನ್ಯ ಪದ್ಧತಿ. ಇಲ್ಲಿ 'ವ್ಯತ್ಯಾಸ' ಎಂದರೆ ದೇಶೀಯ ಆದಾಯ (ಸರಕು ಮತ್ತು ಸೇವೆಗಳ ಉತ್ಪಾದನೆಯಿಂದ ಗಳಿಸಿದ್ದು) ಮತ್ತು ವೆಚ್ಚದ (ಅದೇ ಸರಕು ಮತ್ತು ಸೇವೆಗಳನ್ನು ಖರೀದಿಸಲು ನಿವಾಸಿಗಳು ಮತ್ತು ವಿದೇಶಿಯರು ಪಾವತಿಸಿದ್ದು) ನಡುವಿನ ಅಂತರವಿದೆ. ತಾತ್ವಿಕವಾಗಿ, ವೆಚ್ಚವು ಗಳಿಸಿದ ಆದಾಯಕ್ಕೆ ಸಮನಾಗಿರಬೇಕು; ಏಕೆಂದರೆ ಇತರರು ತಮ್ಮ ಉತ್ಪನ್ನವನ್ನು ಖರೀದಿಸಿದಾಗ ಮಾತ್ರ ಉತ್ಪಾದಕರಿಗೆ ಆದಾಯ ಗಳಿಸಲು ಸಾಧ್ಯ. ಆದರೆ ಪ್ರಾಯೋಗಿಕವಾಗಿ ದತ್ತಾಂಶಗಳು ಪರಿಪೂರ್ಣವಾಗಿರುವುದಿಲ್ಲ. ಹಾಗಾಗಿ ಜಗತ್ತಿನಾದ್ಯಂತ ರಾಷ್ಟ್ರೀಯ ಲೆಕ್ಕಪತ್ರಗಳಲ್ಲಿ ಆದಾಯ ಮತ್ತು ವೆಚ್ಚದ ಅಂದಾಜುಗಳ ನಡುವೆ ವ್ಯತ್ಯಾಸವಿರುತ್ತದೆ.

ಸಾಮಾನ್ಯವಾಗಿ, ಈ ವ್ಯತ್ಯಾಸವು ಬೆಳವಣಿಗೆಯ ದರಗಳನ್ನು ಲೆಕ್ಕಹಾಕಲು ಅಡ್ಡಿಯಾಗುವುದಿಲ್ಲ. ಏಕೆಂದರೆ ಆದಾಯ ಮತ್ತು ವೆಚ್ಚದ ಅಂಕಿಅಂಶಗಳು ಸ್ವಲ್ಪ ಭಿನ್ನವಾಗಿದ್ದರೂ ಸಹ ಒಂದೇ ರೀತಿಯ ಪ್ರವೃತ್ತಿಯನ್ನು ತೋರುತ್ತವೆ. ಅಂದರೆ ಒಂದೇ ಕ್ರಮದಲ್ಲಿ ಹೆಚ್ಚು ಕಮ್ಮಿಯಾಗುತ್ತಿರುತ್ತವೆ. ಆದರೆ ಒಮ್ಮೊಮ್ಮೆ, ಈ ಎರಡೂ ಸರಣಿಗಳು ಬಹಳ ವಿಭಿನ್ನ ಹಾದಿಗಳಲ್ಲಿ ಸಾಗುವುದುಂಟು. ಇದು ಆರ್ಥಿಕ ಸಾಧನೆಯ ಮೌಲ್ಯಮಾಪನದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.

ಭಾರತೀಯ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (NSO) ಇತ್ತೀಚಿನ ವರದಿಯು ಇದಕ್ಕೆ ಒಂದು ಸ್ಪಷ್ಟ ಉದಾಹರಣೆ. ಏಪ್ರಿಲ್-ಜೂನ್ ಅವಧಿಯಲ್ಲಿ ಉತ್ಪಾದನೆಯಿಂದ ಬರುವ ಆದಾಯವು ವಾರ್ಷಿಕ ಶೇ. 7.8ರ ದರದಲ್ಲಿ ಹೆಚ್ಚಾಗಿದೆ. ಆದರೆ ವೆಚ್ಚವು ಕೇವಲ ಶೇ. 1.4ರಷ್ಟು ಮಾತ್ರ ಹೆಚ್ಚಾಗಿದೆ. ಈ ಎರಡೂ ಮಾಪನಗಳಲ್ಲಿ ಖಂಡಿತವಾಗಿಯೂ ಅನೇಕ ದೋಷಗಳಿವೆ. ಆದರೂ, NSO ಆದಾಯದ ಅಂಕಿಅಂಶವನ್ನೇ ಸರಿಯಾದ ಮಾಪಕ ಎಂದು ಪರಿಗಣಿಸುತ್ತದೆ ಮತ್ತು ವೆಚ್ಚವು ಗಳಿಸಿದ ಆದಾಯಕ್ಕೆ

ಸಾಂಖ್ಯಿಕ ವ್ಯತ್ಯಾಸ (Statistical Discrepancy)
ಜಿಡಿಪಿಯನ್ನು ಸಾಮಾನ್ಯವಾಗಿ ಎರಡು ರೀತಿಗಳಲ್ಲಿ ಲೆಕ್ಕಹಾಕಲಾಗುತ್ತದೆ:
ಆದಾಯದ ವಿಧಾನ: ದೇಶದ ಜನರು ಮತ್ತು ಕಂಪನಿಗಳು ಎಷ್ಟು ಗಳಿಸಿದವು? ಎಂಬುದನ್ನು ಗಮನಿಸುತ್ತದೆ
ವೆಚ್ಚದ ವಿಧಾನ: ಜನರು ಮತ್ತು ಸರ್ಕಾರ ಎಷ್ಟು ಖರ್ಚು ಮಾಡಿದರು? ಎಂಬುದನ್ನು ಗಮನಿಸುತ್ತದೆ

ತಾತ್ವಿಕವಾಗಿ ಈ ಎರಡೂ ಮೊತ್ತಗಳು ಸಮನಾಗಿರಬೇಕು (ಆದಾಯ = ವೆಚ್ಚ). ಆದರೆ, ದತ್ತಾಂಶ ಸಂಗ್ರಹಣೆಯಲ್ಲಿನ ದೋಷಗಳಿಂದಾಗಿ ಇವೆರಡರ ನಡುವೆ ಅಂತರ ಉಂಟಾಗುತ್ತದೆ. ಇದನ್ನೇ 'ಸಾಂಖ್ಯಿಕ ವ್ಯತ್ಯಾಸ' ಎನ್ನಲಾಗುತ್ತದೆ. ಅಶೋಕ ಮೋದಿ ಅವರ ವಾದವೇನೆಂದರೆ, ಭಾರತದ ಆದಾಯವು ಶೇ. 7.8 ರಷ್ಟು ಬೆಳೆಯುತ್ತಿದ್ದರೆ, ವೆಚ್ಚವು ಕೇವಲ ಶೇ. 1.4 ರಷ್ಟು ಮಾತ್ರ ಬೆಳೆದಿದೆ. ಈ ದೊಡ್ಡ ಅಂತರವು ಅಂಕಿ-ಅಂಶಗಳ ವಿಶ್ವಾಸರ್ಹತೆಯ ಮೇಲೆ ಅನುಮಾನ ಮೂಡಿಸುತ್ತದೆ.

ಸಮನಾಗಿರಬೇಕು ಎಂದು ಭಾವಿಸುತ್ತದೆ (ಇದನ್ನೇ ಅದು "ವ್ಯತ್ಯಾಸ" ಎಂಬ ಟಿಪ್ಪಣಿಯಲ್ಲಿ ಸೂಚಿಸಿರುವುದು). ಇದು ಅಂತರರಾಷ್ಟ್ರೀಯ ಅತ್ಯುತ್ತಮ ಪದ್ಧತಿಗಳ ಸ್ಪಷ್ಟ ಉಲ್ಲಂಘನೆಯಾಗಿದೆ. 'ವ್ಯತ್ಯಾಸ'ದ ಸಾಲನ್ನು ನೀಡುವ ಉದ್ದೇಶವೇ ಸಾಂಖ್ಯಿಕ ಅಪೂರ್ಣತೆಗಳನ್ನು ಒಪ್ಪಿಕೊಳ್ಳುವುದಕ್ಕೇ ಹೊರತು, ಅವುಗಳನ್ನು ಅದೃಶ್ಯಗೊಳಿಸುವುದಕ್ಕಲ್ಲ. ಅನೇಕ ಭಾರತೀಯರು ಸಂಕಷ್ಟದಲ್ಲಿದ್ದಾಗ ಮತ್ತು ವಿದೇಶಿಯರು ಭಾರತೀಯ ಸರಕುಗಳ ಬಗ್ಗೆ ಅಷ್ಟಾಗಿ ಆಸಕ್ತಿ ತೋರದೆ ಇದ್ದಾಗ ವೆಚ್ಚ ಕಡಿಮೆ ಇರುತ್ತದೆ. ಈ ವಾಸ್ತವವನ್ನು ಮುಚ್ಚಿಡುವ ಪ್ರಯತ್ನವನ್ನು NSO ಮಾಡುತ್ತಿದೆ.

ಸರಿಯಾದ ಕ್ರಮವೆಂದರೆ ಆದಾಯ ಮತ್ತು ವೆಚ್ಚ ಎರಡನ್ನೂ ಅಪರಿಪೂರ್ಣ ಸ್ಥೂಲ (Macro) ಆರ್ಥಿಕ ಮಾಪನಗಳೆಂದು ಗುರುತಿಸುವುದು, ನಂತರ ಎರಡನ್ನೂ ಸಂಯೋಜಿಸಿ ಆರ್ಥಿಕತೆಯ ಸ್ಥಿತಿಯನ್ನು ಅಳೆಯುವುದು. ಆದ್ದರಿಂದಲೇ ಆಸ್ಟ್ರೇಲಿಯಾ, ಜರ್ಮನಿ ಮತ್ತು ಇಂಗ್ಲೆಂಡ್ ಸರ್ಕಾರಗಳು ಆದಾಯ ಮತ್ತು ವೆಚ್ಚಗಳೆರಡೂ ಮಾಹಿತಿಯನ್ನು ಬಳಸಿಕೊಂಡು ತಮ್ಮ ಜಿಡಿಪಿಯನ್ನು ಸರಿಹೊಂದಿಸುತ್ತವೆ.

ಅಮೇರಿಕವು ತನ್ನ ಆರ್ಥಿಕ ಕಾರ್ಯಕ್ಷಮತೆಯನ್ನು ಅಳೆಯಲು ವೆಚ್ಚವನ್ನು (ಆದಾಯವನ್ನೇ ಮಾಪಕವನ್ನಾಗಿ ಬಳಸುವ ಭಾರತದ ಕ್ರಮಕ್ಕೆ ವ್ಯತಿರಿಕ್ತವಾಗಿ) ಪ್ರಾಥಮಿಕ ಮಾಪನವನ್ನಾಗಿ ಬಳಸುತ್ತದೆ. ಆದರೆ ಅಮೇರಿಕದ ಆರ್ಥಿಕ ವಿಶ್ಲೇಷಣಾ ಬ್ಯೂರೋ (BEA) ಆದಾಯ ಮತ್ತು ವೆಚ್ಚದ ನಡುವಿನ ದೊಡ್ಡ ವ್ಯತ್ಯಾಸವನ್ನು ಸರಿದೂಗಿಸಲು ಎರಡರ ಸರಾಸರಿಯನ್ನು ತನ್ನ ಸಂಯೋಜಿತ ಮಾಪಕವಾಗಿ ವರದಿ ಮಾಡುತ್ತದೆ. ನಾವು BEA ವಿಧಾನವನ್ನು ಭಾರತೀಯ ದತ್ತಾಂಶಕ್ಕೆ ಅನ್ವಯಿಸಿದಾಗ, ಇತ್ತೀಚಿನ ಬೆಳವಣಿಗೆಯ ದರವು ಶೇ. 7.8ರಿಂದ ಶೇ. 4.5ಕ್ಕೆ ಇಳಿಯುತ್ತದೆ. ಇದು ಏಪ್ರಿಲ್–ಜೂನ್ 2022ರ ಶೇ. 13.1 ಬೆಳವಣಿಗೆಗೆ ಹೋಲಿಸಿದರೆ ಗಣನೀಯವಾದ ಕುಸಿತವಾಗಿದೆ. ಭಾರತದ ಆರ್ಥಿಕತೆಯ ಬಗ್ಗೆ ಅತಿರಂಜಿತ ಪ್ರಚಾರ ಪ್ರಾರಂಭವಾಗಿದ್ದು ಆಗಲೇ.

ಲಭ್ಯವಿರುವ ದತ್ತಾಂಶವನ್ನು ಸರಳವಾಗಿ ವಿಶ್ಲೇಷಿಸಿದರೂ ಭಾರತದ ಆರ್ಥಿಕತೆಯ ಬಗ್ಗೆ ನಡೆಯುತ್ತಿರುವ ಅತಿರಂಜಿತ ಪ್ರಚಾರಕ್ಕೆ ಆಧಾರವಿಲ್ಲ ಎಂಬುದು ತಿಳಿಯುತ್ತದೆ. ಆದರೆ ಇದು ಭಾರತೀಯ ಮತ್ತು ಅಂತರರಾಷ್ಟ್ರೀಯ ಗಣ್ಯರ ಹಿತಾಸಕ್ತಿಗಳಿಗೆ ಪೂರಕವಾಗಿರುವುದರಿಂದ ಈ ಪ್ರಚಾರ ಮುಂದುವರಿದಿದೆ. 2019ರಲ್ಲೇ ಕುಸಿತ ಪ್ರಾರಂಭವಾಗಿತ್ತು; ಆಗ ಭಾರತದ ಜಿಡಿಪಿ ಬೆಳವಣಿಗೆಯ ದರವು ಶೇ. 3.5ರಷ್ಟಿತ್ತು. ಕೋವಿಡ್ ಸಮಯದಲ್ಲಿ ಅದು ತೀವ್ರವಾಗಿ ಕುಸಿಯಿತು. ನಂತರ 2022–23ರ ಎರಡನೇ ತ್ರೈಮಾಸಿಕದಲ್ಲಿ ಶೇ. 13.1ರಷ್ಟು ತಾತ್ಕಾಲಿಕ ಚೇತರಿಕೆ ಕಾಣಿಸಿಕೊಂಡಿದ್ದರೂ, ಅಂದಿನಿಂದ ಬೆಳವಣಿಗೆಯು ಸರಾಸರಿ ಶೇ. 3.5ರಷ್ಟೇ ಇದೆ ಎಂಬುದನ್ನು ಮರೆಯುತ್ತಾರೆ. ಇತ್ತೀಚಿನ ದತ್ತಾಂಶಗಳನ್ನು ಗಮನಿಸಿದರೆ ಬೆಳವಣಿಗೆ ಮಂದಗತಿಯಲ್ಲಿ ಆಗುತ್ತಿರುವುದು ಸ್ಪಷ್ಟವಾಗುತ್ತದೆ. ಜೊತೆಗೆ, ಜಿಡಿಪಿ ಬೆಳವಣಿಗೆ ನಿಧಾನವಾಗುತ್ತಿರುವುದಕ್ಕೆ ಮೂಲ ಕಾರಣಗಳಾದ ಹೆಚ್ಚುತ್ತಿರುವ ಅಸಮಾನತೆಗಳು ಮತ್ತು ಉದ್ಯೋಗದ ಕೊರತೆ ಇತ್ಯಾದಿಗಳ ಬಗ್ಗೆ ನಮ್ಮನ್ನು ಎಚ್ಚರಿಸುತ್ತವೆ.

ಆಮದು ಪದಾರ್ಥಗಳ ಮೇಲೆ ನಮ್ಮ ವೆಚ್ಚದ ಪ್ರಮಾಣ ಹೆಚ್ಚುತ್ತಿರುವುದು ಹೆಚ್ಚುತ್ತಿರುವ ಅಸಮಾನತೆಯನ್ನು ಪ್ರತಿಫಲಿಸುತ್ತದೆ. ಕೋವಿಡ್‌ಗಿಂತ ಮೊದಲು ಒಟ್ಟಾರೆ ವೆಚ್ಚದಲ್ಲಿ ಆಮದು ಪದಾರ್ಥಗಳ ಪಾಲು ಶೇ. 22ರಷ್ಟಿತ್ತು, ಈಗ ಅದು ಶೇ. 26ಕ್ಕೆ ಏರಿದೆ. ಹೆಚ್ಚಿನ ವಿನಿಮಯ ದರದಿಂದಾಗಿ ಶ್ರೀಮಂತ ಭಾರತೀಯರು ವೇಗದ ಕಾರುಗಳು, ಚಿನ್ನದ ಕೈಗಡಿಯಾರಗಳು ಮತ್ತು ಡಿಸೈನರ್ ಹ್ಯಾಂಡ್‌ಬ್ಯಾಗ್‌ಗಳನ್ನು ಖರೀದಿಸುತ್ತಿದ್ದಾರೆ – ಹೆಚ್ಚಾಗಿ ಜ್ಯೂರಿಕ್, ಮಿಲನ್ ಮತ್ತು ಸಿಂಗಪುರಗಳಲ್ಲಿ ಶಾಪಿಂಗ್ ಮಾಡುತ್ತಿದ್ದಾರೆ. ಆದರೆ ಬಹುಸಂಖ್ಯಾತ ಜನ ಅಗತ್ಯ ವಸ್ತುಗಳನ್ನು ಖರೀದಿಸುವುದಕ್ಕೂ ಪಾಡುಪಡುತ್ತಿದ್ದಾರೆ.

ಭಾರತದ ಆರ್ಥಿಕತೆಯು ಉದ್ಯೋಗಗಳನ್ನು ಸೃಷ್ಟಿಸಲು, ಅದರಲ್ಲೂ ವಿಶೇಷವಾಗಿ ಗೌರವಾನ್ವಿತ ಬದುಕನ್ನು ನಡೆಸಲು ಬೇಕಾದ ಉದ್ಯೋಗವನ್ನು ಸೃಷ್ಟಿಸಲು ಏಕೆ ವಿಫಲವಾಗುತ್ತಿದೆ ಎಂಬುದನ್ನು ಈ ದತ್ತಾಂಶಗಳು ತೋರಿಸುತ್ತವೆ. ಕಳೆದ ತ್ರೈಮಾಸಿಕದಲ್ಲಿ, ಸಾರ್ವಜನಿಕ ಆಡಳಿತವನ್ನು ಹೊರತುಪಡಿಸಿದರೆ ಶೇ. 12.1ರಷ್ಟು ವೇಗದ ಆದಾಯದ ಬೆಳವಣಿಗೆ ಕಂಡ ಕ್ಷೇತ್ರಗಳೆಂದರೆ ಹಣಕಾಸು ಮತ್ತು ರಿಯಲ್ ಎಸ್ಟೇಟ್. ಉದಾರೀಕರಣದ ನಂತರದ ಭಾರತೀಯ ಅಭಿವೃದ್ಧಿಯ ಈ ಲಕ್ಷಣವು ಈಗ "ಫಿನ್‌ಟೆಕ್"ಗಳಿಂದಾಗಿ ಮತ್ತಷ್ಟು ಹೆಚ್ಚಾಗಿದೆ. ಇದು ಉನ್ನತ ವಿದ್ಯಾವಂತ ಭಾರತೀಯರಿಗೆ ಕೇವಲ ಬೆರಳೆಣಿಕೆಯಷ್ಟು ಉದ್ಯೋಗಗಳನ್ನು ಮಾತ್ರ ಸೃಷ್ಟಿಸುತ್ತದೆ. ಸಾರ್ವಜನಿಕ ಆಡಳಿತವೂ ಬೆಳೆಯುತ್ತಿದೆ, ಆದರೆ ಅಲ್ಲಿ ಕೂಡ ಉದ್ಯೋಗಾವಕಾಶಗಳು ಸೀಮಿತವಾಗಿವೆ. ಇತರ ಬೆಳವಣಿಗೆಯ ಕ್ಷೇತ್ರಗಳಲ್ಲಿ, ನಿರ್ಮಾಣ ಮತ್ತು ಕೆಳಹಂತದ ಸೇವೆಗಳು (ವ್ಯಾಪಾರ, ಸಾರಿಗೆ ಮತ್ತು ಹೋಟೆಲ್) ಸೃಷ್ಟಿಸುತ್ತಿರುವ ಕೆಲಸಗಳು ಆರ್ಥಿಕವಾಗಿ ಅನಿಶ್ಚಿತವಾಗಿವೆ. ಈ ಕೆಲಸಗಳು ಕಾರ್ಮಿಕರನ್ನು ಯಾವುದೇ ಕ್ಷಣದಲ್ಲಿ ತೀವ್ರ ಸಂಕಷ್ಟಕ್ಕೆ ತಳ್ಳಿಬಿಡಬಹುದು.



ಯಾವುದೇ ಯಶಸ್ವಿ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಯಲ್ಲಿ ತಯಾರಿಕಾ (Manufacturing) ಕ್ಷೇತ್ರವು ಉದ್ಯೋಗದ ಪ್ರಾಥಮಿಕ ಮೂಲವಾಗಿರುತ್ತದೆ. ಆದರೆ ಭಾರತದಲ್ಲಿ ತಯಾರಿಕಾ ಕ್ಷೇತ್ರವು ಬೆಳೆಯುತ್ತಲೇ ಇಲ್ಲ. ಹಲವು ದಶಕಗಳಿಂದ ಮಂದಗತಿಯಲ್ಲಿರುವ ಈ ಕ್ಷೇತ್ರ, ಕೋವಿಡ್ ನಂತರ ಇನ್ನೂ ದುರ್ಬಲವಾಗಿದೆ. ಇದರಿಂದಾಗಿಯೇ ಭಾರತಕ್ಕೆ ಶ್ರಮ–ಆಧಾರಿತ (Labour-intensive) ಉತ್ಪನ್ನಗಳ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧಿಸುವುದು ಸಾಧ್ಯವಾಗುತ್ತಿಲ್ಲ. ಕುಸಿಯುತ್ತಿರುವ ಜಾಗತಿಕ ವ್ಯಾಪಾರ ಮತ್ತು ಆದಾಯದ ಅಸಮಾನತೆಯಿಂದಾಗಿ ತಯಾರಿಕಾ ಉತ್ಪನ್ನಗಳಿಗೆ ದೇಶೀಯ ಬೇಡಿಕೆ ಕಡಿಮೆಯಾಗಿರುವುದು ಈ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ.

ಭಾರತೀಯ ಅಧಿಕಾರಿಗಳಿಗೆ ಜಿ20 ಶೃಂಗಸಭೆಯ ಮುಂದೆ ಆಕರ್ಷಕ ಚಿತ್ರಣ ಮತ್ತು ಅಂಕಿಅಂಶಗಳನ್ನು ಪ್ರದರ್ಶಿಸಬೇಕಾಗಿದೆ; ಹಾಗಾಗಿ ಅವರು ತಮಗೆ ಅನನುಕೂಲವಾಗಿರುವ ವಾಸ್ತವವನ್ನು ತಳ್ಳಿಹಾಕುತ್ತಿದ್ದಾರೆ. ಆದರೆ ಅವರು ಅಪಾಯಕಾರಿ ಆಟವನ್ನಾಡುತ್ತಿದ್ದಾರೆ. ವಾಸ್ತವವೆಂದರೆ ಇಂದು ಬೆಳವಣಿಗೆ ನಿಧಾನವಾಗುತ್ತಿದೆ, ಅಸಮಾನತೆ ಹೆಚ್ಚುತ್ತಿದೆ ಮತ್ತು ಉದ್ಯೋಗಾವಕಾಶಗಳು ಕ್ಷೀಣಿಸುತ್ತಿವೆ. ತಪ್ಪುದಾರಿಗೆಳೆಯುವ ಸಾಂಖ್ಯಿಕ ಅಂಕಿಅಂಶಗಳನ್ನು ತೋರಿಸುತ್ತಾ ವಾಸ್ತವಕ್ಕೆ ಕಣ್ಣು ಮುಚ್ಚಿಕೊಳ್ಳುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಅಧಿಕಾರಿಗಳು ತಾವು ಭಾರತವನ್ನು ನಡೆಸುತ್ತಿರುವ ಹಾದಿಯನ್ನು ಗುರುತಿಸಿ, ಅದನ್ನು ಮರುಪರಿಶೀಲಿಸುವುದು ಒಳಿತು.

ಸೆಪ್ಟೆಂಬರ್ 6, 2023
ಮೂಲ: ಪ್ರಾಜೆಕ್ಟ್ ಸಿಂಡಿಕೇಟ್

Ashoka Mody, a visiting professor of International Economic Policy at Princeton University, previously worked for the World Bank and the International Monetary Fund. He is the author of India is Broken: A People Betrayed, Independence to Today (Stanford University Press, 2023).

ನೈಜ ಬೆಳವಣಿಗೆ ಮತ್ತು ನಕಲಿ ವಾದಗಳು: ಇವು ಎಂದಿಗೂ ಒಂದಾಗಲಾರವು

ಲೇಖಕರು: ವಿ. ಅನಂತ ನಾಗೇಶ್ವರನ್ ಮತ್ತು ರಾಜೀವ್ ಮಿಶ್ರಾ

(ಸೆಪ್ಟೆಂಬರ್ 8, 2023)

ಭಾರತವು ತನ್ನ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಶೇ. 7.8ರಷ್ಟು ಜಿಡಿಪಿ ಬೆಳವಣಿಗೆಯನ್ನು ಘೋಷಿಸಿದ ನಂತರ, ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳು ಸೇರಿದಂತೆ ಹಲವು ಮುನ್ಸೂಚಕರು 2023ರ ಕ್ಯಾಲೆಂಡರ್ ವರ್ಷ ಅಥವಾ 2023–24ರ ಆರ್ಥಿಕ ಬೆಳವಣಿಗೆಯ ಮುನ್ಸೂಚನೆಗಳನ್ನು ಹೆಚ್ಚಿಸಿದ್ದಾರೆ. ಆದಾಗ್ಯೂ, ಕೆಲವು ವಿಮರ್ಶಕರು ಸಾಕ್ಷ್ಯಾಧಾರಗಳು ಮುಂದಿದ್ದರೂ ತಮ್ಮ ನಿಲುವನ್ನು ಬದಲಿಸಿಕೊಳ್ಳಲು ತಯಾರಿಲ್ಲ. ಇದಕ್ಕೆ ಒಂದು ಉದಾಹರಣೆ ಎಂದರೆ ಸೆಪ್ಟೆಂಬರ್ 6ರಂದು ಪ್ರಕಟವಾದ `India's Fake Growth Story' (ಭಾರತದ ನಕಲಿ ಬೆಳವಣಿಗೆಯ ಕಥೆ) ಎಂಬ ಲೇಖನ.

ಆ ಲೇಖನದ ಪ್ರಮುಖ ಅಂಶವು `Statistical Discrepancy' (ಸಾಂಖ್ಯಿಕ ವ್ಯತ್ಯಾಸ) ಎಂಬ ಸಾಲಿಗೆ ಸಂಬಂಧಿಸಿದೆ. ನಾವು ಮೊದಲು ಅದನ್ನು ಚರ್ಚಿಸೋಣ. ಭಾರತದ ದತ್ತಾಂಶ ವ್ಯವಸ್ಥೆಯ ವಿನ್ಯಾಸವು ರಾಷ್ಟ್ರೀಯ ಆದಾಯವನ್ನು ಅಂದಾಜು ಮಾಡಲು ಒಟ್ಟು ವೆಚ್ಚಕ್ಕಿಂತ ಆದಾಯವನ್ನು ಮಾಪನವನ್ನಾಗಿ ತೆಗೆದುಕೊಳ್ಳುತ್ತದೆ. ಇಡೀ ಆರ್ಥಿಕತೆಯಲ್ಲಿನ ವೆಚ್ಚಗಳನ್ನು ಅಂತಿಮ ಮತ್ತು ಮಧ್ಯಂತರ ಸರಕು–ಸೇವೆಗಳೆಂದು ಪ್ರತ್ಯೇಕಿಸಿ ಲೆಕ್ಕ ಹಾಕುವುದು ಕಷ್ಟ. ಅದಕ್ಕಿಂತ ಒಂದು ಘಟಕದ ಆದಾಯ ಅಥವಾ ಉತ್ಪಾದನೆ ಮತ್ತು ಉತ್ಪಾದನೆಗೆ ಬಳಸಿದ ಪದಾರ್ಥಗಳ ನಡುವಿನ ವ್ಯತ್ಯಾಸವನ್ನು ತೆಗೆದುಕೊಂಡು ಹೊಸದಾಗಿ ಸೇರ್ಪಡೆಯಾದ ಮೌಲ್ಯವನ್ನು (GVA - Gross Value Added) ಅಂದಾಜು ಮಾಡುವುದು ಹೆಚ್ಚು ಸುಲಭ. ವೆಚ್ಚವನ್ನು ಆಧರಿಸಿ ಜಿಡಿಪಿಯನ್ನು ಲೆಕ್ಕ ಹಾಕುವ ಕ್ರಮವು ಆದಾಯಕ್ಕೆ ಸಂಬಂಧಿಸಿದಂತೆ ಹೆಚ್ಚು ನಿಖರವಾದ ಅಂದಾಜುಗಳು ಸಿಕ್ಕಾಗ ಸುಲಭವಾಗುತ್ತದೆ. ಅಂತಹ ಮಾಹಿತಿ ಬೇಡಿಕೆಗೆ ಸಂಬಂಧಿಸಿದ ವಿವಿಧ ಆಯಾಮಗಳನ್ನು ವಿಶ್ಲೇಷಿಸುವುದಕ್ಕೂ ಉಪಯುಕ್ತವಾಗುತ್ತದೆ.

2023–24ರ ಮೊದಲ ತ್ರೈಮಾಸಿಕದಲ್ಲಿ (Q1), ಶೇ. 2.8 ರಷ್ಟು 'ವ್ಯತ್ಯಾಸ'ವು ಧನಾತ್ಮಕ (+) ಚಿಹ್ನೆಯನ್ನು ಹೊಂದಿದೆ. ಇದರರ್ಥ, ಅಂದರೆ ನಮಗೆ ವೆಚ್ಚದ ಮಾಹಿತಿ ಸಿಕ್ಕಿರುವುದು ಶೇಕಡ 97.2 ರಷ್ಟು ಮಾತ್ರ (ಗಮನಿಸಿ: ಇಲ್ಲಿ ಮೂಲ ಲೇಖನದಲ್ಲಿರುವುದು ಶೇ. 67.2ರ ಬದಲಿಗೆ 97.2 ಇರಬೇಕು). ಉಳಿದ ಶೇಕಡ 2.8ರಷ್ಟು ಹಣ ಎಲ್ಲಿ ಖರ್ಚಾಗಿದೆ ಎಂಬುದು ಸದ್ಯಕ್ಕೆ ನಮಗೆ ತಿಳಿದಿಲ್ಲ. ಆದರೆ ಆ ಹಣ ಆರ್ಥಿಕತೆಯಲ್ಲಿ ಚಲಾವಣೆಯಲ್ಲಿದೆ, ಮುಂದಿನ ದಿನಗಳಲ್ಲಿ ಅದರ ಲೆಕ್ಕ ಸಿಗಲಿದೆ. ಅದೇ ರೀತಿ, ಹಿಂದಿನ ಎಂಟು ತ್ರೈಮಾಸಿಕಗಳಲ್ಲಿ ಈ ವ್ಯತ್ಯಾಸವು ಋಣಾತ್ಮಕ (–) ಆಗಿತ್ತು. ಅಂದರೆ, ಆದಾಯಕ್ಕಿಂತ ವೆಚ್ಚವೇ ಹೆಚ್ಚಾಗಿ ಕಂಡಿತ್ತು. ಆ ಸಮಯದಲ್ಲಿ ವೆಚ್ಚಕ್ಕೆ ಸಂಬಂಧಿಸಿದ ಅಂಕಿ ಅಂಶಗಳು ಹೆಚ್ಚು ವಿವರವಾಗಿ ಸಿಕ್ಕಿದ್ದವು. ಆದಾಯಕ್ಕೆ ಸಂಬಂಧಿಸಿದ ಅಂಕಿ ಅಂಶಗಳ ಸಂಗ್ರಹಣೆ ಸ್ವಲ್ಪ ನಿಧಾನವಾಗಿತ್ತು. ಹಾಗಾಗಿ ಆದಾಯಕ್ಕಿಂತ ವೆಚ್ಚವೇ ಹೆಚ್ಚಾಗಿ ಕಾಣುತ್ತಿತ್ತು. ದೀರ್ಘಾವಧಿಯಲ್ಲಿ, ಈ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳು ಪರಸ್ಪರ ಸಮತೋಲನಗೊಳ್ಳುತ್ತವೆ. 2011–12 ರಿಂದ 2023–24ರ ಅವಧಿಯಲ್ಲಿ, ಆದಾಯ ಮತ್ತು ವೆಚ್ಚ – ಈ ಎರಡೂ ವಿಧಾನಗಳ ಮೂಲಕ ಲೆಕ್ಕಹಾಕಿದ ನೈಜ ಜಿಡಿಪಿಯ ವಾರ್ಷಿಕ ಸಂಯೋಜಿತ ಬೆಳವಣಿಗೆ ದರವು (CAGR) ಶೇ. 5.3 ರಷ್ಟಿದೆ.

ಆದ್ದರಿಂದ, ಜಿಡಿಪಿಯನ್ನು ಉತ್ಪ್ರೇಕ್ಷಿಸಲಾಗಿದೆ ಎನ್ನುವ ಆರೋಪಕ್ಕೆ ಯಾವುದೇ ಆಧಾರವಿಲ್ಲ. ಆದಾಯವನ್ನು ಮಾಪನವನ್ನಾಗಿ ಬಳಸಿ ಲೆಕ್ಕ ಹಾಕಿದ ಜಿಡಿಪಿಯು ವೆಚ್ಚವನ್ನು ಬಳಸಿ ಲೆಕ್ಕ ಹಾಕಿದ ಜಿಡಿಪಿಗಿಂತ ಯಾವಾಗಲೂ ಹೆಚ್ಚಾಗಿರುವುದಿಲ್ಲ. 2011–12ರಿಂದ ಈ ವ್ಯತ್ಯಾಸಗಳು ಶೇ. 6.4 ರಿಂದ ಮೈನಸ್ ಶೇ. 4.8 ರ ವ್ಯಾಪ್ತಿಯಲ್ಲಿ ಹರಡಿಕೊಂಡಿವೆ. ಇತ್ತೀಚಿನ ತ್ರೈಮಾಸಿಕದ ವ್ಯತ್ಯಾಸವು ಈ ಮಿತಿಯೊಳಗೇ ಇದೆ. ಇದನ್ನು ಸುಲಭವಾಗಿ ಪರಿಶೀಲಿಸಬಹುದು.

ಸಾಂಖ್ಯಿಕ ಅಧಿಕಾರಿಗಳು 2020–21ರ ಮೊದಲ ತ್ರೈಮಾಸಿಕದಲ್ಲಿ ಸುಮಾರು ಶೇ. 25 ರಷ್ಟು ಜಿಡಿಪಿ ಕುಸಿತವನ್ನು ವರದಿ ಮಾಡಿದಾಗ, ಭಾರತೀಯ ಅಂಕಿಅಂಶಗಳ ವಿಶ್ವಾಸಾರ್ಹತೆಯ ಬಗ್ಗೆ ಯಾರೂ ಸೊಲ್ಲೆತ್ತಲಿಲ್ಲ. ಏಕೆಂದರೆ ಅದು ಭಾರತದ ಜಿಡಿಪಿ ಇತಿಹಾಸದಲ್ಲೇ ಅತ್ಯಂತ ತೀವ್ರವಾದ ಕುಸಿತವನ್ನು ವರದಿ ಮಾಡಿತ್ತು. ಆ ದತ್ತಾಂಶವು ಟೀಕಾಕಾರರಿಗೆ ಸೂಕ್ತವಾಗಿತ್ತು, ಆದ್ದರಿಂದ ಅದು 'ವಿಶ್ವಾಸಾರ್ಹ'ವಾಗಿತ್ತು. ಒಂದು ವೇಳೆ ಜಿಡಿಪಿ ಬೆಳವಣಿಗೆಯ ದರವನ್ನು ಈ ಎರಡು ಕ್ರಮದಲ್ಲಿ ಹೆಚ್ಚಿರುವ ಸಂಖ್ಯೆಯನ್ನು ಆಧರಿಸಿ ಲೆಕ್ಕಹಾಕಿದ್ದರೆ ಉತ್ಪ್ರೇಕ್ಷೆಯ ಆರೋಪಕ್ಕೆ ಅರ್ಥವಿರುತ್ತಿತ್ತು. ಆದರೆ ಸರ್ಕಾರಿ ಸಂಖ್ಯಾಶಾಸ್ತ್ರಜ್ಞರು ಹಾಗೆ ಎಂದೂ ಮಾಡಿಲ್ಲ. ವೆಚ್ಚ ಆಧಾರಿತ ಅಂದಾಜಿಗಿಂತ ಹೆಚ್ಚಿರಲಿ ಅಥವಾ ಕಡಿಮೆಯಿರಲಿ, ಅವರು ಯಾವಾಗಲೂ ಆದಾಯದ ವಿಧಾನದ ಆಧಾರದ ಮೇಲೆ ಜಿಡಿಪಿ ದರವನ್ನು ವರದಿ ಮಾಡಿದ್ದಾರೆ.

ಅನೇಕ ಏಜೆನ್ಸಿಗಳು ಹಾಗೂ ಅರ್ಥಶಾಸ್ತ್ರಜ್ಞರ ಒಮ್ಮತದ ಅಂದಾಜು ಕೂಡ ಶೇ. 7.7ರಿಂದ ಶೇ. 8.3ರಷ್ಟು ಬೆಳವಣಿಗೆಯ ದರವನ್ನು ನಿರೀಕ್ಷಿಸಿದ್ದವು. ಭಾರತೀಯ ರಿಸರ್ವ್ ಬ್ಯಾಂಕ್ ಮೊದಲ ತ್ರೈಮಾಸಿಕದಲ್ಲಿ ಶೇ. 8ರಷ್ಟು ಬೆಳವಣಿಗೆಯನ್ನು ನಿರೀಕ್ಷಿಸಿತ್ತು. ಜಿಎಸ್‌ಟಿ ಸಂಗ್ರಹ, ಇ–ವೇ ಬಿಲ್‌ಗಳು, ಉತ್ಪಾದನೆ ಮತ್ತು ಸೇವಾ ವಲಯದ PMI ಗಳಂತಹ ಹೆಚ್ಚು ನಿಯತವಾದ ಸೂಚಕಗಳು ಕೂಡ ಆರ್ಥಿಕತೆಯು ಹೆಚ್ಚು ಪ್ರಬಲ ಹಾದಿಯಲ್ಲಿ ಸಾಗುತ್ತಿರುವುದನ್ನು ಸಮರ್ಥಿಸುತ್ತವೆ. ಆರ್ಥಿಕ ವ್ಯವಹಾರಗಳ ಇಲಾಖೆಯ ಮಾಸಿಕ ಆರ್ಥಿಕ ಪರಾಮರ್ಶೆಯು 2022–23ರ ಅಂತಿಮ ತ್ರೈಮಾಸಿಕದಿಂದ ಬೆಳವಣಿಗೆ ವೇಗವಾಗಿಯೇ ಆಗುತ್ತಿರುವುದನ್ನು ದಾಖಲಿಸಿದೆ. ಜುಲೈ 2023ರ ದತ್ತಾಂಶಗಳು ಕೂಡ ಬೆಳವಣಿಗೆ ವೇಗವಾಗಿ ಆಗುತ್ತಿರುವುದನ್ನು ತೋರಿಸಿವೆ. ಖಾಸಗಿ ವಲಯದ ಬಂಡವಾಳ ಹೂಡಿಕೆ ಪ್ರಾರಂಭವಾಗಿದೆ; 2020–21ರಲ್ಲಿ ಕುಸಿತ ಕಂಡ ನಂತರ, ಇದು 2021–22ರಲ್ಲಿ ಶೇ. 22.4ರಷ್ಟು ಮತ್ತು 2022–23ರಲ್ಲಿ ಶೇ. 18.5ರಷ್ಟು ಏರಿದೆ. ಆರ್‌ಬಿಐ ಕೂಡ ತನ್ನ ಮಾಸಿಕ ಬುಲೆಟಿನ್‌ನಲ್ಲಿ ಕಂಪನಿಗಳು ಹೂಡಿಕೆಯನ್ನು ಹೆಚ್ಚಿಸುವ ಉದ್ದೇಶಗಳನ್ನು ಇಟ್ಟುಕೊಂಡಿರುವುದನ್ನು ಗಮನಿಸಿದೆ. ಮತ್ತು ಆರ್‌ಬಿಐ 2023–24ರಲ್ಲಿ ಶೇ. 6.5ರಷ್ಟು ಜಿಡಿಪಿ ಬೆಳವಣಿಗೆಯ ನಿರೀಕ್ಷೆಯನ್ನು ಪುನರುಚ್ಚರಿಸಿದೆ. ಹಣಕಾಸು ಸಚಿವಾಲಯವೂ ಈ ಅಂದಾಜನ್ನು ಎತ್ತಿ ಹಿಡಿದಿದೆ. ಅಷ್ಟೇ ಅಲ್ಲದೆ, 2022–23ರ ಶೇ. 7.2ರಷ್ಟು ಬೆಳವಣಿಗೆಯು 2026ರ ಆರಂಭದಲ್ಲಿ ಅಂತಿಮ ಅಂದಾಜು ಬಿಡುಗಡೆಯಾದಾಗ ಅದು ಇನ್ನೂ ಹೆಚ್ಚಿರುತ್ತದೆ ಎಂದು ನಾವು ನಂಬುತ್ತೇವೆ.

ಕಳೆದ ದಶಕದಲ್ಲಿ ಭಾರತೀಯ ಕಾರ್ಪೊರೇಟ್ ಮತ್ತು ಹಣಕಾಸು ವಲಯಗಳ ಬ್ಯಾಲೆನ್ಸ್ ಶೀಟ್ ಸಮಸ್ಯೆಗಳು ಭಾರತದ ಆರ್ಥಿಕ ಬೆಳವಣಿಗೆಯ ಮೇಲೆ ಪರಿಣಾಮ ಬೀರಿದ್ದವು. ಅದು ಈಗ ಇತಿಹಾಸ.



ಬ್ಯಾಂಕುಗಳು ಸಾಲ ನೀಡುತ್ತಿವೆ. ಸಾಲದ ಬೆಳವಣಿಗೆಯು ಎರಡಂಕಿಯಲ್ಲಿದೆ. ಕಂಪನಿಗಳು ಹೂಡಿಕೆ ಮಾಡಲು ಪ್ರಾರಂಭಿಸಿವೆ. ಅತಿಯಾದ ಆರ್ಥಿಕ ಸಡಿಲಿಕೆ ಮಾಡದೆ, ಉದ್ದೇಶಿತ ಪರಿಹಾರ ಮತ್ತು ಸಾರ್ವಜನಿಕ ಬಂಡವಾಳ ವೆಚ್ಚಕ್ಕೆ ಒತ್ತು ನೀಡುವ ಮೂಲಕ ಭಾರತವು ಕೋವಿಡ್ ಸಾಂಕ್ರಾಮಿಕವನ್ನು ನಿರ್ವಹಿಸಿರುವುದು ಆರ್ಥಿಕತೆಗೆ ಸ್ಥಿರವಾದ ಅಡಿಪಾಯವನ್ನು ಒದಗಿಸಿದೆ. ಇದರ ಭದ್ರ ಬುನಾದಿಯ ಮೇಲೆ ಮುಂಬರುವ ವರ್ಷಗಳಲ್ಲಿ ಸುಸ್ಥಿರ ಆರ್ಥಿಕ ಬೆಳವಣಿಗೆ ಮತ್ತು ಉನ್ನತ ಜೀವನಮಟ್ಟದ ಸೌಧವು ನಿರ್ಮಾಣವಾಗಲಿದೆ.

Dr. V. Anantha Nageswaran is the current Chief Economic Advisor to the Government of India.

Originally published in The indian express

ಭಾರತದ ಜಿಡಿಪಿ ಬೆಳವಣಿಗೆ: ಹೊಸ ಆರಂಭಕ್ಕಾಗಿ ಹೊಸ ಸಾಕ್ಷ್ಯಾಧಾರಗಳು

ಅರವಿಂದ್ ಸುಬ್ರಮಣಿಯನ್


ಪ್ರಜಾಪ್ರಭುತ್ವದಲ್ಲಿ ಕಾಲಕಾಲಕ್ಕೆ ಹೊಸ ಹೊಸ ಅವಕಾಶಗಳು ಸೃಷ್ಟಿಯಾಗುತ್ತಿರುತ್ತವೆ. ಭರ್ಜರಿ ಜನಾದೇಶದೊಂದಿಗೆ ಮರುಚುನಾಯಿತವಾದ ಸರ್ಕಾರವು ತನ್ನ ಆರ್ಥಿಕ ನೀತಿಗಳ ಯಶಸ್ವಿ ಅಂಶಗಳನ್ನು ಮುಂದುವರಿಸಿಕೊಂಡು ಹೋಗಬೇಕು. ಶೌಚಾಲಯಗಳು, ವಸತಿ, ವಿದ್ಯುತ್, ಅಡುಗೆ ಅನಿಲ, ಬ್ಯಾಂಕ್ ಖಾತೆಗಳು, ತುರ್ತು ವೈದ್ಯಕೀಯ ನೆರವು ಮತ್ತು ಈಗ ಎಲ್ಲಾ ರೈತರಿಗೆ ಒಂದು ಕನಿಷ್ಠ ಆದಾಯ, ಅಗತ್ಯ ಖಾಸಗಿ ಸರಕು ಮತ್ತು ಸೇವೆಗಳ ಸಾರ್ವಜನಿಕ ಪೂರೈಕೆಯ ಮೂಲಕ ಆರ್ಥಿಕ ಒಳಗೊಳ್ಳುವಿಕೆಯನ್ನು ಉತ್ತೇಜಿಸುವುದು ಇವೆಲ್ಲಾ ಅತ್ಯಂತ ಗಮನಾರ್ಹವಾದದ್ದು.

ಆದರೆ, ದೊರೆತಿರುವ ಈ ದೊಡ್ಡ ಜನಬೆಂಬಲವನ್ನು ಬಳಸಿಕೊಂಡು, ಹೊಸ ಸಾಕ್ಷ್ಯಾಧಾರಗಳು ಮತ್ತು ಹೊಸ ಅರಿವಿನ ಆಧಾರದ ಮೇಲೆ ಹೊಸ ಹೊಸ ಬದಲಾವಣೆಗಳನ್ನು ತರಲು ಸರ್ಕಾರ ಧೈರ್ಯ ತೋರಬೇಕು. ಭಾರತವು ಅತಿ ವೇಗವಾಗಿ ಬೆಳೆಯುತ್ತಿದೆ ಎಂದು ಸಂಖ್ಯಾಶಾಸ್ತ್ರಜ್ಞರು ಇವರೆಗೂ ನಮ್ಮನ್ನು ನಂಬಿಸಿದ್ದಾರೆ. ಆದರೆ ನನ್ನ ಹೊಸ ಸಂಶೋಧನೆಯ ಪ್ರಕಾರ, ಆರ್ಥಿಕತೆಯು ಗಟ್ಟಿಯಾಗಿದೆಯಾದರೂ ಅದು ನಾವು ಅಂದುಕೊಂಡಷ್ಟು ವೇಗವಾಗಿ ಬೆಳೆಯುತ್ತಿಲ್ಲ. ಈ ವಾಸ್ತವವನ್ನು ನಾವು ಈಗಲಾದರೂ ಒಪ್ಪಿಕೊಳ್ಳಬೇಕು.

ನನ್ನ ಅಧ್ಯಯನದ ಪ್ರಕಾರ, ಜಿಡಿಪಿ ಲೆಕ್ಕಾಚಾರದ ಕ್ರಮದಲ್ಲಿ ಆದ ಬದಲಾವಣೆಯಿಂದಾಗಿ 2011–12 ಮತ್ತು 2016–17ರ ನಡುವೆ ಜಿಡಿಪಿ ಬೆಳವಣಿಗೆಯನ್ನು ವರ್ಷಕ್ಕೆ ಸುಮಾರು ಶೇಕಡ 2.5 ರಷ್ಟು ಹೆಚ್ಚಿಸಿ ಅಂದಾಜಿಸಲಾಗಿದೆ. ಆ ಅವಧಿಯಲ್ಲಿ ಯುಪಿಎ ಮತ್ತು ಎನ್‌ಡಿಎ ಸರ್ಕಾರಗಳೆರಡೂ ಆಡಳಿತ ನಡೆಸಿದ್ದವು. ಅಧಿಕೃತ ಅಂದಾಜುಗಳು ಈ ಅವಧಿಯ ವಾರ್ಷಿಕ ಸರಾಸರಿ ಬೆಳವಣಿಗೆಯನ್ನು ಶೇ. 7 ರಷ್ಟು ಎಂದು ಹೇಳುತ್ತವೆ. ಆದರೆ ಅದು ವಾಸ್ತವದಲ್ಲಿ ಸುಮಾರು ಶೇ. 4.5ರಷ್ಟಿರಬಹುದು. ಇದು ಶೇ. 3.5 ರಿಂದ 5.5ರ ನಡುವೆ ಇರುವ ಸಾಧ್ಯತೆ ಹೆಚ್ಚು.


ಇಲ್ಲಿ ಕೆಲವು ಮುಖ್ಯ ವಿಷಯಗಳನ್ನು ಸ್ಪಷ್ಟಪಡಿಸಬೇಕಿದೆ. ಜಿಡಿಪಿ ಲೆಕ್ಕಾಚಾರದ ಬದಲಾವಣೆಗಳನ್ನು ಎನ್‌ಡಿಎ ಸರ್ಕಾರ ಬಂದ ಮೇಲೆ (2014ರ ಕೊನೆಯಲ್ಲಿ) ಘೋಷಿಸಲಾಯಿತು. ಇತ್ತೀಚೆಗೆ ಹಿಂದಿನ ವರ್ಷಗಳ ಮರು ಅಂದಾಜುಗಳನ್ನು (Back-casting) ಪ್ರಕಟಿಸಲಾಗಿದೆ. ಇದರಲ್ಲಿ ಹಿಂದಿನ ಅಂದಾಜಿಗೆ ಹೋಲಿಸಿದರೆ ಜಿಡಿಪಿ ಸಂಖ್ಯೆಯಲ್ಲಿ ಏರಿಕೆಯನ್ನು ನೋಡಬಹುದು. ಇದು ಸಹಜವಾಗಿಯೇ ವಿವಾದಕ್ಕೆ ಕಾರಣವಾಗಿದೆ. ಜನರು ಇವುಗಳನ್ನು 'ರಾಜಕೀಯ ನಿರ್ಧಾರಗಳು' ಎಂದು ಭಾವಿಸುತ್ತಿದ್ದಾರೆ. ಆದರೆ ಜಿಡಿಪಿ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ ಮಾಡಿರುವ ಬದಲಾವಣೆಗಳು ರಾಜಕಾರಣಿಗಳ ಆಲೋಚನೆಗಳಲ್ಲ. ಈ ಬದಲಾವಣೆಗಳು ಆರ್ಥಿಕ ತಜ್ಞರ ಚಿಂತನೆಗಳೇ ಆಗಿವೆ ಮತ್ತು ಇದು ಹೆಚ್ಚಾಗಿ ಯುಪಿಎ–2 ಸರ್ಕಾರದ ಕಾಲದಲ್ಲೇ ನಡೆದಿತ್ತು.

ಅಷ್ಟೇ ಅಲ್ಲ, ಇದು ಅವಶ್ಯಕವಾಗಿ ಆಗಬೇಕಾಗಿದ್ದ ಬದಲಾವಣೆ. ಜಿಡಿಪಿ ಅಂದಾಜು ಮಾಡುವುದಕ್ಕಾಗಿ ದತ್ತಾಂಶದ ವ್ಯಾಪ್ತಿಯನ್ನು ವಿಸ್ತರಿಸುವ ಕೆಲಸ ಒಳ್ಳೆಯದು. ಹಾಗೆಯೇ ತಾಂತ್ರಿಕವಾಗಿ ಮುಂದುವರಿಯುತ್ತಿರುವ ಆರ್ಥಿಕತೆಗೆ ಹೊಂದಿಕೆಯಾಗುವ ವಿಧಾನವನ್ನು ಅಳವಡಿಸಿಕೊಳ್ಳುವ ಪ್ರಯತ್ನ ಕೂಡ ನಿಜಕ್ಕೂ ಅಪೇಕ್ಷಣೀಯವಾದದ್ದು. ಈ ಬದಲಾವಣೆಗಳು ರಾಜಕೀಯ ಪ್ರೇರಿತವಲ್ಲ. ಹೊಸ ಅಂದಾಜುಗಳನ್ನು ಗಮನಿಸಿದರೆ



IIP: ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ; Exp. GS: ಸರಕು ಮತ್ತು ಸೇವೇತರ ಸೇವೆಗಳ ರಫ್ತುಗಳು; IMP. GS: ಸರಕು ಮತ್ತು ಸೇವೇತರ ಸೇವೆಗಳ ಆಮದು; Rly. Frt.: ರೈಲ್ವೇ ಸರಕು ಸಾಗಣೆ; Airline: ವಿಮಾನಯಾನ ಪ್ರಯಾಣಿಕರ ಸಂಚಾರ; Mfg.: ಉತ್ಪಾದನೆ; Cons.: ಬಳಕೆದಾರರ ಸರಕುಗಳು; GVA: ಒಟ್ಟು ಮೌಲ್ಯವರ್ಧಿತ; Comm. Vhcl.: ವಾಣಿಜ್ಯ ವಾಹಗಳು; IIP-GVA (Mfg.) ಎಂದರೆ IIP ಮತ್ತು GVA ನಲ್ಲಿನ ಉತ್ಪಾದನಾ ಬೆಳವಣಿಗೆಯ ನಡುವಿನ ಸಂಬಂಧಿ.

ಚಿತ್ರ–1: ಭಾರತದ ಅಧಿಕೃತ ಜಿಡಿಪಿ ಅಂದಾಜು ಮತ್ತು ಅರವಿಂದ್ ಸುಬ್ರಮಣಿಯನ್ ಅವರ ವಿಶ್ಲೇಷಣೆಯ ನಡುವಿನ ವ್ಯತ್ಯಾಸ (2011–2017).



ಅಡ್ಡ ಅಕ್ಷವು ಸೂಚಕಗಳು ಮತ್ತು GDP ಬೆಳವಣಿಗೆಯ ನಡುವಿನ ಅಡ್ಡ-ದೇಶದ ಸಂಬಂಧದ ಆಧಾರದ ಮೇಲೆ ವಿವಿಧ ದೇಶಗಳಿಗೆ ಅಂದಾಜು ಮಾಡಿದ ಬೆಳವಣಿಗೆಯನ್ನು ತೋರಿಸುತ್ತದೆ; ಲಂಬ ಅಕ್ಷವು ನೈಜ ಬೆಳವಣಿಗೆಯನ್ನು ತೋರಿಸುತ್ತದೆ.

ಚಿತ್ರ–2: ಇತರ ದೇಶಗಳ ಆರ್ಥಿಕ ಸೂಚಕಗಳೊಂದಿಗೆ ಹೋಲಿಸಿದಾಗ ಭಾರತದ ಜಿಡಿಪಿ 2001–11 ಮತ್ತು 2012–2016ರಲ್ಲಿ ಹೇಗೆ ಅಸಹಜವಾಗಿ (Outlier) ಕಂಡುಬರುತ್ತಿದೆ ಎಂಬ ಚಿತ್ರಣ.

ಯುಪಿಎ–2 ಸರ್ಕಾರದ ಅಂತಿಮ ವರ್ಷದ (2013–14) ಬೆಳವಣಿಗೆಯ ದರದಲ್ಲಿ ಹೆಚ್ಚಳವಾಗಿರುವುದು ಕಾಣುತ್ತದೆ. ಇದರಿಂದಲೇ ಇದು ರಾಜಕೀಯ ಪ್ರೇರಿತವಲ್ಲ ಎನ್ನುವುದನ್ನು ತಿಳಿಯಬಹುದು.

ಜಿಡಿಪಿ ಅಂದಾಜಿನಲ್ಲಿ ತಪ್ಪಾಗಿದೆ ಅನ್ನುವುದಕ್ಕೆ ನನ್ನ ಸಂಶೋಧನಾ ಪ್ರಬಂಧವು ವಿಭಿನ್ನ ಪುರಾವೆಗಳನ್ನು ಒದಗಿಸುತ್ತದೆ. ಮೊದಲನೆಯದಾಗಿ, ನಾನು 2001–02 ರಿಂದ 2017–18ರ ಅವಧಿಗೆ ಜಿಡಿಪಿ ಬೆಳವಣಿಗೆಯೊಂದಿಗೆ ನಿಕಟ ಸಂಬಂಧ ಹೊಂದಿರುವ 17 ಪ್ರಮುಖ ಸೂಚಕಗಳನ್ನು ಸಂಕಲಿಸಿದ್ದೇನೆ: ವಿದ್ಯುತ್ ಬಳಕೆ, ದ್ವಿಚಕ್ರ ಮತ್ತು ವಾಣಿಜ್ಯ ವಾಹನಗಳ ಮಾರಾಟ, ಟ್ರಾಕ್ಟರ್ ಮಾರಾಟ, ವಿಮಾನ ಪ್ರಯಾಣಿಕರ ಸಂಚಾರ, ವಿದೇಶಿ ಪ್ರವಾಸಿಗರ ಆಗಮನ, ರೈಲ್ವೆ ಸರಕು ಸಾಗಣೆ, ಕೈಗಾರಿಕಾ ಉತ್ಪಾದನಾ ಸೂಚ್ಯಂಕ (IIP), IIP (ತಯಾರಿಕೆ), IIP (ಬಳಕೆದಾರರ ಸರಕುಗಳು), ಪೆಟ್ರೋಲಿಯಂ, ಸಿಮೆಂಟ್, ಉಕ್ಕು, ಒಟ್ಟು ನೈಜ ಸಾಲ, ಕೈಗಾರಿಕಾ ನೈಜ ಸಾಲ ಮತ್ತು ಸರಕು–ಸೇವೆಗಳ ರಫ್ತು ಮತ್ತು ಆಮದು. ಈ ಸೂಚಕಗಳನ್ನು ಆರಿಸಿಕೊಳ್ಳುವುದಕ್ಕೆ ಇವುಗಳನ್ನು ಸಿಎಸ್‌ಒ (CSO – ಕೇಂದ್ರ ಸಾಂಖ್ಯಿಕ ಕಛೇರಿ) ನಿಯಂತ್ರಿಸುವುದಿಲ್ಲ ಅನ್ನುವುದೂ ಒಂದು ಪ್ರಮುಖ ಕಾರಣ.

ಎರಡನೆಯದಾಗಿ, ನಾನು ಭಾರತದ ಪರಿಸ್ಥಿತಿಯನ್ನು ಜಗತ್ತಿನ ಇತರ ದೇಶಗಳೊಂದಿಗೆ ಹೋಲಿಸಿ ನೋಡುತ್ತೇನೆ. ಇದಕ್ಕಾಗಿ ನಾನು ಮಧ್ಯಮ ಮತ್ತು ಹೆಚ್ಚಿನ ಆದಾಯ ಹೊಂದಿರುವ ಸುಮಾರು 71 ದೇಶಗಳನ್ನು ಆರಿಸಿಕೊಂಡಿದ್ದೇನೆ. 2011ಕ್ಕೆ ಮೊದಲು ಈ ದೇಶಗಳ ಆರ್ಥಿಕತೆ ಹೇಗಿತ್ತು ಮತ್ತು 2011ರ ನಂತರ ಏನಾಯಿತು ಎಂಬುದನ್ನು ನಾನು ಗಮನಿಸಿದ್ದೇನೆ. ಈ ಹೋಲಿಕೆಗಾಗಿ ಆರ್ಥಿಕತೆಯ ನಾಲ್ಕು ಪ್ರಮುಖ ಅಂಶಗಳನ್ನು ಬಳಸಿದ್ದೇನೆ: 1. ಬ್ಯಾಂಕ್ ನೀಡುವ ಸಾಲ, 2. ರಫ್ತು, 3. ಆಮದು, 4. ವಿದ್ಯುತ್ ಬಳಕೆ. ಈ ಸೂಚಿಗಳು ತುಂಬಾ ಸರಳ ಮತ್ತು ವಿಶ್ವಾಸಾರ್ಹವಾದವು. ಜಿಡಿಪಿಯನ್ನು ಅಂದಾಜು ಮಾಡುವ ಏಜೆನ್ಸಿಗಳು ಇವುಗಳನ್ನು ಲೆಕ್ಕಹಾಕುವುದಿಲ್ಲ.

ಈ ಸಂಬಂಧವನ್ನು ಚಿತ್ರ 2ರಲ್ಲಿರುವ ಮೇಲ್ಮುಖವಾಗಿ ಚಲಿಸುವ ರೇಖೆಯು (Upward-sloping line) ಸ್ಪಷ್ಟಪಡಿಸುತ್ತದೆ. ಅಡ್ಡ ಸಾಲು (Horizontal Axis): ನಮ್ಮ ಆರ್ಥಿಕ ಸೂಚಿಗಳ ಆಧಾರದ ಮೇಲೆ ಜಿಡಿಪಿ ಎಷ್ಟಿರಬೇಕು ಎಂಬ ಅಂದಾಜನ್ನು ಸೂಚಿಸುತ್ತದೆ. ಲಂಬ ರೇಖೆಯು (Vertical Axis): ಸರ್ಕಾರವು ಅಧಿಕೃತವಾಗಿ ವರದಿ ಮಾಡಿದ ಜಿಡಿಪಿ ಅಂಕಿ–ಅಂಶಗಳನ್ನು ಸೂಚಿಸುತ್ತದೆ.

ಮೊದಲ ಅವಧಿಯಲ್ಲಿ, ಭಾರತದ ದತ್ತಾಂಶವು (ಕೆಂಪು ಚುಕ್ಕಿ) ಸಾಧಾರಣವಾಗಿತ್ತು ಮತ್ತು ಅಂತರರಾಷ್ಟ್ರೀಯ ಮಟ್ಟಕ್ಕೆ ಹೊಂದಿಕೆಯಾಗುತ್ತಿತ್ತು. ಆದರೆ ಎರಡನೇ ಅವಧಿಯಲ್ಲಿ ಭಾರತದ ದತ್ತಾಂಶವು (ನೀಲಿ ಚುಕ್ಕಿ) ರೇಖೆಗಿಂತ ಬಹಳ ಮೇಲೆ ಇದೆ. ಅಂದರೆ ಅದರ ಜಿಡಿಪಿ ಬೆಳವಣಿಗೆಯು ಇತರ ದೇಶಗಳ ಸೂಚಕಗಳಿಗಿಂತ ವಾರ್ಷಿಕವಾಗಿ ಶೇ. 2.5 ಕ್ಕಿಂತ ಹೆಚ್ಚಾಗಿ ಕಂಡುಬರುತ್ತದೆ. ಇದು ಯಾವುದೇ ಸ್ಯಾಂಪಲುಗಳನ್ನಾಗಲಿ ಅಥವಾ ಅಂದಾಜು ಪ್ರಕ್ರಿಯೆಯನ್ನಾಗಲಿ ಆಧರಿಸಿರದ ಒಂದು ಪ್ರಬಲ ಫಲಿತಾಂಶವಾಗಿದೆ.

ಹೊರಗಿನ ಸಂಶೋಧಕರಿಗೆ ಜಿಡಿಪಿ ಅಂದಾಜನ್ನು ಮಾಡಲು ಬಳಸಿರುವ ವಿವರವಾದ ಕ್ರಮವನ್ನು ಮರುಸೃಷ್ಟಿಸುವುದು ಅಸಾಧ್ಯ, ಆದ್ದರಿಂದ ಸಮಸ್ಯೆಯ ಮೂಲವನ್ನು ಪತ್ತೆಹಚ್ಚುವುದು ಕಷ್ಟ. ಆದರೆ ಒಂದು ವಲಯದಲ್ಲಿ ತೀವ್ರವಾದ ತಪ್ಪಾಗಿರುವುದು ಕಾಣುತ್ತದೆ. ಅದುವೇ ಔಪಚಾರಿಕ ಉತ್ಪಾದನಾ ವಲಯ (Formal Manufacturing). 2011 ಕ್ಕಿಂತ ಮೊದಲು ಈ ವಲಯದ ಮೌಲ್ಯವರ್ಧನೆಯು IIP ಮತ್ತು ರಫ್ತುಗಳೊಂದಿಗೆ ನಿಕಟವಾಗಿ ಸಾಗುತ್ತಿತ್ತು, ಆದರೆ ನಂತರದ ಅವಧಿಯಲ್ಲಿ ಈ ಸಂಬಂಧವು ವಿಲಕ್ಷಣವಾಗಿ ಋಣಾತ್ಮಕವಾಯಿತು. ಕೈಗಾರಿಕಾ ಉತ್ಪಾದನೆ ಮತ್ತು ರಫ್ತುಗಳು ಕುಸಿದಿದ್ದರೂ, ಜಿಡಿಪಿ ಅಂಕಿ–ಅಂಶಗಳು ಮಾತ್ರ ಉತ್ಪಾದನಾ ವಲಯದಲ್ಲಿ ದೊಡ್ಡ ಪ್ರಮಾಣದಲ್ಲಿ ಏರಿಕೆಯನ್ನು ತೋರಿಸುತ್ತಿದೆ.

ಈ ಸಂಶೋಧನೆಗಳ ಪರಿಣಾಮಗಳೇನು? ಬೆಳವಣಿಗೆಯ ಅಂದಾಜುಗಳು ಕೇವಲ ದೇಶದ ಪ್ರತಿಷ್ಠೆಯ ವಿಷಯವಲ್ಲ, ಇದು ಆರ್ಥಿಕ ನೀತಿಗಳನ್ನು ರೂಪಿಸುವುದಕ್ಕೆ ಬಹುಮುಖ್ಯ ಸಾಧನ. ಜಿಡಿಪಿಯ ಬೆಳವಣಿಗೆಯ ದರ ಕಡಿಮೆಯಾಗಿದೆ ಅನ್ನುವುದನ್ನು ಒಪ್ಪಿಕೊಂಡರೆ, ಕಳೆದ ವರ್ಷಗಳಲ್ಲಿ ಹಣಕಾಸು ಮತ್ತು ವಿತ್ತೀಯ ನೀತಿಗಳೆರಡೂ ಅತಿಯಾಗಿ ಬಿಗಿಯಾಗಿದ್ದವು

ಎನಿಸುತ್ತದೆ. ಉದಾಹರಣೆಗೆ, ಬಡ್ಡಿ ದರಗಳು ಸುಮಾರು 150 ಬೇಸಿಸ್ ಪಾಯಿಂಟ್‌ಗಳಷ್ಟು ಹೆಚ್ಚಿರಬಹುದು. ಭಾರತೀಯ ನೀತಿ ನಿರೂಪಣೆಯ ವಾಹನವನ್ನು ದೋಷಪೂರಿತ, ಬಹುಶಃ ಕೆಟ್ಟುಹೋದ ಸ್ಪೀಡೋಮೀಟರ್‌ನೊಂದಿಗೆ ನಡೆಸಲಾಗುತ್ತಿದೆ.

[ಅನುವಾದಕರ ಟಿಪ್ಪಣಿ: ದೇಶದ ಆರ್ಥಿಕತೆ ಮಂದಗತಿಯಲ್ಲಿದ್ದರೂ, ಜಿಡಿಪಿ ಸಂಖ್ಯೆಗಳು ಅದು ವೇಗವಾಗಿ ಬೆಳೆಯುತ್ತಿದೆ ಎಂದು ತೋರಿಸಿದ್ದರಿಂದ ಆರ್.ಬಿ.ಐ ಬಡ್ಡಿ ದರವನ್ನು ಇಳಿಸಲಿಲ್ಲ. ವಾಸ್ತವ ಅರಿವಿದ್ದರೆ ಬಡ್ಡಿ ದರವನ್ನು ಶೇ. 1.5 ರಷ್ಟು (150 ಪಾಯಿಂಟ್‌ಗಳಷ್ಟು) ಕಡಿಮೆ ಮಾಡಿ ಜನರಿಗೆ ಸಾಲ ಸುಲಭವಾಗಿ ಸಿಗುವಂತೆ ಮಾಡಬಹುದಿತ್ತು.]

ಜೊತೆಗೆ, ಆರ್ಥಿಕತೆಯ ಸ್ಥಿತಿಗೆ ಸಂಬಂಧಿಸಿದಂತೆ ಅಂಕಿಅಂಶಗಳಲ್ಲಿ ನ್ಯೂನತೆಗಳಿದ್ದರೆ, ಸುಧಾರಣೆಗಳು ನಿರೀಕ್ಷಿತ ಫಲ ನೀಡುವುದಿಲ್ಲ. ಸುಧಾರಣೆಯ ವೇಗ ಕುಗ್ಗುತ್ತದೆ. ಜಿಡಿಪಿ ಬೆಳವಣಿಗೆಯ ದರ ಶೇಕಡ 7 ಅಲ್ಲ ಅದು ವಾಸ್ತವವಾಗಿ ಶೇ. 4.5 ಎಂದು ತಿಳಿದಿದ್ದರೆ, ಬ್ಯಾಂಕಿಂಗ್ ವ್ಯವಸ್ಥೆಯನ್ನು ಸುಧಾರಿಸುವ ಅಥವಾ ಕೃಷಿ ಸವಾಲುಗಳನ್ನು ಎದುರಿಸುವ ಕಡೆ ತುರ್ತಾಗಿ ಗಮನಕೊಡಲಾಗುತ್ತಿತ್ತು. ಉದ್ಯೋಗರಹಿತ ಬೆಳವಣಿಗೆಗೆ ಮತ್ತು ಹಣಕಾಸು ವಲಯದ ತೀವ್ರ ಒತ್ತಡಕ್ಕೆ ಬಹುಶಃ ಜಿಡಿಪಿಯ ಮಂದಗತಿಯ ಬೆಳವಣಿಗೆಯೇ ಕಾರಣವಿರಬಹುದು. ನಮ್ಮ ದೇಶದ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿಲ್ಲ, ಬದಲಿಗೆ ಮಂದಗತಿಯಲ್ಲಿ ಸಾಗುತ್ತಿದೆ ಎಂಬ ಸತ್ಯ ನಮಗೆ ಈಗ ತಿಳಿದಿದೆ. ಈ ಸ್ಥಿತಿಯಲ್ಲಿ ಉಚಿತ ಗ್ಯಾಸ್, ಮನೆ ಅಥವಾ ರೈತರ ಆದಾಯದಂತಹ ಉತ್ತಮ ಯೋಜನೆಗಳನ್ನು ದೀರ್ಘಕಾಲ ಮುಂದುವರಿಸಿಕೊಂಡು ಹೋಗುವುದು ಕಷ್ಟವಾಗುತ್ತದೆ.

ಜಿಡಿಪಿ ಅಂದಾಜನ್ನು ಸಂಪೂರ್ಣವಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ತಜ್ಞರನ್ನೊಳಗೊಂಡ ಸ್ವತಂತ್ರ ಕಾರ್ಯಪಡೆಯು ಮರುಪರಿಶೀಲಿಸಬೇಕು. ಹಾಗೆಯೇ ಜಿಎಸ್‌ಟಿ ದತ್ತಾಂಶವನ್ನು ಬಳಸಿ ಭಾರತದಲ್ಲಿ ವೆಚ್ಚ ಆಧಾರಿತ ಜಿಡಿಪಿ ಅಂದಾಜುಗಳನ್ನು ಮಾಡಬಹುದು. ಇದು ಆ ನಿಟ್ಟಿನಲ್ಲಿ ಮೊತ್ತ ಮೊದಲ ಪ್ರಯತ್ನವಾಗುತ್ತದೆ.

ಅಂತಿಮವಾಗಿ, ನಾನು ಮುಖ್ಯ ಆರ್ಥಿಕ ಸಲಹೆಗಾರ (CEA) ಆಗಿದ್ದಾಗ ಈ ಬಗ್ಗೆ ಏನು ಮಾಡಿದೆ ಎಂಬ ಪ್ರಶ್ನೆ ಏಳಬಹುದು. ನನ್ನ ಅಧಿಕಾರಾವಧಿಯಲ್ಲಿ, ನನ್ನ ತಂಡವು ಆರ್ಥಿಕ ದತ್ತಾಂಶಗಳೊಂದಿಗೆ ಸೆಣಸಾಡಬೇಕಾಯಿತು. ನಾವು ಈ ಎಲ್ಲಾ ಅನುಮಾನಗಳನ್ನು ಸರ್ಕಾರದೊಳಗೆ ಆಗಾಗ್ಗೆ ಎತ್ತಿದ್ದೇವೆ ಮತ್ತು ಜುಲೈ 2017ರ ಆರ್ಥಿಕ ಸಮೀಕ್ಷೆಯಲ್ಲಿ ಸಾರ್ವಜನಿಕವಾಗಿ ವ್ಯಕ್ತಪಡಿಸಿದ್ದೇವೆ. ಆದರೆ ಸರ್ಕಾರದಿಂದ ಹೊರಬಂದ ಮೇಲೆ ಸಿಕ್ಕ ಸಮಯ ಮತ್ತು ಮುಕ್ತ ವಾತಾವರಣದಿಂದ ಈ ರೀತಿಯ ಆಳವಾದ ಸಂಶೋಧನೆ ಮಾಡಲು ನನಗೆ ಸಾಧ್ಯವಾಯಿತು. ನಾವು ಈಗ ಈ ಹೊಸ ಸಾಕ್ಷ್ಯಗಳ ಕಡೆಗೆ ಸಾಮೂಹಿಕವಾಗಿ ಹಾಗೂ ರಚನಾತ್ಮಕವಾಗಿ ಹೊರಳಬೇಕಾಗಿದೆ.

The article was originally published in The Indian express

Arvind Subramanian
Economist and former Chief Economic Advisor to the Government of India



ಹೊಸ ಜಿಡಿಪಿ ಅಂದಾಜು– ಸ್ವಾಗತಾರ್ಹ ಕ್ರಮ



ಟಿ. ಎಸ್ ವೇಣುಗೋಪಾಲ್

ಜಿಡಿಪಿಯನ್ನು ಒಂದು ದೇಶದ ಆರ್ಥಿಕತೆಯ ಮಾಪನವನ್ನಾಗಿ ಬಳಸುವ ಬಗ್ಗೆ ವಿವಾದ ಲಾಗಾಯ್ತಿನಿಂದ ಇದೆ. ಮಾನವ ಅಭಿವೃದ್ಧಿ ಸೂಚಿಯಂತಹ ಹಲವು ಪರ್ಯಾಯ ಕ್ರಮಗಳನ್ನು ಸೂಚಿಸಲಾಗಿದೆ. ಆದರೂ ಇಂದಿಗೂ ದೇಶದ ಆರ್ಥಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಜಿಡಿಪಿಯನ್ನೇ ವ್ಯಾಪಕವಾಗಿ ಬಳಸಲಾಗುತ್ತಿದೆ. ಜಿಡಿಪಿ ಗತಿಯನ್ನು ಪರಿಶೀಲಿಸಿ ಅರ್ಥಿಕತೆ ಬೆಳೆಯುತ್ತಿದೆಯೋ ಇಲ್ಲ ಕುಸಿಯುತ್ತಿದೆಯೋ ಅನ್ನುವುದನ್ನು ಅಂದಾಜಿಸಲಾಗುತ್ತದೆ. ಜನರ ಜೀವನಮಟ್ಟವನ್ನು ಅರ್ಥಮಾಡಿಕೊಳ್ಳುವುದಕ್ಕೂ ಇದನ್ನು ಗಮನಿಸಲಾಗುತ್ತದೆ. ಹಾಗಾಗಿ ಸರ್ಕಾರದ ನೀತಿ ನಿರೂಪಕರು, ಉದ್ಯಮಗಳು ಮತ್ತು ಹಣಕಾಸು ಸಂಸ್ಥೆಗಳು ಆರ್ಥಿಕ ಯೋಜನೆಗಳನ್ನು ರೂಪಿಸುವುದಕ್ಕೆ, ಅದರ ಪರಿಣಾಮವನ್ನು ಅರ್ಥಮಾಡಿಕೊಳ್ಳುವುದಕ್ಕೆ ಜಿಡಿಪಿಯನ್ನೇ ಮಾಪನವನ್ನಾಗಿ ಬಳಸುತ್ತಿದ್ದಾರೆ.

ನಮ್ಮ ಸರ್ಕಾರವೂ ಜಿಡಿಪಿಯ ಕಣ್ಣಲ್ಲೇ ದೇಶದ ಆರ್ಥಿಕತೆಯನ್ನು, ಜನರ ಬದುಕನ್ನು ಗ್ರಹಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ ನಮ್ಮ ಜಿಡಿಪಿಯ ಲೆಕ್ಕಾಚಾರದ ಬಗ್ಗೆಯೂ ತೀವ್ರವಾದ ಅನುಮಾನಗಳು, ಟೀಕೆಗಳು ವ್ಯಕ್ತವಾಗಿದ್ದವು. ನಮ್ಮ ಆರ್ಥಿಕತೆಯ ಮುಖ್ಯ ಭಾಗವಾದ ಅಸಂಘಟಿತ ವಲಯದ ಬಗ್ಗೆ ನಮ್ಮಲ್ಲಿ ಸರಿಯಾದ ಮಾಹಿತಿ ಇಲ್ಲ. ಸಂಘಟಿತ ವಲಯದ ಬೆಳವಣಿಗೆಗೆ ಸಂಬಂಧಿಸಿದ ಮಾಹಿತಿಯನ್ನೇ ಅದಕ್ಕೂ ಅನ್ವಯಿಸುತ್ತಿದ್ದೆವು. ಅರ್ಥಿಕತೆಯನ್ನು ಹೋಲಿಸುವುದಕ್ಕೆ ಬಳಸುವ ಆಧಾರ ವರ್ಷ(ಬೇಸ್ ಇಯರ್) ತೀರಾ ಹಳತಾಗಿದೆ. ಕಳೆದ 15ವರ್ಷಗಳಿಂದ ಭಾರತದಲ್ಲಿ 2011–12ನ್ನೇ ಆಧಾರ ವರ್ಷವನ್ನಾಗಿ ಇಟ್ಟುಕೊಳ್ಳಲಾಗಿತ್ತು. ನಮ್ಮಲ್ಲಿ ಜನಗಣತಿಯಾಗಿಲ್ಲ. ನಮ್ಮ ಜನಸಂಖ್ಯೆ ಎಷ್ಟೆಂಬುದೇ ನಮಗೆ ಕರಾರುವಾಕ್ಕಾಗಿ ಗೊತ್ತಿಲ್ಲ. ಹೀಗೆ ಹಲವು ಟೀಕೆಗಳು ಇವೆ.

ಈ ನ್ಯೂನತೆಗಳನ್ನು ಗಮನದಲ್ಲಿಟ್ಟುಕೊಂಡು ಭಾರತದ ಸಾಂಖ್ಯಿಕ ಸಚಿವಾಲಯವು(ಮೊಸ್ಪಿ) ಪರಿಷ್ಕೃತ ಜಿಡಿಪಿ ಅಂದಾಜನ್ನು ಇತ್ತೀಚೆಗೆ ಬಿಡುಗಡೆ ಮಾಡಿದೆ. ಜಿಡಿಪಿ ಅಂದಾಜಿನ ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಉದ್ದೇಶದಿಂದ ಕೆಲವು ಪ್ರಮುಖ ಬದಲಾವಣೆಗಳನ್ನು ಮಾಡಲಾಗಿದೆ. ಮುಖ್ಯವಾಗಿ ಆಧಾರ ವರ್ಷವನ್ನು ಬದಲಿಸಲಾಗಿದೆ. ಈ ಬದಲಾವಣೆ ಅನಿವಾರ್ಯವಾಗಿತ್ತು. ಯಾಕೆಂದರೆ ದಿನಕಳೆದಂತೆ ದೇಶದಲ್ಲಿ ಉತ್ಪಾದನೆಯಾಗುವ ವಸ್ತುಗಳು, ವಸ್ತುಗಳ ಬೆಲೆ, ಜನರು ಖರ್ಚು ಮಾಡುವ ಕ್ರಮ, ಹೂಡಿಕೆಯ ಕ್ರಮ, ತಂತ್ರಜ್ಞಾನದ ಬೆಳವಣಿಗೆ ಹೀಗೆ ಪ್ರತಿಯೊಂದರಲ್ಲೂ ವಿಪರೀತ ಬದಲಾವಣೆಗಳಾಗುತ್ತಿರುತ್ತವೆ. ಹಳೆಯ ವರ್ಷವನ್ನೇ ಆಧಾರವಾಗಿ ಇಟ್ಟುಕೊಂಡರೆ ಇಂದಿನ ಆರ್ಥಿಕತೆಯ ವಾಸ್ತವ ಚಿತ್ರ ತಿಳಿಯುವುದಿಲ್ಲ. ಉದಾಹರಣೆಗೆ, ಇಂದು ಇಡೀ ಆರ್ಥಿಕತೆ ಕಂಪ್ಯೂಟರುಗಳನ್ನು ಬಳಸುತ್ತಿರುವಾಗ, ಟೈಪ್‌ರೈಟರ್‌ಗಳ ಉತ್ಪಾದನೆ ಮತ್ತು ಬೆಲೆಯನ್ನು ನೋಡಿ ಜಿಡಿಪಿ ಲೆಕ್ಕ ಹಾಕುವುದು ಸರಿಯಲ್ಲ. ಹಾಗಾಗಿ ಆಗ್ಗಿಂದಾಗ್ಗೆ ಆಧಾರ ವರ್ಷವನ್ನು ಬದಲಿಸಲಾಗುತ್ತಿರುತ್ತದೆ.

ಆಧಾರ ವರ್ಷದ ಬದಲಾವಣೆ:

ಸ್ವತಂತ್ರ ಭಾರತದ ಇತಿಹಾಸದಲ್ಲಿ ಈ ರೀತಿ ಆಧಾರ ವರ್ಷವನ್ನು ಬದಲಾಯಿಸುತ್ತಿರುವುದು ಇದು ಎಂಟನೇ ಬಾರಿ. ಈಗ 2022–23 ಅನ್ನು ಆಧಾರ ವರ್ಷವಾಗಿ ಆರಿಸಿಕೊಳ್ಳಲಾಗಿದೆ. 2022–23ರಲ್ಲಿ ಕೋವಿಡ್ ಇತ್ಯಾದಿ ಯಾವುದೇ ದೊಡ್ಡ ಏರುಪೇರುಗಳಿಲ್ಲದಿದ್ದ ಕಾರಣ



ಒಂದು ದೇಶದ ಜಿಡಿಪಿಯನ್ನು ಹಲವು ಬಗೆಗಳಲ್ಲಿ ಅಂದಾಜು ಮಾಡಬಹುದು. ದೇಶದ ಆ ವರ್ಷದ ಒಟ್ಟು ಉತ್ಪಾದನೆಯನ್ನು, ಅಥವಾ ಒಟ್ಟು ವರಮಾನವನ್ನು, ಅಥವಾ ಒಟ್ಟಾರೆ ಜನರು ಮಾಡುವ ಖರ್ಚನ್ನು ಆಧರಿಸಿ ಜಿಡಿಪಿಯನ್ನು ಲೆಕ್ಕ ಹಾಕಬಹುದು.

ಅದನ್ನು ಹೋಲಿಕೆಗೆ ಆಧಾರವಾಗಿ ತೆಗೆದುಕೊಳ್ಳಲಾಗಿದೆ ಎನ್ನಲಾಗಿದೆ. ಅಂದರೆ ಇನ್ನು ಮುಂದೆ ತಯಾರಾಗುವ ಸರಕು ಹಾಗೂ ಸೇವೆಗಳನ್ನು ಮತ್ತು ಅವುಗಳನ್ನು ಮಾರುವ ಹಾಗೂ ಕೊಳ್ಳುವ ಬೆಲೆಯನ್ನು 2022–23ರ ಉತ್ಪನ್ನ ಹಾಗೂ ಬೆಲೆಗಳೊಂದಿಗೆ ಹೋಲಿಸಲಾಗುತ್ತದೆ. ಈ ಬದಲಾವಣೆ ಜಿಡಿಪಿಗೆ ಮಾತ್ರ ಸೀಮಿತವಲ್ಲ. 'ಗ್ರಾಹಕ ಬೆಲೆ ಸೂಚ್ಯಂಕ' (ಸಿಪಿಐ) ಮತ್ತು 'ಕೈಗಾರಿಕಾ ಉತ್ಪಾದನಾ ಸೂಚ್ಯಂಕ'(IIP) ಇತ್ಯಾದಿ ಪ್ರಮುಖ ಸೂಚಿಗಳಿಗೂ ಇದೇ ಆಧಾರವಾಗಿರುತ್ತದೆ.

ಸಾಂಖ್ಯಿಕ ಅಂತರ

ಒಂದು ದೇಶದ ಜಿಡಿಪಿಯನ್ನು ಹಲವು ಬಗೆಯಲ್ಲಿ ಅಂದಾಜು ಮಾಡಬಹುದು. ದೇಶದ ಆ ವರ್ಷದ ಒಟ್ಟು ಉತ್ಪಾದನೆಯನ್ನು, ಅಥವಾ ವರಮಾನವನ್ನು, ಅಥವಾ ಒಟ್ಟಾರೆ ಜನರು ಮಾಡುವ ಖರ್ಚನ್ನು ಆಧರಿಸಿ ಜಿಡಿಪಿಯನ್ನು ಲೆಕ್ಕ ಹಾಕಬಹುದು. ಜಿಡಿಪಿಯನ್ನು ಲೆಕ್ಕ ಹಾಕುವುದಕ್ಕೆ ನೇರ ಕ್ರಮ ಅಂದರೆ ಒಂದು ದೇಶ ಒಂದು ನಿರ್ದಿಷ್ಟ ವರ್ಷದಲ್ಲಿ ಉತ್ಪಾದಿಸುವ ಎಲ್ಲದರ ಒಟ್ಟು ಮೌಲ್ಯವನ್ನು ಲೆಕ್ಕ ಹಾಕುವುದು. ಇದು ಒಂದು ವರ್ಷದಲ್ಲಿ ಆರ್ಥಿಕತೆಯ ವಿವಿಧ ವಲಯಗಳು ಸೃಷ್ಟಿಸಿದ ಒಟ್ಟು ಮೌಲ್ಯವನ್ನು ಸೂಚಿಸುತ್ತದೆ. ಇದನ್ನು ಒಟ್ಟು ಮೌಲ್ಯವರ್ಧನೆ ಅಥವಾ ಜಿವಿಎ(ಗ್ರಾಸ್ ವ್ಯಾಲ್ಯೂ ಆಡೆಡ್) ಎಂದು ಕರೆಯುತ್ತಾರೆ.

ಆರ್ಥಿಕತೆಯನ್ನು ನೋಡುವ ಇನ್ನೊಂದು ಕ್ರಮವೆಂದರೆ ವಿಭಿನ್ನ ಜನ ಅಥವಾ ಆರ್ಥಿಕತೆಯ ವಿಭಿನ್ನ ಗುಂಪುಗಳು (ಅದು ವ್ಯಕ್ತಿಗಳಾಗಿರಬಹುದು, ಸರ್ಕಾರವಾಗಿರಬಹುದು ಅಥವಾ ವ್ಯಾಪಾರ ಉದ್ದಿಮೆಗಳಾಗಿರಬಹುದು) ಮಾಡುವ ಎಲ್ಲಾ ಖರ್ಚುಗಳ ಮೊತ್ತವನ್ನು ಲೆಕ್ಕ ಹಾಕುವುದು. ಇದನ್ನು ಜಿಡಿಪಿ ಎಂದು ಕರೆಯುತ್ತಾರೆ. ಇವೆರಡರ ನಡುವಿನ ಸಂಬಂಧವನ್ನು ಕೆಳಗಿನ ಸಮೀಕರಣದ ಮೂಲಕ ವಿವರಿಸಬಹುದು.

ಜಿಡಿಪಿ = ಜಿವಿಎ+ನಿವ್ವಳ ಪರೋಕ್ಷ ತೆರಿಗೆ,

ಇಲ್ಲಿ ನಿವ್ವಳ ಪರೋಕ್ಷ ತೆರಿಗೆ ಅಂದರೆ ಸರ್ಕಾರ ವಿವಿಧ ಸರಕುಗಳ ಮೇಲೆ ಹಾಕುವ ತೆರಿಗೆಯಲ್ಲಿ ಸರ್ಕಾರ ವಿಭಿನ್ನ ಸರಕುಗಳಿಗೆ ಕೊಡುವ ಸಬ್ಸಿಡಿಯನ್ನು ಕಳೆದಾಗ ಬರುವ ಮೊತ್ತ.

ಸೈದ್ಧಾಂತಿಕವಾಗಿ ಇವೆರಡೂ ಸಮನಾಗಿ ಇರಬೇಕು. ಆದರೆ ಮೋಸ್ಟಿ ಹೇಳುವಂತೆ ಎರಡು ಒಂದೇ ಇರುವುದಿಲ್ಲ. ಅವೆರಡರ ನಡುವಿನ ವ್ಯತ್ಯಾಸವನ್ನು ಸಾಂಖ್ಯಿಕ ಅಂತರ (ಸ್ಟಾಟಿಸ್ಟಿಕಲ್ ಡಿಸ್ಕ್ರಿಪೆನ್ಸಿ) ಎಂದು ಕರೆಯಲಾಗಿದೆ. ಹೀಗೆ ವ್ಯತ್ಯಾಸ ಬರುವುದಕ್ಕೆ ಕಾರಣ ಕೆಲವೊಮ್ಮೆ ಖರ್ಚಿಗೆ ಸಂಬಂಧಿಸಿದ ಮಾಹಿತಿಗಳು ಸಮಯಕ್ಕೆ ಸಿಗದೇ ಇರುವುದು. ಉದಾಹರಣೆಗೆ ಒಂದು ಕಾರು ಉತ್ಪಾದನೆಯಾದ ಲೆಕ್ಕ ಸಿಗುತ್ತದೆ. ಅದನ್ನು ಯಾರು ಕೊಂಡರು, ಅಥವಾ ಖರ್ಚಾಗದೆ ಹಾಗೇ ಉಳಿದಿದೆಯೇ ಇತ್ಯಾದಿ ಮಾಹಿತಿಗಳು ತಕ್ಷಣ ಸಿಗದೇ ಇರಬಹುದು. ಹೀಗೆ ಹಲವು ಕಾರಣಗಳಿಂದಾಗಿ ಎರಡರ ನಡುವೆ ವ್ಯತ್ಯಾಸ ಇರುತ್ತದೆ. ಅದನ್ನು ಸರಿಪಡಿಸುವುದಕ್ಕೆ ಉತ್ಪನ್ನ ಸಮತೋಲನ ಸಿದ್ಧಾಂತವನ್ನು ಅನುಸರಿಸಲಾಗಿದೆ. ಅಂದರೆ ಒಟ್ಟು ಪೂರೈಕೆ ಒಟ್ಟು ಬಳಕೆಗೆ ಸಮನಾಗಿರಬೇಕು ಅನ್ನುವ ನಿಯಮವನ್ನು ಅನುಸರಿಸಿ ಎರಡರ ನಡುವೆ ಸಮತೋಲನವನ್ನು ಸ್ಥಾಪಿಸಲು ಪ್ರಯತ್ನಿಸಲಾಗಿದೆ. ಅಂದರೆ ಒಟ್ಟು ಪೂರೈಕೆ (ಉತ್ಪಾದನೆ + ಆಮದು) = ಒಟ್ಟು ಬಳಕೆ (ಖರ್ಚು + ರಫ್ತು) ಆಗಿರುವಂತೆ ನೋಡಿಕೊಳ್ಳಲಾಗುತ್ತದೆ. ಇದಕ್ಕಾಗಿ ಪೂರೈಕೆ ಮತ್ತು ಬಳಕೆ ಕೋಷ್ಟಕದ (SUT) ಮೂಲಕ ಉತ್ಪಾದನೆ, ಆದಾಯ ಮತ್ತು ವೆಚ್ಚದ ಅಂಕಿಅಂಶಗಳನ್ನು ಪರಸ್ಪರ ತಾಳೆ ನೋಡಿ ಸಮತೋಲನಗೊಳಿಸಲು ಪ್ರಯತ್ನಿಸಲಾಗಿದೆ. ಭಾರತದ ಹೊಸ ಜಿಡಿಪಿ ಸರಣಿಯಲ್ಲಿ ಈ SUT ಚೌಕಟ್ಟನ್ನು ವ್ಯವಸ್ಥಿತವಾಗಿ ಬಳಸಲಾಗುತ್ತಿದೆ. ದೇಶದ ಒಟ್ಟು ಪೂರೈಕೆ ಮತ್ತು ಒಟ್ಟು ಬೇಡಿಕೆಯನ್ನು ತಾಳೆ ಮಾಡುವ ಮೂಲಕ ಲೆಕ್ಕಾಚಾರದಲ್ಲಿ ಸ್ಥಿರತೆ ತರಲು ಯತ್ನಿಸಲಾಗುತ್ತಿದೆ.

ಪೂರೈಕೆ ಮತ್ತು ಬಳಕೆ ಕೋಷ್ಟಕಗಳು (Supply and Use Tables - SUT)

ಜಿಡಿಪಿ ಲೆಕ್ಕಾಚಾರದಲ್ಲಿ ಪೂರೈಕೆ ಮತ್ತು ಬಳಕೆ ಕೋಷ್ಟಕಗಳು ಅತ್ಯಂತ ಶಕ್ತಿಯುತವಾದ ಮತ್ತು ವ್ಯವಸ್ಥಿತವಾದ ಸಾಧನಗಳಾಗಿವೆ. ಇವು ಆರ್ಥಿಕತೆಯ ಒಂದು 'ಕನ್ನಡಿ'ಯಂತೆ ಕೆಲಸ ಮಾಡುತ್ತವೆ.

ಸರಳವಾಗಿ ಹೇಳುವುದಾದರೆ, ಈ ಕೋಷ್ಟಕವು ಒಂದು ದೇಶದಲ್ಲಿ ಯಾವೆಲ್ಲಾ ಸರಕು ಮತ್ತು ಸೇವೆಗಳು ಎಲ್ಲಿಂದ ಪೂರೈಕೆಯಾದವು ಮತ್ತು ಎಲ್ಲಿ ಬಳಕೆಯಾದವು ಎಂಬುದನ್ನು ವಿವರಿಸುತ್ತದೆ. ಆರ್ಥಿಕತೆಯ ಪ್ರತಿಯೊಂದು ವಲಯದ (ಉದಾಹರಣೆಗೆ: ಕೃಷಿ, ಕೈಗಾರಿಕೆ, ಸೇವೆ) ಮಾಹಿತಿಗಳನ್ನು ಇದು ಪರಸ್ಪರ ತಾಳೆ ಹಾಕುತ್ತದೆ. ಇದರಲ್ಲಿ ಮುಖ್ಯವಾಗಿ ಎರಡು ಭಾಗಗಳಿರುತ್ತವೆ. ಪೂರೈಕೆ ಕೋಷ್ಟಕ ಹಾಗೂ ಬಳಕೆಯ ಕೋಷ್ಟಕ.

1.**ಪೂರೈಕೆ ಕೋಷ್ಟಕವು** ಆರ್ಥಿಕತೆಗೆ ಸರಕುಗಳು ಎಲ್ಲಿಂದ ಸರಬರಾಜು ಆದವು ಎಂಬುದನ್ನು ದಾಖಲಿಸುತ್ತದೆ. ಇದರಲ್ಲಿ ನಮ್ಮ ದೇಶದ ಒಳಗಿನ ಕೈಗಾರಿಕೆಗಳು ಮತ್ತು ಸಂಸ್ಥೆಗಳು ತಯಾರಿಸಿದ ಉತ್ಪನ್ನಗಳು ಹಾಗೂ ಬೇರೆ ದೇಶಗಳಿಂದ ನಾವು ತರಿಸಿಕೊಂಡ ವಸ್ತುಗಳು ಸೇರಿರುತ್ತವೆ.

ಒಟ್ಟು ಪೂರೈಕೆ = (ದೇಶೀಯ ಉತ್ಪಾದನೆ + ಆಮದುಗಳು + ವ್ಯಾಪಾರ ಮತ್ತು ಸಾರಿಗೆ ವೆಚ್ಚಗಳು + ತೆರಿಗೆಗಳು – ಸಬ್ಸಿಡಿಗಳು).

2.**ಬಳಕೆ ಕೋಷ್ಟಕವು** ಪೂರೈಕೆಯಾದ ಸರಕುಗಳು ಎಲ್ಲಿ ಬಳಕೆಯಾದವು ಎಂಬುದನ್ನು ತೋರಿಸುತ್ತದೆ. ಇಲ್ಲಿ ಬಳಕೆ ಎಂದರೆ ಮಧ್ಯಂತರ ಬಳಕೆ (Intermediate Consumption): ಮತ್ತೊಂದು ವಸ್ತುವಿನ ತಯಾರಿಕೆಗೆ ಬಳಸಬಹುದು. (ಉದಾಹರಣೆಗೆ: ಪೂರೈಕೆಯಾದ ಹಿಟ್ಟನ್ನು ಬ್ರೆಡ್ ತಯಾರಿಸಲು ಬಳಸುವುದು). ಎರಡನೆಯದು ಅಂತಿಮ ಸರಕಾಗಿ ಬಳಸುವುದು. ಮೂರನೆಯದು ರಫ್ತು ಮಾಡಬಹುದು.

ಸಟ್‌ನ (SUT) ಅತ್ಯಂತ ಪ್ರಮುಖ ಕೆಲಸವೆಂದರೆ ಪೂರೈಕೆ ಹಾಗೂ ಬಳಕೆಯ ನಡುವೆ ಸಮತೋಲನ ಸ್ಥಾಪಿಸುವುದು. ಆರ್ಥಿಕ ನಿಯಮದ ಪ್ರಕಾರ ಒಟ್ಟು ಪೂರೈಕೆ ಯಾವಾಗಲೂ ಒಟ್ಟು ಬಳಕೆಗೆ ಸಮನಾಗಿರಬೇಕು. ಒಂದು ವೇಳೆ ಪೂರೈಕೆ ಹೆಚ್ಚಿದ್ದು ಬಳಕೆ ಕಡಿಮೆಯಿದ್ದರೆ, ಆ ವಸ್ತುಗಳು 'ದಾಸ್ತಾನು' ರೂಪದಲ್ಲಿವೆ ಎಂದು ಲೆಕ್ಕ ಹಾಕಲಾಗುತ್ತದೆ. ಒಂದು ವೇಳೆ ಅಂಕಿ–ಅಂಶಗಳಲ್ಲಿ ವ್ಯತ್ಯಾಸವಿದ್ದರೆ (Statistical Discrepancy), ಅದನ್ನು ಎಲ್ಲಿ ತಪ್ಪಾಗಿದೆ ಎಂದು ಹುಡುಕಿ ಸರಿಪಡಿಸಲು ಈ ಕೋಷ್ಟಕಗಳು ಸಹಾಯ ಮಾಡುತ್ತವೆ.

ಜಿಡಿಪಿಯನ್ನು ಲೆಕ್ಕ ಹಾಕುವಾಗ ಇಲ್ಲಿಯವರೆಗೆ ಜಿಡಿಪಿಯನ್ನು ಒಟ್ಟಾರೆ ಉತ್ಪಾದನೆ ಮತ್ತು ಖರ್ಚನ್ನು ಆಧರಿಸಿ ಪ್ರತ್ಯೇಕವಾಗಿ ಲೆಕ್ಕ ಹಾಕಲಾಗುತ್ತಿತ್ತು. ಇವೆರಡರ ನಡುವೆ ದೊಡ್ಡ ವ್ಯತ್ಯಾಸ ಬರುತ್ತಿತ್ತು. ಈಗಿನ ಕ್ರಮದಲ್ಲಿ ಉತ್ಪಾದನೆಯ ಅಂಕಿ–ಅಂಶಗಳು ಮತ್ತು ಖರ್ಚಿನ ಅಂಕಿ–ಅಂಶಗಳನ್ನು ಒಂದೇ ಚೌಕಟ್ಟಿನಲ್ಲಿ ತಂದು ತಾಳೆ ಮಾಡಲಾಗುತ್ತಿದೆ. ಯಾವುದಾದರೂ ಒಂದು ವಲಯದ ಮಾಹಿತಿ ಸಿಗದಿದ್ದರೆ ಬೇರೆ ಮೂಲಗಳಿಂದ ಮಾಹಿತಿಯನ್ನು ಬಳಸಿಕೊಂಡು ಅದನ್ನು ಅಂದಾಜು ಮಾಡಲಾಗುತ್ತದೆ.

ಪರಿಮಾಣಾತ್ಮಕ ವಿಸ್ತರಣಾ ವಿಧಾನ (Volume Extrapolation Method)

ಜಿಡಿಪಿಯನ್ನು ಅಳೆಯುವಾಗ 'ಹಣದುಬ್ಬರ' ಅಥವಾ ಬೆಲೆ ಏರಿಕೆಯ ಪ್ರಭಾವವನ್ನು ತೆಗೆದುಹಾಕಿ, ಕೇವಲ ಉತ್ಪಾದನೆಯಲ್ಲಿ ಎಷ್ಟು ಏರಿಕೆಯಾಗಿದೆ ಎಂದು ತಿಳಿಯುವುದು ಬಹಳ ಮುಖ್ಯ. ಇದನ್ನು ಮಾಡಲು ಸಾಮಾನ್ಯವಾಗಿ 'ಡಿಫ್ಲೇಷನ್' ಕ್ರಮ ಬಳಸುತ್ತಾರೆ. ಆದರೆ, ಬೆಲೆಗಳ ನಿಖರವಾದ ಸೂಚ್ಯಂಕ ಲಭ್ಯವಿಲ್ಲದಿದ್ದಾಗ, ಈ 'ಪರಿಮಾಣಾತ್ಮಕ ವಿಸ್ತರಣಾ ವಿಧಾನ'ವನ್ನು ಬಳಸಲಾಗುತ್ತದೆ.

ಹೆಸರೇ ಸೂಚಿಸುವಂತೆ, ಇಲ್ಲಿ ಉತ್ಪಾದನೆಯ ಪ್ರಮಾಣ ಅಥವಾ ಗಾತ್ರವನ್ನು ಆಧಾರವಾಗಿ ತೆಗೆದುಕೊಳ್ಳಲಾಗುತ್ತದೆ. ಮೊದಲು ಆಧಾರ ವರ್ಷದಲ್ಲಿ ಒಂದು ನಿರ್ದಿಷ್ಟ ವಲಯದ ಒಟ್ಟು ಮೌಲ್ಯ ಎಷ್ಟಿತ್ತು ಎಂಬುದನ್ನು ಲೆಕ್ಕ ಹಾಕಲಾಗುತ್ತದೆ. ಆ ವಲಯದ ಬೆಳವಣಿಗೆಯನ್ನು ಅಳೆಯಲು ಒಂದು ಭೌತಿಕ ಸೂಚಿಯನ್ನು ಆಯ್ಕೆಮಾಡಿಕೊಳ್ಳಲಾಗುತ್ತದೆ. ಉದಾಹರಣೆಗೆ: ರೈಲ್ವೆ ವಲಯದಲ್ಲಿ ಬೆಳವಣಿಗೆಯನ್ನು ಅಳೆಯುವುದಕ್ಕೆ ಸಾಗಿಸಿದ ಸರಕಿನ ಪ್ರಮಾಣ ಅಥವಾ ಪ್ರಯಾಣಿಕರ ಸಂಖ್ಯೆಯನ್ನು ಸೂಚಿಯಾಗಿ ತೆಗೆದುಕೊಳ್ಳಬಹುದು. ಇದನ್ನು ಆಧರಿಸಿ ಮುಂದಿನ ವರ್ಷದಲ್ಲಿ ಉತ್ಪಾದನೆಯ ಪ್ರಮಾಣದಲ್ಲಿ ಆಗಿರುವ ಬೆಳವಣಿಗೆಯನ್ನು ಲೆಕ್ಕ ಹಾಕಲಾಗುತ್ತದೆ. ಉದಾಹರಣೆಗೆ ಪ್ರಯಾಣಿಕರ ಸಂಖ್ಯೆ ಎಷ್ಟು ಜಾಸ್ತಿಯಾಗಿದೆ ಎನ್ನುವುದನ್ನು ಲೆಕ್ಕ ಹಾಕಲಾಗುತ್ತದೆ. ಅದರಲ್ಲಿ 5% ಏರಿಕೆಯಾಗಿದ್ದರೆ ರೈಲ್ವೆ ವಲಯದ ಮೌಲ್ಯ ಆ ವರ್ಷ ಶೇಕಡ 5ರಷ್ಟು ಹೆಚ್ಚಾಗಿದೆ ಎಂದು ನಿರ್ಧರಿಸಲಾಗುತ್ತದೆ. ಉತ್ಪಾದನಾ ಬೆಲೆ ಸೂಚ್ಯಂಕ ಲಭ್ಯವಿಲ್ಲದ ಸೇವಾ ವಲಯಗಳಂತಹ ಕಡೆಗಳಲ್ಲಿ ಇದನ್ನು ಬಳಸಲಾಗುತ್ತಿದೆ.

ಡಬಲ್ ಡಿಫ್ಲೇಷನ್:


ಈಗಿನ ಜಿಡಿಪಿ ಅಂದಾಜು ಮಾಡುವ ಕ್ರಮದಲ್ಲಿ ಇನ್ನೊಂದು ಸುಧಾರಣೆ ಅಂದರೆ ಡಬಲ್ ಡಿಫ್ಲೇಷನ್ ಕ್ರಮದ ಬಳಕೆ. ಇದಕ್ಕಾಗಿ ಹಲವು ಅರ್ಥಶಾಸ್ತ್ರಜ್ಞರು ಒತ್ತಾಯಿಸುತ್ತಲೇ ಇದ್ದರು.

ಏನಿದು ಡಬಲ್ ಡಿಫ್ಲೇಷನ್ ಕ್ರಮ?

ಜಿಡಿಪಿಯನ್ನು ಅಂದಾಜು ಮಾಡುವುದಕ್ಕೆ ದೇಶದಲ್ಲಿ ತಯಾರಾದ ಒಟ್ಟಾರೆ ಉತ್ಪನ್ನಗಳ ಮಾರುಕಟ್ಟೆ ಬೆಲೆಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಹೀಗೆ ಮಾರುಕಟ್ಟೆ ಮೌಲ್ಯದಲ್ಲಿ ಲೆಕ್ಕ ಹಾಕಿದ ಜಿಡಿಪಿಯನ್ನು ನಾಮಿನಲ್ ಜಿಡಿಪಿ ಎನ್ನಲಾಗುತ್ತದೆ. ಇದರ ಸಮಸ್ಯೆ ಅಂದರೆ ಒಟ್ಟಾರೆ ಉತ್ಪನ್ನ ಅಷ್ಟೇ ಇದ್ದರೂ ಉತ್ಪಾದನೆಯಾದ ಸರಕುಗಳ ಬೆಲೆಗಳಲ್ಲಿ ಏರಿಕೆಯಾದರೆ ಜಿಡಿಪಿಯಲ್ಲಿ ಏರಿಕೆಯಾಗುತ್ತದೆ. ಆದರೆ ವಾಸ್ತವದಲ್ಲಿ ಉತ್ಪಾದನೆಯಲ್ಲಿ ಹೆಚ್ಚಳವಾಗಿರುವುದಿಲ್ಲ. ಅವುಗಳ ಬೆಲೆಗಳಲ್ಲಿ ಮಾತ್ರ ಏರಿಕೆಯಾಗಿರುತ್ತದೆ. ಅದರಿಂದ ನೈಜ ಜಿಡಿಪಿಯನ್ನು ಲೆಕ್ಕ ಹಾಕುವುದಕ್ಕೆ ನಾಮಿನಲ್ ಜಿಡಿಪಿಯಿಂದ ಹಣದುಬ್ಬರದ ದರವನ್ನು ಕಳೆಯಲಾಗುತ್ತದೆ. ಹೀಗೆ ಹಣದುಬ್ಬರದ ಪರಿಣಾಮವನ್ನು ತೆಗೆಯುವ ಪ್ರಕ್ರಿಯೆಯನ್ನು ಡಿಫ್ಲೇಷನ್ ಎಂದು ಕರೆಯುತ್ತಾರೆ. ಹೀಗೆ ಹಣದುಬ್ಬರದ ಪರಿಣಾಮವನ್ನು ಕಳೆದು ಅಂದಾಜು ಮಾಡಿದ ನೈಜ ಜಿವಿಎ ನಿಜವಾಗಿ ಉತ್ಪಾದನಾ ಪ್ರಕ್ರಿಯೆಯಿಂದಾಗಿ ಹೆಚ್ಚುವರಿಯಾಗಿ ಸೇರ್ಪಡೆಯಾದ ಮೌಲ್ಯವನ್ನು ಅಥವಾ ಮೌಲ್ಯವರ್ಧನೆಯನ್ನು ತೋರಿಸುತ್ತದೆ.

ಈವರೆಗೂ ಅಂತಿಮ ಉತ್ಪನ್ನದ ಬೆಲೆಯ ಪರಿಣಾಮವನ್ನು ಮಾತ್ರ ಸರಿತೂಗಿಸುವ ಕೆಲಸ ಮಾಡಲಾಗುತ್ತಿತ್ತು. ಅಂದರೆ ಕೇವಲ ಅಂತಿಮ ಉತ್ಪನ್ನದ ಮೌಲ್ಯದಿಂದ ಮಾತ್ರ ಹಣದುಬ್ಬರದ ದರವನ್ನು ಕಳೆಯಲಾಗುತ್ತಿತ್ತು. ಇದನ್ನು ಸಿಂಗಲ್ ಡಿಫ್ಲೇಷನ್ ಎಂದು ಕರೆಯಲಾಗುತ್ತದೆ. ಇದರ ಸಮಸ್ಯೆಯೆಂದರೆ ಉತ್ಪಾದನೆ ಅಷ್ಟೇ ಇದ್ದು ಉತ್ಪಾದನೆಗೆ ಬಳಸುವ ಕಚ್ಚಾಪದಾರ್ಥಗಳ ಬೆಲೆ ಕಡಿಮೆಯಾದರೂ ಜಿಡಿಪಿ ಹೆಚ್ಚಾದಂತೆ ತೋರುತ್ತಿತ್ತು. ಹಲವು ಅರ್ಥಶಾಸ್ತ್ರಜ್ಞರು ಜಿಡಿಪಿ ಹೆಚ್ಚಳಕ್ಕೆ ಇದನ್ನೇ ಕಾರಣ ಎಂದು ಟೀಕಿಸಿದ್ದರು.
ಕಚ್ಚಾವಸ್ತುಗಳ ಮತ್ತು ಸಿದ್ದಪಡಿಸಿದ ವಸ್ತುಗಳ ಬೆಲೆಗಳು ಒಂದೇ ಪ್ರಮಾಣದಲ್ಲಿ ಬದಲಾಗುವುದಿಲ್ಲ. ಆದ್ದರಿಂದ ಇವೆರಡರ ಮೌಲ್ಯಗಳನ್ನು ಅವುಗಳ ಬೆಲೆಗೆ ಅನುಗುಣವಾಗಿ ಪ್ರತ್ಯೇಕವಾಗಿ ಹೊಂದಿಸುವುದು ಹೆಚ್ಚು ಸಮರ್ಪಕ ಕ್ರಮ. ಇದನ್ನು ಡಬಲ್ ಡಿಫ್ಲೇಷನ್ ಎನ್ನಲಾಗುತ್ತದೆ.

ಡಿಫ್ಲೇಷನ್ ಮಾಡುವುದಕ್ಕೆ ಉತ್ಪಾದನಾ ಬೆಲೆಯ ಸೂಚ್ಯಂಕ ಬೇಕು. ಆದರೆ ಕೆಲವು ಕ್ಷೇತ್ರಗಳಲ್ಲಿ, ಉದಾಹರಣೆಗೆ ಸೇವಾವಲಯದಲ್ಲಿ ಉತ್ಪಾದನಾ ಬೆಲೆ ಸೂಚ್ಯಂಕ ಸಿಗುವುದಿಲ್ಲ. ಹಾಗಾಗಿ ದತ್ತಾಂಶ ಲಭ್ಯವಿರುವ ಕೃಷಿ ಮತ್ತು ಉತ್ಪಾದನಾ ವಲಯಗಳಲ್ಲಿ ಈ ವಿಧಾನವನ್ನು ಬಳಸಬಹುದು. ಈಗ ಪರಿಷ್ಕೃತ ಅಂದಾಜಿನಲ್ಲಿ ಮಾಹಿತಿ ಲಭ್ಯವಿರುವ ಕಡೆಗಳಲ್ಲಿ ಈ ಕ್ರಮವನ್ನು ಬಳಸಲಾಗಿದೆ. ಉತ್ಪಾದನಾ ಬೆಲೆ ಸೂಚ್ಯಂಕ ಲಭ್ಯವಿಲ್ಲದ ಇತರ ವಲಯಗಳಲ್ಲಿ ತಯಾರಾದ ಒಟ್ಟು ಸರಕು ಹಾಗೂ ಸೇವೆಗಳ ಪ್ರಮಾಣವನ್ನು ಆಧರಿಸಿ ಇದನ್ನು ಅಂದಾಜು ಮಾಡಲಾಗಿದೆ. ಜೊತೆಗೆ ಈ ಪರಿಷ್ಕೃತ ಕ್ರಮದಲ್ಲಿ ಇನ್ನೂ ಒಂದು ಬದಲಾವಣೆಯನ್ನು ಮಾಡಲಾಗಿದೆ. ಇದಕ್ಕೆ ಮೊದಲು ಹಲವು ಪದಾರ್ಥಗಳನ್ನು ಕ್ರೋಡೀಕರಿಸಿ ಅವುಗಳ ಬೆಲೆ ಸೂಚ್ಯಂಕವನ್ನು ಒಟ್ಟಾರೆಯಾಗಿ



ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಉದಾಹರಣೆಗೆ ಆಹಾರ ಪದಾರ್ಥಗಳ ಬೆಲೆ ಏರಿಕೆಯನ್ನು ಹೊಂದಿಸುವಾಗ ಎಲ್ಲಾ ಆಹಾರ ಪದಾರ್ಥಗಳ ಬೆಲೆಗಳನ್ನು ಕ್ರೋಡೀಕರಿಸಿ ತಯಾರಿಸಿದ ಸೂಚಿಯನ್ನು ಬಳಸಲಾಗುತ್ತಿತ್ತು. ಈಗ ಪ್ರತಿಯೊಂದು ಪದಾರ್ಥಗಳನ್ನು ಪ್ರತ್ಯೇಕವಾಗಿ ಗಣನೆಗೆ ತೆಗೆದುಕೊಂಡು ಜಿಡಿಪಿಯನ್ನು ಅದಕ್ಕೆ ಅನುಗುಣವಾಗಿ ಹೊಂದಿಸಲಾಗುತ್ತಿದೆ. ಈಗ 260ಕ್ಕೂ ಹೆಚ್ಚು ವಸ್ತುಗಳ ಮಟ್ಟದಲ್ಲಿ ಬೆಲೆ ಸೂಚ್ಯಂಕಗಳನ್ನು–ಸಿಪಿಐ ಬಳಸುವ ಮೂಲಕ ಅತ್ಯಂತ ಸೂಕ್ಷ್ಮವಾಗಿ ಬೆಲೆ ಬದಲಾವಣೆಯನ್ನು ಅಳೆಯಲಾಗುತ್ತಿದೆ.

ಮಾಹಿತಿ ಸಂಗ್ರಹಣೆಗೆ ಹೊಸ ಹಾಗೂ ಪರಿಷ್ಕೃತ ಮೂಲಗಳ ಬಳಕೆ:

ಈವರೆಗೆ ಜಿಡಿಪಿ ಲೆಕ್ಕಾಚಾರಕ್ಕೆ ಬೇಕಾದ ನಿಖರವಾದ ಮಾಹಿತಿ ಸಿಗುತ್ತಿರಲಿಲ್ಲ. ಆ ಸಮಸ್ಯೆಯನ್ನು ಮೀರಿಕೊಳ್ಳುವುದಕ್ಕೆ ಹೊಸ ಹಾಗೂ ಪರಿಷ್ಕೃತ ಮೂಲಗಳನ್ನು ಬಳಸಲಾಗುತ್ತಿದೆ. ನಿಯತಕಾಲಿಕ ಕಾರ್ಮಿಕ ಶಕ್ತಿ ಸಮೀಕ್ಷೆ (PLFS) ಮತ್ತು ಅಸಂಘಟಿತ ವಲಯದ ಉದ್ಯಮಗಳ ವಾರ್ಷಿಕ ಸಮೀಕ್ಷೆಗಳಿಂದ (ASUSE) ಮಾಹಿತಿಯನ್ನು ತೆಗೆದುಕೊಳ್ಳಲಾಗುತ್ತಿದೆ. ಜೊತೆಗೆ ಹಲವಾರು ಸಚಿವಾಲಯಗಳ ಆಡಳಿತಾತ್ಮಕ ದತ್ತಾಂಶಗಳನ್ನು ಬಳಸಲಾಗಿದೆ. ಪಿಎಲ್‌ಎಫ್ ಸಮೀಕ್ಷೆಯು ಕಾರ್ಮಿಕರಿಗೆ ಸಂಬಂಧಿಸಿದ ಮಾಹಿತಿಯನ್ನು ಹಾಗೂ ಅಸ್ಯುಸ್ ಅಸಂಘಟಿತ ವಲಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡುತ್ತದೆ. ಮತ್ತು ಈ ಸಮೀಕ್ಷೆಗಳೂ ಪ್ರತಿವರ್ಷ ನಡೆಯುವುದರಿಂದ ಗುಣಮಟ್ಟದ ಅಂಕಿಅಂಶಗಳು ದೊರೆಯಬಹುದು. ಮತ್ತು ಜಿಡಿಪಿ ಅಂದಾಜೂ ಹೆಚ್ಚು ನಿಖರವಾಗುವ ಸಾಧ್ಯತೆಯಿದೆ. ಹಿಂದೆ ಅಸಂಘಟಿತ ವಲಯದ ಬೆಳವಣಿಗೆಯನ್ನು ಹಳೆಯ ಸಮೀಕ್ಷೆಗಳನ್ನು ಅಥವಾ ಇತರ ಪರ್ಯಾಯ ಸೂಚಿಗಳನ್ನು ಬಳಸಿ ಅಂದಾಜು ಮಾಡಲಾಗುತ್ತಿತ್ತು. ಆದರೆ ಈಗ ಸಮೀಕ್ಷೆಗಳ ಮೂಲಕ ಪ್ರತಿವರ್ಷ ಮಾಹಿತಿ ಸಂಗ್ರಹಿಸುತ್ತಿರುವುದರಿಂದ ಅನೌಪಚಾರಿಕ ವಲಯಕ್ಕೆ ಸಂಬಂಧಿಸಿದಂತೆ ಹೆಚ್ಚು ನಿಖರವಾದ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಸಾಧ್ಯವಾಗುತ್ತದೆ. ಜೊತೆಗೆ ಜಿಎಸ್‌ಟಿ ಮತ್ತು ಡಿಜಿಟಲ್ ವಹಿವಾಟಿನ ದತ್ತಾಂಶಗಳನ್ನು ಬಳಸಿಕೊಳ್ಳುವ ಪ್ರಯತ್ನದಿಂದಾಗಿ ಅಸಂಘಟಿತ ವಲಯದ ಪರಿಸ್ಥಿತಿಯನ್ನು ಹೆಚ್ಚು ನಿಖರವಾಗಿ ತಿಳಿಯಬಹುದು.

ಕಂಪೆನಿಗಳ ವಿವಿಧ ಚಟುವಟಿಕೆಗಳ ಕಂಪನಿಗಳ ಪ್ರತ್ಯೇಕ ವರ್ಗೀಕರಣ:

ಮತ್ತೊಂದು ಪ್ರಮುಖ ಬದಲಾವಣೆ ಅಂದರೆ ಈವರೆಗೆ ಒಂದು ಕಂಪೆನಿ ಹಲವು ಕ್ಷೇತ್ರಗಳಲ್ಲಿ ವ್ಯವಹಾರ ನಡೆಸುತ್ತಿದ್ದಾಗ ಅದರ ಸಂಪೂರ್ಣ ಲಾಭವನ್ನು ಅದರ ಪ್ರಮುಖ ಕ್ಷೇತ್ರದ ಅಡಿಯಲ್ಲಿ ಲೆಕ್ಕ ಹಾಕಲಾಗುತ್ತಿತ್ತು. ಉದಾಹರಣೆಗೆ ಹೋಟೆಲ್ ನಡೆಸುತ್ತಿದ್ದ ಕಂಪೆನಿಯೊಂದು ಸಾಫ್ಟ್‌ವೇರನ್ನು ಉತ್ಪಾದಿಸುತ್ತಿದ್ದರೆ ಅದರ ಲಾಭವನ್ನು ಹೋಟೆಲ್ ಉದ್ದಿಮೆಯಲ್ಲಿ ದಾಖಲಿಸಲಾಗುತ್ತಿತ್ತು. ಈಗ ಆ ಕಂಪೆನಿಯು ಪ್ರತಿ ಕ್ಷೇತ್ರದಿಂದ ಗಳಿಸುವ ಲಾಭವನ್ನು ಪ್ರತ್ಯೇಕವಾಗಿ ಲೆಕ್ಕ ಹಾಕಲಾಗುತ್ತದೆ.

ಈ ಎಲ್ಲಾ ಬದಲಾವಣೆಗಳಿಂದ ಜಿಡಿಪಿ ಹೆಚ್ಚು ನಿಖರವಾಗುತ್ತದೆ, ಇದರಿಂದ ಯಾವ ವಲಯ ಕುಸಿಯುತ್ತಿದೆ ಮತ್ತು ಯಾವ ವಲಯ ಬೆಳೆಯುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ಜಿಡಿಪಿಯನ್ನು ಕುರಿತಂತೆ ಹೊಸ ಅಂದಾಜು

ಹೊಸ ವಿಧಾನವನ್ನು ಮತ್ತು ದತ್ತಾಂಶವನ್ನು ಬಳಸಿ ಮಾಡಿರುವ ಅಂದಾಜನ್ನು ಮೊಸ್ಪಿ ಪ್ರಕಟಿಸಿದೆ. ಈಗ ಪ್ರಕಟವಾಗಿರುವ ಪರಿಷ್ಕೃತ ಜಿಡಿಪಿ ಅಂದಾಜು ಹಳೆಯ ಜಿಡಿಪಿಗೆ ಹೋಲಿಸಿದರೆ 2022ರಿಂದ 2025ರ ಅವಧಿಯಲ್ಲಿ ಮೊದಲಿಗಿಂತ ಸುಮಾರು 3%ರಿಂದ 3.8%ರಷ್ಟು ಕಡಿಮೆಯಾಗಿದೆ. ಅಂದರೆ ಆರ್ಥಿಕತೆಯ ಗಾತ್ರ ನಿರೀಕ್ಷೆಗಿಂತ ಕಡಿಮೆ ಇದೆ. ಹೊಸ ಸರಣಿಯ ದತ್ತಾಂಶದ ಪ್ರಕಾರ, 2025–26ರಲ್ಲಿ ಭಾರತದ ಆರ್ಥಿಕತೆಯ ಗಾತ್ರವು 345.47 ಲಕ್ಷ ಕೋಟಿ ರೂಪಾಯಿ ಆಗುವ ನಿರೀಕ್ಷೆಯಿದೆ. ಇದು ಹಳೆಯ ಸರಣಿಯ ಆಧಾರದ ಮೇಲೆ ನೀಡಲಾಗಿದ್ದ ಮೊದಲ ಮುಂಗಡ ಅಂದಾಜಿಗಿಂತ ಸುಮಾರು ಶೇ. 3.3ರಷ್ಟು ಚಿಕ್ಕದಾಗಿದೆ.

ತಾತ್ವಿಕವಾಗಿ ಹೇಳುವುದಾದರೆ ಆಧಾರವರ್ಷ ಬದಲಾದರೆ ಜಿಡಿಪಿಯ ಪ್ರಮಾಣದಲ್ಲಿ ಬದಲಾವಣೆಯಾಗಬಾರದು. ಯಾಕೆಂದರೆ ಅಂದಾಜು ಮಾಡುತ್ತಿರುವ ಅರ್ಥಿಕತೆ ಅದೇ ಇರುತ್ತದೆ. ಹೊಸ ಮಾಹಿತಿ ಸಿಗುವುದರಿಂದ, ವಿಧಾನದಲ್ಲಿ ಸುಧಾರಣೆ ಆಗುವುದರಿಂದ ಆರ್ಥಿಕತೆಯ ಗಾತ್ರ ಹಿಗ್ಗಬಹುದು. ಕಡಿಮೆಯಾಗಿರುವುದರ ಬಗ್ಗೆ ಹಲವರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಬಹುಶಃ ಹಿಂದಿನ ಜಿಡಿಪಿಯ ಅಂದಾಜು ಜಿಡಿಪಿಯ ಗಾತ್ರವನ್ನು ಉತ್ಪ್ರೇಕ್ಷೆಗೊಳಿಸಿದೆ ಅನ್ನುವ ಟೀಕೆಯನ್ನು ಇದು ಸಮರ್ಥಿಸುತ್ತಿದೆಯೇ ಅನ್ನುವ ಅನುಮಾನವನ್ನು ಅವರು ವ್ಯಕ್ತಪಡಿಸಿದ್ದಾರೆ. ಏನೇ ಇರಲಿ ಇದು ನಮ್ಮ ಆರ್ಥಿಕತೆಯ ಬಗೆಗಿನ ಗ್ರಹಿಕೆಯನ್ನು ಬದಲಿಸುತ್ತದೆ. ನಮ್ಮ ಐದು ಟ್ರಿಲಿಯನ್ ಆರ್ಥಿಕತೆಯ ಕನಸು ಇನ್ನಷ್ಟು ದೂರಕ್ಕೆ ಹೋಗುತ್ತದೆ.

ಇದು ವಿತ್ತೀಯ ಕೊರತೆ, ಸರ್ಕಾರದ ಬಜೆಟ್ ಮತ್ತು ಸಾಲದ ಲೆಕ್ಕಾಚಾರದ ಮೇಲೆ ಪರಿಣಾಮವಾಗುತ್ತದೆ. ಇದರಿಂದ ಸರ್ಕಾರದ ವಿತ್ತೀಯ ಕೊರತೆಯ ಅನುಪಾತ ಹೆಚ್ಚುತ್ತದೆ. ಮುಂದಿನ ದಿನಗಳಲ್ಲಿ ಸಾಲದ ಹೊರೆ ಇಳಿಸುವ ಗುರಿಯ ಮೇಲೂ ಇದು ಪರಿಣಾಮ ಬೀರಲಿದೆ. 2026–27ನೇ ಹಣಕಾಸು ವರ್ಷಕ್ಕೆ ಸಾಲ–ಜಿಡಿಪಿ ಅನುಪಾತವನ್ನು ಶೇ. 55.6 ಎಂದು ನಿಗದಿಪಡಿಸಲಾಗಿತ್ತು, ಆದರೆ ಈಗ ಅದು ಶೇ. 57.5 ರಷ್ಟು (1.9 ಶೇಕಡಾವಾರು ಪಾಯಿಂಟ್ ಹೆಚ್ಚು) ಇರಲಿದೆ. ಇದು 2031ರ ವೇಳೆಗೆ ಆರ್ಥಿಕತೆಯನ್ನು ಸ್ಥಿರಗೊಳಿಸುವ ಹಾದಿಯನ್ನು ಮೊದಲಿದ್ದಕ್ಕಿಂತ ಕಠಿಣವಾಗಿಸಲಿದೆ ಎನ್ನುವ ಅನುಮಾನವೂ ಕೇಳಿ ಬರುತ್ತಿದೆ.

ಜೊತೆಗೆ ಹಳೆಯ ಜಿಡಿಪಿ ಅಂದಾಜಿನ ಬಗ್ಗೆ ಇರುವ ಪ್ರಶ್ನೆಗಳೆಲ್ಲಾ ಪರಿಹಾರಗೊಂಡಿವೆಯೇ ಅನ್ನುವುದೂ ಸ್ಪಷ್ಟವಿಲ್ಲ. ಈ ಎಲ್ಲಾ ಗೊಂದಲಗಳಿಗೆ ಪರಿಹಾರ ಸಿಗಬೇಕಾದರೆ ಪರಿಷ್ಕರಣೆಗೆ ಬಳಕೆಯಾಗಿರುವ ವಿಧಾನದ ಹೆಚ್ಚಿನ ವಿವರಗಳು ಸಿಗಬೇಕು. ಸುಧಾರಣೆಯಾಗಿರುವುದು ಖಂಡಿತಾ ಸ್ವಾಗತಾರ್ಹ. ಅದು ಮುಂದುವರಿದುಕೊಂಡು ಹೋಗಬೇಕು. ಸಮೀಕ್ಷೆಯನ್ನು ಅತಿಯಾಗಿ ಅವಲಂಬಿಸುವುದು ಒಳ್ಳೆಯದಲ್ಲ. ಜನಗಣತಿ ಮತ್ತು ಆರ್ಥಿಕ ಗಣತಿ ನಡೆಸುವುದು ಸಮೀಕ್ಷೆಗಳ ನಿಖರತೆಯ ದೃಷ್ಟಿಯಿಂದಲೂ ಅನಿವಾರ್ಯ. ಸುಮ್ಮನೆ ಜನಸಂಖ್ಯೆ ಶೇಕಡ 0.9ರಷ್ಟು ಹೆಚ್ಚುತ್ತಿದೆ ಎಂದು ಭಾವಿಸಿಕೊಂಡು ಉಳಿದ ಅಂದಾಜುಗಳನ್ನು ಮಾಡುವುದರಿಂದ ದಾರಿತಪ್ಪುವ ಸಾಧ್ಯತೆಯಿದೆ. ಪರಿಷ್ಕೃತ ಜಿಡಿಪಿಯ ಅಂದಾಜಿನ ಕ್ರಮಗಳ ಬಗ್ಗೆ ವಿವರಗಳು ಮತ್ತು ಹಿಂದಿನ ವರ್ಷಗಳ ಅಂದಾಜು ಸಿಕ್ಕ ಮೇಲೆ ಆರ್ಥಿಕತೆಯನ್ನು ಕುರಿತಂತೆ ಹೆಚ್ಚು ಸ್ಪಷ್ಟವಾದ ಚಿತ್ರವನ್ನು ಹೊಂದುವುದಕ್ಕೆ ಸಾಧ್ಯ. ಆದರೂ ಸುಧಾರಣೆಗೆ ತೆಗೆದುಕೊಂಡಿರುವ ಕ್ರಮ ಸ್ವಾಗತಾರ್ಹ. ಇದು ಇಲ್ಲಿಗೆ ನಿಲ್ಲದೆ ಪ್ರತಿ ಐದು ವರ್ಷಕ್ಕೊಮ್ಮೆ ನಡೆಯುತ್ತಾ ಹೋಗುವಂತಾಗಬೇಕು. ಸಮೀಕ್ಷೆಗಳು ನಡೆಸುವ ಸಂಸ್ಥೆಗಳು ಸ್ವಾಯತ್ತವಾಗಿ ಮುಂದುವರಿಯಬೇಕು.

ದತ್ತಾಂಶ ಆಧಾರಿತ ಯುಗದಲ್ಲಿ ನಿರ್ಧಾರಗಳನ್ನು ರೂಪಿಸುವುದು

ಸೌರಭ್ ಗಾರ್ಗ್

ಭಾರತದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು (ಒಥಖು) ಜಿಡಿಪಿಯ ಹೊಸ ಸರಣಿಯ ಅಂಕಿಅಂಶಗಳನ್ನು ಬಿಡುಗಡೆ ಮಾಡಿದೆ. 2022–23ನ್ನು ಮೂಲವರ್ಷವಾಗಿಟ್ಟುಕೊಂಡು ಇದನ್ನು ಲೆಕ್ಕಹಾಕಲಾಗಿದೆ. ಈ ಅಂಕಿಅಂಶಗಳ ಪ್ರಕಾರ, ಮೂಲವರ್ಷವನ್ನು ಪರಿಷ್ಕರಿಸಿದ ಮೇಲೂ ಆರ್ಥಿಕತೆಯ ಬೆಳವಣಿಗೆ ಸದೃಡವಾಗಿಯೇ ಇದೆ. 2023–24 ರಿಂದ 2025–26ರ ಅವಧಿಯಲ್ಲಿ ನೈಜ ಜಿಡಿಪಿ ಬೆಳವಣಿಗೆಯ ದರ ಸರಾಸರಿ 7% ಕ್ಕಿಂತ ಹೆಚ್ಚಿದೆ. ಮತ್ತು ಅಂಕಿತ ಜಿಡಿಪಿ (Nominal GDP) ಬೆಳವಣಿಗೆಯ ದರ 9%ಕ್ಕಿಂತ ಹೆಚ್ಚಿದೆ. ಹಣಕಾಸು ವರ್ಷ 2026ರ ಎರಡನೇ ಮುಂಗಡ ಅಂದಾಜಿನ ಪ್ರಕಾರ, ನೈಜ ಜಿಡಿಪಿ ಶೇಕಡಾ 7.6ರಷ್ಟು ಬೆಳೆದಿದ್ದರೆ, ಅಂಕಿತ ಜಿಡಿಪಿ ಶೇಕಡಾ 8.6ರಷ್ಟು ಹೆಚ್ಚಿದೆ. ಮೂಲ ವರ್ಷವನ್ನು ಪರಿಷ್ಕರಿಸುವಾಗ ಜಿಡಿಪಿ ಲೆಕ್ಕಾಚಾರದ ಕ್ರಮದಲ್ಲೂ ಹಲವಾರು ಬದಲಾವಣೆಗಳನ್ನು ಅಳವಡಿಸಿಕೊಳ್ಳಲಾಗಿದೆ. ದತ್ತಾಂಶ ಸಂಗ್ರಹಕ್ಕೆ ಹೊಸ ಮೂಲಗಳನ್ನು ಬಳಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಈ ಅಂಕಿಅಂಶಗಳ ಮಹತ್ವವು ಇನ್ನೂ ಎದ್ದುಕಾಣುತ್ತದೆ. ಹಣದುಬ್ಬರದ ಪರಿಣಾಮವನ್ನು ಸರಿದೂಗಿಸುವುದಕ್ಕೆ (Deflation) ಹೆಚ್ಚು ಸಂಸ್ಕರಿಸಿದ ವಿಧಾನಗಳ ಅಳವಡಿಕೆ, ವಾರ್ಷಿಕ ಸಮೀಕ್ಷಾ ವರದಿಗಳು ಮತ್ತು ವ್ಯಾಪಕವಾದ ಆಡಳಿತಾತ್ಮಕ ದತ್ತಾಂಶಗಳ ಕ್ರೋಡೀಕರಣದಿಂದ ಆರ್ಥಿಕತೆಯ ಬದಲಾಗುತ್ತಿರುವ ಚಲನಶೀಲತೆಯನ್ನು ಹೆಚ್ಚು ಸ್ಪಷ್ಟವಾಗಿ ಸೆರೆಹಿಡಿಯಲು ಸಾಧ್ಯವಾಗಿದೆ.

ಭಾರತದ ಜಿಡಿಪಿ ಲೆಕ್ಕಾಚಾರದ ವಿಧಾನದ ಬಗ್ಗೆ ವ್ಯಾಪಕವಾದ ಆಸಕ್ತಿಯನ್ನು ವ್ಯಕ್ತಪಡಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿಯೂ ಇದು ಮುಖ್ಯವಾಗುತ್ತದೆ. ಏಕೆಂದರೆ ಲೆಕ್ಕಾಚಾರದ ವಿಧಾನವೇ ಆಗಾಗ್ಗೆ ಆರ್ಥಿಕತೆಯ ಕಾರ್ಯಕ್ಷಮತೆಯ ಬಗೆಗಿನ ಬಹುತೇಕ ಚರ್ಚೆಗಳಲ್ಲಿ ಲೆಕ್ಕಾಚಾರದ ವಿಧಾನದ ಬಗ್ಗೆಯೇ ಪ್ರಧಾನವಾಗಿ ಚರ್ಚಿಸಲಾಗಿದೆ. ಪರಿಷ್ಕೃತ ಜಿಡಿಪಿ ಸಂಖ್ಯೆಗಳು ಕೇವಲ ಅಂಕಿಅಂಶಗಳಲ್ಲ. ಅವು ಅದಕ್ಕಿಂತ ಹೆಚ್ಚಾಗಿ ವಿವಿಧ ಸರ್ಕಾರಿ ಯೋಜನೆಗಳು ನೀತಿಗಳನ್ನು ವಾಸ್ತವದಲ್ಲಿ ಹೇಗೆ ಜಾರಿಗೆ ತರಲಾಗುತ್ತಿದೆ ಮತ್ತು 'ವಿಕಸಿತ ಭಾರತ @ 2047'ರ ವಿಶಾಲ ದೃಷ್ಟಿಕೋನವನ್ನು ಹೇಗೆ ಮುನ್ನಡೆಸಸಲಾಗುತ್ತಿದೆ ಎಂಬುದನ್ನು ಅವು ಪ್ರತಿಬಿಂಬಿಸುತ್ತವೆ.

2023–24ರಿಂದ 2025–26ರ ಅವಧಿಯಲ್ಲಿ ತಯಾರಿಕಾ ವಲಯವು ಸರಾಸರಿ ಶೇಕಡಾ 11ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ಅಂದರೆ 'ಡಬಲ್ ಡಿಫ್ಲೇಷನ್' ಅಂತಹ ಸುಧಾರಿತ ವಿಧಾನಗಳ ಬಳಕೆ ಮತ್ತು ಹೊಸ ದತ್ತಾಂಶ ಮೂಲಗಳ ಅಳವಡಿಕೆಯಿಂದ ಈ ವಲಯದ ನೈಜ ವೇಗವನ್ನು ಹೆಚ್ಚು ಪರಿಣಾಮಕಾರಿಯಾಗಿ ಸೆರೆಹಿಡಿಯಲು ಸಾಧ್ಯವಾಗಿದೆ. ಉತ್ಪಾದನಾ ಆಧಾರಿತ ಪ್ರೋತ್ಸಾಹಕ (PLI) ಯೋಜನೆಯೂ ಸೇರಿದಂತೆ ವಿವಿಧ ಯೋಜನೆಗಳ ಮೂಲಕ ಸರ್ಕಾರವು ಈ ತಯಾರಿಕಾ ವಲಯದ ಬೆಳವಣಿಗೆಯನ್ನು ಸಕ್ರಿಯವಾಗಿ ಉತ್ತೇಜಿಸುತ್ತಿದೆ. ಹೊಸ ಜಿಡಿಪಿ ಸರಣಿಯು ಕೃಷಿ ವಲಯದಲ್ಲಿ ಹೆಚ್ಚಿನ ಬೆಳವಣೆಗೆಯಾಗಿದೆ ಎಂದು ಸೂಚಿಸುತ್ತಿದೆ. ಕೃಷಿ ವಲಯದ ಜಿಡಿಪಿ ಏರಿಕೆಗೆ ಡೀಸೆಲ್ ಬಳಕೆಯಲ್ಲಿ ಇಳಿಕೆಯಾಗಿರುವುದು ಮತ್ತು ಹಣ್ಣು ಹಾಗೂ ತರಕಾರಿಗಳ ವೆಯಟೇಜ್ (ಮೌಲ್ಯವನ್ನು) ಹೆಚ್ಚಿರುವುದು ಮುಖ್ಯ ಕಾರಣವಾಗಿದೆ. ವೆಚ್ಚದ ಒತ್ತಡ ಕಡಿಮೆಯಾಗಿರುವುದು, ಸರ್ಕಾರದ ಪ್ರೇರಣೆಯಿಂದ ರೈತರು ಸೌರಶಕ್ತಿಯನ್ನು ಹೆಚ್ಚಾಗಿ ಬಳಸುತ್ತಿರುವುದು ಮತ್ತು ನೀತಿಗಳು ಹೆಚ್ಚಿನ ಮೌಲ್ಯವರ್ಧಿತ ಕೃಷಿಯನ್ನು ಪ್ರೋತ್ಸಾಹಿಸುತ್ತಿರುವುದು ಇತ್ಯಾದಿ ಬದಲಾವಣೆಗಳು ಸ್ವಾಗತಾರ್ಹ. ಇದರಿಂದ ಕೃಷಿ ಹೆಚ್ಚು ಲಾಭದಾಯಕವಾಗುತ್ತದೆ. ಮತ್ತು ರೈತರ ಆದಾಯ ಸುಧಾರಿಸುತ್ತದೆ. ಅಸಂಘಟಿತ ವಲಯದ ಉದ್ಯಮಗಳ ವಾರ್ಷಿಕ ಸಮೀಕ್ಷೆ (ASUSE) ಮತ್ತು ಕಾಲಿಕ ಕಾರ್ಮಿಕ ಬಲ ಸಮೀಕ್ಷೆಯಂತಹ (ಕಐಈಖ) ಹೊಸ ಸಮಿಕ್ಷೆಗಳಿಂದ ಸಂಗ್ರಹವಾದ ದತ್ತಾಂಶಗಳನ್ನು ಬಳಸುತ್ತಿರುವುದರಿಂದ ಜಿಡಿಪಿ ಅಂದಾಜು ಸ್ವರೂಪ ಬದಲಾಗಿದೆ.

ಮುಖ್ಯವಾಗಿ ಅಸಂಘಟಿತ ವಲಯದ ಪ್ರಾಬಲ್ಯವಿರುವ ವ್ಯಾಪಾರ, ಸಾರಿಗೆ



ಮತ್ತು ಇತರ ಸೇವಾ ವಲಯಗಳಲ್ಲಿ ಈ ಬದಲಾವಣೆಯನ್ನು ಸ್ಪಷ್ಟವಾಗಿ ಕಾಣಬಹುದು. ಹಿಂದೆ ಇಂತಹ ಅಸಂಘಟಿತ ವಲಯದ ಉದ್ಯಮಗಳ ಅಂದಾಜನ್ನು ಲೆಕ್ಕಹಾಕಲು ಪರೋಕ್ಷ ಅಂದಾಜುಗಳನ್ನು ಬಳಸಲಾಗುತ್ತಿತ್ತು. ಆದರೆ ಈಗ ನೇರ ಅಂದಾಜುಗಳನ್ನು ಬಳಸಲಾಗುತ್ತಿದೆ. ಉದಾಹರಣೆಗೆ, ವ್ಯಾಪಾರ, ಹೋಟೆಲ್‌ಗಳು, ಸಾರಿಗೆ ಮತ್ತು ಸಂವಹನ ಉಪ–ವಲಯವು 2023–24 ರಿಂದ 2025–26ರ ಅವಧಿಯಲ್ಲಿ ಸರಾಸರಿ ಶೇಕಡಾ 9ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ಇದಕ್ಕೆ ಸ್ವಲ್ಪಮಟ್ಟಿಗೆ ಉತ್ತಮ ದತ್ತಾಂಶದ ಬಳಕೆ ಕಾರಣ. ASUSE ಮತ್ತು PLFSನಂತಹ ಸಮೀಕ್ಷೆಗಳಿಂದಾಗಿ ಈಗ ಅಸಂಘಟಿತ ವಲಯ ಮತ್ತು ಕಾರ್ಮಿಕರ ಉತ್ಪಾದಕತೆಯ ಬಗ್ಗೆ ಹೆಚ್ಚು ಸ್ಪಷ್ಟವಾದ ಚಿತ್ರ ಕಾಣುತ್ತಿದೆ. ಈಗ ಅಸಂಘಟಿತ ವಲಯದ ಬೆಳವಣಿಗೆಯನ್ನು ಹೆಚ್ಚು ನಿಖರವಾಗಿ ಗುರುತಿಸಬಹುದು. ಅದೇ ರೀತಿ, ನವೀಕರಿಸಿದ ದತ್ತಾಂಶ ಮೂಲಗಳನ್ನು ಬಳಸಿರುವುದರಿಂದ ಮನೆ ಹೊಂದಿರುವವರ ಸಂಖ್ಯೆಯಲ್ಲಿ ಏರಿಕೆಯಾಗಿರುವುದು ತಿಳಿಯುತ್ತಿದೆ. ಇದಕ್ಕೆ ಸರ್ಕಾರ ಅಗ್ಗದ ದರದಲ್ಲಿ ವಸತಿ ಕಲ್ಪಿಸುವ ಯೋಜನೆಗಳನ್ನು ರೂಪಿಸಿದ್ದು ಕಾರಣ. 'ಡಿಜಿಟಲ್ ಇಂಡಿಯಾ'ದಂತಹ ಸರ್ಕಾರಿ ಯೋಜನೆಗಳ ಮೂಲಕ ಹೊಸ ಡಿಜಿಟಲ್ ದತ್ತಾಂಶಗಳು ಲಭ್ಯವಿದೆ. ಈ ದತ್ತಾಂಶಗಳೂ ಜಿಡಿಪಿ ಅಂದಾಜು ಮಾಡುವ ಪ್ರಕ್ರಿಯೆಗೆ ನೆರವಾಗಿವೆ.

ಇ–ವಾಹನ (e-Vahan), ಎಂಜಿಟಿ–7 (ಒಊಖಿ–7) ಕಾರ್ಪೊರೇಟ್ ರಿಟರ್ನ್ಸ್, ಜಿಎಸ್‌ಟಿ (ಉಖಖಿ) ದತ್ತಾಂಶ ಮತ್ತು ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆಯ (PFMS) ದತ್ತಾಂಶಗಳು ಈಗ ನೇರವಾಗಿ ರಾಷ್ಟ್ರೀಯ ಲೆಕ್ಕಪತ್ರಕ್ಕೆ ಮಾಹಿತಿ ಒದಗಿಸುತ್ತವೆ. ಜಿಎಸ್‌ಟಿ ದತ್ತಾಂಶವು ವಿಶೇಷವಾಗಿ ತ್ರೈಮಾಸಿಕ ಅಂದಾಜುಗಳನ್ನು ಚುರುಕುಗೊಳಿಸಿದೆ ಮತ್ತು ಇದರಿಂದ ರಾಜ್ಯವಾರು ಹಂಚಿಕೆಗಳಲ್ಲಿ ಸುಧಾರಣೆಯಾಗುತ್ತದೆ. ಜಿಡಿಪಿ ಅಂದಾಜು ಈಗ ಹೆಚ್ಚು ನಿಖರವಾಗಿದೆ. ಮತ್ತು ಆಂತರಿಕವಾಗಿ ಹೆಚ್ಚು ವ್ಯವಸ್ಥಿತವಾದ ವ್ಯವಸ್ಥೆ ರೂಪುಗೊಂಡಿದೆ. ಜಿಡಿಪಿ ಅಂದಾಜಿನ ನಿಖರತೆಯನ್ನು ಹೆಚ್ಚಿಸಲು ಆಡಳಿತಾತ್ಮಕ ದತ್ತಾಂಶವನ್ನು ಹೊಸ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ಈ ಕ್ರಮವು 'ಸಂಪೂರ್ಣ ಸರ್ಕಾರಿ ವಿಧಾನ'ದಲ್ಲಿ ಆಗಿರುವ ಬದಲಾವಣೆಯನ್ನು ತೋರಿಸುತ್ತದೆ. ಆಡಳಿತಾತ್ಮಕ ದತ್ತಾಂಶಗಳನ್ನು ಸಚಿವಾಲಯವು ಕೇವಲ ಜಿಡಿಪಿ ಲೆಕ್ಕಾಚಾರಕ್ಕೆ ಬಳಸಿಕೊಳ್ಳುತ್ತಿಲ್ಲ. ದೇಶಾದ್ಯಂತ ತೆಗೆದುಕೊಳ್ಳುತ್ತಿರುವ ನಿರ್ಧಾರಗಳ ಪರಿಣಾಮಕಾರಿತ್ವವನ್ನು ಪರಿಶೀಲಿಸಿ ನೋಡಲು ಆಡಳಿತಾತ್ಮಕ ದತ್ತಾಂಶಗಳನ್ನು ಹೆಚ್ಚೆಚ್ಚು ಬಳಸಿಕೊಳ್ಳುವ ವಿಶಾಲವಾದ ಗುರಿಯನ್ನು ಇಟ್ಟುಕೊಂಡಿದೆ. ದತ್ತಾಂಶದ ಗುಣಮಟ್ಟವನ್ನು, ಅದರ ತುಲನಾತ್ಮಕತೆಯನ್ನು ಮತ್ತು ಪರಸ್ಪರ ಕಾರ್ಯಸಾಧ್ಯತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ರಾಷ್ಟ್ರ ಮಟ್ಟದಲ್ಲಿ ಮತ್ತು ರಾಜ್ಯಗಳ ಮಟ್ಟದಲ್ಲಿ ಸ್ಥಿರತೆ ಮತ್ತು ಪರಿಣಾಮಕಾರಿ ಬಳಕೆಯನ್ನು ಖಚಿತಪಡಿಸಿಕೊಳ್ಳಲು ರಾಜ್ಯಗಳೊಂದಿಗೆ ನಿಕಟ ಸಂಪರ್ಕವಿಟ್ಟುಕೊಳ್ಳಲಾಗುತ್ತಿದೆ. ಇದು ದತ್ತಾಂಶಗಳನ್ನು ಆಧರಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಕಾಲ. ಇಂತಹ ಸಮಯದಲ್ಲಿ ಸ್ಥಳೀಯ ಆರ್ಥಿಕತೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಉದ್ದೇಶಿತ

ASUSE: (Annual Survey of Unincorporated Sector Enterprises) ಅಸಂಘಟಿತ ವಲಯದ ಉದ್ಯಮಗಳ ವಾರ್ಷಿಕ ಸಮೀಕ್ಷೆ. ಈ ಸಮೀಕ್ಷೆಯು ಭಾರತದ ಆರ್ಥಿಕತೆಯಲ್ಲಿ 'ಅಸಂಘಟಿತ ವಲಯ'ಅಂದರೆ ನೋಂದಣಿಯಾಗದ ಸಣ್ಣಪುಟ್ಟ ವ್ಯಾಪಾರಗಳು, ಉತ್ಪಾದನಾ ಘಟಕಗಳು ಮತ್ತು ಸೇವಾ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು ಇದರ ಕೆಲಸ. ಈ ಸಣ್ಣ ಉದ್ಯಮಗಳು ಎಷ್ಟು ಲಾಭ ಮಾಡುತ್ತಿವೆ, ಎಷ್ಟು ಜನರಿಗೆ ಕೆಲಸ ನೀಡುತ್ತಿವೆ ಮತ್ತು ದೇಶದ ಜಿಡಿಪಿಗೆ ಅವುಗಳ ಕೊಡುಗೆ ಏನು ಎಂಬುದನ್ನು ತಿಳಿಯಲು ಇದು ಸಹಾಯ ಮಾಡುತ್ತದೆ.

PLFS (Periodic Labour Force Survey) ಆವರ್ತಕ ಕಾರ್ಮಿಕ ಬಲ ಸಮೀಕ್ಷೆ. ಇದು ದೇಶದ 'ಉದ್ಯೋಗದ ವರದಿ ಕಾರ್ಡ್' ಇದ್ದ ಹಾಗೆ. ಭಾರತದಲ್ಲಿ ಎಷ್ಟು ಜನರಿಗೆ ಕೆಲಸ ಮಾಡಲು ಆಸಕ್ತಿ ಇದೆ, ಅವರಲ್ಲಿ ಎಷ್ಟು ಜನಕ್ಕೆ ಕೆಲಸ ಸಿಕ್ಕಿದೆ ಮತ್ತು ಎಷ್ಟು ಜನ ನಿರುದ್ಯೋಗಿಗಳಿದ್ದಾರೆ ಎಂಬ ಮಾಹಿತಿಯನ್ನು ಇದು ಒದಗಿಸುತ್ತದೆ.



ನೀತಿಗಳನ್ನು ರೂಪಿಸಲು ರಾಜ್ಯಗಳ ಮಟ್ಟದ ದತ್ತಾಂಶಗಳು ಅತ್ಯಂತ ನಿರ್ಣಾಯಕವಾಗಿವೆ. ಇದಕ್ಕಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಹೆಚ್ಚು ನಿಖರವಾದ ಜಿಡಿಪಿಯ ಅಂದಾಜು ಬೇಕಾಗುತ್ತದೆ. ಅಂತಹ ನಿಖರವಾದ ಅಂದಾಜುಗಳನ್ನು ಪಡಯಲು ಹೆಚ್ಚೆಚ್ಚು ಗಮನಹರಿಸಬೇಕಾಗಿದೆ.

ಇದಕ್ಕೆ ಬೇಕಾದ ತಾಂತ್ರಿಕ ಬೆಂಬಲವನ್ನು ರಾಜ್ಯಗಳಿಗೆ ನೀಡಲು ಪ್ರಾರಂಭಿಸಲಾಗಿದೆ. ಜೊತೆಗೆ, ರಾಜ್ಯಗಳಿಗೆ ಅಥವಾ ಕೇಂದ್ರಾಡಳಿತ ಪ್ರದೇಶಗಳಿಗೆ ಜಿಲ್ಲಾ ಮಟ್ಟದ ಅಂದಾಜುಗಳನ್ನು ಮಾಡುವುದಕ್ಕೆ ಸಾಧ್ಯವಾಗಬೇಕು. ಈ ಪ್ರಕ್ರಿಯೆಯಲ್ಲಿ ಅವುಗಳಿಗೆ ನೆರವಾಗುವುದಕ್ಕೆ ಬೇಕಾದ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಪ್ರಸ್ತುತ ಮಾದರಿ ಸಮೀಕ್ಷೆಗಳಲ್ಲಿ ಅವಕಾಶಗಳನ್ನು ಕಲ್ಪಿಸಲಾಗಿದೆ. ಂಖಗಖಇ ಮತ್ತು ಕಐಈಖ ಸಮೀಕ್ಷೆಗಳು ನೀಡುವ ಉಪ–ರಾಜ್ಯ ಮಟ್ಟದ ಸಮೀಕ್ಷಾ ಅಂದಾಜುಗಳಿಂದ ರಾಜ್ಯ/ಉಪ–ರಾಜ್ಯದ ಜಿಡಿಪಿ ಲೆಕ್ಕಾಚಾರಗಳು ಹೆಚ್ಚು ನಿಖರವಾಗುತ್ತವೆ. ರಾಜ್ಯಗಳಿಗೆ ಹೆಚ್ಚು ವಿಶ್ವಾಸಾರ್ಹವಾದ ಆರ್ಥಿಕ ಮಾಹಿತಿಗಳಿರಬೇಕು. ಅದಕ್ಕಾಗಿ ಹತ್ತು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ನಗರಗಳಿಗೆ ಸಂಬಂಧಿಸಿದಂತೆಯೂ ಂಖಗಖಇ ಮತ್ತು ಕಐಈಖ ಅಂದಾಜುಗಳನ್ನು ಸಿದ್ಧಪಡಿಸಲಾಗುವುದು. ಅಲ್ಲದೆ, ಮುಂಬರುವ 'ಭಾರತದ ಸಂಘಟಿತ ಸೇವಾವಲಯದ ಉದ್ಯಮಗಳ ಸಮೀಕ್ಷೆ' (ASISSE) ಮತ್ತು ಜಿಎಸ್‌ಟಿ ದತ್ತಾಂಶದ ಬಳಕೆಯಿಂದ ಉಪ–ರಾಷ್ಟ್ರಗಳಿಗೆ ಸಂಬಂಧಿಸಿದ ಮಾಹಿತಿಗಳು ಹೆಚ್ಚು ನಿಖರವಾಗುತ್ತವೆ. ಮೂಲ ವರ್ಷವನ್ನು ಬದಲಿಸಿರುವುದರಿಂದ ಇದಕ್ಕೆ ಬೇಕಾದ ಬುನಾದಿ ಸಿದ್ಧವಾಗಿದೆ. ಅಷ್ಟೇ ಅಲ್ಲ ಇದಕ್ಕೆ ಸಂಬಂಧಿಸಿದಂತೆ ಅವಶ್ಯಕವಾದ ಅನೇಕ ಸುಧಾರಣೆಗಳೂ ಆಗಿದೆ. ಮತ್ತು ನಮ್ಮ ಸಾಂಖ್ಯಿಕ ವ್ಯವಸ್ಥೆಯ ಬುನಾದಿ ಈಗ ಹೆಚ್ಚು ಭದ್ರವಾಗಿದೆ.

ಇದು ಬದಲಾವಣೆಯ ಪ್ರಯಾಣದ ಪ್ರಾರಂಭವಷ್ಟೆ. ಹೊಸ ಸಾಂಖ್ಯಿಕ ವರದಿಗಳನ್ನು ಹಾಗೂ ಆಡಳಿತಾತ್ಮಕ ದತ್ತಾಂಶಗಳನ್ನು ಸಮನ್ವಯಗೊಳಿಸುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತಿದೆ. ಈ ಮೂಲಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿಹೊಂದುತ್ತದೆ. ಒಟ್ಟಾರೆಯಾಗಿ, ಈ ಪ್ರಯತ್ನಗಳಿಂದ ಹೆಚ್ಚು ಕ್ರಿಯಾತ್ಮಕವಾದ, ಅವಶ್ಯಕತೆಗೆ ಸ್ಪಂದಿಸಬಲ್ಲ ಮತ್ತು ಮತ್ತು ಭವಿಷ್ಯದ ದೃಷ್ಟಿಕೋನವುಳ್ಳ ಸಾಂಖ್ಯಿಕ ವ್ಯವಸ್ಥೆ ರೂಪುಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದು ನೀತಿಗಳನ್ನು ರೂಪಿಸುವವರಿಗೆ ಸಕಾಲಿಕವಾದ, ಹೆಚ್ಚು ವಿಶ್ವಾಸಾರ್ಹವಾದ ಮತ್ತು ಕಾರ್ಯರೂಪಕ್ಕೆ ತರಬಹುದಾದ ಒಳನೋಟಗಳನ್ನು ನೀಡುತ್ತದೆ.

ಜಿಡಿಪಿ ಲೆಕ್ಕಾಚಾರದ ಎಡವಟ್ಟು: ಆರ್ಥಿಕತೆ ಮತ್ತು ನೀತಿಗಳ ಮೇಲೆ ಅದರ ಗಂಭೀರ ಪರಿಣಾಮ

ಅಭಿಷೇಕ್ ಆನಂದ್, ಜೋಶುವಾ ಫೆಲ್ಮನ್, ಅರವಿಂದ್ ಸುಬ್ರಮಣಿಯನ್

ಇತ್ತೀಚೆಗೆ, ಸರ್ಕಾರವು ಜಿಡಿಪಿ ಅಂಕಿಅಂಶಗಳ ಹೊಸ ಸರಣಿಯನ್ನು ಬಿಡುಗಡೆ ಮಾಡಿದೆ. ಎರಡು ಕಾರಣಗಳಿಗಾಗಿ ಈ ಪರಿಷ್ಕರಣೆಯನ್ನು ಮಾಡಲಾಗಿದೆ.

ಮೊದಲನೆಯದಾಗಿ ಭಾರತದ ಅರ್ಥಿಕತೆಯಲ್ಲಿ ಅಪಾರ ಬದಲಾವಣೆಗಳಾಗಿವೆ. ಹಾಗಾಗಿ ವಿವಿಧ ಸರಕು ಮತ್ತು ಸೇವೆಗಳ ಪ್ರಾಮುಖ್ಯತೆ ಅಥವಾ ವೇಯ್‌ಟೇಜ್ ಅನ್ನು ನವೀಕರಿಸಬೇಕಿತ್ತು. ಈಗಿರುವ ವೇಯ್‌ಟೇಜ್ ಅನ್ನು 2011–12ರಲ್ಲಿ ನಿರ್ಧರಿಸಲಾಗಿತ್ತು. ಹಾಗಾಗಿ ಈ ಬದಲಾವಣೆಯನ್ನು ಎಂದೋ ಮಾಡಬೇಕಿತ್ತು.

ಎರಡನೆಯದಾಗಿ ಜಿಡಿಪಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿದ್ದ ಕೆಲವು ಲೋಪದೋಷಗಳನ್ನು ಸರಿಪಡಿಸಬೇಕಾಗಿತ್ತು. ಈ ಹೊಸ ವಿಧಾನವನ್ನು ಜಾರಿಗೆ ತರುವ ಪ್ರಕ್ರಿಯೆಯಲ್ಲಿ ಎಲ್ಲರ ಸಲಹೆ–ಸೂಚನೆಗಳನ್ನು ಪಡೆಯಲಾಗಿದೆ. ಇದಕ್ಕಾಗಿ ಸಂಖ್ಯಾಶಾಸ್ತ್ರ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವನ್ನು (MoSPI)ಮೆಚ್ಚಿಕೊಳ್ಳಬೇಕು. ಆದರೆ, ಹಳೆಯ ತಪ್ಪುಗಳನ್ನು ಪರಿಣಾಮಕಾರಿಯಾಗಿ ಸರಿಪಡಿಸಲಾಗಿದೆಯೇ ಎನ್ನುವುದು ಗೊತ್ತಾಗುವುದಕ್ಕೆ ಸಮಯಬೇಕು. ಇದು ಹೊಸ ಅಂಕಿಅಂಶಗಳ ಗುಣಮಟ್ಟ ಮತ್ತು ಅವು ಎಷ್ಟು ನೈಜವಾಗಿವೆ ಎನ್ನುವುದನ್ನು ಸಂಪೂರ್ಣವಾಗಿ ಅವಲಂಬಿಸಿದೆ.

ಮೇಲ್ನೋಟಕ್ಕೆ ಕೆಲವು ಸುಧಾರಣೆಗಳಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಆದರೆ ಕೆಲವು ವಿಚಿತ್ರ ಸಂಗತಿಗಳು ಹಾಗೆ ಉಳಿದಿವೆ. ಉದಾಹರಣೆಗೆ: ಉತ್ಪಾದನಾ ವಲಯದ ಸರಕುಗಳ ಹಣದುಬ್ಬರವು ಸತತ 10 ತ್ರೈಮಾಸಿಕಗಳು ಋಣಾತ್ಮಕವಾಗಿಯೇ ಇದೆ. ಇದು ಆಶ್ಚರ್ಯ. ಇದರಿಂದಾಗಿ ಉತ್ಪಾದನ ವಲಯದ ನೈಜ ಬೆಳವಣಿಗೆಯ ದರದಲ್ಲಿ ಅನಿರೀಕ್ಷಿತವಾದ ಏರಿಕೆಯನ್ನು ಕಾಣುತ್ತಿದ್ದೇವೆ.

ಅಷ್ಟೇ ಅಲ್ಲದೆ ಆಮದು ಬೆಲೆಗಳನ್ನು ಸರಿದೂಗಿಸುವುದಕ್ಕಾಗಿ ಬಳಸಿರುವ 'ಇಂಪೋರ್ಟ್ ಡಿಫ್ಲೇಟರ್‌ಗಳು' ಹಿಂದೆ ಬಳಸಿ ಡೆಫ್ಲೇಟರುಗಳಿಗಿಂತ ಸಂಪೂರ್ಣ ಭಿನ್ನವಾಗಿವೆ. ಇದರಿಂದಾಗ ನೈಜ ಆಮದು ಬೆಳವಣಿಗೆಯ ದರದಲ್ಲಿ ವಿಪರೀತ ಬದಲಾವಣೆಯನ್ನು ನೋಡುತ್ತಿದ್ದೇವೆ.
ಆದರೆ ಈ ಹೊಸ ವಿಧಾನವನ್ನು ವಿವರವಾಗಿ ಪರಿಶೀಲಿಸುವ


ವೇಯ್‌ಟೇಜ್ ಎಂದರೆ ಏನು?


ಒಂದು ದೇಶದ ಆರ್ಥಿಕತೆಯಲ್ಲಿ ಎಲ್ಲ ವಸ್ತುಗಳು ಅಥವಾ ಎಲ್ಲ ವಲಯಗಳು ಒಂದೇ ಸಮನಾದ ಪ್ರಾಮುಖ್ಯತೆಯನ್ನು ಹೊಂದಿರುವುದಿಲ್ಲ. ಉದಾಹರಣೆಗೆ, ನಿಮ್ಮ ಮನೆಯ ಬಜೆಟ್‌ನಲ್ಲಿ ನೀವು ಅಕ್ಕಿ–ಬೇಳೆಗೆ ಮಾಡುವ ಖರ್ಚು, ಸಿನಿಮಾಗೆ ಮಾಡುವ ಖರ್ಚಿಗಿಂತ ಹೆಚ್ಚಿರುತ್ತದೆ. ಇಲ್ಲಿ ಅಕ್ಕಿ–ಬೇಳೆಗೆ ನಿಮ್ಮ ಬಜೆಟ್‌ನಲ್ಲಿ ಹೆಚ್ಚಿನ ವೇಯ್‌ಟೇಜ್ ಇದೆ ಎಂದು ಅರ್ಥ.

ಇದೇ ರೀತಿ ಸರ್ಕಾರವು ದೇಶದ ಆರ್ಥಿಕತೆಯನ್ನು ಅಳೆಯುವಾಗ ಪ್ರತಿಯೊಂದು ವಲಯಕ್ಕೆ ಅದರ ಪ್ರಾಮುಖ್ಯತೆಗೆ ಅನುಗುಣವಾಗಿ ಒಂದು ಸಂಖ್ಯೆಯನ್ನು (Weightage) ನೀಡುತ್ತದೆ.

ಆಮದು ಡಿಫ್ಲೇಟರ್ (Import Deflator) ಎಂದರೇನು?

ಸರಳವಾಗಿ ಹೇಳುವುದಾದರೆ, ಒಂದು ದೇಶವು ಹೊರದೇಶಗಳಿಂದ ಕೊಳ್ಳುವ ವಸ್ತುಗಳ (ಆಮದು) ಬೆಲೆಯಲ್ಲಿ ಉಂಟಾಗುವ ಬದಲಾವಣೆಯನ್ನು ಅಳೆಯುವ ಸಾಧನವೇ 'ಆಮದು ಡಿಫ್ಲೇಟರ್'. ನಾವು ಕಳೆದ ವರ್ಷ 100 ರೂಪಾಯಿ ಮೌಲ್ಯದ ವಸ್ತುವನ್ನು ತಂದಿದ್ದೆವು, ಈ ವರ್ಷ 110 ರೂಪಾಯಿ ಮೌಲ್ಯದ ಅದೇ ವಸ್ತುವನ್ನು ಕೊಂಡಿದ್ದರೆ, ಆ 10 ರೂಪಾಯಿಯ ಹೆಚ್ಚಳವು ಕೇವಲ ಬೆಲೆ ಏರಿಕೆಯೇ ಅಥವಾ ನಾವು ಹೆಚ್ಚು ವಸ್ತುಗಳನ್ನು ತಂದಿದ್ದೇವೆಯೇ? ಇದನ್ನು ಪತ್ತೆಹಚ್ಚಲು ಡಿಫ್ಲೇಟರ್ ಸಹಾಯ ಮಾಡುತ್ತದೆ.





ಎಲ್ಲಾ ಚರಾಂಶಗಳು ವಾಸ್ತವ ದರದಲ್ಲಿವೆ; ವಿವರಗಳಿಗಾಗಿ ಸಂಶೋಧನಾ ಪ್ರಬಂಧ ನೋಡಿ. **ಮೂಲಗಳು:** RBI, CEA, MOSPI.

ಮೊದಲು, ಹಳೆಯ ವಿಧಾನದಲ್ಲಿದ್ದ ಸಮಸ್ಯೆಗಳೇನು? ಅವು ಅಷ್ಟೊಂದು ಗಂಭೀರವಾಗಿದ್ದವೇ? ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ಹೊಸ ಸಂಶೋಧನಾ ಪ್ರಬಂಧದಲ್ಲಿ ನಾವು ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದ್ದೇವೆ.

ಈ ಸಮಸ್ಯೆಗಳು ಎಂದಿನಿಂದ ಶುರುವಾಯ್ತು ಅಂತ ನೋಡೋಣ. ಸುಮಾರು ಹತ್ತು ವರ್ಷಗಳ ಹಿಂದಿನವರೆಗೂ, ಜಿಡಿಪಿ ಅಂಕಿ–ಅಂಶಗಳಿಗೂ ಮತ್ತು ದೇಶದ ಆರ್ಥಿಕತೆಯ ಆರೋಗ್ಯವನ್ನು ಅಳೆಯಲು ಅರ್ಥಶಾಸ್ತ್ರಜ್ಞರು ಬಳಸುವ ಸಾಮಾನ್ಯ ಸೂಚಕಗಳ ನಡುವೆ ನಿಖರ ಸಂಬಂಧವಿತ್ತು. ರಫ್ತು, ಬ್ಯಾಂಕ್ ಸಾಲಗಳು, ತೆರಿಗೆ ಸಂಗ್ರಹ, ವಿದ್ಯುತ್ ಬಳಕೆ, ಮಾರಾಟದ ಪ್ರಮಾಣ ಮತ್ತು ಕೈಗಾರಿಕಾ ಉತ್ಪಾದನಾ ಸೂಚ್ಯಂಕ ಇವೆಲ್ಲವೂ ಜಿಡಿಪಿಯ ಜೊತೆಜೊತೆಯಾಗಿಯೇ ಸಾಗುತ್ತಿದ್ದವು. ಅಂದರೆ ಜಿಡಿಪಿಯಲ್ಲಿ ಹೆಚ್ಚಳವಾಗಿದ್ದರೆ, ಇವುಗಳಲ್ಲೂ ಹೆಚ್ಚಳವಾಗಿರುತ್ತಿತ್ತು. ಆದರೆ, ಜನವರಿ 2015ರಲ್ಲಿ ಜಿಡಿಪಿ ಲೆಕ್ಕ ಹಾಕುವ ಪದ್ಧತಿಯನ್ನು ಸಂಪೂರ್ಣವಾಗಿ ಬದಲಿಸಿದ ನಂತರದ ದಿನಗಳಲ್ಲಿ ಈ ಸಂಬಂಧ ಕಡಿದುಹೋಯಿತು.

ಇದಕ್ಕೆ ಮುಖ್ಯವಾದ ಕಾರಣವೆಂದರೆ ಬಳಸಿದ ಮಾಹಿತಿ ಮೂಲಗಳು ಸಮರ್ಪಕವಾಗಿರಲಿಲ್ಲ. ವಿಶೇಷವಾಗಿ, ಅನೌಪಚಾರಿಕ ವಲಯದ ಸಾಧನೆಯನ್ನು ಅಳೆಯಲು ಔಪಚಾರಿಕ ವಲಯದ (Formal sector) ದತ್ತಾಂಶಗಳನ್ನು ಆಧಾರವಾಗಿಟ್ಟುಕೊಳ್ಳಲಾಯಿತು. ಪರಿಸ್ಥಿತಿ ಸಾಮಾನ್ಯವಾಗಿರುವಾಗ ಈ ರೀತಿ ಮಾಡುವುದು ಒಂದು ಮಟ್ಟಿಗೆ ಸರಿಯಿರಬಹುದು.

ಆದರೆ 2015ರ ನಂತರ ಅನೌಪಚಾರಿಕ ವಲಯವು ಮೂರು ಭೀಕರ ಆಘಾತಗಳಿಗೆ ಒಳಗಾಗಿತ್ತು. ನೋಟು ಅಮಾನ್ಯೀಕರಣ, ಜಿಎಸ್‌ಟಿ ಜಾರಿ ಹಾಗೂ ಕೋವಿಡ್ ಸಾಂಕ್ರಾಮಿಕ ಈ ಮೂರು ಆಘಾತಗಳಿಂದ ಅನೌಪಚಾರಿಕ ವಲಯಕ್ಕೆ ತೀವ್ರ ಹೊಡೆತ ಬಿದ್ದಿತ್ತು. ಆದರೆ ಹೊಸ ಲೆಕ್ಕಾಚಾರದ ಪದ್ಧತಿಯಲ್ಲಿ ಅನೌಪಚಾರಿಕ ವಲಯದ ಬಗ್ಗೆ ಮಾಹಿತಿ ಇಲ್ಲದ ಕಾರಣ ಬದಲಿಗೆ ಔಪಚಾರಿಕ ವಲಯದ ಮಾಹಿತಿಯನ್ನು ಬಳಸಿದ್ದರಿಂದ ಅನೌಪಚಾರಿಕ ವಲಯದ ಬೆಳವಣಿಗೆ ವಾಸ್ತವಕ್ಕಿಂತ ಹೆಚ್ಚಾಗಿ ಕಾಣಿಸಿಕೊಂಡಿತು.. 2011–12ರಲ್ಲಿ ಅನೌಪಚಾರಿಕ ಉದ್ಯಮಗಳು ಆರ್ಥಿಕತೆಯ ಶೇಕಡಾ 45ಕ್ಕಿಂತಲೂ ಹೆಚ್ಚಿದ್ದರಿಂದ, ಇದೊಂದು ದೊಡ್ಡ ಸಮಸ್ಯೆಯಾಯಿತು. ಇನ್ನೊಂದು ಮುಖ್ಯವಾದ ಸಮಸ್ಯೆ ಅಂದ್ರೆ, ಹಣದುಬ್ಬರದ ಪರಿಣಾಮವನ್ನು ತೆಗೆಯಲು ಸರಿಯಾದ ಡಿಫ್ಲೇಟರುಗಳನ್ನು ಬಳಸದೇ ಇದ್ದುದು. 'ಡಬಲ್ ಡಿಫ್ಲೇಷನ್' ಬಳಸದೇ ಇದ್ದ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಆದರೆ ಅದಕ್ಕಿಂತ ದೊಡ್ಡ ಸಮಸ್ಯೆಯೆಂದರೆ ಸೇವಾವಲಯದ ಉತ್ಪಾದನೆಯನ್ನು ಅಳೆಯಲು ಸಗಟು ಬೆಲೆ ಸೂಚ್ಯಂಕ ಬಳಸಿದ್ದು. ವಾಸ್ತವವಾಗಿ ಈ ಡಬ್ಲ್ಯೂಪಿಐನಲ್ಲಿ ಸೇವೆಗಳ ನಿಖರವಾದ ಬೆಲೆ ತಿಳಿಯುವುದಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ತೈಲ ಬೆಲೆಗಳು ತೀರಾ ಕಡಿಮೆಯಾದಾಗ ಡಬ್ಲ್ಯೂಪಿಐ ಕೂಡ ವಿಪರೀತ ಇಳಿದಿತ್ತು. ಇದರಿಂದ ಹಣದುಬ್ಬರದ ದರವೂ ಕಡಿಮೆ ಕಾಣುತ್ತಿತ್ತು. ಪರಿಣಾಮವಾಗಿ ನೈಜ ಆರ್ಥಿಕ ಬೆಳವಣಿಗೆ ವಾಸ್ತವಕ್ಕಿಂತ ಹೆಚ್ಚಾಗಿಯೇ ಕಂಡಿತು.

ಈ ತಪ್ಪುಗಳಿಂದಾಗಿ ದೊಡ್ಡ ಎಡವಟ್ಟುಗಳಾದವು. 2015ರ ಹೊಸ ಲೆಕ್ಕಾಚಾರದ ಪದ್ಧತಿಯನ್ನು 2011–12ರ ನಂತರದ ಅಂಕಿಅಂಶಗಳಿಗೆ ಮತ್ತು ಹಳೆಯ 2004–05ರವರೆಗಿನ ಅಂಕಿಅಂಶಗಳಿಗೆ ಅನ್ವಯಿಸಿದಾಗ, ಜಿಡಿಪಿ ಬೆಳವಣಿಗೆಯ ಅಂದಾಜಿನಲ್ಲಿ ಗಣನೀಯವಾದ ತಪ್ಪುಗಳಾದವು. 2011–12ರಿಂದ 2023–24ರ ವರೆಗಿನ 12 ವರ್ಷಗಳಲ್ಲಿ, ಭಾರತದ ಆರ್ಥಿಕ ಬೆಳವಣಿಗೆಯನ್ನು ಪ್ರತಿ ವರ್ಷ ಸರಾಸರಿ ಒಂದೂವರೆಯಿಂದ ಎರಡು ಪರ್ಸೆಂಟ್‌ನಷ್ಟು (1.5% – 2%) ಜಾಸ್ತಿ ಮಾಡಿ ತೋರಿಸಲಾಗಿದೆ. ಇದಕ್ಕೆ ತಪ್ಪು ಮಾಹಿತಿ ಒಂದು ಕಾರಣವಾದರೆ, ಬೆಲೆ ಏರಿಳಿತ ಅಳೆಯುವ ತಪ್ಪು ಪದ್ಧತಿ ಇನ್ನೊಂದು ಕಾರಣ. ಅಸಲಿಗೆ, ಆರ್ಥಿಕತೆ ಶೇ. 6ರಷ್ಟು ಬೆಳೆದಿದೆ ಅಂತ ನಾವು ಅಂದುಕೊಂಡಿದ್ದೆವು, ಆದರೆ ನಿಜವಾಗಿ ಅದು ಬೆಳೆದಿರುವುದು ಕೇವಲ ಶೇ. 4ರಿಂದ 4.5ರಷ್ಟು ಮಾತ್ರ. ಹಾಗಾಗಿ, ಭಾರತದ ನಿಜವಾದ ಬೆಳವಣಿಗೆಯ ನಿಜವಾದ ಸಾಮರ್ಥ್ಯವನ್ನು ನಾವು ಹೊಸದಾಗಿ ಲೆಕ್ಕಹಾಕಬೇಕಾಗಿದೆ.

ಆದರೆ ಅದಕ್ಕಿಂತ ಹಿಂದಿನ ವರ್ಷಗಳ ವಿಷಯದಲ್ಲಿ ಅಂದರೆ 2004–05 ರಿಂದ 2011–12ಕ್ಕೆ ಸಂಬಂಧಿಸಿದಂತೆ, 2015ರ ಹೊಸ ಲೆಕ್ಕಾಚಾರದ ಪದ್ಧತಿ ಉಲ್ಟಾ ಕೆಲಸ ಮಾಡಿದೆ! ಇಲ್ಲಿ ಅದು

ಬೆಳವಣಿಗೆಯನ್ನು ಪ್ರತಿ ವರ್ಷ ಸರಾಸರಿ ಶೇಕಡ ಒಂದರಿಂದ ಒಂದೂವರೆಯಷ್ಟು (1–1.5%) ಕಡಿಮೆ ಮಾಡಿ ತೋರಿಸಿದೆ.

ಇದರ ಒಟ್ಟಾರೆ ಪರಿಣಾಮವೆಂದರೆ ಕಳೆದ 20 ವರ್ಷಗಳ ನಮ್ಮ ಆರ್ಥಿಕ ಬೆಳವಣಿಗೆ ಸಾಗಿರುವ ಹಾದಿಯೇ ನಮಗೆ ತಪ್ಪಾಗಿ ಕಾಣುತ್ತಿದೆ. 2000ರ ದಶಕದಲ್ಲಿ (2000–2010ರ ನಡುವೆ) ಭಾರತದ ಆರ್ಥಿಕತೆಯಲ್ಲಿ ಉತ್ತಮ ಪ್ರಗತಿಯಾಗಿತ್ತು (Boom). ನಂತರದ ದಿನಗಳಲ್ಲಿ ಅಷ್ಟೇ ತೀವ್ರವಾದ ಕುಸಿತವನ್ನು ಕಂಡಿತ್ತು. ಆದರೆ ಈಗ ನಮ್ಮ ಆರ್ಥಿಕತೆ ಕಂಡ ಏರಿಳಿತದ ಇತಿಹಾಸವನ್ನೇ ಅಳಿಸಿಹಾಕಿಬಿಟ್ಟಿದ್ದೇವೆ. ಬದಲಿಗೆ, ಭಾರತದ ಆರ್ಥಿಕತೆ ನಿರಂತರವಾಗಿ, ವೇಗವಾಗಿ ಬೆಳೆಯುತ್ತಿದೆ ಅನ್ನುವ ತಪ್ಪು ಚಿತ್ರವನ್ನು ಕಟ್ಟಿಕೊಡುತ್ತಿದ್ದೇವೆ.

ಅಂಕಿಅಂಶಗಳನ್ನು ಗಮನಿಸಿದರೆ ಸಮಸ್ಯೆ ಎಲ್ಲಿದೆ ಅನ್ನುವುದು ತಿಳಿಯುತ್ತದೆ. ಆರ್ಥಿಕತೆಯ ಮುಖ್ಯ ಸೂಚಕಗಳು 1990 ರಿಂದ 2000ರ ದಶಕದ ಆರಂಭದವರೆಗೆ ತೀವ್ರವಾಗಿ ಏರಿದವು. ಆದರೆ ನಂತರದ ದಿನಗಳಲ್ಲಿ ದಿಢೀರನೆ ಕುಸಿದು, 2005ಕ್ಕಿಂತ ಮೊದಲಿದ್ದ ಸ್ಥಿತಿಗಿಂತಲೂ ಕೆಳಕ್ಕೆ ಹೋದವು (ಚಿತ್ರದಲ್ಲಿರುವ ಬಾಣದ ಗುರುತುಗಳನ್ನು ನೋಡಿ). ಆದರೂ, ಸರ್ಕಾರದ ಅಧಿಕೃತ ಜಿಡಿಪಿ ಲೆಕ್ಕಾಚಾರಗಳು (ನೆರಳು ಮಾಡಿರುವ ಭಾಗ) ಮಾತ್ರ ಇಡೀ ಅವಧಿಯಲ್ಲಿ ಬೆಳವಣಿಗೆ ಸ್ಥಿರವಾಗಿದೆ ಎಂದು ಹೇಳುತ್ತಿದೆ.

ಚಿತ್ರ ನೋಡಿದರೆ, 2003ರಿಂದ 2010ರ ನಡುವೆ ಭಾರತದಲ್ಲಿ ಇಂಡಿಯಾ ಹೊಳೆಯುತ್ತಿದೆ ಅನ್ನುವ ಸಂಭ್ರಮ ಕಾಣಿಸುತ್ತಿಲ್ಲ. ಹೊಸ ಲೆಕ್ಕಾಚಾರ ಅಂತಹ ಚಿತ್ರ ಕೊಡುತ್ತಿದೆ. ಆದರೆ ಆ ಸಮಯದಲ್ಲಿ ಆರ್ಥಿಕತೆಯಲ್ಲಿ ತೀವ್ರವಾದ ವೇಗ ಮತ್ತು ಚೈತನ್ಯವನ್ನು ನೋಡಬಹುದಿತ್ತು ಅನ್ನುವುದು ವಾಸ್ತವ. ಇದು ಎಲ್ಲರಿಗೂ ಅನುಭವಕ್ಕೆ ಬರುತ್ತಿತ್ತು. ಅಷ್ಟೇ ಅಲ್ಲ, ದೇಶದ ಯಾವುದೇ ಪ್ರಮುಖ ಆರ್ಥಿಕ ಅಂಕಿಅಂಶಗಳನ್ನು ನೋಡಿದರೂ ಈ ಚೈತನ್ಯ ಎದ್ದು ಕಾಣುತ್ತಿತ್ತು. ಅಷ್ಟೇ ಅಲ್ಲ, ಜಾಗತಿಕ ಆರ್ಥಿಕ ಕುಸಿತದ ನಂತರದ ಮಂದಗತಿಯಾಗಲಿ, ಬ್ಯಾಂಕುಗಳ ಸಾಲದ ಸಮಸ್ಯೆಗಳಾಗಲಿ ಅಥವಾ 2015ರ ನಂತರದ ನಾಲ್ಕು ದೊಡ್ಡ ಹೊಡೆತಗಳಾದ ನೋಟು ಅಮಾನ್ಯೀಕರಣ, ಜಿಎಸ್‌ಟಿ, ಐಎಲ್‌ಎಫ್‌ಎಸ್ ಸಾಲದ ಬಿಕ್ಕಟ್ಟು ಮತ್ತು ಕೋವಿಡ್ ಇವು ಯಾವುದರ ಪ್ರಭಾವವೂ ಸರ್ಕಾರದ ಲೆಕ್ಕದಲ್ಲಿ ಕಾಣುತ್ತಿಲ್ಲ. ಸರ್ಕಾರದ ಅಧಿಕೃತ ಅಂಕಿಅಂಶಗಳನ್ನು ನೋಡಿದರೆ ಕಳೆದ 20 ವರ್ಷಗಳು ಬರೀ 'ಅಚ್ಛೇ ದಿನಗಳೇ' ಆಗಿದ್ದವು ಮತ್ತು ಆರ್ಥಿಕತೆ ನಿರಂತರ ಶೇ. 6–7ರಷ್ಟು ಬೆಳೆಯುತ್ತಲೇ ಇತ್ತು ಎಂದು ಭಾಸವಾಗುತ್ತದೆ.

ಈ ತಪ್ಪು ಲೆಕ್ಕಾಚಾರದಿಂದಾಗಿ ನಮ್ಮ ಆರ್ಥಿಕ ನೀತಿಗಳನ್ನು ರೂಪಿಸೋದು ತುಂಬಾ ಕಷ್ಟವಾಯಿತು. ಕೆಲವು ಸಲ ದೇಶದ ಆರ್ಥಿಕತೆ ದುರ್ಬಲವಾಗಿದ್ದರೂ ಅಂಕಿಅಂಶಗಳು ಮಾತ್ರ 'ಎಲ್ಲಾ ಸ್ಟ್ರಾಂಗ್ ಆಗಿದೆ' ಅಂತ ತಪ್ಪು ಸೂಚನೆ ಕೊಡುತ್ತಿದ್ದವು. ಇನ್ನು ಕೆಲವು ಸಲ ಬೆಳವಣಿಗೆ ಚೆನ್ನಾಗಿದ್ದರೂ ನೀತಿಗಳನ್ನು ಸಡಿಲಿಸಬೇಕು ಎಂದು ಸೂಚಿಸುತ್ತಿದ್ದವು. ಇದರಿಂದಾಗಿ ಮುಖ್ಯವಾದ ಸುಧಾರಣೆಗಳನ್ನು ತರಬೇಕೆಂಬ ತುರ್ತು ಹೋಗಿಯೇ ಬಿಟ್ಟಿತು. ವಿಶೇಷವಾಗಿ 2014–15 ಮತ್ತು 2019–20ರ ನಡುವೆ ಇಂತಹದೊಂದು ಉದಾಸೀನತೆ ಕಾಣಿಸಿಕೊಂಡಿತು. ನಮ್ಮ ದೇಶ ಜಗತ್ತಿನಲ್ಲೇ ಅತಿ ವೇಗವಾಗಿ ಬೆಳೆಯುತ್ತಿರುವಾಗ, ಈಗಿರೋ ನಿಯಮಗಳನ್ನು ಬದಲಿಸೋ ಅಗತ್ಯ ಏನಿದೆ ಅನ್ನುವ ತಾತ್ಸಾರ ಬಂದುಬಿಟ್ಟಿತು.

ಇತ್ತೀಚಿನ ವರ್ಷಗಳಲ್ಲಿ ಎಲ್ಲರಿಗೂ ಕೆಲವು ಒಗಟುಗಳು ಕಾಡುತ್ತಿವೆ. ಒಂದು ವೇಳೆ ದೇಶದ ಆರ್ಥಿಕತೆ ಅಷ್ಟು ಬಲವಾಗಿದ್ದರೆ, ಖಾಸಗಿ ಕಂಪನಿಗಳು ಯಾಕೆ ಹೊಸದಾಗಿ ಬಂಡವಾಳ ಹೂಡುತ್ತಿಲ್ಲ? ವಿದೇಶಿ ಹೂಡಿಕೆ ಯಾಕೆ ಕಡಿಮೆ ಆಗ್ತಿದೆ? ಜನರ ಕೂಲಿ ದರ, ಉದ್ಯೋಗದ ಬೆಳವಣಿಗೆ ಯಾಕೆ ನಿಧಾನವಾಗಿದೆ? ಜಗತ್ತಿನಲ್ಲೇ ನಾವು ಅತಿ ವೇಗವಾಗಿ ಬೆಳೆಯುತ್ತಿರುವ ರಾಷ್ಟ್ರವಾಗಿದ್ದರೆ ರೂಪಾಯಿ ಬೆಲೆ ಯಾಕೆ ಕುಸಿಯುತ್ತಿದೆ? ಈ ಪ್ರತಿಯೊಂದು ಪ್ರಶ್ನೆಗೂ ಸಂಕೀರ್ಣವಾದ ಹಾಗು ವಿಭಿನ್ನ ವಿವರಣೆಗಳನ್ನು ನೀಡಬಹುದು. ಆದರೆ ಪರಿಹಾರಗಳು ಯಾವಾಗಲೂ ಸರಳವಾಗಿರುತ್ತದೆ ಅನ್ನುವ ಒಕಾಮ್ಸ್ ರೇಜರ್ ಅನ್ನೋ ಸೂತ್ರವನ್ನು ಅನ್ವಯಿಸುವುದಾದರೆ ಎಲ್ಲಾ ಪ್ರಶ್ನೆಗಳಿಗೆ ಇರೋ ಒಂದೆ ಸರಳ ಉತ್ತರವೆಂದರೆ; ನಮ್ಮ ಬೆಳವಣಿಗೆ ನಮಗೆ ಕಣ್ಣಿಗೆ ಕಾಣಿಸುತಿರುವಷ್ಟು ಸ್ಟ್ರಾಂಗ್ ಆಗಿಲ್ಲ, ಅಷ್ಟೆ!

ಜಗತ್ತಿನಲ್ಲೇ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಭಾರತವೂ ಒಂದು ಅಂತ ಹೆಮ್ಮೆ ಪಡುತ್ತಿದ್ದೇವೆ. ಐಎಂಎಫ್ ಲೆಕ್ಕದ ಪ್ರಕಾರ, 2011ರಿಂದ 2023ರ ನಡುವೆ ಭಾರತ ನಾಲ್ಕನೇ ಅತಿ ವೇಗದ ಆರ್ಥಿಕತೆಯಾಗಿತ್ತು. ಈಗ ನಾವು ಮಾಡಿರೋ ಈ ಹೊಸ ಲೆಕ್ಕದ ಪ್ರಕಾರ ನೋಡಿದ್ರೂ, ಅತಿ ವೇಗವಾಗಿ ಬೆಳೆಯುತ್ತಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ಮೊದಲ 7 ಅಥವಾ 8ನೇ ಸ್ಥಾನದಲ್ಲಿ ಇದ್ದೇ ಇರುತ್ತೆ. ನಮ್ಮ ದೇಶದ ಬಗ್ಗೆ ಹೆಮ್ಮೆ ಪಡೋಕೆ ನಮಗೆ ಸಾವಿರ ಕಾರಣಗಳಿವೆ, ಅದಕ್ಕೆ ಇಂತಹ ತಪ್ಪಾದ ಅಂಕಿಅಂಶಗಳ "ಊರುಗೋಲು' ಬೇಕಿಲ್ಲ.

ಈ ವಿಶ್ಲೇಷಣೆಯನ್ನು ಮಾಡುವಾಗ ನಮಗೆ ಸರ್ಕಾರದ ಸಾಂಖ್ಯಿಕ ಇಲಾಖೆ (MoSPI) ಮಾಡುತ್ತಿರುವ ಕೆಲಸದ ಬಗ್ಗೆ ಅಪಾರ ಮೆಚ್ಚುಗೆ ಇದೆ. ಹಾಗೆಯೇ ನಮ್ಮ ಈ ವಿಶ್ಲೇಷಣೆ ಸಾಂಖ್ಯಿಕ ಇಲಾಖೆಯ ಕೆಲಸಕ್ಕೆ ಪೂರಕವಾಗಿಯೂ ಇದೆ. ಮೋಸ್ಪಿಯ ಕೆಲಸಕ್ಕೆ ಮೆಚ್ಚುಗೆ ಯಾಕೆಂದರೆ ನಮ್ಮನ್ನು ಸೇರಿದಂತೆ ಹಲವು ತಜ್ಞರು ತೋರಿಸಿದ್ದ ಸಮಸ್ಯೆಗಳನ್ನು ಸರಿಪಡಿಸಲು ಮೋಸ್ಪಿ ಪ್ರಾಮಾಣಿಕವಾದ ಪ್ರಯತ್ನ ಮಾಡಿದೆ. ನಮ್ಮ ವಿಶ್ಲೇಷಣೆ ಮೋಸ್ಪಿಯ ಕೆಲಸಕ್ಕೆ ಪೂರಕ ಯಾಕೆಂದರೆ, ಸರ್ಕಾರದ ಹೊಸ ವಿಧಾನ ಭವಿಷ್ಯದ ವರ್ಷಗಳ ಅಂದಾಜಿಗೆ ಅನ್ವಯವಾಗುತ್ತದೆ. ನಮ್ಮ ಸಂಶೋಧನೆಯು ಹಳೆಯ ಕಾಲದ ತಪ್ಪುಗಳನ್ನು ಸರಿಪಡಿಸಿ ಸರಿಯಾದ ಇತಿಹಾಸವನ್ನು ದಾಖಲಿಸಲು ನೆರವಾಗುತ್ತದೆ. ಮುಂದಿನ ದಿನಗಳಲ್ಲಿ MoSPI ಇಲಾಖೆಯು ಕಳೆದ ಒಂದು ಅಥವಾ ಎರಡು ದಶಕಗಳ ಹಳೆಯ ಲೆಕ್ಕಗಳನ್ನು ಮತ್ತೆ ಸರಿಪಡಿಸಲು ಮುಂದಾದಾಗ, ನಮ್ಮ ಈ ಸಂಶೋಧನೆಯು ಅವರಿಗೆ ಒಂದು ಸೂಕ್ತ ಅಳತೆಗೋಲು ಅಥವಾ ಮಾರ್ಗದರ್ಶಿಯಂತೆ ಇರಲಿದೆ.

ಹಳೆಯ ಕಾಲದ ಈ ಗೊಂದಲದ ಮಂಜು ಸರಿದು, ಮುಂದೆ ಆರ್ಥಿಕತೆಯ ಹಾದಿಯಲ್ಲಿ ಸ್ಪಷ್ಟವಾದ ಬೆಳಕು ಕಾಣುತ್ತದೆ ಎಂಬ ಭರವಸೆ ನಮ್ಮದು.

ಲೇಖಕರ ಬಗ್ಗೆ:

ಈ ಲೇಖನವನ್ನು ಮದ್ರಾಸ್ ಇನ್‌ಸ್ಟಿಟ್ಯೂಟ್ ಫಾರ್ ಡೆವಲಪ್‌ಮೆಂಟ್ ಸ್ಟಡೀಸ್, ಜೆಹೆಚ್ ಕನ್ಸಲ್ಟಿಂಗ್ ಮತ್ತು ಪೀಟರ್ಸನ್ ಇನ್‌ಸ್ಟಿಟ್ಯೂಟ್ ಫಾರ್ ಇಂಟರ್‌ನ್ಯಾಷನಲ್ ಎಕನಾಮಿಕ್ಸ್ ಸಂಸ್ಥೆಗಳಿಗೆ ಸೇರಿದ ತಜ್ಞರು ಬರೆದಿದ್ದಾರೆ. ಈ ಸಂಶೋಧನೆಗೆ ಬಳಸಿದ ಮಾಹಿತಿ ಮತ್ತು ಅಂಕಿಅಂಶಗಳ ವಿವರಗಳು PIIE ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಯುದ್ಧದ ಪರಿಣಾಮವಾಗಿ ಜಿಡಿಪಿ ಕುಸಿಯುವ ಸಾಧ್ಯತೆಯಿದೆ

ಅನಂತ ನಾಗೇಶ್ವರನ್



ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದಾಗಿ 2027ರ ಹಣಕಾಸು ವರ್ಷದಲ್ಲಿ ಬೆಳವಣಿಗೆಯ ಅಂದಾಜುಗಳು ಗಣನೀಯವಾಗಿ ಕುಸಿಯುವ ಅಪಾಯವಿದೆ ಎಂದು ಅನಂತ ನಾಗೇಶ್ವರನ್ ಹೇಳಿದ್ದಾರೆ. ಹಾಗೂ ಸರ್ಕಾರದ ವೆಚ್ಚಗಳ ಆದ್ಯತೆಯನ್ನು ಬದಲಿಸಲು ಕರೆ ನೀಡಿದ್ದಾರೆ.

2027ರಲ್ಲಿ ಜಿಡಿಪಿ ಶೇಕಡ 6.8ರಿಂದ 7.2ರ ನಡುವೆ ಇರಬಹುದು ಎಂದು ಅಂದಾಜು ಮಾಡಲಾಗಿತ್ತು. ಫೆಬ್ರವರಿ 27 ರಂದು ಜಿಡಿಪಿಯ ಆಧಾರ ವರ್ಷವನ್ನು ಪರಿಷ್ಕರಣೆ ಮಾಡಿದ ಮೇಲೆ ನಾಗೇಶ್ವರನ್ ಅವರು 2027ರ ಜಿಡಿಪಿ ಅಂದಾಜನ್ನು ಪರಿಷ್ಕರಿಸಿ ಅದು ಶೇಕಡಾ 7 – 7.4ಕ್ಕೆ ಇರುತ್ತದೆ ಎಂದು ಆಶಾಭಾವನೆ ವ್ಯಕ್ತಪಡಿಸಿದ್ದರು.

ಆದರೆ ಇತ್ತೀಚಿನ ವರದಿಯಲ್ಲಿ "ಈ ಸಂಖ್ಯೆಯಲ್ಲಿ ಗಣನೀಯ ಕುಸಿತದ ಸಾಧ್ಯತೆಯಿದೆ." ಎಂದು ಹೇಳಿದ್ದಾರೆ. ಅಷ್ಟೇ ಅಲ್ಲ "ಚಾಲ್ತಿ ಖಾತೆಯ ಕೊರತೆಯು ಕೂಡ 2027ರಲ್ಲಿ ಗಮನಾರ್ಹವಾಗಿ ಹೆಚ್ಚಾಗಲಿದೆ" ಎಂದು ಆರ್ಥಿಕ ವ್ಯವಹಾರಗಳ ಇಲಾಖೆ ಸಿದ್ಧಪಡಿಸಿದ 'ಮಾಸಿಕ ಆರ್ಥಿಕ ವಿಮರ್ಶೆ'ಯ ಮುನ್ನುಡಿಯಲ್ಲಿ ಅವರು ತಿಳಿಸಿದ್ದಾರೆ.

ಪರಿಣಾಮ ಬೀರಬಹುದಾದ ನಾಲ್ಕು ಕಾರಣಗಳು

ಈ ಯುದ್ಧದ ಪರಿಣಾಮವು ಭಾರತದ ಮೇಲೆ ನಾಲ್ಕು ರೀತಿಯಲ್ಲಿ ಆಗಬಹುದು ಎಂದು ಕಳೆದ ತಿಂಗಳು ಅವರು ಬರೆದಿದ್ದರು. ಅದನ್ನು ಮತ್ತೆ ಈ ಮುನ್ನುಡಿಯಲ್ಲಿ ಉಲ್ಲೇಖಿಸಿದ್ದಾರೆ:

1. ತೈಲ, ಅನಿಲ ಮತ್ತು ರಸಗೊಬ್ಬರಗಳ ಪೂರೈಕೆಯಲ್ಲಿ ವ್ಯತ್ಯಯ ಮತ್ತು ಮುಖ್ಯವಾಗಿ ರಫ್ತಿನ ಮೇಲೆ ಪರಿಣಾಮ.

2. ಹೆಚ್ಚಿನ ಆಮದು ಬೆಲೆಗಳು.

3. ಹೆಚ್ಚಿನ ಲಾಜಿಸ್ಟಿಕ್ಸ್ ವೆಚ್ಚಗಳು (ಉದಾಹರಣೆಗೆ, ಸರಕು ಸಾಗಣೆ ಮತ್ತು ವಿಮೆ).

4. ಗಲ್ಫ್ ದೇಶಗಳಲ್ಲಿನ ಭಾರತೀಯರಿಂದ ಬರುವ ಹಣದ ವರ್ಗಾವಣೆಯಲ್ಲಿ ಸಂಭವನೀಯ ಕುಸಿತ.

"ಅರ್ಥಿಕ ಪ್ರಗತಿ, ಹಣದುಬ್ಬರ, ಹಣಕಾಸಿನ ಸಮತೋಲನ ಮತ್ತು ಬಾಹ್ಯ ಸಮತೋಲನಗಳ ಮೇಲೆ ಈ ನಾಲ್ಕು ಅಂಶಗಳು ಒಟ್ಟಾರೆಯಾಗಿ ಬೀರುವ ಪರಿಣಾಮ ಗಣನೀಯವಾಗಿರುವ ಸಾಧ್ಯತೆಗಳಿವೆ" ಎಂದು ಅವರು ತಿಳಿಸಿದ್ದಾರೆ.

ಅತಿ ಹೆಚ್ಚು ತೊಂದರೆಗೊಳಗಾದ ಮತ್ತು ದುರ್ಬಲ ವ್ಯವಹಾರಗಳಿಗೆ ಹಾಗೂ ಕುಟುಂಬಗಳಿಗೆ ಭಾರತವು ತಕ್ಷಣದ ಪರಿಹಾರವನ್ನು ನೀಡಬೇಕಾದ ಅಗತ್ಯವಿದೆ. ಅದೇ ಸಮಯದಲ್ಲಿ, ಸಂಘರ್ಷದಿಂದ ಉದ್ಭವಿಸಿರುವ ಆಯಕಟ್ಟಿನ ಮತ್ತು ದೀರ್ಘಕಾಲೀನ ಅಗತ್ಯಗಳನ್ನು ಪೂರೈಸಲು (ಕೇವಲ ಇಂಧನಕ್ಕೆ ಸಂಬಂಧಿಸಿದಲ್ಲದೆ, ಹಲವಾರು ಇತರ ಸರಕು ಮತ್ತು ಸಾಮಗ್ರಿಗಳಲ್ಲಿ ಬಫರ್ ದಾಸ್ತಾನುಗಳನ್ನು ನಿರ್ಮಿಸುವಂತಹ ಕ್ರಮಗಳಿಗಾಗಿ) ಹಣಕಾಸನ್ನು ಹೊಂದಿಸಿಕೊಳ್ಳಬೇಕಾಗಿದೆ ಎಂದು ಅವರು ಹೇಳಿದ್ದಾರೆ.

ಆರ್ಥಿಕತೆಯ ವೇಗ ಸ್ವಲ್ಪ ಕಡಿಮೆಯಾಗುತ್ತಿರುವ ಲಕ್ಷಣಗಳು

ಮಾರ್ಚ್ 2026ರ ವರದಿಯ ಪ್ರಕಾರ, ಭಾರತದ ಆರ್ಥಿಕತೆಯ ವೇಗ ಸ್ವಲ್ಪ ತಗ್ಗಿದೆ. ಇದಕ್ಕೆ ಜಾಗತಿಕವಾಗಿ ನಡೆಯುತ್ತಿರುವ ವಿದ್ಯಮಾನಗಳೇ ಮುಖ್ಯ ಕಾರಣ ಎನ್ನುತ್ತಾರೆ ನಾಗೇಶ್ವರನ್.

ಸರಕು ಸಾಗಾಟ: ಮಾರ್ಚ್ 22ರವರೆಗೆ ಸರಕು ಸಾಗಾಟದ ಬಿಲ್‌ಗಳ (E-way bills) ಸಂಖ್ಯೆ ಕಳೆದ ತಿಂಗಳಿಗೆ ಹೋಲಿಸಿದರೆ ಶೇ. 5.3 ರಷ್ಟು ಕಡಿಮೆಯಾಗಿದೆ. ಅಂದರೆ ಸಾಮಾನಿನ ಓಡಾಟ ಸ್ವಲ್ಪ ಕಡಿಮೆಯಾಗಿದೆ ಎಂದರ್ಥ. ಆದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಇದು ಇನ್ನೂ ಶೇ. 9.4ರಷ್ಟು ಹೆಚ್ಚಿಗೆಯೇ ಇದೆ.

ಉತ್ಪಾದನೆ: ಪೆಟ್ರೋಲ್, ಡೀಸೆಲ್ ಅಥವಾ ಇಂಧನದ ಬೆಲೆಗಳು ಏರಿಕೆಯಾದ ಕಾರಣ, ಕಂಪನಿಗಳ ಉತ್ಪಾದನಾ ವೇಗವು ಸ್ವಲ್ಪ ಮಂದಗತಿಯಲ್ಲಿದೆ.

ಖರೀದಿಸುವ ಆಸಕ್ತಿ: ಇಷ್ಟೆಲ್ಲಾ ಆದರೂ ಜನರ ಬೇಡಿಕೆ ಮಾತ್ರ ಕಡಿಮೆಯಾಗಿಲ್ಲ. ಹೊಸ ವಾಹನಗಳ ನೋಂದಣಿ ಶೇ. 19.1 ರಷ್ಟು ಹೆಚ್ಚಾಗಿದೆ ಮತ್ತು ಜನರು ಡಿಜಿಟಲ್ ಮೂಲಕ (UPI ಇತ್ಯಾದಿ) ಹಣ ಪಾವತಿ ಮಾಡುವುದು ಕೂಡ ವೇಗವಾಗಿ ಬೆಳೆಯುತ್ತಿದೆ.

ಗ್ರಾಮೀಣ ಪ್ರದೇಶಗಳ ಸ್ಥಿತಿ: ಹಳ್ಳಿಗಳಲ್ಲಿ ಜನರ ಆರ್ಥಿಕ ಉತ್ಸಾಹ ಸ್ವಲ್ಪ ಕಡಿಮೆಯಾದಂತೆ ಕಂಡರೂ, ಅಲ್ಲಿನ ಜನರು ವಸ್ತುಗಳನ್ನು ಖರೀದಿಸುವುದು ಮಾತ್ರ ಹೆಚ್ಚಾಗುತ್ತಿದೆ.

ಅನಂತ ನಾಗೇಶ್ವರನ್ ಇಂತಹ ಸಂದರ್ಭದಲ್ಲೂ, ಪರಿಸ್ಥಿತಿ ಮಂಕಾಗದಂತೆ ಸರ್ಕಾರ ಎಚ್ಚರಿಕೆ ವಹಿಸುತ್ತಿದೆ. ಜನರಿಗೆ ಇಂಧನದ ಕೊರತೆಯಾಗದಂತೆ ನೋಡಿಕೊಳ್ಳಲು ಮತ್ತು ಬೆಲೆ ಏರಿಕೆಯನ್ನು ತಡೆಗಟ್ಟಲು ಸರ್ಕಾರ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ತಿಳಿಸಿದ್ದಾರೆ.

ಯುದ್ಧದ ನೆರಳು ಮತ್ತು ಭಾರತದ ಕೃಷಿ ಕ್ಷೇತ್ರ: ಸವಾಲು ಹಾಗೂ ಸುಧಾರಣೆ

ಹಿಮಾಂಶು

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವು ಜಾಗತಿಕ ರಾಜಕೀಯ ಪರಿಸ್ಥಿತಿಯನ್ನು ಅಸ್ಥಿರಗೊಳಿಸಿದೆ. ಇದರ ಪರಿಣಾಮ ಆಗುತ್ತಿರುವುದು ಕೇವಲ ಯುದ್ಧದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಪಾಲ್ಗೊಳ್ಳುತ್ತಿರುವ ದೇಶಗಳ ಮೇಲೆ ಮಾತ್ರವಲ್ಲ. ಇಡೀ ಪ್ರಪಂಚದ ಬಹುತೇಕ ದೇಶಗಳ ಮೇಲೆ ಇದರ ಪರಿಣಾಮ ಆಗುತ್ತಿದೆ. ಹಾರ್ಮುಜ್ ಜಲಸಂಧಿಯನ್ನು ಮುಚ್ಚಿರುವುದರಿಂದ ಈಗಾಗಲೇ ಇಂಧನ ಬೆಲೆಗಳು ದಿಢೀರನೆ ಏರಿವೆ. ಗ್ಯಾಸ್ ಸೇರಿದಂತೆ ಪೆಟ್ರೋಲಿಯಂ ಉತ್ಪನ್ನಗಳ ಕೊರತೆ ಎದುರಾಗಿದೆ.

ಭಾರತವು ಮನೆಬಳಕೆ ಮತ್ತು ಕೈಗಾರಿಕಾ ಉದ್ದೇಶಗಳಿಗಾಗಿ ಪೆಟ್ರೋಲಿಯಂ ಉತ್ಪನ್ನಗಳ ಆಮದನ್ನು ಅತಿಯಾಗಿ ಅವಲಂಬಿಸಿರುವುದರಿಂದ, ಈಗಿನ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಭಾರತಕ್ಕೂ ತೊಂದರೆಯಾಗುತ್ತಿದೆ. ಲಿಕ್ವಿಫೈಡ್ ಪೆಟ್ರೋಲಿಯಂ ಗ್ಯಾಸ್ (LPG) ಕೊರತೆಯು ದೀರ್ಘಕಾಲ ಇರದೇ ಇರಬಹುದು, ಆದರೆ ಇದರ ಪ್ರಭಾವ ಕೇವಲ ಮನೆಬಳಕೆ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗುವುದಿಲ್ಲ.

ಈ ಯುದ್ಧದಿಂದ ಅತ್ಯಂತ ತೊಂದರೆ ಅನುಭವಿಸಲಿರುವ ಪ್ರಮುಖ ಕ್ಷೇತ್ರವೆಂದರೆ ಕೃಷಿ. ಇಂಧನದ ಬೆಲೆ ಏರಿಕೆಯಿಂದ ರೈತರ ಕೃಷಿ ವೆಚ್ಚ ನೇರವಾಗಿ ಹೆಚ್ಚುತ್ತದೆ. ಅಷ್ಟೇ ಅಲ್ಲದೆ, ರಸಗೊಬ್ಬರಗಳ ಬೆಲೆಗಳೂ ಏರುವುದರಿಂದ ರೈತರ ಮೇಲಿನ ಹೊರೆ ಇನ್ನಷ್ಟು ಹೆಚ್ಚುತ್ತದೆ. ಭಾರತವು ತನಗೆ ಬೇಕಾದ ಯೂರಿಯಾ ಗೊಬ್ಬರದ ಬಹುಪಾಲನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ; ಇನ್ನು ಸಂಕೀರ್ಣ ಗೊಬ್ಬರಗಳ (Complex fertilizers) ವಿಷಯದಲ್ಲಂತೂ ಆಮದಿನ ಮೇಲಿನ ನಮ್ಮ ಅವಲಂಬನೆ ವಿಪರೀತವಾಗಿದೆ.

ಸೌದಿ ಅರೇಬಿಯಾ, ಓಮನ್, ಕತಾರ್ ಮತ್ತು ಯುಎಇ ದೇಶಗಳು ನಮಗೆ ಗೊಬ್ಬರವನ್ನು ಪೂರೈಸುವ ಪ್ರಮುಖ ರಾಷ್ಟ್ರಗಳಾಗಿವೆ. ಪೂರೈಕೆಯಲ್ಲಿನ ವ್ಯತ್ಯಯದಿಂದಲೂ ಗೊಬ್ಬರದ ಬೆಲೆಗಳು ಏರುತ್ತವೆ. ಆದರೆ ಬೆಲೆ ಏರಿಕೆಗೆ ಇನ್ನೊಂದು ಕಾರಣವಿದೆ: ನಮ್ಮ ದೇಶದ ಗೊಬ್ಬರ ತಯಾರಿಕಾ ಕಾರ್ಖಾನೆಗಳು ಗೊಬ್ಬರ ತಯಾರಿಕೆಗೆ ಗ್ಯಾಸ್ ಬಳಸುತ್ತವೆ. ಅಲ್ಲದೆ, ರಸಗೊಬ್ಬರ ಬೆಲೆಗಳು 'ನ್ಯಾಪ್ತಾ' (Naphtha) ಎಂಬ ಕಚ್ಚಾ ವಸ್ತುವಿನ ಬೆಲೆಯನ್ನು ಅವಲಂಬಿಸಿದೆ. ಪೆಟ್ರೋಲಿಯಂ ಮತ್ತು ಗ್ಯಾಸ್ ಬೆಲೆ ಏರಿದರೆ ನ್ಯಾಪ್ತಾ ಬೆಲೆಯೂ ಏರುತ್ತದೆ.

ಜಾಗತಿಕವಾಗಿ ಇಂಧನ ಬೆಲೆ ಏರಿದಾಗ, ರಸಗೊಬ್ಬರದ ಬೆಲೆಯೂ ಏರುತ್ತದೆ. ಸರ್ಕಾರ ಗೊಬ್ಬರಕ್ಕೆ ಹೆಚ್ಚಿನ ಸಬ್ಸಿಡಿ ಕೊಡದೇ ಹೋದರೆ ರೈತರ ಲಾಭ ಕಡಿಮೆಯಾಗುತ್ತದೆ. ಈಗಾಗಲೇ ರಸಗೊಬ್ಬರದ ಬೆಲೆಗಳು ಹೆಚ್ಚಿವೆ. ಇಂತಹ ಸಮಯದಲ್ಲಿ ಈ ಯುದ್ಧವೂ ಕೃಷಿಯನ್ನು ಕಾಡುತ್ತಿರುವುದು ನಿಜವಾಗಿ ದುರದೃಷ್ಟಕರ.

ಮಧ್ಯಪ್ರಾಚ್ಯ ದೇಶಗಳು ಭಾರತದ ಬಾಸುಮತಿ ಅಕ್ಕಿ ಮತ್ತು ಸಾಂಬಾರ ಪದಾರ್ಥಗಳಿಗೆ ಪ್ರಮುಖ ಮಾರುಕಟ್ಟೆಗಳಾಗಿವೆ. ಕಳೆದ ಎರಡು ವರ್ಷಗಳಿಂದ ಭಾರತದ ಕೃಷಿ ಉತ್ಪನ್ನಗಳ ರಫ್ತು ಕುಸಿಯುತ್ತಿದೆ. 2022–23ರಲ್ಲಿ 53.1 ಶತಕೋಟಿ ಡಾಲರ್ ಇದ್ದ ರಫ್ತು, 2024–25ರಲ್ಲಿ 51.1 ಶತಕೋಟಿ ಡಾಲರ್‌ಗೆ ಇಳಿದಿದೆ. ಹಿಂದೆ 2013–14ರಲ್ಲಿ ಇದು 43.3 ಶತಕೋಟಿ ಡಾಲರ್ ಇದ್ದದ್ದು 2019–20ರಲ್ಲಿ 30–35 ಶತಕೋಟಿ ಡಾಲರಿಗೆ ಇಳಿದಿತ್ತು. ಈಗಿನ ಬಿಕ್ಕಟ್ಟಿನಿಂದ ರಫ್ತು ಮತ್ತಷ್ಟು ಕುಸಿದು, ರೈತರು ರಫ್ತಿನಿಂದ ಪಡೆಯುತ್ತಿದ್ದ ಲಾಭವನ್ನು ಕಳೆದುಕೊಳ್ಳಬಹುದು.

ಹಲವು ಕೃಷಿ ವಸ್ತುಗಳ ಆಮದಿಗೂ ಸಮಸ್ಯೆಯಾಗುತ್ತದೆ. ವಿಶೇಷವಾಗಿ ಖಾದ್ಯ ತೈಲ ಹಾಗೂ ಬೇಳೆಕಾಳುಗಳಿಗೆ ಭಾರತ ಆಮದನ್ನು ನೆಚ್ಚಿಕೊಂಡಿದೆ. ಭಾರತ ತನ್ನ ಬಳಕೆಯ ಅರ್ಧಕ್ಕಿಂತ ಹೆಚ್ಚು ಖಾದ್ಯ ತೈಲವನ್ನು ಮತ್ತು ಶೇಕಡ 20ರಷ್ಟು ಬೇಳೆಕಾಳುಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಖಾದ್ಯ ತೈಲದ ಬೆಲೆಗಳು ಸಾಮಾನ್ಯವಾಗಿ ಪೆಟ್ರೋಲಿಯಂ ಬೆಲೆಗಳ ಹಾದಿಯನ್ನೇ ಅನುಸರಿಸುತ್ತವೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಪ್ರಕಾರ, ಜಾಗತಿಕ ಖಾದ್ಯ ತೈಲ ಬೆಲೆಗಳು ಜೂನ್ 2022ರ ನಂತರದ ಗರಿಷ್ಠ ಮಟ್ಟಕ್ಕೆ ಏರಿವೆ. ಆಗ ರಷ್ಯ–ಯುಕ್ರೇನ್ ಯುದ್ಧದಿಂದ ಬೆಲೆಗಳು ಗರಿಷ್ಠ ಮಟ್ಟ ಮುಟ್ಟಿತ್ತು.


ಭೂರಾಜಕೀಯ ಬಿಕ್ಕಟ್ಟುಗಳು ಅಥವಾ ಅಂತರಾಷ್ಟ್ರೀಯ ರಾಜಕೀಯ ಅಸ್ಥಿರತೆಗಳು ಹೊಸದೇನಲ್ಲ. ಇವು ಅನಿರೀಕ್ಷಿತವಾಗಿ ಸಂಭವಿಸುತ್ತವೆ ಮತ್ತು ಇವು ಆರ್ಥಿಕತೆಯಲ್ಲಿ ಅನಿಶ್ಚಿತತೆಯನ್ನು ಉಂಟುಮಾಡುತ್ತವೆ. ಪ್ರಸ್ತುತ ಸನ್ನಿವೇಶದಲ್ಲಿ, ಪೂರೈಕೆಯಲ್ಲಿನ ವ್ಯತ್ಯಯ ಮತ್ತು ಬೆಲೆ ಏರಿಳಿತದ ನೇರ ಪರಿಣಾಮಗಳಿಂದ ಕೃಷಿ ಕ್ಷೇತ್ರವನ್ನು ರಕ್ಷಿಸುವುದು ಭಾರತದ ಮೊದಲ ಆದ್ಯತೆಯಾಗಬೇಕು.

ಕೃಷಿ ವೆಚ್ಚಗಳು ಮತ್ತು ಕೃಷಿ ಉತ್ಪನ್ನಗಳ ಮಾರುಕಟ್ಟೆ ಬೆಲೆಗಳು ಮುಂದಿನ ಕೆಲ ಕಾಲ ಅಸ್ಥಿರವಾಗಿರುವ ಸಾಧ್ಯತೆಯಿದೆ. ಇಂತಹ ಸಮಯದಲ್ಲಿ ಸರ್ಕಾರವು ರಫ್ತಿನ ಮೇಲೆ ಯಾವುದೇ ಕಠಿಣ ನಿರ್ಬಂಧ ಅಥವಾ ನಿಯಂತ್ರಣ ಹೇರಿದರೆ, ಅದು ಕೃಷಿ ಕ್ಷೇತ್ರದ ಲಾಭದಾಯಕತೆಗೆ ದೊಡ್ಡ ಹೊಡೆತ ನೀಡುತ್ತದೆ.

ಆಹಾರ ಮತ್ತು ಕೃಷಿ ಉತ್ಪನ್ನಗಳ ಬೆಲೆಗಳು ಏರುವುದರಿಂದ ಹಣದುಬ್ಬರ ತೀವ್ರವಾಗುವ ಸಾಧ್ಯತೆಯಿದೆ. ಆದರೆ, ಈ ಬೆಲೆ ಏರಿಕೆಗೆ ಸ್ವಲ್ಪಮಟ್ಟಿಗೆ ಬೇಸ್ ಎಫೆಕ್ಟ್ ಕಾರಣ. ಅಂದರೆ ಕಳೆದ ಒಂದು ವರ್ಷದಿಂದ ಅನೇಕ ಕೃಷಿ ಉತ್ಪನ್ನಗಳ ಬೆಲೆಗಳು ತುಂಬಾ ಕಡಿಮೆಯಿದ್ದವು. ಹಾಗಾಗಿ, ಈಗ ಸ್ವಲ್ಪ ಬೆಲೆ ಹೆಚ್ಚಾದರು ವಿಪರೀತ ಏರಿಕೆಯಾದಂತೆ ಕಾಣಿಸಬಹುದು. ಸಮಯ ಕಳೆದಂತೆ ಇದು ಸಹಜ ಸ್ಥಿತಿಗೆ ಬರಬಹುದು. ಆದರೆ ಈ ಸಮಯದಲ್ಲಿ ರಫ್ತು ಅಥವಾ ಆಂತರಿಕ ವ್ಯಾಪಾರದ ಮೇಲೆ ಯಾವುದೇ ನಿರ್ಬಂಧಗಳನ್ನು ಹೇರುವುದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ.

ಬೆಲೆಯ ಸ್ಥಿರತೆ ಮುಖ್ಯ. ಆದರೆ ಕೃಷಿ ಇಂದಿಗೂ ಭಾರತದಲ್ಲಿ ಅತಿ ಹೆಚ್ಚು ಜನರಿಗೆ ಉದ್ಯೋಗ ನೀಡುವ ಕ್ಷೇತ್ರವಾಗಿದೆ. ಆರ್ಥಿಕತೆಯಲ್ಲಿ ಬೇಡಿಕೆ ಹೆಚ್ಚಾಗಬೇಕಾದರೆ ರೈತರ ಆದಾಯವನ್ನು ರಕ್ಷಿಸುವುದು ಸರ್ಕಾರದ ಮೊದಲ ಆದ್ಯತೆಯಾಗಬೇಕು.

ಕೃಷಿ ಕ್ಷೇತ್ರದಲ್ಲಿ





ಸ್ಥಿರತೆಯನ್ನು ತರುವುದಕ್ಕೆ ನಾವು ದೀರ್ಘಕಾಲೀನ ಕಾರ್ಯತಂತ್ರ ರೂಪಿಸಬೇಕಿದೆ. ಇದಕ್ಕಾಗಿ ರಸಗೊಬ್ಬರಗಳ ಉತ್ಪಾದನೆಯನ್ನು ದೇಶದ ಒಳಗೇ ಹೆಚ್ಚಿಸಬೇಕು. 2014ರ ನಂತರ ಉತ್ಪಾದನೆ ಹೆಚ್ಚಿದ್ದರೂ, ಅದು ನಮ್ಮ ಬಳಕೆಯ ವೇಗಕ್ಕೆ ಸಾಲುತ್ತಿಲ್ಲ.

ಎರಡನೆಯದಾಗಿ ವ್ಯಾಪಾರ ನೀತಿಗೆ ಗಮನಕೊಡಬೇಕು. ಕೃಷಿಯಲ್ಲಿ ಅಂತರಾಷ್ಟ್ರೀಯ ವ್ಯಾಪಾರವು ಬೆಲೆಗಳನ್ನು ಸ್ಥಿರವಾಗಿರಿಸಲು ಸಹಾಯ ಮಾಡುತ್ತದೆ. ಆದರೆ ಇದು ಯಾವಾಗಲೂ ಮುಕ್ತವಾಗಿರುವುದಿಲ್ಲ. ಹಾಗೂ ನ್ಯಾಯಯುತವಾಗಿರುವುದಿಲ್ಲ. ಉದಾಹರಣೆಗೆ, ಬ್ರಿಟನ್, ಯುರೋಪಿಯನ್ ಯೂನಿಯನ್ ಮತ್ತು ಅಮೆರಿಕದೊಂದಿಗೆ ಭಾರತ ಮಾಡಿಕೊಳ್ಳುತ್ತಿರುವ ಒಪ್ಪಂದಗಳಿಂದಾಗಿ ಆ ದೇಶಗಳಿಗೆ ನಮ್ಮ ಮಾರುಕಟ್ಟೆಯನ್ನು ಸುಲಭವಾಗಿ ತೆರೆಯುತ್ತಿವೆ. ಆದರೆ ನಮ್ಮ ರೈತರಿಗೆ ಅಷ್ಟೇ ಪ್ರಮಾಣದಲ್ಲಿ, ಅವರ ಮಾರುಕಟ್ಟೆಗಳಲ್ಲಿ ಅವಕಾಶ ಸಿಗುತ್ತಿಲ್ಲ.

ನಮ್ಮ ರೈತರಿಗೆ ಅನಿಶ್ಚಿತತೆಗೆ ಭೂರಾಜಕೀಯ ಪರಿಸ್ಥಿತಿಯಷ್ಟೇ, ಕೇಂದ್ರ ಸರ್ಕಾರದ ನೀತಿಗಳ ಬದಲಾವಣೆಗಳೂ ಕಾರಣ. ಯುದ್ಧದಂತಹ ಬಾಹ್ಯ ಬಿಕ್ಕಟ್ಟುಗಳಿಂದ ಭಾರತದ ಕೃಷಿಯನ್ನು ಸಂಪೂರ್ಣವಾಗಿ ರಕ್ಷಿಸುವುದು ಸಾಧ್ಯವಿಲ್ಲದೆ ಇರಬಹುದು. ಆದರೆ ರೈತರ ಜೀವನೋಪಾಯವನ್ನು ರಕ್ಷಿಸಲು ನಮ್ಮ ದೇಶದೊಳಗಿನ ನೀತಿಗಳನ್ನು ಬಲಪಡಿಸುವುದು ಖಂಡಿತವಾಗಿಯೂ ಸಾಧ್ಯವಿದೆ.

(ಲೇಖಕರು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಸಹ ಪ್ರಾಧ್ಯಾಪಕರು).

This article originally appeared in Mint

ಸಾಮ್ರಾಜ್ಯಶಾಹಿ, ತೈಲ ಬೆಲೆ ಮತ್ತು ಜಾಗತಿಕ ಆರ್ಥಿಕತೆ


ಪ್ರಭಾತ್ ಪಟ್ನಾಯಕ್

ಕೊನೆಗೂ ವಿಶ್ವ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಈ ವಾರಾಂತ್ಯಕ್ಕೆ 100 ಡಾಲರ್ ದಾಟಿ, ಒಂದು ಹಂತದಲ್ಲಿ 110 ಡಾಲರ್ ಕೂಡ ಮುಟ್ಟಿದೆ. ಇರಾನ್ ಮೇಲೆ ಅಮೆರಿಕೆ ದಾಳಿಯ ಮೊದಲು ಇದು ಕೇವಲ 69 ಡಾಲರ್ ಇತ್ತು ಎಂಬುದನ್ನು ಗಮನಿಸಿದರೆ, ಕೇವಲ ಒಂದು ವಾರದಲ್ಲಿ ಬೆಲೆ ಎಷ್ಟು ಭಯಾನಕವಾಗಿ ಏರಿದೆ ಎಂಬುದು ಅರ್ಥವಾಗುತ್ತದೆ. ನಿಜ ಹೇಳಬೇಕೆಂದರೆ, ಇರಾನ್ ತನ್ನ ‘ಹಾರ್ಮುಜ್’ ಸಮುದ್ರ ಮಾರ್ಗವನ್ನು ಬಂದ್ ಮಾಡಿದ್ದರಿಂದ ತೈಲಕ್ಕೆ ತಕ್ಷಣದ ಕೊರತೆಯೇನೂ ಆಗಿಲ್ಲ; ಆದರೆ ಮುಂದೆ ಕೊರತೆ ಆಗಬಹುದು ಎಂಬ ಗಾಬರಿಯೇ ಈ ಬೆಲೆ ಏರಿಕೆಗೆ ಕಾರಣ. 1973ರಲ್ಲಿನ ಬೆಲೆ ಏರಿಕೆಗೆ ಕಾರಣವೇ ಬೇರೆ ಇತ್ತು. ಆಗ ತೈಲ ಉತ್ಪಾದಿಸುತ್ತಿದ್ದ ದೇಶಗಳು ಬೇಕಂತಲೇ ಬೆಲೆಯನ್ನು ಹೆಚ್ಚಿಸಿದ್ದವು. ಹಾಗೆಯೇ 2008 ಮತ್ತು 2022ರಲ್ಲಿ ಆಗಿದ್ದ ಬೆಲೆ ಏರಿಕೆಗೂ ಈಗಿನ ಬೆಲೆ ಏರಿಕೆಗೂ ವ್ಯತ್ಯಾಸವಿದೆ.

ಹಿಂದಿನ ಆ ಎರಡು ಸಂದರ್ಭಗಳಲ್ಲಿ ಬೆಲೆ ಏರಿಕೆ ಹೆಚ್ಚು ದಿನ ಇರಲಿಲ್ಲ. 2008ರಲ್ಲಿ ಚೀನಾದಲ್ಲಿ ಬೇಡಿಕೆ ಹೆಚ್ಚಾಗಿದ್ದು ಮತ್ತು ನೈಜೀರಿಯಾದಲ್ಲಿ ಪೂರೈಕೆ ವ್ಯತ್ಯಯವಾಗಿದ್ದರಿಂದ ಬೆಲೆ ಏರಿತ್ತು, ಆದರೆ ಅದು ತಾತ್ಕಾಲಿಕವಾಗಿತ್ತು. 2022ರಲ್ಲಿ ಉಕ್ರೇನ್ ಯುದ್ಧದ ಕಾರಣ ರಷ್ಯಾದ ಮೇಲೆ ನಿರ್ಬಂಧ ಹೇರಿದ್ದರಿಂದ ಬೆಲೆ ಏರಿತ್ತು. ಆದರೆ ರಷ್ಯಾ ನಿರ್ಬಂಧಗಳ ನಡುವೆಯೂ ಹೇಗೋ ತನ್ನ ತೈಲವನ್ನು ಬಹುತೇಕ ಪೂರೈಸುತ್ತಾ ಬಂತು. ಹಾಗೆಯೇ ಅಮೆರಿಕದ ತೈಲವು ಯುರೋಪಿನ ಮಾರುಕಟ್ಟೆಗೆ ಹರಿದುಬಂತು. ಹಾಗಾಗಿ ಬೆಲೆ ಮತ್ತೆ ಇಳಿಯಿತು. ಆದರೆ ಈಗಿನ ಕಥೆ ಹಾಗಿಲ್ಲ. ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ದೌರ್ಜನ್ಯಕ್ಕೆ ಪ್ರತಿಯಾಗಿ ಇರಾನ್ ಈ ಕ್ರಮ ಅನುಸರಿಸಿದೆ. ಈ ಯುದ್ಧ ಎಲ್ಲಿಯವರೆಗೆ ಮುಂದುವರಿಯುತ್ತದೋ, ಅಲ್ಲಿಯವರೆಗೆ ಬೆಲೆ ಏರಿಕೆ ಇಳಿಯುವ ಸಾಧ್ಯತೆಗಳಿಲ್ಲ. ಯಾಕೆಂದರೆ, ಕೇವಲ ಇರಾನ್ ಮಾತ್ರವಲ್ಲದೆ ಇನ್ನೂ ಹತ್ತಾರು ದೇಶಗಳ ತೈಲ ಹಾರ್ಮುಜ್ ಜಲಸಂಧಿಯ ಮೂಲಕ ಸಾಗುತ್ತದೆ. ಇದರ ಪ್ರಮಾಣ ರಷ್ಯಾದ ಒಟ್ಟು ತೈಲ ಉತ್ಪಾದನೆಗಿಂತ ಎರಡರಷ್ಟಿದೆ. ಇತ್ತ ಡೊನಾಲ್ಡ್ ಟ್ರಂಪ್ ಅವರು ಬೆಲೆಯನ್ನು ತಹಬದಿಗೆ ತರುವ ಬದಲು, ಯುದ್ಧದ ಗುರಿ ಮುಟ್ಟಲು ಈ ಬೆಲೆ ಏರಿಕೆ ಒಂದು “ಸಣ್ಣ ಬೆಲೆ” ಎಂದು ಹೇಳಿ ಅದನ್ನು ಹಗುರವಾಗಿ ಕಂಡಿದ್ದಾರೆ.

ಒಂದು ವೇಳೆ ಈ ತೈಲ ಬೆಲೆ ಏರಿಕೆ ಹೀಗೇ ಮುಂದುವರಿದರೆ, ಇಡೀ ಜಗತ್ತಿನ ಆರ್ಥಿಕತೆಯ ಮೇಲೆ ಇದರ ಪರಿಣಾಮ ತೀರಾ ತೀವ್ರವಾಗಿರುತ್ತದೆ. ಇದರಿಂದ ಕೇವಲ ಪೆಟ್ರೋಲ್–ಡೀಸೆಲ್ ಬೆಲೆಗಳು ಮಾತ್ರ ಹೆಚ್ಚುವುದಿಲ್ಲ. ಬದಲಿಗೆ ತೈಲವನ್ನೇ ಅವಲಂಬಿಸಿರುವ ಪ್ರತಿಯೊಂದು ವಸ್ತು ಮತ್ತು ಸೇವೆಗಳ ಬೆಲೆಗಳೂ ಏರುತ್ತವೆ. ಉದಾಹರಣೆಗೆ, ತೈಲ ಬೆಲೆ ಹೆಚ್ಚಾದರೆ ರಸಗೊಬ್ಬರದ ಬೆಲೆ ಏರುತ್ತದೆ, ಇದರಿಂದ ಕೃಷಿ ವೆಚ್ಚ ದುಬಾರಿಯಾಗುತ್ತದೆ. ಪರಿಣಾಮವಾಗಿ ಆಹಾರ ಧಾನ್ಯಗಳ ಬೆಲೆ ಗಗನಕ್ಕೇರುತ್ತದೆ. ಇದರ ಜೊತೆಗೆ ಪ್ರತಿಯೊಂದು ವಸ್ತುವಿನ ಸಾಗಾಣಿಕೆ ವೆಚ್ಚವೂ ಹೆಚ್ಚುವುದರಿಂದ, ಹಣದುಬ್ಬರ ಇನ್ನಷ್ಟು ತೀವ್ರವಾಗುತ್ತದೆ. ಸಾಮಾನ್ಯ ಜನರ ಬದುಕು ಹೈರಾಣಾಗುತ್ತದೆ.

ತೈಲ ಬೆಲೆ ಏರಿಕೆಯಿಂದ ವಿಪರೀತ ಲಾಭ ಮಾಡಿಕೊಳ್ಳುತ್ತಿರುವವರು, ಬಂದ ಹಣದಿಂದ ಏನನ್ನು ಖರೀದಿಸುವುದಿಲ್ಲ. ಬದಲಿಗೆ ಆ ಹಣವನ್ನು ಬ್ಯಾಂಕಿನಲ್ಲಿ ಇಡುತ್ತಾರೆ. ಆದರೆ ಬೆಲೆ ಏರಿಕೆಯಿಂದ ತೊಂದರೆ ಅನುಭವಿಸುವ ಸಾಮಾನ್ಯ ಜನರು ತಮ್ಮ ಖರ್ಚನ್ನು ಕಡಿತಗೊಳಿಸಬೇಕಾಗುತ್ತದೆ. ಇದರಿಂದ ಜಗತ್ತಿನಾದ್ಯಂತ ವಸ್ತುಗಳಿಗೆ ಬೇಡಿಕೆ ಕಡಿಮೆಯಾಗಿ, ವ್ಯಾಪಾರ–ವಹಿವಾಟು ಕುಸಿದು ಜಾಗತಿಕ ಆರ್ಥಿಕತೆ ಕುಸಿತವನ್ನು (recession) ಅನುಭವಿಸುತ್ತದೆ. ನಾವು ಇಂದಿನ ತೈಲದ ಬೆಲೆ ಏರಿಕೆಯ ಒಂದು ನಿರ್ದಿಷ್ಟ ಲಕ್ಷಣವನ್ನು ಗಮನಿಸಬೇಕು. ಪೂರೈಕೆಯಲ್ಲಿ ಯಾವುದೇ ಕೊರತೆ ಇಲ್ಲದಿದ್ದಾಗ, ತೈಲ ಉತ್ಪಾದಕರು ಸಂಘಟಿತವಾಗಿ ನಿರ್ಧರಿಸಿ ತೈಲ ಬೆಲೆಯನ್ನು ಏರಿಸಿದ್ದರೆ ತೊಂದರೆಗೊಳಗಾದ ದೇಶಗಳು ವಿಸ್ತರಣಾ ಹಣಕಾಸು ಹಾಗೂ ವಿತ್ತೀಯ ನೀತಿಗಳನ್ನು ಅಳವಡಿಸಿಕೊಳ್ಳಬಹುದು (ಆದರೆ 1970ರ ದಶಕದ ಆರಂಭದಲ್ಲಿ ಸರ್ಕಾರಗಳು ಈ ರೀತಿ ಮಾಡಿರಲಿಲ್ಲ). ಆ ಮೂಲಕ ಆರ್ಥಿಕ ಕುಸಿತವನ್ನು ತಡೆಯಲು ಮತ್ತು ಒಟ್ಟು ಬೇಡಿಕೆಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸಬಹುದು. ಆದರೆ, ಪೂರೈಕೆಯ ಕೊರತೆಯಿಂದ ಬೆಲೆ ಏರಿಕೆಯುಂಟಾಗಿದ್ದರೆ, ಅಂತಹ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. ಅಂತಹ ಸಂದರ್ಭಗಳಲ್ಲಿ ಆರ್ಥಿಕ ಹಿಂಜರಿತವು ಅನಿವಾರ್ಯವಾಗುತ್ತದೆ. ಅಷ್ಟೇ ಅಲ್ಲ, ಅದು ಪೂರೈಕೆಯ ಕೊರತೆಯನ್ನು ಸರಿದೂಗಿಸುವುದಕ್ಕೆ ಒಂದು ಅನಿವಾರ್ಯ ಮಾರ್ಗವೂ ಆಗಿರುತ್ತದೆ (**ಅನುವಾದಕರ ಟಿಪ್ಪಣಿ:** ಲಭ್ಯವಿರುವ ಕಡಿಮೆ ಪೂರೈಕೆಗೆ ಅನುಗುಣವಾಗಿ ಬೇಡಿಕೆಯನ್ನು ಕಡಿಮೆ ಮಾಡಲು ಆರ್ಥಿಕತೆ ಮಂದಗತಿಯಲ್ಲಿ ಸಾಗಬೇಕಾಗುತ್ತದೆ.) ಹೀಗಾಗಿ, ತೈಲ ಬೆಲೆಯಲ್ಲಿನ ನಿರಂತರ ಏರಿಕೆಯು ಜಾಗತಿಕ ಆರ್ಥಿಕತೆಯಲ್ಲಿ ಅನಿವಾರ್ಯವಾಗಿ ‘ಹಣದುಬ್ಬರದ ಜೊತೆಗೆ ಆರ್ಥಿಕ ಹಿಂಜರಿತಕ್ಕೂ ಕಾರಣವಾಗುತ್ತದೆ.



ತೈಲ ಬೆಲೆ ಏರಿಕೆಯಿಂದಾಗಿ ತೈಲವನ್ನು ಆಮದು ಮಾಡಿಕೊಳ್ಳುವ ಎಲ್ಲಾ ದೇಶಗಳ ಚಾಲ್ತಿ ಖಾತೆಯ ಕೊರತೆ (ರಫ್ತಿಗಿಂತ ಆಮದು ಹೆಚ್ಚಾದಾಗ ಉಂಟಾಗುವ ಆರ್ಥಿಕ ಅಸಮತೋಲನ.) ಹೆಚ್ಚಾಗುತ್ತದೆ. ಈ ಹಿಂದಿನ ಚರ್ಚೆಯಲ್ಲಿ ನಾವು ಒಂದು ವಿಷಯವನ್ನು ಗಮನಿಸಿರಲಿಲ್ಲ. ಅದೇಂದರೆ, ಈ ಹೆಚ್ಚುವರಿ ಕೊರತೆಯನ್ನು ಸರಿದೂಗಿಸಲು ಹಣಕಾಸಿನ ನೆರವು ಸುಲಭವಾಗಿ ಸಿಗುತ್ತದೆ ಎಂದು ನಾವು ಭಾವಿಸಿದ್ದೆವು. ಉದಾಹರಣೆಗೆ, ತೈಲ ರಫ್ತು ಮಾಡುವ ದೇಶಗಳು ಬ್ಯಾಂಕುಗಳಲ್ಲಿ ಇಡುವ ಹೆಚ್ಚಿನ ಹಣವನ್ನು, ಅದೇ ಬ್ಯಾಂಕುಗಳು ತೈಲ ಆಮದು ಮಾಡಿಕೊಳ್ಳುವ ದೇಶಗಳಿಗೆ ಸಾಲವಾಗಿ ನೀಡಿ ಅವರ ಕೊರತೆಯನ್ನು

ನೀಗಿಸುತ್ತವೆ ಎಂದು ಭಾವಿಸಿದ್ದೆವು.
ಆದರೆ, ಜಗತ್ತಿನ ಉತ್ತರದ ಶ್ರೀಮಂತ ದೇಶಗಳಿಗೆ ಹೋಲಿಸಿದರೆ, ಜಗತ್ತಿನ ದಕ್ಷಿಣದ ಬಡ ಅಥವಾ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅಂತರರಾಷ್ಟ್ರೀಯ ಬ್ಯಾಂಕುಗಳ ಸಾಲ ನೀಡಲು ಹಿಂಜರಿಯುತ್ತವೆ. ಈ ಕಾರಣದಿಂದಾಗಿ ಆ ದೇಶಗಳಿಗೆ ತಮ್ಮ ಹೆಚ್ಚುತ್ತಿರುವ ಆರ್ಥಿಕ ಕೊರತೆಯನ್ನು ಸರಿದೂಗಿಸಲು ಸಾಲ ಪಡೆಯುವುದು ಕಷ್ಟವಾಗುತ್ತದೆ. ಇದರ ಪರಿಣಾಮವಾಗಿ ಆ ದೇಶಗಳ ಹಣದ ಮೌಲ್ಯ ಕುಸಿಯಲಾರಂಭಿಸುತ್ತದೆ. ಅಷ್ಟೇ ಅಲ್ಲದೆ, ಅತ್ಯಂತ ಕಠಿಣವಾದ ಕಟ್ಟುನಿಟ್ಟಿನ ಆರ್ಥಿಕ ಷರತ್ತುಗಳಿಗೆ ಒಪ್ಪಿಕೊಂಡು ವಿದೇಶಿ ಸಾಲ ಪಡೆಯಬೇಕಾಗುತ್ತದೆ. ಅಥವಾ ತಮ್ಮಲ್ಲಿರುವ ಖನಿಜ ಸಂಪನ್ಮೂಲಗಳನ್ನು ವಿದೇಶಿ ಸಾಲದಾತರಿಗೆ ಅಡಮಾನವಿಟ್ಟು ಸಾಲ ಪಡೆಯಬೇಕಾಗುತ್ತದೆ. ಇಂತಹ ದೇಶಗಳಲ್ಲಿ ಹಣದುಬ್ಬರವು ಅತ್ಯಂತ ತೀವ್ರವಾಗಿರುತ್ತದೆ. ಇದಕ್ಕೆ ತೈಲ ಬೆಲೆ ಏರಿಕೆಯಷ್ಟೇ ಕಾರಣವಲ್ಲ. ಹಣದ ಮೌಲ್ಯದ ಕುಸಿತದಿಂದ ಆಮದು ಮಾಡಿಕೊಳ್ಳುವ ಪ್ರತಿಯೊಂದು ವಸ್ತುವಿನ ಬೆಲೆಗಳೂ ಹೆಚ್ಚಾಗಿರುತ್ತದೆ. ಇದು ಕೂಡ ಹಣದುಬ್ಬರಕ್ಕೆ ಕಾರಣವಾಗಿರುತ್ತದೆ."

ಅದೇ ರೀತಿ, ಈ ದೇಶಗಳಲ್ಲಿ ಆರ್ಥಿಕ ಹಿಂಜರಿತವು ಅತ್ಯಂತ ತೀವ್ರವಾಗಿರುತ್ತದೆ. ಇದಕ್ಕೆ ಹಣದುಬ್ಬರದಿಂದಾಗಿ ಸರಕು ಮತ್ತು ಸೇವೆಗಳಿಗೆ ಸ್ಥಳೀಯ ಜನರ ಬೇಡಿಕೆ ಕಡಿಮೆಯಾಗುವುದು ಕೇವಲ ಒಂದು ಕಾರಣ. ವಿದೇಶಿ ಸಾಲದಾತರು ಹೇರುವ 'ಕಟ್ಟುನಿಟ್ಟಿನ ಆರ್ಥಿಕ ಮಿತಿಗಳು (Austerity Measures) ಕೂಡ ಆರ್ಥಿಕ ಹಿಂಜರಿತಕ್ಕೆ ಕಾರಣ. ಇದರ ನೇರ ಪರಿಣಾಮ ಅಂದರೆ ದೇಶಗಳ ಜನರ ಸಂಕಷ್ಟಗಳು ಇನ್ನಷ್ಟು ತೀವ್ರಗೊಳ್ಳುತ್ತವೆ. ಆದ್ದರಿಂದ, ಈ ಅನೈತಿಕ ಮತ್ತು ಅಕ್ರಮ ಯುದ್ಧವನ್ನು ನಿಲ್ಲಿಸುವಂತೆ ಅಮೆರಿಕದ ಮೇಲೆ ಈ ದೇಶಗಳು ಜರೂರಾಗಿ ಒತ್ತಡ ಹೇರಬೇಕು.

ಜಾಗತಿಕ ತೈಲ ಬೆಲೆಗಳ ಸತತ ಏರಿಕೆಯಿಂದ ಭಾರತಕ್ಕೆ ತೀವ್ರವಾಗಿ ತೊಂದರೆಯಾಗುತ್ತದೆ. ಹಾರ್ಮುಜ್ ಜಲಸಂಧಿಯ ಮೂಲಕ ಹಾದು ಬರುವ ಸುಮಾರು ಶೇಕಡ 84 ಪ್ರತಿಶತದಷ್ಟು ಕಚ್ಚಾ ತೈಲವು ಚೀನಾ, ಭಾರತ, ಜಪಾನ್ ಮತ್ತು ದಕ್ಷಿಣ ಕೊರಿಯಾದಂತಹ ಏಷ್ಯಾದ ದೇಶಗಳಿಗೆ ಸರಬರಾಜಾಗುತ್ತದೆ. ಆದ್ದರಿಂದ ಈ ಜಲಸಂಧಿ ಮುಚ್ಚಲ್ಪಟ್ಟರೆ, ಜಾಗತಿಕ ತೈಲ ಬೆಲೆ ಮತ್ತು ವಿದೇಶಿ ವಿನಿಮಯ ದರಗಳ ಮೇಲಾಗುವ ಪರಿಣಾಮದ ಜೊತೆಗೆ, ಈ ದೇಶಗಳ ತೈಲ ಪೂರೈಕೆಯ ಲಭ್ಯತೆಯ ಮೇಲೂ ನೇರ ಪರಿಣಾಮ ಬೀರುತ್ತದೆ. ಪ್ರಮುಖವಾಗಿ ಭಾರತಕ್ಕೂ ಹೊಡೆತ ಬೀಳುತ್ತದೆ.

ತೈಲ ಬೆಲೆ ಏರಿಕೆಯ ಪ್ರಭಾವವನ್ನು ತಪ್ಪಿಸಲು ಡೊನಾಲ್ಡ್ ಟ್ರಂಪ್ ರಷ್ಯಾದಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲು ಭಾರತಕ್ಕೆ ಸ್ವಲ್ಪ ಸಮಯದವರೆಗೆ 'ಅನುಮತಿ' ನೀಡಿದ್ದಾರೆ. (ನಮ್ಮ ಸ್ವಾತಂತ್ರ್ಯ ಬಂದು ಎಂಟು ದಶಕಗಳಾಗುತ್ತಾ ಬಂದರೂ, ನಮಗೆ ಬೇಕಾದ ದೇಶದಿಂದ ತೈಲ ಆಮದು ಮಾಡಿಕೊಳ್ಳಲು ನಾವು ಇನ್ನೂ ಒಂದು ವಸಾಹತಿನಂತೆ 'ಅನುಮತಿ' ಪಡೆಯಬೇಕಾಗಿರುವುದು ನಮ್ಮ ವಸಾಹತುಶಾಹಿ ವಿರೋಧಿ ಹೋರಾಟಕ್ಕೆ ಮಾಡಿದ ಅವಮಾನವಾಗಿದೆ; ಮತ್ತು ಟ್ರಂಪ್‌ಗೆ ಸರಿಯಾದ ಉತ್ತರ ನೀಡುವ ಬದಲು ಅಂತಹ 'ಅನುಮತಿ'ಯನ್ನು ವಿನಮ್ರವಾಗಿ ಒಪ್ಪಿಕೊಳ್ಳುವ ಸರ್ಕಾರ ನಮ್ಮಲ್ಲಿರುವುದು ಒಂದು ದುರಂತವಾಗಿದೆ). ಆದರೆ ಈ 'ಅನುಮತಿ' ಕೂಡ ಕೇವಲ ಒಂದು ತಿಂಗಳ ಅಲ್ಪಾವಧಿಗೆ ಮಾತ್ರ, ಅದರ ನಂತರ ಮೇಲೆ ಗಮನಿಸಿದ ಕಠಿಣ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ, ಭಾರತವು ಅಮೆರಿಕ ಮತ್ತು ಇಸ್ರೇಲ್‌ನ ಆಕ್ರಮಣವನ್ನು ಪ್ರತಿಭಟಿಸದೇ ಸುಮ್ಮನಿರುವುದು ಅತ್ಯಂತ ಆತ್ಮಹತ್ಯಾತ್ಮಕ ನಿರ್ಧಾರವಾಗುತ್ತದೆ.

ಇರಾನ್ ಹಾರ್ಮುಜ್ ಜಲಸಂಧಿಯನ್ನು ಬಂದ್ ಮಾಡಿ ತೈಲ ಬೆಲೆ ಏರಿಸುವುದರ ಹಿಂದಿನ ನಿಜವಾದ ಉದ್ದೇಶ ಜಾಗತಿಕ ದಕ್ಷಣದ ದೇಶಗಳಲ್ಲಿ ಈ ಯುದ್ಧಕ್ಕೆ ವಿರೋಧವನ್ನು ಮೂಡಿಸುವುದು. ಈ ಯುದ್ಧ ಕೇವಲ ಇರಾನ್ ವಿರುದ್ಧ ಅಲ್ಲ, ಇದು ದಕ್ಷಿಣದ ದೇಶಗಳ ವಿರುದ್ಧವೂ ಹೌದು. ಇದರಿಂದ ಈ ದೇಶಗಳಿಗೆ ತುಂಬಾ ತೊಂದರೆಯಾಗುತ್ತದೆ ಎಂದು ಜಗತ್ತಿನ ಬಡ ರಾಷ್ಟ್ರಗಳಿಗೆ ಅರ್ಥ ಮಾಡಿಸೋಕೆ ಇರಾನ್ ಹೀಗೆ ಮಾಡ್ತಿದೆ. ಹಾಗಾಗಿ ನಾವೆಲ್ಲಾ ಸುಮ್ಮನೆ ಇರಬಾರದು ಎಂಬುದನ್ನು ಮನವರಿಕೆ ಮಾಡಿಕೊಡೋಕೆ ಪ್ರಯತ್ನಿಸುತ್ತಿದೆ. ಅವರ ಪ್ಲಾನ್. ಇರಾನ್ ಮಿಲಿಟರಿ ಕಮಾಂಡರ್‌ಗಳ ಲೆಕ್ಕಾಚಾರದ ಪ್ರಕಾರ, ತೈಲ ಬೆಲೆ ಒಂದು ಬ್ಯಾರೆಲ್‌ಗೆ ಬರೋಬ್ಬರಿ $200 ಡಾಲರ್ ದಾಟಬಹುದು. ಅದು ಜಗತ್ತಿನ ಜನರ ಬದುಕನ್ನೇ ತೀವ್ರವಾಗಿ ಘಾಸಿಗೊಳಿಸುತ್ತದೆ. ಹಾಗಾಗಿ ಅವರೆಲ್ಲಾ ತಕ್ಷಣ ಈ ಸಾಮ್ರಾಜ್ಯಶಾಹಿ ಆಕ್ರಮಣದ ವಿರುದ್ಧ ಧ್ವನಿ ಎತ್ತಲೇಬೇಕು.


ಈಗ ಸುಮ್ಮನೆ ಇರುವುದರ ಪರಿಣಾಮ ಮುಂದೆ ತುಂಬಾ ದುಬಾರಿಯಾಗಬಹುದು. ಡೊನಾಲ್ಡ್ ಟ್ರಂಪ್ ತಾನು ಪ್ರಾರಂಭಿಸಿದ ಈ ಯುದ್ಧದಿಂದ ಅಮೆರಿಕೆಯ ಆರ್ಥಿಕತೆಯಲ್ಲಿ ಹಣದುಬ್ಬರದ ಜೊತೆಗೆ ಆರ್ಥಿಕ ಹಿಂಜರಿತ ತೀವ್ರಗೊಂಡು ಅದರ ಪರಿಣಾಮವಾಗಿ ಹುಟ್ಟಿಕೊಂಡ ಜನರ ತೀವ್ರ ಸಿಟ್ಟನ್ನು ಎದುರಿಸಬೇಕಾಗಿ ಬಂದಾಗ, ಈ ಯುದ್ಧವನ್ನ ಬೇಗ ಮುಗಿಸೋಕೆ ಇರಾನ್ ಮೇಲೆ ಸಣ್ಣ ಪ್ರಮಾಣದ 'ಅಣುಬಾಂಬ್' ಹಾಕೋ ಸಾಹಸಕ್ಕೂ ಕೈ ಹಾಕಬಹುದು! ನೆನಪಿಡಿ, ಜಗತ್ತಿನಲ್ಲಿ ಬೇರೆ ದೇಶದ ಮೇಲೆ ಅಣುಬಾಂಬ್ ಹಾಕಿರೋ ಏಕೈಕ ದೇಶ ಅಂದ್ರೆ ಅದು ಅಮೆರಿಕಾ. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಜೇಮ್ಸ್ ಗಾಲ್‌ಬ್ರೆತ್ ಹೇಳೋ ಪ್ರಕಾರ, ಈ ಹಿಂದೆಯೂ ಅಮೆರಿಕಾ ಮೂರು ಬಾರಿ ಇಂತಹ ಅನಾಹುತ ಮಾಡೋಕೆ ಹೋಗಿ ಒಳಗಿನವರ ಸಲಹೆಯಿಂದ ಹಿಂದೆ ಸರಿದಿತ್ತು. "ಇಡೀ ಜಗತ್ತು ಅಮೆರಿಕಾ ಸರ್ಕಾರವನ್ನು ಎದುರು ನಿಂತು, ಅದು ಪ್ರಾರಂಭಿಸಿರುವ ಈ ಯುದ್ಧವನ್ನು ನಿಸ್ಸಂದಿಗ್ಧವಾಗಿ ವಿರೋಧಿಸದಿದ್ದರೆ ಮತ್ತು ಅಂತರರಾಷ್ಟ್ರೀಯ ಕಾನೂನುಗಳ ಬಗ್ಗೆ ಅಮೆರಿಕಾಕ್ಕಿರುವ ತಾತ್ಸಾರ ಮನೋಭಾವವನ್ನು ಖಂಡಿಸದಿದ್ದರೆ, ಆ ಭಯಾನಕ ಹೆಜ್ಜೆಯನ್ನು (ಅಣುಬಾಂಬ್ ಬಳಕೆ) ಅಮೆರಿಕಾ ಮತ್ತೊಮ್ಮೆ ಇಡುವ ಸಾಧ್ಯತೆ ನಿಜವಾಗಿಯೂ ಎದುರಾಗಬಹುದು.

ಕೃಪೆ: ಪೀಪಲ್ ಡೆಮಾಕ್ರೆಸಿ ಪತ್ರಿಕೆಯಿಂದ ತೆಗೆದುಕೊಳ್ಳಲಾಗಿದೆ.



ಆಡಂ ಸ್ಮಿತ್ @ 250

ಬದಲಾಗುತ್ತಿರುವ ಜಾಗತಿಕ ಆರ್ಥಿಕತೆ



ಆಡಂ ಸ್ಮಿತ್ ಅವರ ವೆಲ್ತ್ ಆಫ್ ನೇಷನ್ ಪುಸ್ತಕಕ್ಕೆ 250 ವರ್ಷ. ಅದು ಇಂದಿಗೂ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ. 2001ರಲ್ಲಿ ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದಿದ್ದ ಮೈಕೆಲ್ ಸ್ಪೆನ್ಸ್ ಪ್ರಾಜೆಕ್ಟ್ ಸಿಂಡಿಕೇಟಿನಲ್ಲಿ ಅಡಂ ಸ್ಮಿತ್ ಅವರ ಚಿಂತನೆಗಳ ಬಗ್ಗೆ ಇತ್ತೀಚೆಗೆ ಒಂದು ಲೇಖನವನ್ನು ಬರೆದಿದ್ದಾರೆ. ಸ್ಪೆನ್ಸ್ ಗುರುತಿಸುವಂತೆ ಆಡಂ ಸ್ಮಿತ್ ಅವರ ಚಿಂತನೆಗಳಲ್ಲಿ ಎರಡು ಪ್ರಮುಖ ವಿಚಾರಗಳು ಇಂದಿಗೂ ಎದ್ದು ಕಾಣುತ್ತವೆ:

ಒಂದು, ಮಾರುಕಟ್ಟೆಯ 'ಅದೃಶ್ಯ ಹಸ್ತ' ಮಾರುಕಟ್ಟೆಯಲ್ಲಿನ ವ್ಯವಹಾರಗಳು ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಹಂಚಿಕೆ ಮಾಡುತ್ತವೆ. ಆದರೆ ಇದು ಸರಿಯಾಗಿ ಕೆಲಸ ಮಾಡಬೇಕೆಂದರೆ ಕೆಲವು ಶರತ್ತುಗಳಿರಬೇಕು: ಹಣದ ಮೌಲ್ಯ ಸ್ಥಿರವಾಗಿರಬೇಕು. ವ್ಯಾಪಾರ ಮಾಡುವವರಲ್ಲಿ ಪ್ರಾಮಾಣಿಕತೆ ಮತ್ತು ನಂಬಿಕೆ ಇರಬೇಕು. ವ್ಯವಸ್ಥೆಯಲ್ಲಿ ಆಸ್ತಿ ಹಕ್ಕುಗಳಿಗೆ ರಕ್ಷಣೆ ಇರಬೇಕು. ಆದರೆ, ಮಾಲಿನ್ಯದಂತಹ ಬಾಹ್ಯ ಪರಿಣಾಮಗಳು ಮತ್ತು ಮಾಹಿತಿಯ ಕೊರತೆ ಈ 'ಅದೃಶ್ಯ ಹಸ್ತದ' ಪರಿಣಾಮಕಾರಿತ್ವವನ್ನು ಮತ್ತು ಸಾಧನೆಯನ್ನು ಕುಂಠಿತಗೊಳಿಸಬಹುದು.

ಎರಡನೆಯ ಮತ್ತು ಬಹುಶಃ ಅತ್ಯಂತ ಪ್ರಮುಖವಾದ ಒಳನೋಟವೆಂದರೆ. ಶ್ರಮವಿಭಜನೆಯಿಂದ ಅಥವಾ ಇಂದು ನಾವು ಕರೆಯುವ 'ವಿಶೇಷ ಪರಿಣತಿ'ಯಿಂದ ಆರ್ಥಿಕತೆಯ ದಕ್ಷತೆ ಹಾಗೂ ಉತ್ಪಾದಕತೆಯು ಹೆಚ್ಚುತ್ತದೆ. ವಿಶೇಷ ಪರಿಣತಿಯನ್ನು ಹೊಂದಿರುವ ಆರ್ಥಿಕತೆಯು ವಿವಿಧ ಬಗೆಯ ಜ್ಞಾನ ಮತ್ತು ನೈಪುಣ್ಯತೆಯಿಂದಾಗಿ ಬಲಗೊಳ್ಳುತ್ತದೆ. ಬೃಹತ್ ಪ್ರಮಾಣದಲ್ಲಿ ನಡೆಯುವ ಉತ್ಪಾದನೆಯಿಂದ ಇದಕ್ಕೆ ಲಾಭವಾಗುತ್ತದೆ. ಹಾಗೆಯೇ ನಿರಂತರ ಕಲಿಕೆಯಿಂದಲೂ ಇದು ಅನುಕೂಲ ಪಡೆದುಕೊಳ್ಳುತ್ತದೆ ಮತ್ತು ಹೊಸ ಆವಿಷ್ಕಾರಗಳಿಗೆ ಇರುವ ಪ್ರೇರಣೆಯೂ ಇದಕ್ಕೆ ಅನುಕೂಲವೆ.

ಆದರೆ, ಈ ವಿಶೇಷ ಪರಿಣತಿಯು ಯಶಸ್ವಿಯಾಗಬೇಕಾದರೆ ಅಲ್ಲಿ ವಿನಿಮಯ ಪದ್ಧತಿ (ಸರಕುಗಳ ಕೊಳ್ಳುವಿಕೆ ಮತ್ತು ಮಾರಾಟ) ಪರಿಣಾಮಕಾರಿಯಾಗಿರಬೇಕು. ಹಾಗಾಗಿಯೇ ಇದು ಸ್ಮಿತ್ ಅವರ 'ಅದೃಶ್ಯ ಹಸ್ತದ ತತ್ವವನ್ನೇ (ಅಂದರೆ ಜನರು ತಮ್ಮ ವೈಯಕ್ತಿಕ ಲಾಭಕ್ಕಾಗಿ ವ್ಯಾಪಾರ ಮಾಡಿದರೂ, ಮಾರುಕಟ್ಟೆಯು ತನ್ನಷ್ಟಕ್ಕೆ ತಾನೇ ಸಮಾಜಕ್ಕೆ ಬೇಕಾದ ಸಮತೋಲನವನ್ನು ಕಾಪಾಡಿಕೊಳ್ಳುತ್ತದೆ ಎನ್ನುವ ತತ್ವ) ಅವಲಂಬಿಸಿದೆ. ಈ ವಿಶೇಷ ಪರಿಣತಿಯು ಬೆಳೆದಂತೆಲ್ಲಾ, ಆರ್ಥಿಕತೆಯ ರಚನೆಯು ಹೆಚ್ಚು ಸಂಕೀರ್ಣವಾಗುತ್ತಾ ಹೋಗುತ್ತದೆ.

ಅಡಾಮ್ ಸ್ಮಿತ್ ಹೇಳಿದಂತೆ, ಈ ವಿಶೇಷ ಪರಿಣತಿ ಎಂಬುದು ಮಾರುಕಟ್ಟೆಯ ಹರವನ್ನು ಅವಲಂಬಿಸಿರುತ್ತದೆ. ಮಾರುಕಟ್ಟೆ ಸಣ್ಣದಾದರೆ ವಿಭಿನ್ನ ಬಗೆಯ ವಿಶೇಷ ವ್ಯವಹಾರಗಳು ನಡೆಯುವುದಕ್ಕೆ ಬೇಕಾದಷ್ಟು ಬೇಡಿಕೆ ಅಲ್ಲಿ ಇರುವುದಿಲ್ಲ. ಮಾರುಕಟ್ಟೆ ವಿಸ್ತಾರವಾಗಬೇಕಾದರೆ ವಿಸ್ತರಣೆಗೆ ತಗಲುವ ವೆಚ್ಚ ಕಮ್ಮಿಯಿರಬೇಕು. ಮಾರುಕಟ್ಟೆಯ ವಿಸ್ತರಣೆಯ ವೆಚ್ಚ ಕಡಿಮೆಯಾಗುವುದಕ್ಕೆ ಸಾರಿಗೆ ಮತ್ತು ಸಂವಹನ ವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕು. ಮಾರುಕಟ್ಟೆ ವಿಸ್ತಾರಗೊಂಡಷ್ಟು ವಿಶೇಷ ಪರಿಣತಿ ಹೆಚ್ಚೆಚ್ಚು ಬೆಳೆಯುವುದಕ್ಕೂ ಸಾಧ್ಯವಾಗುತ್ತದೆ.

ವಿಶೇಷ ಪರಿಣತಿಗೆ ಇರುವ ಮತ್ತೊಂದು ದೊಡ್ಡ ಅಡ್ಡಿಯೆಂದರೆ ಅದರಿಂದ ಉಂಟಾಗುವ ಅಪಾಯ. ಆರ್ಥಿಕತೆಯ ಪರಿಣತಿಯ ಸ್ವರೂಪ ನಿರ್ದಿಷ್ಟ ರಚನೆಗಳನ್ನು ಅವಲಂಬಿಸಿರುತ್ತದೆ. ರಚನೆಗಳು ಸುಲಭವಾಗಿ ಬದಲಾಗುವುದಿಲ್ಲ. ಬದಲಾಗಲು ಸಮಯ ತೆಗೆದುಕೊಳ್ಳುತ್ತವೆ. ವ್ಯಾಪಾರ ವ್ಯವಸ್ಥೆಯಲ್ಲಿ ತೊಂದರೆಯಾದರೆ ಅಥವಾ ಹೊಸ ತಂತ್ರಜ್ಞಾನದ ಬರವಿನಿಂದಾಗಿ ಹಳೆಯ ಕೌಶಲಗಳು ಅಪ್ರಸ್ತುತವಾದರೆ, ಬದಲಾವಣೆ ಅನಿವಾರ್ಯವಾಗುತ್ತದೆ. ಈ ಸಂದರ್ಭದಲ್ಲಿ ವ್ಯಕ್ತಿಗಳು, ಉದ್ದಿಮೆಗಳು, ಮಾತ್ರವಲ್ಲ ಕೆಲವೊಮ್ಮೆ ಇಡೀ ಆರ್ಥಿಕತೆಯೇ ಬದಲಾಗಬೇಕಾಗುತ್ತದೆ. ಇದು ಬಹಳ ಕಷ್ಟಕರವಾದದ್ದು ಮತ್ತು ದೀರ್ಘ ಸಮಯ ಬೇಡುವಂತಹುದು. ಹತ್ತೊಂಬತ್ತನೇ ಮತ್ತು ಇಪ್ಪತ್ತನೇ ಶತಮಾನದ ಆರಂಭದಲ್ಲಿ, ಆರ್ಥಿಕತೆಗಳು ಹೆಚ್ಚು ಸ್ಪೆಷಲೈಸ್ ಆಗಲು ಪ್ರಾರಂಭವಾಯಿತು. ಈ ಬದಲಾವಣೆಯಿಂದ ಅಪಾಯಗಳು ಎದುರಾಗುತ್ತವೆ. ಅವನ್ನು ತಡೆಯುವುದಕ್ಕೆ ಹಲವಾರು ಹೊಸ ನೀತಿಗಳು ಮತ್ತು ವ್ಯವಸ್ಥೆಗಳು ಜಾರಿಗೆ ಬಂದವು. ಉದಾಹರಣೆಗೆ ಏಕಸ್ವಾಮ್ಯ ತಡೆಯುವ 'ಆ್ಯಂಟಿ-ಟ್ರಸ್ಟ್' ನಿಯಮಗಳಿಂದ ಹಿಡಿದು, ಬಡವರಿಗಾಗಿ 'ಸಾಮಾಜಿಕ ರಕ್ಷಣಾ ಕವಚ', ಅಲ್ಲಿಂದ ಆರ್ಥಿಕ ಹಾಗೂ ಹಣಕಾಸಿನ ಸ್ಥಿರತೆ ಕಾಪಾಡುವುದಕ್ಕೆ ಪರಿಹಾರಗಳು ಹೀಗೆ ಹಲವು ಕ್ರಮಗಳು ಜಾರಿಯಾದವು. ಆದರೆ, ಇವೆಲ್ಲವೂ ಹೆಚ್ಚಾಗಿ ಆಯಾ ದೇಶಗಳ ಮಟ್ಟಕ್ಕಷ್ಟೇ ಸೀಮಿತವಾಗಿದ್ದ ಪರಿಹಾರಗಳಾಗಿದ್ದವು. ಎರಡನೇ ಮಹಾಯುದ್ಧ ಮುಗಿದ ನಂತರ, ಈ ವಿಶೇಷ ಪರಿಣತಿ ಅನ್ನೋದು ಜಾಗತಿಕ ವಿದ್ಯಮಾನವಾಯಿತು.

ಯುದ್ಧದ ನಂತರದ ಆರ್ಥಿಕತೆಯನ್ನು ಮತ್ತೆ ಹಳಿಗೆ ತರಲು ಶುರುವಾದ ಈ ಪ್ರಯತ್ನ, ನೋಡನೋಡುತ್ತಲೇ ಒಂದು ದೊಡ್ಡ ಬದಲಾವಣೆಯಾಗಿ ರೂಪಾಂತರಗೊಂಡಿತು. ಹಳೆಯ ವಸಾಹತುಶಾಹಿ ಸಾಮ್ರಾಜ್ಯಗಳು ಮತ್ತು ಅವುಗಳ ಅಸಮತೋಲನದ ಆರ್ಥಿಕ ಪದ್ಧತಿಗಳು ಮರೆಯಾದವು; ಲಾಭಕೋರತನದ 'ಮರ್ಕೆಂಟಲಿಸಂ' ಜಾಗವನ್ನು 'ಮುಕ್ತ ವ್ಯಾಪಾರ' ಆಕ್ರಮಿಸಿಕೊಂಡಿತು. ಇದಕ್ಕೆ ಪೂರಕವಾಗಿ ಸಾರಿಗೆ ಮತ್ತು ಸಂವಹನ ತಂತ್ರಜ್ಞಾನದಲ್ಲಿ ಪ್ರಗತಿಯಾಯಿತು. ಡಿಜಿಟಲ್ ಕ್ರಾಂತಿ ಈ ಪ್ರಗತಿಯನ್ನು ತ್ವರಿತಗೊಳಿಸಿತು. ಇದರಿಂದ ಮಾರುಕಟ್ಟೆಯ ವ್ಯಾಪ್ತಿ ವಿಶಾಲವಾಯಿತು. ಸ್ಪೆಷಲೈಸೇಶನ್‌ಗೆ ಇದ್ದ ಮೊದಲ ಅಡ್ಡಿ ಸಡಿಲವಾಯಿತು.

ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಈ ಬದಲಾವಣೆ ಒಂದು ದೊಡ್ಡ ವರದಾನವಾಯಿತು. 'ವಿಶೇಷ ಪರಿಣತಿಯಿಂದ' ಉತ್ಪಾದನೆ ಹೆಚ್ಚು ಪರಿಣಾಮಕಾರಿಯಾಯಿತು. ಉತ್ಪಾದಕತೆ ಸುಧಾರಿಸಿತು. ಆದರೆ ಈ ದೇಶಗಳಲ್ಲಿ ತಲಾ ಜಿಡಿಪಿ ಕಡಿಮೆಯಿತ್ತು.



ಹಾಗಾಗಿ ಈ ದೇಶಗಳಿಗೆ ಸ್ಥಳೀಯವಾಗಿ ಹೆಚ್ಚಿನ ಉತ್ಪಾದಕತೆಗೆ ಬೇಕಾದಷ್ಟು ಬೇಡಿಕೆಯನ್ನು ಸೃಷ್ಟಿಸಲು ಸಾಧ್ಯವಿರಲಿಲ್ಲ. ಆದರೆ, ಯಾವಾಗ ಅವರಿಗೆ ವಿದೇಶಿ ಮಾರುಕಟ್ಟೆಗಳು ಮತ್ತು ತಂತ್ರಜ್ಞಾನಗಳ ಲಭ್ಯವಾಯಿತೋ, ಆಗ ಅವರು ತಮ್ಮಲ್ಲಿರುವ ತುಲನಾತ್ಮಕ ಅನುಕೂಲವನ್ನು ಬಳಸಿಕೊಂಡು ವೇಗವಾಗಿ ಜಿಡಿಪಿಯಲ್ಲಿ ಬೆಳವಣಿಗೆಯನ್ನು ಸಾಧಿಸಿದರು. ಈ ರೀತಿಯಾಗಿ, ಪರಿಣತಿ ಬೆಳೆದದ್ದರಿಂದ ಜಗತ್ತಿನ ಆರ್ಥಿಕ ಚಟುವಟಿಕೆಗಳು ಕೇವಲ ಶ್ರೀಮಂತ ದೇಶಗಳಿಗೆ ಸೀಮಿತವಾಗದೆ ಬೇರೆ ಕಡೆಗಳಿಗೂ ಹರಡತೊಡಗಿದವು.

ಮೈಕೆಲ್ ಸ್ಪೆನ್ಸ್ ಮುಂದುವರಿದು ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಮಾತನಾಡಿದ್ದಾರೆ. "ಆರ್ಥಿಕ ವ್ಯವಸ್ಥೆಯಲ್ಲಿ ತೀರಾ ವೇಗವಾಗಿ ಈ ರಚನಾತ್ಮಕ ಪಲ್ಲಟಗಳು ನಡೆದುಹೋದವು. ಹೆಚ್ಚುತ್ತಿರುವ ಅಪಾಯಗಳನ್ನು ನಿಯಂತ್ರಿಸುವುದಕ್ಕೆ ಬೇಕಾದ ಆಡಳಿತಾತ್ಮಕ ವ್ಯವಸ್ಥೆಗಳು ರೂಪುಗೊಳ್ಳುವ ಮೊದಲೇ ಸಮಸ್ಯೆಗಳು ಉಲ್ಬಣಗೊಂಡವು. ಸ್ವಲ್ಪ ಸಮಯದವರೆಗೆ ಇದು ದೊಡ್ಡ ಸಮಸ್ಯೆಯಾಗಿ ಕಾಣಲೇ ಇಲ್ಲ. ಏಕೆಂದರೆ, ಅಮೆರಿಕದಂತಹ ಬಲಿಷ್ಠ ದೇಶಗಳು ಜಾಗತಿಕ ಆರ್ಥಿಕ ವ್ಯವಸ್ಥೆಯ ಜವಾಬ್ದಾರಿಯನ್ನು ಹೊತ್ತಿದ್ದವು; ಅವರೇ ನಿಯಮಗಳನ್ನು ರೂಪಿಸಿ, ಇಡೀ ವ್ಯವಸ್ಥೆಯನ್ನು ಕಾಯುವ ಸಂಸ್ಥೆಗಳಿಗೆ ಬೆನ್ನೆಲುಬಾಗಿದ್ದರು. ಆದರೆ ಕ್ರಮೇಣ, ಜಾಗತಿಕ ಆರ್ಥಿಕ ಶಕ್ತಿಯ ಕೇಂದ್ರಗಳು ಬದಲಾಗಿ ಪರಿಸ್ಥಿತಿ ಒಂದು ನಿರ್ಣಾಯಕ ತಿರುವಿಗೆ ಬಂದು ನಿಂತಿತು. 'ಮಾರುಕಟ್ಟೆಯ ವ್ಯಾಪ್ತಿ' ಅಥವಾ ಬೇಡಿಕೆಗೆ ಇದ್ದ ಮಿತಿಗಳು ಸಡಿಲವಾದಂತೆಲ್ಲಾ, ವ್ಯವಸ್ಥೆಯಲ್ಲಿನ ಅಪಾಯಗಳೇ ಆರ್ಥಿಕತೆಗೆ ದೊಡ್ಡ ಅಡ್ಡಿಯಾಗಿ ಪರಿಣಮಿಸಿದವು. ವ್ಯವಸ್ಥೆಯಲ್ಲಿನ ಸಮಸ್ಯೆಗಳು ಹೆಚ್ಚಾದಂತೆ ಶ್ರೀಮಂತ ದೇಶಗಳಲ್ಲಿನ ಜನಸಾಮಾನ್ಯರಲ್ಲಿ ಈ ವ್ಯವಸ್ಥೆಯ ವಿರುದ್ಧ ಅಸಮಾಧಾನ ಮೂಡಿತು. ಇದು ಸಾಮಾಜಿಕ ಹಾಗೂ ರಾಜಕೀಯ ವಿರೋಧಕ್ಕೆ ಕಾರಣವಾಯಿತು. ಇದಕ್ಕೆ ಪೂರಕವಾಗಿ ಹವಾಮಾನ ಬದಲಾವಣೆ, ಕೋವಿಡ್ ಸಾಂಕ್ರಾಮಿಕ, ಉಕ್ರೇನ್ ಮತ್ತು ಗಾಜಾ ಯುದ್ಧಗಳು ಹಾಗೂ ದೇಶಗಳ ನಡುವಿನ ರಾಜಕೀಯ ಸಂಘರ್ಷಗಳು ಈ ಪರಿಸ್ಥಿತಿಯನ್ನು ಮತ್ತಷ್ಟು ಬಿಗಿಗೊಳಿಸಿದವು. ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಅವರು ತಮ್ಮ ಅಮೇರಿಕೆ ಮೊದಲು ವಿದೇಶಿ ನೀತಿ ಹಾಗೂ ದ್ವಿಪಕ್ಷೀಯ ಒಪ್ಪಂದಗಳಿಗೆ ಆದ್ಯತೆ ನೀಡುವ ನೀತಿಯನ್ನು ಮುಂದಿಟ್ಟುಕೊಂಡು ಮತ್ತೆ ಅಧ್ಯಕ್ಷರಾದ ಮೇಲೆ ಇದು ಇನ್ನಷ್ಟು ಗಟ್ಟಿಯಾಯಿತು."

ಸ್ಪೆನ್ಸ್ ಅವರು ಇನ್ನೊಂದು ಗಂಭೀರ ಬೆಳವಣಿಗೆಯನ್ನು ಗಮನಿಸುತ್ತಾರೆ. "ಇದರ ಪರಿಣಾಮವಾಗಿ, ಇಂದು ಬಹಳಷ್ಟು ದೇಶಗಳು ಆರ್ಥಿಕ ಭದ್ರತೆಯನ್ನು ದೇಶದ ರಕ್ಷಣೆಯಷ್ಟೇ ಮುಖ್ಯವೆಂದು ಭಾವಿಸುತ್ತಿವೆ. ದೇಶದ ಒಳಗಡೆ ಕೆಲಸಗಳಲ್ಲಿ ವಿಶೇಷ ಪರಿಣತಿಗೆ ಅಷ್ಟೇ ಆದ್ಯತೆಯಿದೆ. ಆದರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಇದು ಈಗ ಕಡಿಮೆಯಾಗುತ್ತಿದೆ. ಈ ಬದಲಾವಣೆ ಮುಂದೆ ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂದು ಹೇಳುವುದು ಕಷ್ಟ. ಆದರೆ ಇದರಿಂದ ದೇಶದ ಉತ್ಪಾದನೆ ಮತ್ತು ಬೆಳವಣಿಗೆಯ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ಆರ್ಥಿಕ ಅಪಾಯವನ್ನು ಕಡಿಮೆ ಮಾಡಲು ಮತ್ತು ಸುರಕ್ಷತೆ ಹೆಚ್ಚಿಸಿಕೊಳ್ಳಲು ನಾವು ತೆರುತ್ತಿರುವ ಬೆಲೆ ಇದು. ಕಡಿಮೆ ತಲಾ ಆದಾಯ ಅಥವಾ ಕಡಿಮೆ ಜನಸಂಖ್ಯೆ ಇರುವ ದೇಶಗಳಿಗೆ ಇದರಿಂದ ಹೆಚ್ಚು ತೊಂದರೆಯಾಗುತ್ತದೆ. ಅವರಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಎಷ್ಟು ಅವಕಾಶ ಸಿಗುತ್ತದೆ ಎನ್ನುವುದರ ಮೇಲೆ ಅವರ ನಷ್ಟದ ಪ್ರಮಾಣ ನಿರ್ಧಾರವಾಗುತ್ತದೆ."

ಸ್ಪೆನ್ಸ್ ಅವರು ಎಐ ಯುಗದಲ್ಲಿ ಅಡಂ ಸ್ಮಿತ್ ಅವರ ವಿಶೇಷ ಪರಿಣತಿಯ ಮಾದರಿಯನ್ನು ಪರಿಶೀಲಿಸುತ್ತಾರೆ. ಅವರು ಹೇಳುವಂತೆ "ಆಡಂ ಸ್ಮಿತ್ ಅವರ ಈ 'ಸ್ಪೆಷಲೈಸೇಶನ್' ಮಾದರಿ ಈಗ ಇನ್ನೂ ದೊಡ್ಡ ಬದಲಾವಣೆಯನ್ನು ಎದುರಿಸಬೇಕಾಗಿದೆ. ನೆನಪಿರಲಿ, ಈ ಮಾದರಿಯು ಅಷ್ಟು ಸುಲಭವಾಗಿ ಪಡೆಯಲು ಸಾಧ್ಯವಾಗದ ವಿಶೇಷ ಜ್ಞಾನ ಹಾಗೂ ಪರಿಣತಿಯನ್ನು ಇಂದು ಎದುರಿಸಬೇಕಾಗಿದೆ. ಆದರೆ ಜನರೇಟಿವ್ ಎಐ ಮಾದರಿಗಳು ಹಲವು ಬದಲಾವಣೆಗಳನ್ನು ತಂದಿವೆ. ಮುಖ್ಯವಾಗಿ ಯಾವುದೇ ವಿಷಯದ ಆಳವಾದ ಪರಿಣತಿಯನ್ನು ಬಯಸುವ ಯಾರಿಗೆ ಬೇಕಾದರೂ ಅತಿ ಕಡಿಮೆ ವೆಚ್ಚದಲ್ಲಿ ಒದಗಿಸುವ ಹಾದಿಯಲ್ಲಿವೆ."

ಇದರ ಪರಿಣಾಮ ತುಂಬಾ ಗಂಭೀರವಾಗಿರುತ್ತದೆ. ಪರಿಣತಿ ಅನ್ನೋದು ಎಲ್ಲರಿಗೂ ಸುಲಭವಾಗಿ ಸಿಗೋಕೆ ಶುರುವಾದ್ರೆ, ಅದರ ಬೆಲೆ ಅದರಷ್ಟಕ್ಕೆ ಕಮ್ಮಿಯಾಗುತ್ತದೆ. ಸಲೀಸಾಗಿ ವಿವರಿಸಲು ಅಥವಾ ದಾಖಲಿಸಲು ಸಾಧ್ಯವಾಗದ ಜ್ಞಾನ ಹಾಗೂ ಕೌಶಲಗಳ ಬೆಲೆಗಳು ಮಾತ್ರ ಹೆಚ್ಚುತ್ತವೆ. ಅಂದ್ರೆ, ಕಳೆದ 250 ವರ್ಷಗಳಿಂದ ಮನುಷ್ಯನ ಜ್ಞಾನಕ್ಕೆ ಏನು ಬೆಲೆ ಇತ್ತೋ, ಅದು ಇನ್ಮುಂದೆ ಇರೋದಿಲ್ಲ. ಮಾನವ ಸಂಪನ್ಮೂಲದ ಒಂದು ಭಾಗದ ಬೆಲೆ ಕುಸಿದ್ರೆ, ಇನ್ನೊಂದು ಭಾಗದ ಮೌಲ್ಯ ಆಕಾಶಕ್ಕೆ ಏರಬಹುದು. ಇವೆರಡರಲ್ಲಿ ಯಾವುದರ ಪಾಲು ಎಷ್ಟು ಅನ್ನೋದೇ ಈಗ ನಾವು ಸಂಶೋಧಿಸಬೇಕಿರೋದು.

ಸ್ಪೆನ್ಸ್ ಗಮನಿಸುವಂತೆ "ಕಳೆದ 250 ವರ್ಷಗಳಲ್ಲಿ ಬಹುತೇಕ 'ಮಾನವ ಬಂಡವಾಳಕ್ಕೆ' ಇದ್ದ ಬೆಲೆ ಭವಿಷ್ಯದಲ್ಲಿ ಇಲ್ಲದೆ ಹೋಗಬಹುದು. ಆದರೆ ಕೆಲವು ಬಗೆಯ ಮಾನವ ಬಂಡವಾಳಕ್ಕೆ ಹೆಚ್ಚಿನ ಮೌಲ್ಯವೂ ಸಿಗಬಹುದು. ಆದರೆ ಯಾವುದರ ಬೆಲೆ ಕುಸಿಯುತ್ತದೆ, ಯಾವುದರ ಮೌಲ್ಯ ಹೆಚ್ಚುತ್ತದೆ ಅಥವಾ ಯಾವುದರ ಪಾಲು ಎಷ್ಟಿರುತ್ತದೆ ಎಂಬುದು ಸಂಶೋಧಿಸಬೇಕಾದ ವಿಷಯ."

ಮೈಕೆಲ್ ಸ್ಪೆನ್ಸ್ ಅವರು ಹೇಳುವಂತೆ "ಸ್ಮಿತ್ ಈ ಪರಿಣತಿಯ ಪರಿಕಲ್ಪನೆಯನ್ನು ಪರಿಚಯಿಸಿ 250 ವರ್ಷಗಳೇ ಕಳೆದಿದ್ದರೂ ಅದು ಇವತ್ತಿಗೂ ನಮ್ಮ ಆರ್ಥಿಕತೆಯ ಪ್ರಮುಖ ಲಕ್ಷಣವಾಗಿದೆ. ಆದ್ರೆ ಅದು ಕೂಡ ಗಣನೀಯವಾಗಿ ಬದಲಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿನ ಅಪಾಯಗಳು ಹೆಚ್ಚಿರೋದ್ರಿಂದ, ದೇಶಗಳು ಒಬ್ಬರನ್ನೊಬ್ಬರು ನಂಬೋದು ಸ್ವಲ್ಪ ಮಟ್ಟಿಗೆ ಕಡಿಮೆ ಆಗ್ತಿದೆ. ಕೃತಕ ಬುದ್ಧಿಮತ್ತೆಯಿಂದ ಈ ವಿಶೇಷ ಪರಿಣತಿಯೇನು ಕಡಿಮೆಯಾಗುವುದಿಲ್ಲ. ಆದರೆ ಜ್ಞಾನ ಒಬ್ಬರಿಂದ ಇನ್ನೊಬ್ಬರಿಗೆ ತಲುಪುವ ರೀತಿ ಬದಲಾಗುತ್ತೆ. ಇದರಿಂದ ಯಾವ ಕೆಲಸಕ್ಕೆ ಎಷ್ಟು ಬೆಲೆ ಕೊಡಬೇಕು ಅಥವಾ ಯಾವ ಜ್ಞಾನಕ್ಕೆ ಎಷ್ಟು ಗೌರವಧನ ಸಿಗಬೇಕು ಅನ್ನೋ ಲೆಕ್ಕಾಚಾರವೇ ಬುಡಮೇಲಾಗಬಹುದು."

ಮೈಕೆಲ್ ಸ್ಪೆನ್ಸ್ ಅವರು 2001ರಲ್ಲಿ ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಅಮೆರಿಕದ ಪ್ರಸಿದ್ಧ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಗೌರವಾನ್ವಿತ ಪ್ರೊಫೆಸರ್ ಆಗಿದ್ದಾರೆ. ಇವರು ಹೂವರ್ ಇನ್‌ಸ್ಟಿಟ್ಯೂಶನ್, ಜನರಲ್ ಅಟ್ಲಾಂಟಿಕ್ ಮತ್ತು ಏಷ್ಯಾ ಗ್ಲೋಬಲ್ ಇನ್‌ಸ್ಟಿಟ್ಯೂಟ್ ಅಂತಹ ಪ್ರತಿಷ್ಠಿತ ಜಾಗತಿಕ ಸಂಸ್ಥೆಗಳಿಗೆ ಹಿರಿಯ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ.



ಅಡಂ ಸ್ಮಿತ್ ಕುರಿತು

ಅಮರ್ತ್ಯ ಸೇನ್

(ನೊಬೆಲ್ ವಿಜೇತ ಅರ್ಥಶಾಸ್ತ್ರಜ್ಞ)
ಅಮರ್ತ್ಯ ಸೇನ್ ಅವರು ಸ್ಮಿತ್ ಅವರ ವಿಚಾರಗಳನ್ನು ಕೇವಲ ಮಾರುಕಟ್ಟೆಗೆ ಸೀಮಿತಗೊಳಿಸದೆ, ಅದರಲ್ಲಿನ 'ನೈತಿಕತೆ'ಯನ್ನು ಸದಾ ಎತ್ತಿ ತೋರಿಸುತ್ತಾರೆ.

ಸ್ಮಿತ್ ಅವರ 'ದ ವೆಲ್ತ್ ಆಫ್ ನೇಷನ್ಸ್' ಅನ್ನು ಬಂಡವಾಳಶಾಹಿ ವ್ಯವಸ್ಥೆಯ ಬೈಬಲ್ ಎಂದು ಕರೆಯಲಾಗುತ್ತದೆ. ಆದರೆ ಅದರ ನೈತಿಕ ಅಡಿಪಾಯವಿರುವುದು ಅವರ ಇನ್ನೊಂದು ಕೃತಿಯಾದ 'ದ ಥಿಯರಿ ಆಫ್ ಮಾರಲ್ ಸೆಂಟಿಮೆಂಟ್ಸ್'ನಲ್ಲಿ. ಸ್ಮಿತ್ ಮಾರುಕಟ್ಟೆಯನ್ನು ಮನುಷ್ಯತ್ವಕ್ಕೆ ಪರ್ಯಾಯವಾಗಿ ನೋಡಲಿಲ್ಲ, ಬದಲಿಗೆ ಮಾನವ ಜೀವನವನ್ನು ಸುಧಾರಿಸುವ ಒಂದು ಸಾಧನವಾಗಿ ಕಂಡಿದ್ದರು."

ಮಿಲ್ಟನ್ ಫ್ರೀಡ್‌ಮನ್

(ನೊಬೆಲ್ ವಿಜೇತ ಮತ್ತು ಮುಕ್ತ ಮಾರುಕಟ್ಟೆಯ ಪ್ರತಿಪಾದಕ)
ಫ್ರೀಡ್‌ಮನ್ ಅವರು ಸ್ಮಿತ್ ಅವರ 'ಅದೃಶ್ಯ ಹಸ್ತ'ದ ಸಿದ್ಧಾಂತಕ್ಕೆ ಅತಿ ದೊಡ್ಡ ಅಭಿಮಾನಿಯಾಗಿದ್ದರು.

"ಮುಕ್ತ ಮಾರುಕಟ್ಟೆಯ ಅತ್ಯಂತ ಮುಖ್ಯವಾದ ಸತ್ಯವೆಂದರೆ ಇಬ್ಬರಿಗೂ ಲಾಭವಾಗದ ಹೊರತು ಅಲ್ಲಿ ಯಾವುದೇ ವ್ಯವಹಾರ ನಡೆಯುವುದಿಲ್ಲ. ಇದುವೇ ಆಡಮ್ ಸ್ಮಿತ್ ಅವರ 'ಅದೃಶ್ಯ ಹಸ್ತ'ದ ಸಾರ. ಯಾವುದೇ ಬಲವಂತವಿಲ್ಲದೆ ಮನುಷ್ಯರ ನಡುವೆ ಸಹಕಾರ ಸಾಧ್ಯ ಎಂಬುದನ್ನು ಇದು ತೋರಿಸುತ್ತದೆ."

ಜೋಸೆಫ್ ಸ್ಟಿಗ್ಲಿಟ್ಜ್

(ನೊಬೆಲ್ ವಿಜೇತ ಮತ್ತು ಮಾರುಕಟ್ಟೆ ವಿಮರ್ಶಕ)
ಸ್ಟಿಗ್ಲಿಟ್ಜ್ ಅವರು ಸ್ಮಿತ್ ಅವರ ಸಿದ್ಧಾಂತದ ಮಿತಿಗಳನ್ನು ಆಧುನಿಕ ಜಗತ್ತಿನ ಹಿನ್ನೆಲೆಯಲ್ಲಿ ವಿವರಿಸುತ್ತಾರೆ.

"ಅದೃಶ್ಯ ಹಸ್ತವು ನಮಗೆ ಮರೆಯಾಗಿ ಕಾಣಲು ಕಾರಣವೆಂದರೆ, ಅದು ಅನೇಕ ಬಾರಿ ಅಲ್ಲಿ ಇರುವುದೇ ಇಲ್ಲ! ಮಾರುಕಟ್ಟೆಯ ಶಕ್ತಿಯ ಬಗ್ಗೆ ಸ್ಮಿತ್ ಹೇಳಿದ್ದು ಸರಿಯಾಯಾಗಿಯೇ ಇತ್ತು, ಆದರೆ ಮಾರುಕಟ್ಟೆಗಳು ಶೋಷಣೆಯ ತಾಣವಾಗಬಾರದು ಎಂದಾದರೆ ಅಲ್ಲಿ ಕೆಲವು ನಿಯಮಗಳಿರಬೇಕು ಎಂಬುದನ್ನೂ ಅವರು ಅರಿತಿದ್ದರು."

ಪಾಲ್ ಸ್ಯಾಮ್ಯುಯೆಲ್ಸನ್

(ಆಧುನಿಕ ಅರ್ಥಶಾಸ್ತ್ರದ ಪಠ್ಯಕ್ರಮದ ಪಿತಾಮಹ)
ಸ್ಯಾಮ್ಯುಯೆಲ್ಸನ್ ಅವರು ಸ್ಮಿತ್ ಅವರ 'ದ ವೆಲ್ತ್ ಆಫ್ ನೇಷನ್' ಪುಸ್ತಕವನ್ನು ಜ್ಞಾನದ ಮಹಾನ್ ಶಿಖರ ಎಂದು ಕರೆಯುತ್ತಾರೆ.

"ಆಡಮ್ ಸ್ಮಿತ್ ಒಬ್ಬ ದೈತ್ಯ. ಅವರಿಗಿಂತ ಮೊದಲು ಆರ್ಥಿಕತೆಯ ಬಗ್ಗೆ ಇದ್ದುದು ಒಂದಿಷ್ಟು ಚದುರಿ ಹೋದ ವಿಚಾರಗಳು. ಆದರೆ ಅವರ ನಂತರ ಅರ್ಥಶಾಸ್ತ್ರ ಎಂಬ ವಿಜ್ಞಾನವೇ ಹುಟ್ಟಿಕೊಂಡಿತು. ಎಲ್ಲಾ ಆಧುನಿಕ ಆರ್ಥಿಕ ಚಿಂತನೆಗಳಿಗೂ ಅವರ 'ದಿ ವೆಲ್ತ್ ಆಫ್ ನೇಷನ್' ಕೃತಿಯೇ ಬುನಾದಿ."


ಡರೆನ್ ಅಸಿಮೊಗ್ಲು

ಡರೆನ್ ಅಸಿಮೊಗ್ಲು ಅವರು 'ಸಂಸ್ಥೆಗಳ' ಪ್ರಾಮುಖ್ಯತೆಯನ್ನು ಸಾರಿದವರು. ಸ್ಮಿತ್ ಅವರ 'ಅದೃಶ್ಯ ಹಸ್ತ'ದ ಬಗ್ಗೆ ಅಸಿಮೊಗ್ಲು ಅವರ ಮಾತುಗಳು ಇಲ್ಲಿವೆ

"ಆಡಮ್ ಸ್ಮಿತ್ ಅವರು ಹೇಳಿದ ಮಾರುಕಟ್ಟೆಯ 'ಅದೃಶ್ಯ ಹಸ್ತ'ಕ್ಕೆ ಪರ್ಯಾಯವಾಗಿ ಕೆಲಸ ಮಾಡಲು ಕೇಂದ್ರೀಕೃತ ಯೋಜನೆಗಳಿಂದ (Central Planning) ಸಾಧ್ಯವಿಲ್ಲ. ಆದರೆ, ಕೇವಲ ಮಾರುಕಟ್ಟೆ ಇದ್ದರೆ ಸಾಲದು; ಆ ಮಾರುಕಟ್ಟೆಯು ಎಲ್ಲರಿಗೂ ಸಮಾನ ಅವಕಾಶ ನೀಡುವಂತಹ 'ಒಳಗೊಳ್ಳುವ ಸಂಸ್ಥೆಗಳನ್ನು' (Inclusive Institutions) ಹೊಂದಿರಬೇಕು."

ಅಭಿಜಿತ್ ಬ್ಯಾನರ್ಜಿ

ನೊಬೆಲ್ ವಿಜೇತ ಅಭಿಜಿತ್ ಬ್ಯಾನರ್ಜಿ ಅವರು ಸ್ಮಿತ್ ಅವರ ಸಿದ್ಧಾಂತವನ್ನು ಬಡವರ ದೃಷ್ಟಿಕೋನದಿಂದ ಮತ್ತು ಆಧುನಿಕ ಡೇಟಾ ಆಧಾರಿತವಾಗಿ ನೋಡುತ್ತಾರೆ. "ಆಡಮ್ ಸ್ಮಿತ್ ಅವರ ಆಲೋಚನೆಗಳು ಇಂದಿನ 'ಬಿಹೇವಿಯರಲ್ ಎಕನಾಮಿಸ್ಟ್'ಗಳ ಚಿಂತನೆಗಳಿಗೆ ಹತ್ತಿರವಾಗಿವೆ. ಆದರೆ ಬಡವರ ಪಾಲಿಗೆ ಈ 'ಅದೃಶ್ಯ ಹಸ್ತ' ಕೆಲಸ ಮಾಡುವುದು ಕಷ್ಟ; ಏಕೆಂದರೆ ಅವರ ಮಾರುಕಟ್ಟೆಗಳ ಬಗ್ಗೆ ಸರಿಯಾದ ಮಾಹಿತಿ ಮತ್ತು ಸೌಲಭ್ಯಗಳ ಕೊರತೆ ಇರುತ್ತದೆ. ಆದ್ದರಿಂದ ಎಲ್ಲವನ್ನೂ ಮಾರುಕಟ್ಟೆಗೆ ಬಿಡದೆ, ಅವರಿಗೆ ಸರಿಯಾದ ಬೆಂಬಲ ನೀಡುವ ವ್ಯವಸ್ಥೆಯೂ ಬೇಕು."





ಇವ ನಮ್ಮವ–4

ಬಾಬಾಸಾಹೇಬ್ ಅಂಬೇಡ್ಕರ್: ಒಬ್ಬ ಅಪರೂಪದ ಅರ್ಥಶಾಸ್ತ್ರಜ್ಞ

ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದ ಭಾರತೀಯ ಅರ್ಥಶಾಸ್ತ್ರಜ್ಞರನ್ನು ಪರಿಚಯಿಸುವ ಉದ್ದೇಶದಿಂದ ಪ್ರಾರಂಭಿಸಿರುವ ಮಾಲಿಕೆಯಲ್ಲಿ ನಾಲ್ಕನೆಯದು

ಟಿ ಎಸ್ ವೇಣುಗೋಪಾಲ್

ಅಂಬೇಡ್ಕರ್ ಅವರನ್ನು ರಾಷ್ಟ್ರದ ರಾಜಕೀಯ, ಸಾಮಾಜಿಕ ಕ್ಷೇತ್ರದಲ್ಲಿ ಗುರುತಿಸುತ್ತೇವೆ. ಅವರನ್ನು ಮಹಾನ್ ಚಿಂತಕ, ನಾಯಕ ಅಂತೆಲ್ಲಾ ಒಪ್ಪಿಕೊಳ್ಳುತ್ತೇವೆ. ಆದರೆ ಅವರ ಅರ್ಥಶಾಸ್ತ್ರದ ಕೊಡುಗೆಗಳನ್ನು ಗಮನಿಸುವುದಿಲ್ಲ. ಆದರೆ ಪ್ರಾರಂಭಿಕ ದಿನಗಳಲ್ಲಿ ಅವರು ತೊಡಗಿಕೊಂಡಿದ್ದೇ ಅರ್ಥಶಾಸ್ತ್ರದಲ್ಲಿ. ಅದನ್ನು ಅವರು ವ್ಯವಸ್ಥಿತವಾಗಿ ಅಧ್ಯಯನ ಮಾಡಿದ್ದರು. ಭಾರತದಿಂದ ವಿದೇಶಕ್ಕೆ ಹೋಗಿ ಅರ್ಥಶಾಸ್ತ್ರದಲ್ಲಿ ಉನ್ನತ ಅಧ್ಯಯನ ಮಾಡಿದ ಮೊದಲಿಗರಲ್ಲಿ ಅವರೂ ಒಬ್ಬರು. ಅವರಿಗಿಂತ ಮೊದಲು ದಾದಾಬಾಯಿ ನವರೋಜಿ, ರಾನಡೆ ಇವರೆಲ್ಲಾ ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಆದರೆ ಅವರ್ಯಾರೂ ವೃತ್ತಿಪರ ಅರ್ಥಶಾಸ್ತ್ರಜ್ಞರಲ್ಲ. ರಾಜಕೀಯ ಉದ್ದೇಶಕ್ಕಾಗಿ ಆರ್ಥಿಕ ವಿಶ್ಲೇಷಣೆ ಮಾಡಿದವರು. ಅಂಬೇಡ್ಕರ್ ಅಮೇರಿಕೆಯ ಕೊಲೊಂಬಿಯ ವಿಶ್ವವಿದ್ಯಾನಿಲಯ, ಹಾಗೂ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಪ್ರಖ್ಯಾತ ಅರ್ಥಶಾಸ್ತ್ರಜ್ಞರ ಮಾರ್ಗದರ್ಶನಲ್ಲಿ ಅಧ್ಯಯನ ಮಾಡಿದ್ದಾರೆ. ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ಆದರೆ ಅಧ್ಯಯನ ಮುಗಿಸಿ ಭಾರತಕ್ಕೆ ಹಿಂತಿರುಗಿದ ಮೇಲೆ ಕೆಲ ಕಾಲ ಬಾಂಬೆಯಲ್ಲಿ ಅಧ್ಯಾಪನ ಮಾಡಿದ್ದು ಬಿಟ್ಟರೆ ಅವರು ಅದನ್ನು ಮುಂದುವರಿಸಲಿಲ್ಲ. ಅವರನ್ನು ಒಬ್ಬ ಅರ್ಥಶಾಸ್ತ್ರಜ್ಞ ಎಂದು ಗುರುತಿಸದೇ ಇರುವುದಕ್ಕೆ ಅದು ಒಂದು ಕಾರಣವೆನ್ನಲಾಗಿದೆ. ಆದರೆ ಅವರನ್ನು ಕೇವಲ ಒಬ್ಬ ದಲಿತ ನಾಯಕರನ್ನಾಗಿಯಷ್ಟೇ ಸೀಮಿತಗೊಳಿಸುವ ಪ್ರಯತ್ನ ಬಹುತೇಕ ಈ ನಿರ್ಲಕ್ಷ್ಯಕ್ಕೆ ಕಾರಣ ಅನ್ನುವುದು ವಾಸ್ತವ. ಅವರ ಆರ್ಥಿಕ ಚಿಂತನೆಗಳನ್ನು ನಿರ್ಲಕ್ಷಿಸಿದ್ದರಿಂದ ಭಾರತೀಯ ಸಮಾಜವನ್ನು ಗ್ರಹಿಸಿಕೊಳ್ಳುವುದಕ್ಕೆ ಅವಶ್ಯಕವಾಗಿದ್ದ ಒಂದು ಆಯಾಮವನ್ನೇ ನಾವು ಕಳೆದುಕೊಂಡಿದ್ದೇವೆ ಅನ್ನುವುದೂ ಅಷ್ಟೇ ಸತ್ಯ.

ಅಂಬೇಡ್ಕರ್ ಅವರು 1923ರಲ್ಲಿ ಭಾರತಕ್ಕೆ ಮರಳಿದ ನಂತರ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಇತ್ಯಾದಿಗಳ ವಿರುದ್ಧ ಪೂರ್ಣ ಪ್ರಮಾಣದಲ್ಲಿ ಹೋರಾಟಕ್ಕಿಳಿದರು. ಹಾಗಾಗಿ ಅವರು ಬರೆದದ್ದು ಮತ್ತು ಮಾತನಾಡಿದ್ದು ಹೆಚ್ಚಾಗಿ ಸಾಮಾಜಿಕ ವ್ಯವಸ್ಥೆ, ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಇತ್ಯಾದಿಗಳ ಬಗ್ಗೆ. ನೇರವಾಗಿ ಅರ್ಥಶಾಸ್ತ್ರದ ಬಗ್ಗೆ ಏನನ್ನೂ ಬರೆಯದಿದ್ದರೂ ಅವರ ಉಳಿದ ಬರಹಗಳಲ್ಲೂ ಆಳವಾದ ಆರ್ಥಿಕ ಒಳನೋಟಗಳಿರುತ್ತಿತ್ತು. ಅವರ ವಿವಿಧ ಆಯೋಗಗಳಿಗೆ, ಸರ್ಕಾರಕ್ಕೆ ನೀಡಿದ ಮನವಿಗಳು, ದಾಖಲಿಸಿದ ಸಾಕ್ಷ್ಯಗಳು, ಹೇಳಿಕೆಗಳು, ಭಾಷಣಗಳು, ಪುಸ್ತಕ ವಿಮರ್ಶೆ ಹೀಗೆ ಪ್ರತಿಯೊಂದರಲ್ಲೂ ಭಾರತದ ಆರ್ಥಿಕ ಸಮಸ್ಯೆಗಳ ಬಗ್ಗೆ ಅವರಿಗಿದ್ದ ಆಳವಾದ ಒಳನೋಟ ಕಾಣುತ್ತದೆ. ಅವರು ಸಂವಿಧಾನ ಸಭೆಗೆ ನೀಡಿದ 'ಸ್ಟೇಟ್ಸ್ ಅಂಡ್ ಮೈನಾರಿಟೀಸ್' ಪತ್ರವನ್ನು ಕೇವಲ ಒಂದು ರಾಜಕೀಯ ಪತ್ರವನ್ನಾಗಿ ನೋಡುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಅವರ ಆರ್ಥಿಕ ದೃಷ್ಟಿಕೋನಕ್ಕೆ ಸಂಬಂಧಿಸಿದ ಒಳನೋಟ ಸಿಗುತ್ತದೆ. ಭಾರತದ ಸಾಮಾಜಿಕ ಪಿಡುಗುಗಳನ್ನು ಆರ್ಥಿಕ ಆಯಾಮದಿಂದ ವಿಶ್ಲೇಷಿಸಿದವರಲ್ಲಿ ಬಹುಶಃ ಇವರು ಮೊದಲಿಗರು. ಅಷ್ಟೇ ಅಲ್ಲ ಅವರು ರಚಿಸಿದ ಸಂವಿಧಾನದಲ್ಲಿ ಇರುವಷ್ಟು ಆರ್ಥಿಕ ಹಾಗೂ ಹಣಕಾಸಿನ ನಿಬಂಧನೆಗಳು ಜಗತ್ತಿನ ಬೇರೆ ಯಾವುದೇ ಸಂವಿಧಾನದಲ್ಲೂ ಇದ್ದಂತಿಲ್ಲ.

ಅವರ ಆರ್ಥಿಕ ವಿಚಾರಗಳನ್ನು ಎರಡು ಹಂತಗಳಲ್ಲಿ ನೋಡಬಹುದು. ಒಂದು ಅವರ ಅಧಿಕೃತ ಆರ್ಥಿಕ ಬರಹಗಳು. ಅಂದರೆ ವಿಶ್ವವಿದ್ಯಾನಿಲಯಗಳಲ್ಲಿ ಅವರು ಪದವಿಗಳಿಗಾಗಿ ಸಲ್ಲಿಸಿದ ಸಂಶೋಧನಾ ಪ್ರಬಂಧಗಳು. ಇನ್ನೊಂದು ಸಾಮಾಜಿಕ ರಾಜಕೀಯ ಬರಹಗಳಲ್ಲಿ ವ್ಯಕ್ತವಾಗಿರುವ ಆರ್ಥಿಕ ಒಳನೋಟಗಳು. ಇವೆಲ್ಲಾ 1923ರವರೆಗೆ ಬರೆದ ಬರಹಗಳು. ಈ ಅರಂಭಿಕ ಶೈಕ್ಷಣಿಕ ಬರಹಗಳಲ್ಲಿ ಅನಂದ್ ತೇಲ್ತುಂಬ್ಡೆ ಗುರುತಿಸುವಂತೆ ಅಂಬೇಡ್ಕರ್ ಅವರ ಆರಂಭಿಕ ಶೈಕ್ಷಣಿಕ ಬರಹಗಳಲ್ಲಿ ಅವರ ನಂತರದ ಜೀವನದ ಮುಖ್ಯ ಕಾಳಜಿಯಾಗಿದ್ದ ದಲಿತರ ವಿಮೋಚನೆಯ ಬಗ್ಗೆ ಯಾವುದೇ ಚರ್ಚೆಯೂ ಕಾಣಿಸುವುದಿಲ್ಲ..

ಮೊದಲನೆಯದಾಗಿ ಅವರ ಅಧಿಕೃತ ಆರ್ಥಿಕ ಬರಹಗಳನ್ನು ಗಮನಿಸೋಣ. ಕೊಲೊಂಬಿಯಾ ವಿಶ್ವವಿದ್ಯಾಲಯದಲ್ಲಿ ಎಂಎ ಪದವಿಗಾಗಿ ಅವರು 'ಪ್ರಾಚೀನ ಭಾರತೀಯ ವಾಣಿಜ್ಯ' ಮತ್ತು 'ಭಾರತದ ರಾಷ್ಟ್ರೀಯ ಡಿವಿಡೆಂಡ್– ಒಂದು ಚಾರಿತ್ರಿಕ ಹಾಗೂ ವಿಶ್ಲೇಷನಾತ್ಮಕ ಅಧ್ಯಯನ" ಎಂಬ ಪ್ರಬಂಧಗಳನ್ನು ಸಲ್ಲಿಸಿದರು. ನಂತರ ಇದನ್ನು ವಿಸ್ತರಿಸಿ ಪಿಎಚ್‌ಡಿ ಪದವಿಗಾಗಿ ಸಂಶೋಧನಾ ಪ್ರಬಂಧವನ್ನು 1916ರಲ್ಲಿ ಮಂಡಿಸಿದರು. ನಂತರ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ತಮ್ಮ ಎಂಎಸ್ಸಿ ಪದವಿಗಾಗಿ 1921ರಲ್ಲಿ 'ಬ್ರಿಟಿಷ್ ಭಾರತದಲ್ಲಿ ಸಾಮ್ರಾಜ್ಯಶಾಹಿ ಹಣಕಾಸಿನ ಪ್ರಾಂತೀಯ ವಿಕೇಂದ್ರೀಕರಣ' ಎಂಬ ವಿಷಯದ ಬಗ್ಗೆ ಪ್ರಬಂಧ ಬರೆದರು. ನಂತರ ಡಿಎಸ್ಸಿ ಪದವಿಗಾಗಿ ಲಂಡನ್ ವಿಶ್ವವಿದ್ಯಾನಿಲಯದಲ್ಲಿ 'ರೂಪಾಯಿಯ ಸಮಸ್ಯೆ: ಅದರ ಮೂಲ ಮತ್ತು ಪರಿಹಾರ' ಎಂಬ



ಪ್ರಬಂಧವನ್ನು ಸಲ್ಲಿಸಿದರು. ಇವೆಲ್ಲವೂ ಸಾರ್ವಜನಿಕ ಹಣಕಾಸಿಗೆ ಸಂಬಂಧಿಸಿದ ಸಂಶೋಧನೆಗಳಾಗಿದ್ದವು. ಇದರಲ್ಲಿ ಅವರು ತಮ್ಮ ವಾದವನ್ನು ಸಮರ್ಥಿಸುವುದಕ್ಕೆ ಐತಿಹಾಸಿಕ ಅಧ್ಯಯನದ ಜೊತೆಗೆ, ಸಂಬಂಧಿಸಿದ ಅಂಕಿ–ಅಂಶಗಳನ್ನು ವಿಶೇಷವಾಗಿ ಬಳಸಿಕೊಂಡಿದ್ದಾರೆ. ಜೊತೆಗೆ ಆ ಕಾಲದಲ್ಲಿ ಚಾಲ್ತಿಯಲ್ಲಿದ್ದ ಆರ್ಥಿಕ ತತ್ತ್ವಗಳನ್ನು ಕೂಡ ಬಳಸಿಕೊಂಡಿದ್ದಾರೆ. ರೂಪಾಯಿ ಸಮಸ್ಯೆ ಕುರಿತ ಕೃತಿಯಲ್ಲಿ ಗೋಲ್ಡ್ ಸ್ಟಾಂಡರ್ಡ್ ಬದಲಿಗೆ ಚಿನ್ನದ ವಿನಿಮಯ ಸ್ಟಾಂಡರ್ಡ ಪದ್ಧತಿಯನ್ನು ಜಾರಿಗೆ ತಂದ ಬಗ್ಗೆ ಚರ್ಚಿಸಿದ್ದಾರೆ. ಇದು ಆ ಕಾಲದ ಅರ್ಥಶಾಸ್ತ್ರಜ್ಞರ ನಡುವೆ ಗಂಭೀರವಾಗಿ ಚರ್ಚೆಯಾಗುತ್ತಿದ್ದ ವಿಷಯ.

ಅಂಬೇಡ್ಕರ್ ಅವರು ತಮ್ಮ ಶೈಕ್ಷಣಿಕ ಸಂಶೋಧನೆಗಳಿಗಾಗಿ ಆರಿಸಿಕೊಂಡ ವಿಷಯಗಳೆಲ್ಲಾ ರಾಜ್ಯದ ಆಡಳಿತ ಮತ್ತು ಹಣಕಾಸಿಗೆ ಸಂಬಂಧಿಸಿದ ವಿಷಯಗಳೆ. ಏಕೆ ಈ ವಿಷಯಗಳನ್ನು ಆರಿಸಿಕೊಂಡರು ಅನ್ನುವುದಕ್ಕೆ ಅನಂದ್ ತೇಲ್ತುಂಬ್ಡೆ ಕೆಲವು ಕಾರಣಗಳನ್ನು ನೀಡುತ್ತಾರೆ. ಮೊದಲನೆಯದಾಗಿ ಅಂಬೇಡ್ಕರ್ ಅವರು ಆರಿಸಿಕೊಂಡ ವಿಷಯಗಳು ಅಂದಿನ ಕಾಲಕ್ಕೆ ಅತ್ಯಂತ ಪ್ರಸ್ತುತವಾಗಿದ್ದವು ಮತ್ತು ಆಳವಾದ ಕಲಿಕೆಗೆ ಅವಕಾಶ ಮಾಡಿಕೊಟ್ಟಿದ್ದವು. ಶೈಕ್ಷಣಿಕ ಅಧ್ಯಯನದ ಮುಖ್ಯ ಉದ್ದೇಶವೆ ಕಲಿಕೆ ಮತ್ತು ಜ್ಞಾನಾರ್ಜನೆ. ಎರಡನೆಯದಾಗಿ ಅವರ ಸಂಶೋಧನೆಗೆ ಮಾರ್ಗದರ್ಶನ ಮಾಡುತ್ತಿದ್ದವರು ಆ ವಿಷಯಗಳಲ್ಲಿ ಜಗತ್ತಿನಲ್ಲೇ ಅತ್ಯಂತ ಪ್ರಭಾವಿ ತಜ್ಞರಾಗಿದ್ದರು. ಮೂರನೆಯದಾಗಿ ಅಂಬೇಡ್ಕರ್ ಅವರಿಗೆ ಭಾರತದ ಮೇಲೆ ಬ್ರಿಟಿಷ್ ವಸಾಹತುಶಾಹಿ ನಡೆಸುತ್ತಿದ್ದ ಶೋಷಣೆಯ ತಂತ್ರಗಳನ್ನು ಜಗತ್ತಿನ ಮುಂದೆ ತೆರೆದಿಡಬೇಕಿತ್ತು. ಅದಕ್ಕೆ ಆಡಳಿತ ಹಾಗೂ ಹಣಕಾಸು ಅತ್ಯಂತ ಸೂಕ್ತವಾದ ಕ್ಷೇತ್ರವಾಗಿತ್ತು.

ಅಂಬೇಡ್ಕರ್ ಅವರು ಇಲ್ಲಿ ಹಳೆಯ ಕಾಲದ 'ರಾಜಕೀಯ ಅರ್ಥಶಾಸ್ತ್ರದ ಪರಂಪರೆಯ ಭಾಗವಾಗಿ ಬರೆಯುತ್ತಿದ್ದರು. ಆಗಿನ ಬಹುತೇಕ ಬರಹಗಳಂತೆ ಅವರ ಬರಹಗಳಲ್ಲೂ ರಾಜಕೀಯ ಹಾಗೂ ಅರ್ಥಶಾಸ್ತ್ರ ಯಾವಾಗಲೂ ಒಂದಕ್ಕೊಂದು ಬೆಸೆದುಕೊಂಡಿರುತ್ತಿದ್ದವು. ನಂತರದಲ್ಲಿ ಅವರ ಸಾಮಾಜಿಕ ವಿಶ್ಲೇಷಣೆಯಲ್ಲಿ ರಾಜಕೀಯ ಹಾಗೂ ಅರ್ಥಶಾಸ್ತ್ರ ಸೇರಿಕೊಂಡಿತ್ತು. ಅಂಬೇಡ್ಕರ್ ಈ ಕೃತಿಗಳನ್ನು ರಚಿಸುವ ಸಂದರ್ಭದಲ್ಲಿ ರಾಜಕೀಯ ಚಳುವಳಿ ತೀವ್ರವಾಗಿತ್ತು. ಸಹಜವಾಗಿಯೇ ಅಂಬೇಡ್ಕರ್ ಮೇಲೂ ಅದರ ಪ್ರಭಾವ ಕಾಣುತ್ತಿತ್ತು. ಅವರ ಆಗಿನ ಎಲ್ಲಾ ಬರಹಗಳಲ್ಲೂ ಒಂದು ಬಗೆಯ ದೇಶಪ್ರೇಮದ ಛಾಯೆಯನ್ನು ಕಾಣಬಹುದು. ನಾನು ಮುಖ್ಯವಾಗಿ ಭಾರತೀಯ ಜನರ ಹಿತದೃಷ್ಟಿಯಿಂದ ಬರೆಯುತ್ತಿದ್ದೇನೆ"ಎಂದು ಅವರು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ತಮ್ಮ ಕೃತಿಗಳಲ್ಲಿ ಬ್ರಿಟಿಷ್ ನೀತಿಗಳು ಭಾರತದ ಹಿತಾಸಕ್ತಿಗೆ ಹೇಗೆ ಮಾರಕವಾಗಿವೆ ಎಂಬುದನ್ನು ಅಂಕಿ ಅಂಶಗಳ ಸಮೇತ ಸಾಬೀತುಪಡಿಸಿದ್ದರು. ಅವರ ಬರಹಗಳಲ್ಲಿ ಕಾಣುವ ದೇಶಪ್ರೇಮಿ ಛಾಯೆಯಿಂದಾಗಿಯೇ ಬಹುಶಃ ಬ್ರಿಟಿಷರು ಅವರನ್ನು ಒಬ್ಬ 'ಕ್ರಾಂತಿಕಾರಿ' ಎಂದು ಶಂಕಿಸಿ, ಅವರ ಲಗೇಜುಗಳನ್ನು ತಪಾಸಣೆ ಮಾಡಿದ್ದೂ ಉಂಟು.

ಆದರೆ ಅಂದಿನ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ನೇರವಾಗಿ ಭಾಗವಹಿಸಲಿಲ್ಲ. ಇದಕ್ಕೆ ತೇಲ್ತುಂಬ್ಡೆ ಮೂರು ಮುಖ್ಯ ಕಾರಣಗಳನ್ನು ನೀಡುತ್ತಾರೆ. ಒಂದು ಜ್ಯೋತಿಬಾ ಫುಲೆಯವರಂತೆ ಅಂಬೇಡ್ಕರ್ ಕೂಡ ಭಾರತವನ್ನು ಒಂದು 'ರಾಷ್ಟ್ರ' ಎಂದು ಒಪ್ಪಿಕೊಂಡಿರಲಿಲ್ಲ. ಎರಡನೆಯದಾಗಿ ಅವರು ರಾಷ್ಟ್ರೀಯತೆಗಿಂತ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವದಂತಹ ಮಾನವೀಯ ಮೌಲ್ಯಗಳೇ ಶ್ರೇಷ್ಠ ಎಂದು ನಂಬಿದ್ದರು. ಮೂರನೆಯದಾಗಿ ಮೇಲ್ವರ್ಗದ ಹಿಂದುಗಳ ಸಾವಿರಾರು ವರ್ಷಗಳ ದಬ್ಬಾಳಿಕೆಯಿಂದ ಮುಕ್ತಿ ಪಡೆಯಲು ಬ್ರಿಟಿಷ್ ಆಡಳಿತವು ಒಂದು ದಾರಿಯಾಗಬಲ್ಲದು ಎಂದು ಅವರು ಭಾವಿಸಿದ್ದರು. ಬ್ರಿಟಿಷರ ಮೂಲಕ ದಲಿತರಿಗೆ ಸಾಮಾಜಿಕ ಹಕ್ಕುಗಳನ್ನು ಕೊಡಿಸುವುದು ಅವರ ತಂತ್ರವಾಗಿತ್ತು. ಹಾಗಾಗಿಯೇ ಅವರು ಬ್ರಿಟಿಷ್ ಸರ್ಕಾರದೊಂದಿಗೆ ಸಂಘರ್ಷಕ್ಕೆ ಇಳಿಯದೆ, ಸರ್ಕಾರದ ಭಾಗವಾಗಿಯೇ (ಮಂತ್ರಿಗಳಾಗಿ) ದಲಿತರ ಹಕ್ಕುಗಳಿಗಾಗಿ ಹೋರಾಡಲು ನಿರ್ಧರಿಸಿದರು.

ಬ್ರಿಟಿಷ್ ಆಡಳಿತದಲ್ಲಿನ ಸಾರ್ವಜನಿಕ ಹಣಕಾಸು ವ್ಯವಸ್ಥೆ ಭಾರತದ ಆರ್ಥಿಕ ಇತಿಹಾಸದಲ್ಲಿ ಬಹಳ ಮುಖ್ಯವಾದ ವಿಷಯವಾಗಿದ್ದರೂ, ಎಂ.ಜಿ. ರಾನಡೆಯವರನ್ನು ಹೊರತುಪಡಿಸಿ ಯಾರೂ ಇದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ. ಅಂಬೇಡ್ಕರ್ ಅವರ ಅಧ್ಯಯನ ನಿಜವಾಗಿಯೂ ಮಹತ್ವದ್ದು. ಅವರ ಮಾರ್ಗದರ್ಶಿ ಎಡ್ವಿನ್ ಆರ್ ಎ ಸೆಲಿಗ್ಮನ್ ಗುರುತಿಸುವಂತೆ :

"ಈ ಚರ್ಚೆಯಲ್ಲಿ ಅಂಬೇಡ್ಕರ್ ಅವರ ಚರ್ಚೆಯ ಮಹತ್ವ ಗಣನೀಯವಾದದ್ದು. ತಮ್ಮ ವಾದಕ್ಕೆ ಬೇಕಾದ ಅಂಕಿ–ಅಂಶಗಳನ್ನು ನೀಡುವುದರ ಜೊತೆಗೆ ತನ್ನ ದೇಶದಲ್ಲಿ ಈ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಯ ಅತ್ಯಂತ ನಿಷ್ಪಕ್ಷಪಾತವಾದ ವಿಶ್ಲೇಷಣೆಯನ್ನು ನೀಡುತ್ತಾರೆ. ಇದನ್ನು ಬೇರೆ ದೇಶಗಳಿಗೂ ಅನ್ವಯಿಸಬಹುದು. ನನಗೆ ತಿಳಿದಮಟ್ಟಿಗೆ ಈ ವಿಷಯವನ್ನು ಕುರಿತಂತೆ ಇಷ್ಟೊಂದು ವಿವರವಾದ ಅಧ್ಯಯನವನ್ನು ಬೇರೆ ಯಾರೂ ಮಾಡಿಲ್ಲ."

ಈಸ್ಟ್ ಇಂಡಿಯ ಆಳ್ವಿಕೆಯಲ್ಲಿ ನಿಧಾನವಾಗಿ ವಿತ್ತೀಯ ಅಧಿಕಾರ ಕೇಂದ್ರೀಕರಣಗೊಳ್ಳುತ್ತಾ ಹೋಯಿತು. ಬ್ರಿಟಿಷರ ಆಳ್ವಿಕೆಯ ಪ್ರಾರಂಭದಲ್ಲಿ ಬಂಗಾಳ, ಮದ್ರಾಸ್ ಮತ್ತು ಮುಂಬೈ ಪ್ರಾಂತ್ಯಗಳಿಗೆ ಅವುಗಳದೇ ಆದ ಸ್ವತಂತ್ರ ತೆರಿಗೆ ಮತ್ತು ಆಡಳಿತ ವ್ಯವಸ್ಥೆ ಇತ್ತು. ಆದರೆ 1833ರ ನಂತರ ಬ್ರಿಟಿಷರು ಎಲ್ಲವನ್ನೂ ಕೇಂದ್ರಿಕೃತಗೊಳಿಸಿ 1833ರಲ್ಲಿ ಸಾಮ್ರಾಜ್ಯಶಾಹಿ ಹಣಕಾಸು ವ್ಯವಸ್ಥೆಯನ್ನು ಜಾರಿಗೆ ತಂದರು. ಆದರೆ ಇದು ಸಫಲವಾಗಲಿಲ್ಲ. ಹಣಕಾಸಿನ ಕೊರತೆಯಿಂದಾಗಿ ಈ ಕೇಂದ್ರೀಕೃತ ವ್ಯವಸ್ಥೆ ವಿಫಲವಾಯಿತು. ಅಂಬೇಡ್ಕರ್ ಈ ಹಣಕಾಸಿನ ವಿಫಲತೆಗೆ ನಾಲ್ಕು ಕಾರಣಗಳನ್ನು ಗುರುತಿಸುತ್ತಾರೆ.

ಮೊದಲನೆಯದಾಗಿ ಸರ್ಕಾರದ ಆರ್ಥಿಕ ಯೋಜನೆಗಳು ಮತ್ತು ಆರ್ಥಿಕ ನಿರ್ವಹಣೆ ಸರಿಯಾಗಿರಲಿಲ್ಲ.



ಎರಡನೆಯದಾಗಿ ರೈತರ ಮೇಲೆ ವಿಪರೀತ ತೆರಿಗೆ ಹೇರಲಾಗಿತ್ತು. ಭೂ ಕಂದಾಯದ ಪ್ರಮಾಣವು ಕನಿಷ್ಠ 31.68% ರಿಂದ ಗರಿಷ್ಠ 66.17% ವರೆಗಿತ್ತು (ಸರಾಸರಿ 52.48% ರಷ್ಟು ತೆರಿಗೆ ಇತ್ತು). ಮೂರನೆಯದಾಗಿ ತೆರಿಗೆ ತೀರಾ ಅಸಮಾನವಾಗಿತ್ತು. ಇದರಿಂದ ಸಮಾಜದ ಉತ್ಪಾದನಾ ಸಾಮರ್ಥ್ಯವನ್ನು ಕುಂಠಿತಗೊಂಡಿತು. ಆಂತರಿಕ ಮತ್ತು ವಿದೇಶಿ ವ್ಯಾಪಾರದ ಮೇಲೆ ಬೇಕಾಬಿಟ್ಟಿ ತೆರಿಗೆ ಹಾಕಿದ್ದರಿಂದ ದೇಶದ ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ತೊಂದರೆಯಾಯಿತು.

ಬ್ರಿಟಿಷ್ ಸರ್ಕಾರದ ಈ ತಪ್ಪು ಕಂದಾಯ ಪದ್ಧತಿಯೇ ಭಾರತದ ಎಲ್ಲಾ ಆರ್ಥಿಕ ಸಮಸ್ಯೆಗಳಿಗೆ ನೇರವಾಗಿ ಕಾರಣ ಎಂಬುದನ್ನು ಅಂಕಿ ಅಂಶಗಳ ಸಮೇತ ಅಂಬೇಡ್ಕರ್ ಸಾದರಪಡಿಸಿದ್ದರು.

ಸಮಸ್ಯೆ ಕೇವಲ ತೆರಿಗೆ ಸಂಗ್ರಹಣೆಯದ್ದಲ್ಲ. ಸಾರ್ವಜನಿಕ ಖರ್ಚಿನ ವಿಷಯದಲ್ಲೂ ಸಮಸ್ಯೆಗಳಿದ್ದವು. ಬ್ರಿಟಿಷ್ ಸರ್ಕಾರ ಕಠಿಣ ತೆರಿಗೆ ಮೂಲಕ ವಸೂಲಿ ಮಾಡುತ್ತಿದ್ದ ಹಣದಲ್ಲಿ ಶೇ. 45ರಿಂದ ಶೇ. 65ರಷ್ಟು ಕೇವಲ ಮಿಲಿಟರಿಗಾಗಿ ಖರ್ಚಾಗುತ್ತಿತ್ತು. ಜನಸಾಮಾನ್ಯರ ಶಿಕ್ಷಣ ಅಥವಾ ಆರೋಗ್ಯಕ್ಕೆ ದುಡ್ಡೇ ಉಳಿಯುತ್ತಿರಲಿಲ್ಲ. ಹೀಗೆ ಬಡವರಿಂದ ಕಿತ್ತುಕೊಂಡ ಹಣವು ಸಮಾಜದ ಅಭಿವೃದ್ಧಿಗೆ ಬಳಕೆಯಾಗದೆ ಬರೀ ಯುದ್ಧ ಮತ್ತು ಬ್ರಿಟಿಷರ ಆಡಳಿತಕ್ಕೆ ಬಳಕೆಯಾಗುತ್ತಿತ್ತು.

ಅಂಬೇಡ್ಕರ್ ಅವರ ಪ್ರಕಾರ, "ಹಣಕಾಸು ಎಂಬುದು ಆಡಳಿತ ಯಂತ್ರದ ಇಂಧನ. ಸರ್ಕಾರಗಳು ತಮ್ಮ ಸ್ವಂತ ಸಂಪನ್ಮೂಲಗಳನ್ನು ಬಳಸಿಕೊಂಡು ಆಡಳಿತ ನಡೆಸಬೇಕು. ಆದರೆ ಅಂದಿನ 'ದ್ವಿಪ್ರಭುತ್ವ' (Diarchy) ವ್ಯವಸ್ಥೆಯಲ್ಲಿ ಯಾರಿಗೂ ಜವಾಬ್ದಾರಿ ಇರಲಿಲ್ಲ. ಜನರ ನಾಡಿಮಿಡಿತ ಅರಿಯದ ಸರ್ಕಾರದಿಂದ ಉತ್ತಮ ಹಣಕಾಸು ವ್ಯವಸ್ಥೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ"ಎಂದು ಅವರು ವಾದಿಸಿದರು. ಅಂಬಿರಾಜನ್ ಹೇಳುವಂತೆ ಅಂಬೇಡ್ಕರ್ ಅವರ ಟೀಕೆ ಇಂದಿಗೂ ಅನ್ವಯವಾಗುತ್ತದೆ. ಇಂದಿಗೂ ಭಾರತದಲ್ಲಿ ತೆರಿಗೆ ವ್ಯವಸ್ಥೆ ಬಡವರ ಪರವಾಗಿಲ್ಲ. ಶ್ರೀಮಂತ ಕಂಪನಿಗಳ ಮೇಲಿನ ತೆರಿಗೆಗಿಂತ ಸಾಮಾನ್ಯ ಜನರ ಮೇಲಿನ ಪರೋಕ್ಷ ತೆರಿಗೆಯ ಹೊರೆ ಹೆಚ್ಚಿದೆ. ಕಂಪನಿಗಳು ದೊಡ್ಡದಾದಷ್ಟೂ ಅವರು ಕಟ್ಟುವ ತೆರಿಗೆ ಕಡಿಮೆಯಾಗುತ್ತದೆ. ಬ್ರಿಟಿಷರ ಕಾಲದಂತೆಯೇ ಇಂದಿಗೂ ಶಿಕ್ಷಣ ಮತ್ತು ಆರೋಗ್ಯವನ್ನು ನಿರ್ಲಕ್ಷಿಸಲಾಗಿದೆ. ಇಂದಿಗೂ ಶಿಕ್ಷಣಕ್ಕೆ ಕೇವಲ ಶೇ. 3–4 ಮತ್ತು ಆರೋಗ್ಯಕ್ಕೆ ಕೇವಲ ಶೇ. 1–1.2ರಷ್ಟು ಮಾತ್ರ ಖರ್ಚು ಮಾಡಲಾಗುತ್ತಿದೆ. ಬದಲಾಗಿ ಮಿಲಿಟರಿ ಮತ್ತು ಪೊಲೀಸರ ಮೇಲಿನ ಖರ್ಚು ದಿನದಿಂದ ದಿನಕ್ಕೆ ಏರುತ್ತಲೇ ಇದೆ. ಅಂಬೇಡ್ಕರ್ ಅವರು ಬ್ರಿಟಿಷರ ಆರ್ಥಿಕ ಲೂಟಿಯನ್ನು ಬಯಲಿಗೆಳೆಯಲು ಮಾಡಿರುವ ವಿಶ್ಲೇಷಣೆಯನ್ನು ಇಂದಿನ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಅಳೆಯಲು ಒಂದು ಮಾಪನವಾನ್ನಾಗಿ ಬಳಸಬಹುದು.

ರೂಪಾಯಿಯ ಸಮಸ್ಯೆ

ಕೊಲೊಂಬಿಯಾದಲ್ಲಿ ತಮ್ಮ ವ್ಯಾಸಂಗ ಮುಗಿಸಿದ ನಂತರ, ಅಂಬೇಡ್ಕರ್ ಅವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ತಮ್ಮ ಎರಡನೇ ಡಾಕ್ಟರೇಟ್ ಪದವಿಗಾಗಿ **'ದಿ ಪ್ರಾಬ್ಲಂ ಆಫ್ ದಿ ರೂಪಾಯಿ'** ಪ್ರಬಂಧವನ್ನು ಮಂಡಿಸಿದರು. (ಆ ಗ್ರಂಥದ ವಿವರವಾದ ಚರ್ಚೆಯನ್ನು ಪ್ರತ್ಯೇಕ ಬಾಕ್ಸ್‌ನಲ್ಲಿ ನೀಡಲಾಗಿದೆ). ಅವರು ಅದರಲ್ಲಿ ಚಿನ್ನದ ಮಾನದಂಡವನ್ನು ಬಲವಾಗಿ ಬೆಂಬಲಿಸಿದರು. ಒಂದು ದೇಶದ ಬಳಿ ಎಷ್ಟು ಚಿನ್ನದ ಸಂಗ್ರಹ ಇರುತ್ತದೆಯೋ ಅದಕ್ಕೆ ಅನುಗುಣವಾಗಿ ಹಣವನ್ನು ಮುದ್ರಿಸಬೇಕು. ಆಗ ಹಣದ ಮೌಲ್ಯದಲ್ಲಿ ಸ್ಥಿರತೆ ಸಾಧ್ಯವಾಗುತ್ತದೆ. ಇದಕ್ಕೆ

ವ್ಯತಿರಿಕ್ತವಾಗಿ ಚಿನ್ನದ ವಿನಿಮಯ ಮಾನದಂಡ ಸರ್ಕಾರಕ್ಕೆ ಮಿತಿಮೀರಿ ಹಣವನ್ನು ಮುದ್ರಿಸಲು ಅವಕಾಶ ನೀಡುತ್ತದೆ. ಸರ್ಕಾರ ಹಣದ ಪೂರೈಕೆಯನ್ನು ವಿಪರೀತ ಹೆಚ್ಚಿಸಿದರೆ ಹಣದ ಮೌಲ್ಯ ಕುಸಿಯುತ್ತದೆ. ಇದರಿಂದ ಹಣದುಬ್ಬರವಾಗುತ್ತದೆ.. ಈ ಹಣದುಬ್ಬರದ ಹೊರೆಯು ಶ್ರೀಮಂತರಿಗಿಂತ ಹೆಚ್ಚಾಗಿ ಬಡವರ ಮೇಲೆ ಬೀಳುತ್ತದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದರು.

ಆದರೆ ಅಂಬೇಡ್ಕರ್ ಸೂಚಿಸುವ ಚಿನ್ನದ ಮಾನದಂಡದಿಂದ ಬೆಲೆ ಸ್ಥಿರತೆಯನ್ನು ಸಾಧಿಸಬಹುದು ಎನ್ನುವುದನ್ನು ಹಲವರು ಒಪ್ಪುವುದಿಲ್ಲ. ಐತಿಹಾಸಿಕವಾಗಿ ನೋಡಿದರೆ ಚಿನ್ನದ ಮಾನದಂಡದ ಕಾಲದಲ್ಲೂ ಆರ್ಥಿಕ ಬಿಕ್ಕಟ್ಟುಗಳು, ಕರೆನ್ಸಿಯ ಅಪಮೌಲ್ಯೀಕರಣ ಇವೆಲ್ಲಾವೂ ಇತ್ತು. ಸರ್ಕಾರಗಳು ಸಾಲದ ಸುಳಿಯಲ್ಲಿ ಸಿಕ್ಕಿಬಿದ್ದಿದ್ದವು. ಅದರಿಂದಲೂ ಹಣದುಬ್ಬರವಾಗಿದ್ದನ್ನು ಹಲವು ಕಡೆಗಳಲ್ಲಿ ನೋಡಬಹುದು. ಹಾಗಾಗಿ ಕೇವಲ ಚಿನ್ನವೊಂದೇ ಸಾಲುವುದಿಲ್ಲ, ಹಣದ ಮೌಲ್ಯ ಕುಸಿಯದಂತೆ ನೋಡಿಕೊಳ್ಳುವುದಕ್ಕೆ ಸರ್ಕಾರಗಳು ಬದ್ಧವಾಗಿರಬೇಕು ಎನ್ನುವ ವಾದವೂ ಇದೆ. ಅಂದರೆ ಜೊತೆಗೆ ಅರ್ಥಿಕ ಶಿಸ್ತು ಹಾಗೂ ಜವಾಬ್ದಾರಿಯುತ ನಿರ್ವಹಣೆ ಮುಖ್ಯವಾಗುತ್ತದೆ ಎನ್ನಲಾಗಿದೆ.

ಕೃಷಿ ಆರ್ಥಿಕತೆ ಮತ್ತು ಸಣ್ಣ ಹಿಡುವಳಿಗಳು.

ಅಂಬೇಡ್ಕರ್ ಅವರು ತಮ್ಮ ಪದವಿಗಾಗಿ ಬರೆದ ಪ್ರಬಂಧಗಳ ಹೊರತಾಗಿ, 1918ರಲ್ಲಿ ಭಾರತದ ಸಣ್ಣ ಕೃಷಿ ಭೂಮಿಯ ಸಮಸ್ಯೆಗಳ ಬಗ್ಗೆ ಒಂದು ಸೊಗಸಾದ ಲೇಖನ ಬರೆದಿದ್ದರು. ಆ ಕಾಲದ ತಜ್ಞರೆಲ್ಲಾ "ಭಾರತದ ಕೃಷಿ ಹಿಂದುಳಿಯಲು ಸಣ್ಣ ಸಣ್ಣ ಜಮೀನುಗಳೇ ಕಾರಣ"ಎಂದು ನಂಬಿದ್ದರು. ಆದರೆ ಅಂಬೇಡ್ಕರ್ ಅವರು ಇದನ್ನು ಸಂಪೂರ್ಣ ವಿಭಿನ್ನವಾಗಿ ನೋಡಿದರು.

ಅಂಬೇಡ್ಕರ್ ದೃಷ್ಟಿಯಲ್ಲಿ ಉತ್ಪಾದಕತೆಗೆ ಜಮೀನಿನ ಗಾತ್ರ ಮುಖ್ಯವಲ್ಲ. ಹಾಗೆ ಒಂದು ಮಾದರಿ ಗಾತ್ರ ಅಂತ ಯಾವುದೂ ಇಲ್ಲ. ಕೇವಲ ಜಮೀನಿನ ಗಾತ್ರ ದೊಡ್ಡದಿದ್ದರೆ ಅದು ಲಾಭದಾಯಕ ಅಂತ ಹೇಳುವುದಕ್ಕಾಗುವುದಿಲ್ಲ. ಹಾಗೆಯೇ ಅದು ಸಣ್ಣದಿದ್ದರೆ ಅದು ನಷ್ಟದ ಬಾಬ್ತು ಅಂತ ಹೇಳುವುದಕ್ಕೂ ಆಗುವುದಿಲ್ಲ. ಅವನ ಬಳಿ ಉಳುಮೆಗೆ ಬೇಕಾದ ಸಾಧನಗಳ ಕೊರತೆ ಇದ್ದರೆ, ಇರುವ ಉಪಕರಣಕ್ಕೆ ಭೂಮಿ ಹೆಚ್ಚಾಯಿತು ಅಂತಲೂ ವಾದಿಸಬಹುದು. ಅಂದರೆ ಭೂಮಿ ಲಾಭದಾಯಕವೋ ಅಲ್ಲವೋ ಅನ್ನುವದನ್ನು ನಿರ್ಧರಿಸುವುದಕ್ಕೆ ಬಂಡವಾಳ, ಕೆಲಸಗಾರರು ಮತ್ತು ಉಪಕರಣಗಳು ಇವೆಲ್ಲಾ ಬೇಕಾದಷ್ಟು ಪ್ರಮಾಣದಲ್ಲಿದೆಯೇ ಅನ್ನುವುದನ್ನು ಗಮನಿಸಬೇಕು. ಕೃಷಿಗೆ ಬೇಕಾದ ಬಂಡವಾಳ ಮತ್ತು ತಂತ್ರಜ್ಞಾನ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದೇ ಸಣ್ಣ ಜಮೀನು ಅನುತ್ಪಾದಕವಾಗಿರುವುದಕ್ಕೆ ನಿಜವಾದ ಸಮಸ್ಯೆ ಎಂದು ಅವರು ವಾದಿಸಿದರು.

ಎರಡನೆಯ ಸಮಸ್ಯೆ ಅಂದರೆ ಗ್ರಾಮೀಣ ಭಾರತದಲ್ಲಿ ಕೃಷಿಕರ ಶ್ರಮ ಸಂಪೂರ್ಣ ಬಳಕೆಯಾಗುತ್ತಿಲ್ಲ. ಭಾರತದಲ್ಲಿ ಅವಶ್ಯಕತೆಗಿಂತ ಹೆಚ್ಚು ಜನ ಕೃಷಿಯಲ್ಲಿ ತೊಡಗಿದ್ದಾರೆ. ಪರ್ಯಾಯ ಉದ್ಯೋಗದ ಕೊರತೆಯಿಂದ ಒಬ್ಬರು ಮಾಡುವ ಕೆಲಸವನ್ನು ಹಲವರು ಮಾಡುತ್ತಿದ್ದಾರೆ. ಅದರಿಂದ ಉತ್ಪಾದನೆ ಹೆಚ್ಚುತ್ತಿಲ್ಲ. ಅರ್ಥಶಾಸ್ತ್ರದಲ್ಲಿ ಇದನ್ನು 'ಮರೆಮಾಚಿದ ನಿರುದ್ಯೋಗ' (Disguised Unemployment) ಎಂದು ಕರೆಯುತ್ತಾರೆ. ಒಂದಿಷ್ಟು ಜನರನ್ನು ತೆಗೆದರೂ ಉತ್ಪಾದನೆಗೆ ಏನೂ ತೊಂದರೆಯಾಗುವುದಿಲ್ಲ. ಈ ಪರಿಕಲ್ಪನೆಯನ್ನು ಜಾನ್ ರಾಬಿನ್ಸನ್ (1936) ಮತ್ತು ಆರ್ಥರ್ ಲೂಯಿಸ್ (1954) ಅವರು ಜಗತ್ತಿಗೆ ಮೊದಲು ಪರಿಚಯಿಸಿದರು ಎನ್ನಲಾಗುತ್ತದೆ. ಆದರೆ ಅವರಿಗಿಂತ ಸುಮಾರು 18 ವರ್ಷಗಳ ಮೊದಲೇ (1918ರಲ್ಲಿ) ಅಂಬೇಡ್ಕರ್ ಅವರು ಭಾರತದ ಕೃಷಿಯಲ್ಲಿ ಅವಶ್ಯಕತೆಗಿಂತ ಹೆಚ್ಚಿನ ಜನ ಇದ್ದಾರೆ ಎಂದು ಗುರುತಿಸಿದ್ದರು.

ಇದಕ್ಕೆ ಪರಿಹಾರವಾಗಿ ಅಂಬೇಡ್ಕರ್ ಕೃಷಿಯಲ್ಲಿ ಹೆಚ್ಚುವರಿಯಾಗಿರುವ ಜನರನ್ನು ಕಾರ್ಖಾನೆಗಳಿಗೆ ವರ್ಗಾಯಿಸಬೇಕೆಂದು ಸೂಚಿಸಿದ್ದರು. ಅಂದರೆ ಕೃಷಿ ಸಮಸ್ಯೆಗೆ ಕೈಗಾರಿಕೀಕರಣವನ್ನು ಪರಿಹಾರವಾಗಿ ಅವರು ಸೂಚಿಸಿದರು. ಹಳ್ಳಿಗಳಲ್ಲಿರುವ ಹೆಚ್ಚುವರಿ ಜನರಿಗೆ ಕೈಗಾರಿಕೆಗಳು ಉದ್ಯೋಗ ಕೊಡುವುದಷ್ಟೇ ಅಲ್ಲ, ಕೃಷಿಗೆ ಅತಿ ಅಗತ್ಯವಾಗಿ ಬೇಕಾದ ಬಂಡವಾಳವನ್ನೂ ಒದಗಿಸುತ್ತವೆ. ಹೆಚ್ಚುವರಿ ಜನರು ಕೃಷಿಯೇತರ ಉತ್ಪಾದನಾ ಕ್ಷೇತ್ರಗಳಲ್ಲಿ ದುಡಿಯತೊಡಗಿದರೆ, ಭೂಮಿಯ ಮೇಲಿನ ಒತ್ತಡವೂ ಕಡಿಮೆಯಾಗುತ್ತದೆ, ಜೊತೆಗೆ ಜನರ ಉತ್ಪಾದಕತೆ ಹಾಗೂ ವರಮಾನವೂ ಹೆಚ್ಚುತ್ತದೆ. ಈ ಹೆಚ್ಚುವರಿ ವರಮಾನವೆ ಮುಂದೆ ಕೃಷಿಗೆ ಬಂಡವಾಳವಾಗುತ್ತದೆ. ಒಟ್ಟಾರೆ ದೇಶದ ಉತ್ಪಾದನೆ ಹೆಚ್ಚುತ್ತದೆ ಎಂದು ಅಂಬೇಡ್ಕರ್ ವಾದಿಸಿದ್ದರು. ಮುಂದೆ ನೊಬೆಲ್ ಪ್ರಶಸ್ತಿ ವಿಜೇತ ಆರ್ಥರ್ ಲೂಯಿಸ್ ಅವರು ಬಹುತೇಕ ಇದೇ ವಾದವನ್ನು ಮುಂದಿಟ್ಟಿದ್ದರು.

ಅಂಬೇಡ್ಕರ್ ಹೇಳುವಂತೆ ಬಹುತೇಕ ಜನ ಕೇವಲ ಕೃಷಿಯನ್ನೇ ನೆಚ್ಚಿಕೊಂಡಿರುವುದೇ ಭಾರತದಲ್ಲಿ ಬಡತನಕ್ಕೂ ಮುಖ್ಯ ಕಾರಣ. ಅಂದರೆ ವ್ಯವಸಾಯ ಒಂದರಿಂದಲೇ ಇಡೀ ದೇಶದ ಜನರಿಗೆ ಸಾಕಾಗುವಷ್ಟು ಅನ್ನ ಕೊಡಲು ಸಾಧ್ಯವಾಗುತ್ತಿಲ್ಲ. "ಭಾರತ ಈಗ ಒಂದು ಇಕ್ಕಳದ ಮಧ್ಯೆ ಸಿಕ್ಕಿಹಾಕಿಕೊಂಡಿದೆ. ಒಂದು ಕಡೆ ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆಯ ಒತ್ತಡ, ಇನ್ನೊಂದು ಕಡೆ ಜನರ ಅಗತ್ಯಕ್ಕೆ ಬೇಕಾದಷ್ಟು ಭೂಮಿ ಇಲ್ಲದಿರುವುದು. ಜನಸಂಖ್ಯೆ ಬೆಳೆಯುತ್ತಿದೆ. ಆದರೆ ಅದಕ್ಕೆ ತಕ್ಕಂತಹ ಉತ್ಪಾದನೆ ಇರುವುದಿಲ್ಲ. ಇದರಿಂದ ಜನರ ಬದುಕು ಕಷ್ಟವಾಗುತ್ತಿದೆ ಮತ್ತು ಬಡತನ ಜಾಸ್ತಿ ಆಗುತ್ತಿದೆ." ಇದನ್ನೆಲ್ಲಾ ತಡೆಯಬೇಕೆಂದರೆ ವ್ಯವಸಾಯವನ್ನು ಲಾಭದಾಯಕವನ್ನಾಗಿ ಮಾಡಬೇಕು. ಆದರೆ ವ್ಯವಸಾಯ ಲಾಭದಾಯಕವಾಗಬೇಕಾದರೆ ದೇಶದಲ್ಲಿ ದೊಡ್ಡ ಮಟ್ಟದ ಕೈಗಾರಿಕೀಕರಣ ಆಗಲೇಬೇಕು. ಯಾಕೆಂದರೆ, ಕೃಷಿಯನ್ನು ಅವಲಂಬಿಸಿರುವ ಹೆಚ್ಚುವರಿ ಜನರಿಗೆ ಉದ್ಯೋಗ ಕೊಡುವುದಕ್ಕೆ ಕೈಗಾರಿಕೆಗಳಿಂದ ಮಾತ್ರ ಸಾಧ್ಯ ಅನ್ನುವುದು ಅಂಬೇಡ್ಕರ್ ಅವರ ವಾದವಾಗಿತ್ತು.

ಒಂದು ದೇಶದಲ್ಲಿ ಫ್ಯಾಕ್ಟರಿಗಳು ತಲೆ ಎತ್ತಬೇಕಾದ್ರೆ ಮೂಲಭೂತ ಸೌಕರ್ಯ ಚೆನ್ನಾಗಿರಬೇಕು. ಒಳ್ಳೆಯ ರಸ್ತೆಗಳು, ಸಾರಿಗೆ ವ್ಯವಸ್ಥೆ, ವಿದ್ಯುತ್, ನೀರಾವರಿ ಇವೆಲ್ಲಾ ಇರಬೇಕು.. ಇವೆಲ್ಲಾ ಸರಿಯಾಗಿದ್ದರೆ ಮಾತ್ರ ಕೈಗಾರಿಕೆಗಳು ಬೆಳೆದು, ಕೃಷಿಯಲ್ಲಿ ಕೆಲಸವಿಲ್ಲದ ಜನರಿಗೆ ಅಲ್ಲಿ ಕೆಲಸ ಸಿಗುತ್ತದೆ ಎಂದು ಅವರು ಬಲವಾಗಿ ನಂಬಿದ್ದರು.

ಪ್ರಭುತ್ವ ಸಮಾಜವಾದ (State Socialism)

ಅಂಬೇಡ್ಕರ್ ಪ್ರಾರಂಭದಲ್ಲಿ ಕೈಗಾರಿಕೀಕರಣವನ್ನು ಸೂಚಿಸಿದಾಗ, ಕೈಗಾರಿಕೆಗಳ ಒಡೆತನ ಖಾಸಗಿಯವರ ಕೈಯಲ್ಲಿದ್ದರೂ ಪರವಾಗಿಲ್ಲ ಎಂದು ಭಾವಿಸಿದ್ದರು. ಆದರೆ 1940ರ ದಶಕದ ಕೊನೆಯಲ್ಲಿ ಅವರ ಯೋಚನೆಗಳು ಇನ್ನೂ ಕ್ರಾಂತಿಕಾರಿಯಾದವು. ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿಗಳ ಒಕ್ಕೂಟದ ಪರವಾಗಿ ಸಂವಿಧಾನ ಸಭೆಗೆ ಸಲ್ಲಿಸಿದ ಜ್ಞಾಪನ ಪತ್ರದಲ್ಲಿ ಪ್ರಭುತ್ವ ಸಮಾಜವಾದವನ್ನು ಪ್ರತಿಪಾದಿಸಿದ್ದಾರೆ. ದೇಶದ ಮುಖ್ಯ ಉದ್ದಿಮೆಗಳು, ವಿಮಾ ಕಂಪನಿಗಳು ಮತ್ತು ಇಡೀ ಕೃಷಿ ಭೂಮಿಯ ಮಾಲೀಕತ್ವ ಸರ್ಕಾರದ ಕೈಯಲ್ಲೇ ಇರಬೇಕು. ಕೈಗಾರಿಕೆಗಳ ಒಡೆತನ ಖಾಸಗಿಯವರದ್ದಾಗಿಬಿಟ್ಟರೆ, ಶ್ರೀಮಂತರು ಮತ್ತು ಬಡವರ ನಡುವಿನ ಅಂತರ ತೀವ್ರವಾಗುತ್ತದೆ. ದೇಶದ

ಸಂಪತ್ತು ಸಮನಾಗಿ ಹಂಚಿಕೆಯಾಗಬೇಕೆಂದರೆ ಸರ್ಕಾರವೇ ಬಂಡವಾಳ ಹಾಕಿ ಉದ್ದಿಮೆ ನಡೆಸಬೇಕು ಎಂದು ಸೂಚಿಸಿದರು. ಅಂದರೆ ಸರ್ಕಾರವು ಆರ್ಥಿಕತೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಅಂಬೇಡ್ಕರ್ ಬಯಸಿದ್ದರು.

ಅಂಬೇಡ್ಕರ್ ಕೃಷಿ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆ ಬಯಸಿದ್ದರು. ಕೃಷಿ ಭೂಮಿಯೆಲ್ಲವನ್ನೂ ಸರ್ಕಾರವೇ ವಶಪಡಿಸಿಕೊಳ್ಳಬೇಕು. ಭೂ ಮಾಲೀಕರಿಗೆ ಪ್ರತಿಯಾಗಿ ಬಾಂಡ್‌ಗಳನ್ನು ನೀಡಬೇಕು. ಜಮೀನನ್ನು ನಿರ್ದಿಷ್ಟ ಪ್ರಮಾಣದಲ್ಲಿ ವಿಂಗಡಿಸಿ ಗ್ರಾಮೀಣ ಜನರಿಗೆ ಸಾಮೂಹಿಕವಾಗಿ ಕೃಷಿ ಮಾಡಲು ಅವಕಾಶಮಾಡಿಕೊಡಬೇಕು. ಮಾಲಿಕ ಅಥವಾ ಕೂಲಿ ಅನ್ನುವ ವ್ಯತ್ಯಾಸವಿಲ್ಲದೆ ಜಾತಿ–ಮತದ ಭೇದವಿಲ್ಲದೆ ಎಲ್ಲರೂ ಒಟ್ಟಾಗಿ ಕೃಷಿ ಮಾಡಬೇಕು. ಬೀಜ, ಗೊಬ್ಬರ, ಎತ್ತುಗಳು ಮತ್ತು ಉಪಕರಣಗಳನ್ನು ಸರ್ಕಾರವೇ ಒದಗಿಸಬೇಕು. ಬಂದ ಲಾಭದಲ್ಲಿ ಸರ್ಕಾರದ ಪಾಲನ್ನು ನೀಡಿದ ನಂತರ ಉಳಿದದ್ದನ್ನು ರೈತರು ಹಂಚಿಕೊಳ್ಳಬೇಕು. ಕೃಷಿಯಷ್ಟೇ ಅಲ್ಲದೆ, ದೇಶದ ಪ್ರಮುಖ ಮತ್ತು ಮೂಲಭೂತ ಕೈಗಾರಿಕೆಗಳು ಸರ್ಕಾರದ ಮಾಲೀಕತ್ವದಲ್ಲೇ ಇರಬೇಕು. ಜೀವ ವಿಮೆ ಎನ್ನುವುದು ಪ್ರತಿಯೊಬ್ಬ ಪ್ರಜೆಗೆ ಕಡ್ಡಾಯವಾಗಿರಬೇಕು ಮತ್ತು ಅದು ಕೇವಲ ಸರ್ಕಾರದ ಏಕಸ್ವಾಮ್ಯವಾಗಿರಬೇಕು ಎಂದು ಅವರು ಪ್ರತಿಪಾದಿಸಿದ್ದರು.

“ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಸಿಗಬೇಕೆಂದರೆ ಜಮೀನು ಮತ್ತು ಕೈಗಾರಿಕೆಗಳ ರಾಷ್ಟ್ರೀಕರಣ ಆಗಲೇಬೇಕು”ಎಂದು ಅವರು ವಾದಿಸಿದರು. ಆದರೆ, ಸಂವಿಧಾನ ಸಭೆಯಲ್ಲಿದ್ದ ಎಲ್ಲರೂ ಇದನ್ನು ಒಪ್ಪುವುದಿಲ್ಲ ಎಂಬ ಕಹಿ ಸತ್ಯ ಅವರಿಗೆ ಗೊತ್ತಿತ್ತು. ಹಾಗಾಗಿ, ಹಿಂದೆ ಪೂನಾ ಒಪ್ಪಂದದ ಸಮಯದಲ್ಲಿ ಅನಿವಾರ್ಯವಾಗಿ ರಾಜಿ ಮಾಡಿಕೊಂಡಂತೆಯೇ, ಇಲ್ಲೂ ಕೂಡ ಅವರು ತಮ್ಮ ನಿಲುವನ್ನು ಸ್ವಲ್ಪ ಸಡಿಲಿಸಬೇಕಾಯಿತು. ಸಂವಿಧಾನ ಸಭೆಯಲ್ಲಿ ಶ್ರೀಮಂತರು ಮತ್ತು ಆಸ್ತಿವಂತರ ಪ್ರಭಾವ ಹೆಚ್ಚಿತ್ತು. ಹಾಗಾಗಿ ಅಂತಹ ಜಾಗದಲ್ಲಿ ಇಷ್ಟು ದೊಡ್ಡ ಬದಲಾವಣೆಯನ್ನು ತರುವುದು ಕಷ್ಟವೆಂದು ಅವರಿಗೆ ತಿಳಿಯಿತು. ಸ್ಟೇಟ್ ಸೋಷಿಯಲಿಸಂ ಪೂರ್ಣ ಪ್ರಮಾಣದಲ್ಲಿ ಸಂವಿಧಾನಕ್ಕೆ ಸೇರಿಸುವುದಕ್ಕೆ ಸಾಧ್ಯವಾಗಲಿಲ್ಲ. ಅದರ ಸಾರವನ್ನು ಅವರು‘ಮಾರ್ಗದರ್ಶಕ ತತ್ವಗಳ’ಮೂಲಕ ಅಳವಡಿಸಲು ಪ್ರಯತ್ನಿಸಿದರು.

ಅಂಬೇಡ್ಕರ್ ಅವರ ಅರ್ಥಶಾಸ್ತ್ರವನ್ನು ಕೇವಲ ಅಂಕಿ–ಅಂಶಗಳಲ್ಲಿ ನೋಡಲು ಸಾಧ್ಯವಿಲ್ಲ. ಅವರ ಪ್ರತಿಯೊಂದು ಆರ್ಥಿಕ ವಿಚಾರವೂ ಅವರ ರಾಜಕೀಯ ಹೋರಾಟ ಮತ್ತು ಬಡವರ ಮೇಲಿನ ಕಾಳಜಿಯೊಂದಿಗೆ ಬೆಸೆದುಕೊಂಡಿದೆ. ಕೆಲವರು ಅವರನ್ನು ‘ಬಂಡವಾಳಶಾಹಿ’ ಎಂದರೆ, ಇನ್ನು ಕೆಲವರು ‘ಸಮಾಜವಾದಿ’ ಎನ್ನುತ್ತಾರೆ. ಆದರೆ ಅಂಬೇಡ್ಕರ್ ಅವರನ್ನು ಒಂದು ಚೌಕಟ್ಟಿಗೆ ಹಾಕುವುದು ಕಷ್ಟ.

ಅಂಬೇಡ್ಕರ್ ಅವರಿಗೆ ಎಲ್ಲವೂ ಸರ್ಕಾರದ ನಿಯಂತ್ರಣದಲ್ಲಿದ್ದರೆ ಮುಂದೆ ಅದು ಸರ್ವಾಧಿಕಾರಕ್ಕೆ ದಾರಿಮಾಡಿಕೊಡಬಹುದು ಎಂಬ ಆತಂಕವೂ ಇತ್ತು. ಹಾಗಾಗಿ ಅವರು ರಷ್ಯಾ ಅಥವಾ ಚೀನಾದಂತೆ ಎಲ್ಲವನ್ನೂ ಸರ್ಕಾರವೇ ಕಬಳಿಸಬಾರದು; ಜನರಿಗೆ ತಮ್ಮ ಸ್ವಂತ ಉದ್ಯಮ ನಡೆಸುವುದಕ್ಕೆ ಅಥವಾ ವೈಯಕ್ತಿಕವಾಗಿ ಬೆಳೆಯುವುದಕ್ಕೂ ಅವಕಾಶ ಇರಬೇಕು ಎಂದು ಅವರು ಹೇಳುತ್ತಿದ್ದರು.

ಅಂಬೇಡ್ಕರ್ ಅವರ ಬೌದ್ಧಿಕ ಜೀವನದ ಮೇಲೆ ಅತಿ ಹೆಚ್ಚು ಪ್ರಭಾವ ಬೀರಿದ ವ್ಯಕ್ತಿ ಎಂದರೆ ಅವರ ಪ್ರೊಫೆಸರ್ ಜಾನ್ ಡ್ಯೂಯಿ. 1952ರಲ್ಲಿ ಅಂಬೇಡ್ಕರ್ ಅವರು ಅಮೆರಿಕಾಕ್ಕೆ ಹೋದಾಗ, ತಮ್ಮ ಪತ್ನಿ ಸವಿತಾ ಅಂಬೇಡ್ಕರ್ ಅವರಿಗೆ ಪತ್ರ ಬರೆದು, “ನನ್ನ ಇಡೀ ಬೌದ್ಧಿಕ ಜೀವನಕ್ಕೆ ಜಾನ್ ಡ್ಯೂಯಿ ಅವರೇ ಕಾರಣ, ಅವರು ಅದ್ಭುತ ಮನುಷ್ಯ” ಎಂದು ನೆನೆದಿದ್ದರು. ಅಂಬೇಡ್ಕರ್ ಅವರು ಡ್ಯೂಯಿ ಅವರ ಪ್ರತಿಯೊಂದು ಮಾತನ್ನೂ ಶ್ರದ್ಧೆಯಿಂದ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಎಷ್ಟು ಅಂದರೆ, “ಒಂದು ವೇಳೆ ಡ್ಯೂಯಿ ತೀರಿಕೊಂಡರೂ, ಅವರ ಎಲ್ಲ ಭಾಷಣಗಳನ್ನು ನಾನು ಹಾಗೆಯೇ ಪುನಃ ಬರೆದುಕೊಡಬಲ್ಲೆ” ಎಂದು ಗೆಳೆಯರ ಹತ್ತಿರ ಹೇಳುತ್ತಿದ್ದರಂತೆ!

ಜಾನ್ ಡ್ಯೂಯಿ ಅವರಿಂದ ಅಂಬೇಡ್ಕರ್ ಕಲಿತ ದೊಡ್ಡ ಪಾಠವೆಂದರೆ ‘ಪ್ರಾಗ್ಮಾಟಿಸಂ. ಯಾವುದು ಪ್ರಾಯೋಗಿಕವಾಗಿ ಕೆಲಸ ಮಾಡುತ್ತದೆಯೋ, ಅದೇ ಸರಿ.” ಅಂಬೇಡ್ಕರ್ ಅವರ ಆರ್ಥಿಕ ಮತ್ತು ರಾಜಕೀಯ ಚಿಂತನೆಗಳ ಮೇಲೆ ‘ಫ್ಯಾಬಿಯನ್ ಸಮಾಜವಾದ’ದ ಪ್ರಭಾವ ದಟ್ಟವಾಗಿತ್ತು.

ಫ್ಯಾಬಿಯನ್‌ವಾದಿಗಳು ಸಮಾಜವಾದವನ್ನು ತಕ್ಷಣದ ಕ್ರಾಂತಿಯ ಮೂಲಕ ಸಾಧಿಸುವ ಬದಲು, ಹಂತಹಂತವಾಗಿ ಜಾರಿಗೆ ತರಬಹುದು ಎಂದು ನಂಬಿದ್ದರು. ಅಸ್ತಿತ್ವದಲ್ಲಿರುವ ಸರ್ಕಾರಿ



ವ್ಯವಸ್ಥೆಯನ್ನು ನಾಶಮಾಡುವ ಬದಲು, ಶಿಕ್ಷಣ ಸಂಸ್ಥೆಗಳು, ಮಾಧ್ಯಮಗಳು, ಧಾರ್ಮಿಕ ಗುಂಪುಗಳು, ಕಾರ್ಮಿಕ ಸಂಘಗಳು ಮತ್ತು ರಾಜಕೀಯ ಪಕ್ಷಗಳ ಒಳಗೆ ಹೊಕ್ಕು, ವ್ಯವಸ್ಥೆಯ ಒಳಗಿನಿಂದಲೇ ಬದಲಾವಣೆ ತರುವುದು ಇವರ ಉದ್ದೇಶವಾಗಿತ್ತು. ಈ ಬದಲಾವಣೆಯು ಕೇವಲ ಕಾರ್ಮಿಕ ವರ್ಗದಿಂದ ಮಾತ್ರವಲ್ಲದೆ, ಸಮಾಜದ ಪ್ರಬುದ್ಧ ಅಥವಾ ಸುಶಿಕ್ಷಿತ ವರ್ಗಗಳಿಂದ ಸಾಧ್ಯ ಎಂದು ಅವರು ಭಾವಿಸಿದ್ದರು.

ಅಂಬೇಡ್ಕರ್ ಅವರು ಈ ಫ್ಯಾಬಿಯನ್ ನಂಬಿಕೆಗಳನ್ನು ಮತ್ತು ಜಾನ್ ಡ್ಯೂಯಿ ಅವರ 'ಪ್ರಾಗ್ಮಟಿಸಂ' (ವ್ಯಾವಹಾರಿಕ ಸಿದ್ಧಾಂತ) ತತ್ವಗಳನ್ನು ಅಳವಡಿಸಿಕೊಂಡಿದ್ದರು. ಆದರೆ ಅವರು ಅದನ್ನು ಹಾಗೆಯೇ ಸ್ವೀಕರಿಸದೆ, ಭಾರತದ ಸಂದರ್ಭಕ್ಕೆ ತಕ್ಕಂತೆ ತಮ್ಮದೇ ಆದ ಸೃಜನಶೀಲ ಸೇರ್ಪಡೆಗಳನ್ನು ಮಾಡಿಕೊಂಡರು. ಕೇವಲ ಆರ್ಥಿಕ ಬದಲಾವಣೆಯಷ್ಟೇ ಅಲ್ಲದೆ, ಸಮಾಜದಲ್ಲಿ ನೈತಿಕ ಮೌಲ್ಯಗಳೂ ಮುಖ್ಯ ಎಂದು ಅವರು ಒಪ್ಪಿಕೊಂಡಿದ್ದರು.

ಅಂಬೇಡ್ಕರ್ ಅವರ ಅರ್ಥಶಾಸ್ತ್ರದ ಚಿಂತನೆಗಳನ್ನು ಕೇವಲ ಅವರ ಪದವಿಗಾಗಿ ರಚಿಸಿದ ಪ್ರಬಂಧಗಳಲ್ಲಿ ಹುಡುಕುವುದು ಸರಿಯಲ್ಲ. ಅವರ ಬಹುತೇಕ ಕೃತಿಗಳಲ್ಲಿ ಆರ್ಥಿಕ ಅಂಶಗಳು ಇವೆ. ಆರ್ಥಿಕ ಒಳನೋಟಗಳು ಅವರ ಚಿಂತನೆಯ ಭಾಗವೂ ಹೌದು. ನಾವು ಅರ್ಥಶಾಸ್ತ್ರವನ್ನು ನೋಡುವ ಕ್ರಮವನ್ನು ಬದಲಿಸಿಕೊಳ್ಳಬೇಕು. ತೇಲ್ತುಂಬ್ಡೆಯವರು ಗುರುತಿಸುವಂತೆ ಅವರ 'ಜಾತಿ ವಿನಾಶ' ಪುಸ್ತಕವನ್ನು ಕೇವಲ ಸಾಮಾಜಿಕ ಪುಸ್ತಕ ಎನ್ನಲಾಗದು. ಜಾತಿ ಪದ್ಧತಿಯು ಮಾರುಕಟ್ಟೆಯ ವ್ಯವಹಾರಗಳನ್ನು ಹೇಗೆ ವಿಕೃತಗೊಳಿಸುತ್ತದೆ ಮತ್ತು ಆರ್ಥಿಕ ಪ್ರಗತಿಗೆ ಹೇಗೆ ತಡೆಯೊಡ್ಡುತ್ತದೆ ಎಂಬ ಆಳವಾದ ಆರ್ಥಿಕ ಸತ್ಯ ಅದರಲ್ಲಿದೆ. ಜೊತೆಗೆ ಜಾತಿ ವ್ಯವಸ್ಥೆಯು ಶ್ರಮದ ವಿಭಜನೆಯನ್ನಷ್ಟೇ ಮಾಡದೆ, ಮಾರುಕಟ್ಟೆಯ ಮುಕ್ತ ಆಯ್ಕೆಗಳನ್ನು ಹೇಗೆ ಕಸಿದುಕೊಳ್ಳುತ್ತದೆ ಎಂಬುದನ್ನು ತಿಳಿಸುತ್ತದೆ. ಆ ಮಟ್ಟಿಗೆ ಜನರ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತದೆ. ಅಭಿವೃದ್ಧಿಯನ್ನು ಸ್ವಾತಂತ್ರ್ಯದ ವಿಸ್ತರಣೆಯನ್ನಾಗಿ ನೋಡುವ ಅಮರ್ತ್ಯ ಸೇನರ ಚಿಂತನೆಗಳನ್ನು ಅಂಬೇಡ್ಕರ್ ಅವರ ಬರಹಗಳಲ್ಲೂ ಗುರುತಿಸಬಹುದು.

ಅವರ ಬೌದ್ಧ ಧರ್ಮದ ಸ್ವೀಕಾರದ ಹಿಂದೆಯೂ ಒಂದು ಆರ್ಥಿಕ ಚಿಂತನೆ ಇದೆ. ನೈತಿಕತೆಯ ಅಡಿಪಾಯವಿಲ್ಲದ ಸಮಾಜ ಸುಸ್ಥಿರವಾಗಿರಲು ಸಾಧ್ಯವಿಲ್ಲ ಎಂಬುದು ಅವರ ನಂಬಿಕೆಯಾಗಿತ್ತು. ಏಕೆಂದರೆ ನೈತಿಕತೆ ಇಲ್ಲದ ಆರ್ಥಿಕ ವ್ಯವಸ್ಥೆ ದೀರ್ಘಕಾಲ ಉಳಿಯಲು ಸಾಧ್ಯವಿಲ್ಲ.

ಅಂಬೇಡ್ಕರ್ ಅವರು ಅನಿರ್ಬಂಧಿತ ಬಂಡವಾಳಶಾಹಿಯನ್ನು (Unfettered Capitalism) ಬಲವಾಗಿ ವಿರೋಧಿಸಿದ್ದರು. ಕೇವಲ ಲಾಭದ ಉದ್ದೇಶದಿಂದ ನಡೆಯುವ ಆರ್ಥಿಕತೆಯು ದಮನ ಮತ್ತು ಶೋಷಣೆಯ ಸಾಧನವಾಗುತ್ತದೆ ಎಂಬುದು ಅವರ ನಿಲುವಾಗಿತ್ತು. ಲಾಭಕೋರತನದ ಆರ್ಥಿಕತೆಯು ರಾಜಕೀಯ ಪ್ರಜಾಪ್ರಭುತ್ವದ ಎರಡು ತತ್ವಗಳನ್ನು ಉಲ್ಲಂಘಿಸುತ್ತದೆ ಎಂದು ಅವರು ವಾದಿಸಿದ್ದರು: ಇದು ವ್ಯಕ್ತಿಗಳ ಜೀವನವನ್ನು ನಿಯಂತ್ರಿಸುವ ಅಧಿಕಾರವನ್ನು ಸರ್ಕಾರದ ಬದಲಿಗೆ ಖಾಸಗಿ ಮಾಲೀಕರಿಗೆ ನೀಡುತ್ತದೆ. ಜನ ಬದುಕುವುದಕ್ಕೆ ದಾರಿಯನ್ನು ಕಂಡುಕೊಳ್ಳುವ ಅನಿವಾರ್ಯತೆಯಲ್ಲಿ ತಮ್ಮ ಸಾಂವಿಧಾನಿಕ ಹಕ್ಕುಗಳನ್ನೇ ತ್ಯಾಗ ಮಾಡುವಂತೆ ಈ ವ್ಯವಸ್ಥೆ ಪ್ರೇರೇಪಿಸುತ್ತದೆ.

ಅಂಬೇಡ್ಕರ್ ಅವರು ಸರ್ಕಾರವನ್ನು ಕೇವಲ ಆಳುವ ವರ್ಗದ ನಿಯಂತ್ರಣದಲ್ಲಿರುವ ದಮನಕಾರಿ ಯಂತ್ರ ಎಂದು ನೋಡಲಿಲ್ಲ. ಬದಲಿಗೆ, ವಿವಿಧ ವರ್ಗಗಳ ನಡುವಿನ ಸಂಘರ್ಷವನ್ನು



ಬಗೆಹರಿಸುವ ಒಂದು 'ನಿಷ್ಪಕ್ಷಪಾತ ಸಂಧಾನಕಾರ'ಎಂದು ಕಂಡರು. ಶಕ್ತಿಯುತ ವರ್ಗಗಳ ಶೋಷಣೆಯ ಪ್ರವೃತ್ತಿಯನ್ನು ನಿಯಂತ್ರಿಸಲು ಮತ್ತು ಬಲಹೀನರ ಹಿತಾಸಕ್ತಿಯನ್ನು ರಕ್ಷಿಸಲು ಸರ್ಕಾರದ ಹಸ್ತಕ್ಷೇಪ ಅಗತ್ಯವೆಂದು ಅವರು ನಂಬಿದ್ದರು. ಮನುಷ್ಯನ ಒಳಗಿರುವ ಶೋಷಣೆಯ ಪ್ರವೃತ್ತಿಯನ್ನು ಹೊರಗಿನಿಂದ ಸರ್ಕಾರ ನಿಯಂತ್ರಿಸಿದರೆ, ಒಳಗಿನಿಂದ ಅದನ್ನು ಹತೋಟಿಯಲ್ಲಿಡಲು 'ಧರ್ಮ' ಅಥವಾ ನೈತಿಕತೆಯ ಅಗತ್ಯವಿದೆ ಎಂದು ಅವರು ಭಾವಿಸಿದ್ದರು.

ಅಂಬೇಡ್ಕರ್ ಅವರ ಚಿಂತನೆಗಳನ್ನು ಗಮನಿಸುವಾಗ ಈ ಆಯಾಮವನ್ನು ಸೇರಿಸಿಕೊಂಡರೆ ಅವರ ಆರ್ಥಿಕ ಚಿಂತನೆ 1923ರಲ್ಲೇ ನಿಂತುಹೋಗಿದೆ ಅಂತ ಭಾವಿಸುವುದು ಸರಿಯಲ್ಲ ಎಂಬುದು ತಿಳಿಯುತ್ತದೆ. ಅವರ ಪ್ರತಿಯೊಂದು ಸಾಮಾಜಿಕ ನಿರ್ಧಾರದ ಹಿಂದಿರುವ ಆರ್ಥಿಕ ಚಿಂತನೆಯನ್ನು ಗಮನಿಸಬೇಕಾದ ಅಗತ್ಯ ಇದೆ.

ಗ್ರಂಥ ಋಣ

Jean Dreze. Dr. Ambedkar and the future of Indian Democracy, in The Radical Ambedkar Critical Reflection.

Anand Teltumde, Economics of Babasaheb Ambedkar

Ambirajan, S. (1999). Ambedkar's Contributions to Indian Economics. Economic and Political Weekly, 34(46/47)

B R Ambedkar, Writings and speeches, Vol-6

ಅಂಬೇಡ್ಕರ್ ಹಾಗೂ ಭಾರತೀಯ ಪ್ರಜಾಸತ್ತೆ

ಅಂಬೇಡ್ಕರ್ ಅವರಿಗೆ ಪ್ರಜಾಸತ್ತೆಯನ್ನು ಸರ್ಕಾರದ ಒಂದು ಬಗೆಯಾಗಿ ನೋಡಲಿಲ್ಲ. ಅದು ಅವರಿಗೆ ಬದುಕುವ ಕ್ರಮವಾಗಿತ್ತು. ಪ್ರಜಾಸತ್ತೆಯನ್ನು ಜನರ, ಜನರಿಗಾಗಿ, ಜನರಿಂದ ಸರ್ಕಾರ ಅಂತ ವ್ಯಾಖ್ಯಾನಿಸಿದರೆ ನಾವು ಯಾವ ಜನರ ಬಗ್ಗೆ ಮಾತನಾಡುತ್ತಿದ್ದೇವೆ ಅನ್ನುವ ಪ್ರಶ್ನೆ ಬರುತ್ತದೆ. ಜಾತಿಯಾಧಾರಿತ ಸಮಾಜದಲ್ಲಿ ಈ ಪ್ರಶ್ನೆ ಮುಖ್ಯವಾಗುತ್ತದೆ. ಅಂಬೇಡ್ಕರ್ ಅವರಿಗೆ ಜಾತಿ ಹಾಗೂ ಪ್ರಜಾಸತ್ತೆ ಒಟ್ಟೊಟ್ಟಿಗೆ ಹೋಗೊಲ್ಲ ಅಂತ ಬಲವಾಗಿಯೇ ಅನ್ನಿಸಿತ್ತು. ಪ್ರಜಾಸತ್ತೆ ಅನ್ನೋದನ್ನು ಅವರು ಒಳ್ಳೆಯ ಸಮಾಜ ಅನ್ನೋ ಅರ್ಥದಲ್ಲಿ ಗ್ರಹಿಸಿಕೊಂಡಿದ್ದರು. ಅಂದರೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವನ್ನು ಆಧರಿಸಿದ ಸಮಾಜ. ಇದು ಪ್ರಜಾಸತ್ತೆಯ ಗುರಿಯೂ ಹೌದು, ಇದನ್ನು ಸಾಧಿಸುವ ವಿಧಾನವೂ ಹೌದು. ಅಂಬೇಡ್ಕರ್ ಒಂದು ಕಡೆ ಹೇಳುತ್ತಾರೆ:

"ಸಮಾನತೆ ಇಲ್ಲದ ಸ್ವಾತಂತ್ರ್ಯ ಹಲವರ ಮೇಲೆ ಕೆಲವರ ಪಾರಮ್ಯವನ್ನು ಸೃಷ್ಟಿಸುತ್ತದೆ. ಸ್ವಾತಂತ್ರವಿಲ್ಲದ ಸಮಾನತೆ ವೈಯಕ್ತಿಕ ಉತ್ಸಾಹವನ್ನು ಕೊಲ್ಲುತ್ತದೆ. ಭ್ರಾತೃತ್ವ ಇಲ್ಲದೇ ಹೋದರೆ ಸಮಾನತೆ ಹಾಗೂ ಸ್ವಾತಂತ್ರ್ಯ ಸಹಜ ಮಾರ್ಗವಾಗುವುದಿಲ್ಲ. ಅದನ್ನು ಜಾರಿಗೊಳಿಸುವುದಕ್ಕೆ ಪೋಲಿಸರು ಬೇಕಾಗುತ್ತಾರೆ."

ಅಂಬೇಡ್ಕರ್ ಆರ್ಥಿಕ ಹಾಗೂ ಸಾಮಾಜಿಕ ಪ್ರಜಾಸತ್ತೆ ಇಲ್ಲದೆ ರಾಜಕೀಯ ಪ್ರಜಾಸತ್ತೆ ಸಾಧ್ಯವಿಲ್ಲ ಎನ್ನುತ್ತಿದ್ದರು. ನಿಜವಾದ ಅರ್ಥದಲ್ಲಿ ಪ್ರಜಾಸತ್ತೆ ಸಾಧ್ಯವಾಗಬೇಕಾದರೆ ನಮ್ಮ ರಾಜಕೀಯ ಪ್ರಜಾಸತ್ತೆ, ಸಾಮಾಜಿಕ ಪ್ರಜಾಸತ್ತೆಯೂ ಆಗಿರಬೇಕು. ಅಂಬೇಡ್ಕರ್ ಅವರ ಈ ಚಿಂತನೆಗೆ ಇಂದು ಮತ್ತೆ ಜೀವಕೊಡಬೇಕಾಗಿದೆ. ಅಂಬೇಡ್ಕರ್ ಅವರ ಪ್ರಜಾಸತ್ತೆಯ ಪರಿಕಲ್ಪನೆಗೆ ಇನ್ನೊಂದು ಆಯಾಮವೂ ಇದೆ. ಅವರ ದೃಷ್ಟಿಯಲ್ಲಿ ಪ್ರಜಾಸತ್ತೆಯ ಜೊತೆಗೇ ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಕೋನವೂ ಇರುತ್ತಿತ್ತು. ಇವೆರಡು ಪ್ರಜಾಸತ್ತೆಗೆ ಅನಿವಾರ್ಯವಾದ ಅಂಶಗಳಾಗಿದ್ದವು.. ಜಾತಿ ವ್ಯವಸ್ಥೆ ನಿಂತಿರುವುದೇ ಅವೈಚಾರಿಕ ಅಂಧನಂಬಿಕೆಯ ಮೇಲೆ. ಇದರಿಂದ ಹೊರಬರಬೇಕಾದರೆ ವೈಚಾರಿಕ ಮನೋಭಾವ ಅವಶ್ಯಕ. ವೈಚಾರಿಕ ಚಿಂತನೆ ಮನುಷ್ಯರನ್ನು ಒಟ್ಟಿಗೆ ತರುವ ಶಕ್ತಿಯಾಗಬಹುದು. ಇತ್ತೀಚಿನ ದಿನಗಳಲ್ಲಿ ಜ್ಯೋತಿಷ್ಯ ಇವೆಲ್ಲಾ ವಿದ್ಯಾಭ್ಯಾಸದ ಭಾಗವಾಗುತ್ತಿರುವ ಸಂದರ್ಭದಲ್ಲಿ ಇದರ ಪ್ರಾಮುಖ್ಯತೆ ಅರ್ಥವಾಗುತ್ತದೆ.

ಅಂಬೇಡ್ಕರ್ ಮುಖ್ಯವಾಗಿ ಒತ್ತುಕೊಡುವ ಇನ್ನೊಂದು ಅಂಶ ಸಾಮಾಜಿಕ ನೈತಿಕತೆ. ಅವರ ಪ್ರಕಾರ ಸ್ವಾತಂತ್ರ ಮತ್ತು ಸಮಾನತೆ ಸಾಧ್ಯವಾಗಬೇಕಾದರೆ ಸಾಮಾಜಿಕ ನೈತಿಕತೆ ಸಾಧ್ಯವಾಗಬೇಕು. ಜಾತಿ ವ್ಯವಸ್ಥೆ ಈ ಸಾಮಾಜಿಕ ನೈತಿಕತೆಯನ್ನು ಕೊಂದಿದೆ ಅನ್ನುತ್ತಾರೆ ಅಂಬೇಡ್ಕರ್. ಅವರು ಬೌದ್ಧ ಧರ್ಮಕ್ಕೆ ಆಕರ್ಷಿತರಾಗಿದ್ದೇ ಈ ನೈತಿಕತೆ ಹಾಗು ವೈಚಾರಿಕತೆಗಾಗಿ. ಸಾಮಾಜಿಕ ನೈತಿಕತೆಯನ್ನು ಪ್ರಜಾಸತ್ತೆಯ ಅವಶ್ಯಕ ಭಾಗವಾಗಿ ನೋಡುವುದು ಇಂದಿಗೂ ಪ್ರಸ್ತುತ. ಇಂದು ಭಿಕ್ಷುಕರ, ರಸ್ತೆ ಬದಿಯ ಮಕ್ಕಳ, ಮನೆ ಇಲ್ಲದವರ ಸಮಸ್ಯೆಗಳು ಪ್ರಜಾಸತ್ತಾತ್ಮಕ ರಾಜಕೀಯದ ಭಾಗವಾಗಬೇಕಾದರೆ ಅದು ನೈತಿಕ ಕಾಳಜಿಯಿಂದ ಮಾತ್ರ ಸಾಧ್ಯ. ಸಾಮಾಜಿಕ ನೈತಿಕತೆ ಪ್ರಜಾಸತ್ತಾತ್ಮಕ ರಾಜಕೀಯದ ಕೇಂದ್ರಕ್ಕೆ ಬರುವುದಕ್ಕೆ ಸಾಧ್ಯವಾಗುವುದಾದರೆ ಹೊಸ ಜಗತ್ತು ಸಾಧ್ಯವಾಗುತ್ತದೆ.

ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆ ತೀವ್ರವಾಗಿದ್ದಾಗ ರಾಜ-ಕೀಯ ಸಮಾನತೆ ಸಾಧ್ಯವಾಗುವುದಿಲ್ಲ. "26 ಜನವರಿ 1950ರಂದು ವೈರುದ್ಯಗಳ ಬದುಕಿಗೆ ಕಾಲಿಡುತ್ತಿದ್ದೇವೆ. ರಾಜಕೀಯದಲ್ಲಿ ನಮಗೆ ಸಮಾನತೆ ಸಾಧ್ಯವಾಗಿದೆ. ಆದರೆ ಸಾಮಾಜಿಕ ಹಾಗೂ ಆರ್ಥಿಕ ಬದುಕಿನಲ್ಲಿ ನಾವು ಅಸಮಾನರಾಗಿದ್ದೇವೆ. ನಾವು ಇನ್ನೆಷ್ಟು ಕಾಲ ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಬದುಕಿನಲ್ಲಿ ಸಮಾನತೆಯನ್ನು ತಿರಸ್ಕರಿಸುವುದು? ಬಹು ಕಾಲ ಅದನ್ನು ತಿರಸ್ಕರಿಸುತ್ತಲೇ ಇದ್ದರೆ, ನಮ್ಮ ರಾಜಕೀಯ ಸ್ವಾತಂತ್ರ್ಯವನ್ನು ವಿನಾಶಕ್ಕೆ ತಳ್ಳುತ್ತೇವೆ" ಎಂದಿದ್ದರು.

ಈ ವೈರುಧ್ಯವನ್ನು ಹೇಗೆ ಪರಿಹರಿಸೋದು? ಅಂಬೇಡ್ಕರ್ ಈ ವೈರುಧ್ಯಕ್ಕೆ ಪರಿಹಾರವಾಗಿ ಸಂವಿದಾನತ್ಮಕ ಸಮಾಜವಾದವನ್ನು ಸೂಚಿಸಿದರು. ಅದರಿಂದ ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಸತ್ತೆ ಸಾಧ್ಯವಾಗುತ್ತದೆ ಎಂದು ಅವರು ನಂಬಿದ್ದರು. ಸಂವಿಧಾನಾತ್ಮಕ ಸಮಾಜವಾದದ ನೀಲಿನಕ್ಷೆಯನ್ನು ಅವರು ಸ್ಟೇಟ್ಸ್ ಅಂಡ್ ಮೈನಾರಿಟಿಸ್ ಮನವಿಯಲ್ಲಿ ಪ್ರಸ್ತುತಪಡಿಸಿದ್ದರು. ಇದರಲ್ಲಿ ಭೂಮಿ ಹಾಗೂ ಪ್ರಮುಖ ಕೈಗಾರಿಕೆಗಳು ಸರ್ಕಾರದ ಒಡೆತನದಲ್ಲಿ ಇರಬೇಕೆಂದು ಸೂಚಿಸಿದ್ದರು. ಅಂತಹ ಸರ್ಕಾರಿ ಒಡೆತನಕ್ಕೆ ಬೇಕಾದ ಸಂವಿಧಾನಾತ್ಮಕ ರಕ್ಷಣೆಯನ್ನು ಕೊಡುವಂತಹ ಸಮಾಜವಾದಿ ತತ್ವಗಳು ಅದರಲ್ಲಿ ಅಡಕವಾಗಿದ್ದವು. ನಿಜ, ಅದರಲ್ಲಿ ಅವರು ಸೂಚಿಸಿರುವ ಸಾಮೂಹಿಕ ವ್ಯವಸಾಯ ಇವೆಲ್ಲಾ ಇಂದು ನಮಗೆ ಸಾಧ್ಯವಾಗಿ ತೋರುವುದಿಲ್ಲ. ಆದರೆ ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಸತ್ತೆಯನ್ನು ರಾಜಕೀಯ ಪ್ರಜಾಸತ್ತೆಯೊಂದಿಗೆ ಬೆಸೆಯಬಲ್ಲ ಸಮಾಜವಾದಿ ಸಂವಿಧಾನ ಇಂದಿಗೂ ಪ್ರಸ್ತುತ. ಅಷ್ಟೇ ಅಲ್ಲ ಅವಶ್ಯಕವೂ ಹೌದು. ಆದರೆ ಅಂಬೇಡ್ಕರ್ ಅವರಿಗೆ ಇದನ್ನು ಸಂವಿಧಾನದ ಭಾಗವಾಗಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನು ಅಂಬೇಡ್ಕರ್ ನಿರ್ದೇಶನ ತತ್ವಗಳ ಅಡಿಯಲ್ಲಿ ಸೇರಿಸಿದ್ದಾರೆ.

ಆದರೆ ನಿರ್ದೇಶನ ತತ್ವಗಳನ್ನು ಯಾರು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಅದನ್ನು ನ್ಯಾಯಾಲಯದಲ್ಲಿ ಜಾರಿಗೊಳಿಸುವುದಕ್ಕೂ ಸಾಧ್ಯವಿಲ್ಲ. ಸರ್ಕಾರ ಅದರ ಜವಾಬ್ದಾರಿಯನ್ನು ಹೊರುವಂತೆ ಒತ್ತಾಯಿಸುವುದಕ್ಕೂ ಮತದಾರರಿಗೆ ಸಾಧ್ಯವಾಗಲಿಲ್ಲ. ಸ್ವಾತಂತ್ರ ಭಾರತದಲ್ಲಿ ಪ್ರಜಾಸತ್ತೆ ಅರಳಲೂ ಇಲ್ಲ, ನಾಶವೂ ಆಗಲಿಲ್ಲ. ಕುಂಟುತ್ತಾ ಸಾಗುತ್ತಿದೆ. ಇಂದು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಅಸಮಾನತೆಯ ಜೊತೆಗೆ, ಸರ್ವಾಧಿಕಾರಿ ಧೋರಣೆ, ಭ್ರಷ್ಟಾಚಾರ, ಕಾರ್ಪೋರೇಟ್ ಪ್ರಾಬಲ್ಯ, ಕೋಮುವಾದ ಎಲ್ಲವೂ ದೊಡ್ಡ ಮಟ್ಟದಲ್ಲಿ ಸೇರಿಕೊಂಡಿದೆ. ಆದರೂ ಪೂರ್ಣಗೊಳ್ಳದ ಪ್ರಜಾಸತ್ತಾತ್ಮಕ ಪ್ರಯಾಣವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಅಂಬೇಡ್ಕರ್ ಅವರ ಚಿಂತನೆಗಳು ಇಂದು ಎಂದಿಗಿಂತ ಪ್ರಸ್ತುತ. ಅದರೆ ಜೀನ್ ಡ್ರೀಜ್ ಹೇಳುವಂತೆ ಇಂದು ಅಂಬೇಡ್ಕರ್ ಅವರ ಅಮೂಲ್ಯ ವಿಚಾರಗಳ ಜೊತೆಗೆ ಇತರ ಪೂರಕ ಚಿಂತನೆಗಳನ್ನು ಬಳಸಿಕೊಂಡು ಶ್ರೀಮಂತಗೊಳಿಸಿಕೊಂಡು ಮುಂದೆ ಸಾಗಬೇಕಾಗಿದೆ.

[ಜೀನ್ ಡ್ರೀಜ್ ಅವರ ಡಾಕ್ಟರ್ ಅಂಬೇಡ್ಕರ್ ಅಂಡ್ ಫ್ಯೂಚರ್ ಓ ಇಂಡಿಯನ್ ಡೆಮಾಕ್ರೆಸಿ ಲೇಖನವನ್ನು ಆಧರಿಸಿದ ಲೇಖನ]

ರೂಪಾಯಿಯ ಸಮಸ್ಯೆ: ಅದರ ಉಗಮ ಮತ್ತು ಪರಿಹಾರ


ನೂರು ವರ್ಷಗಳ ಹಿಂದೆ, 1923ರ ಬೇಸಿಗೆಯ ಕಾಲದಲ್ಲಿ, ಲಂಡನ್ ಸ್ಕೂಲ್ ಆಫ್ ಎಕಾನಮಿಕ್ಸ್‌ನಲ್ಲಿ ಅರ್ಥಶಾಸ್ತ್ರದಲ್ಲಿ ತರಬೇತಿ ಪಡೆದ ಮುವತ್ತೆರಡು ವರ್ಷದ ಅಂಬೇಡ್ಕರ್ ಮುಂಬೈಗೆ ಮರಳಿದರು. ಆಗಷ್ಟೇ 8ನೇ ಶತಮಾನದ ನಂತರದ ಭಾರತೀಯ ಹಣಕಾಸಿನ ಸಮಗ್ರ ಇತಿಹಾಸದ ಬಗ್ಗೆ ಬೃಹತ್ ಸಂಶೋಧನೆಯನ್ನು ಪೂರ್ಣಗೊಳಿಸಿದ್ದರು.

ಇದು 1923ರ ಡಿಸೆಂಬರ್‌ನಲ್ಲಿ "The Problem of the Rupee: Its Origins and its Solution" (ರೂಪಾಯಿಯ ಸಮಸ್ಯೆ: ಅದರ ಉಗಮ ಮತ್ತು ಪರಿಹಾರ) ಎಂಬ ಹೆಸರಿನಲ್ಲಿ ಅದು ಲಂಡನ್‌ನಲ್ಲಿ ಪ್ರಕಟವಾಯಿತು. ಅದು ಬ್ರಿಟಿಷ್ ಸರ್ಕಾರದ ಆರ್ಥಿಕ ನೀತಿಗಳ ಟೀಕೆಯೂ ಆಗಿತ್ತು, ಅದನ್ನು ಸಮರ್ಥಿಸುತ್ತಿದ್ದ ಆಗಿನ ಎಲ್ಲಾ ತಜ್ಞರುಗಳಿಗೆ ನೇರವಾಗಿ ಸವಾಲೆಸೆಯುತ್ತಿತ್ತು. ಜೊತೆಗೆ ಬ್ರಿಟಿಷರು ಭಾರತದ ಆರ್ಥಿಕತೆಯನ್ನು ಶೋಷಿಸಿದ ಕ್ರಮ, ಭಾರತೀಯರು ಪಟ್ಟ ಸಂಕಟವನ್ನು ಅದು ವಿವರಿಸುತ್ತದೆ.

ಭಾರತದಲ್ಲಿ 1835ಕ್ಕಿಂತ ಮೊದಲು ಭಾರತದಲ್ಲಿ ಯಾವುದೇ ಏಕರೂಪದ ನಾಣ್ಯ ಪದ್ಧತಿ ಇರಲಿಲ್ಲ. ಚಿನ್ನದ ಮೊಹರುಗಳು ಮತ್ತು ಬೆಳ್ಳಿಯ ರೂಪಾಯಿಗಳು ಎರಡೂ ಚಲಾವಣೆಯಲ್ಲಿದ್ದವು (ಇದನ್ನು bimetallism ಎನ್ನಲಾಗುತ್ತದೆ). ಆದರೆ 1835ರಲ್ಲಿ ಬ್ರಿಟಿಷರು ಬೆಳ್ಳಿಯ ರೂಪಾಯಿಯನ್ನೇ ಭಾರತದ ಏಕೈಕ ಅಧಿಕೃತ ನಾಣ್ಯವನ್ನಾಗಿ ಕಡ್ಡಾಯಗೊಳಿಸಿದರು. 180 ಗ್ರೇನ್ ತೂಕದ ಬೆಳ್ಳಿಯ ರೂಪಾಯಿಯನ್ನು ಭಾರತದ ಏಕೈಕ ಕಾನೂನುಬದ್ಧ ನಾಣ್ಯವನ್ನಾಗಿ ಮಾಡಲಾಯಿತು. ಇಡೀ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಭಾರತವೊಂದರಲ್ಲಷ್ಟೇ ಚಿನ್ನದ ಮಾನದಂಡ ವ್ಯವಸ್ಥೆ ಇರಲಿಲ್ಲ. ಬ್ರಿಟಿಷರು ಭಾರತದ ಚಿನ್ನದ ಮೀಸಲು ನಿಧಿಯನ್ನು ಲಂಡನ್‌ನ ನೆಲಮಾಳಿಗೆಗಳಲ್ಲಿ ಸಂಗ್ರಹಿಸಿಟ್ಟಿದ್ದರು. ಅದನ್ನು ಬಳಸಿಕೊಂಡು ತಮ್ಮ ಸ್ವಂತ ಆರ್ಥಿಕತೆಯನ್ನು ಬಲಪಡಿಸಿಕೊಳ್ಳುವುದು ಅವರ ಉದ್ದೇಶವಾಗಿತ್ತು.

ಅಂಬೇಡ್ಕರ್ ಗುರುತಿಸಿರುವಂತೆ ಇದರ ಹಿಂದಿನ ಉದ್ದೇಶ ಭಾರತದಲ್ಲಿ ಹೇರಳವಾಗಿದ್ದ ಚಿನ್ನವನ್ನು ಹೊರಕ್ಕೆ ಸಾಗಿಸುವುದಾಗಿತ್ತು. ಬ್ರಿಟಿಷರ ಇಂತಹ ನೀತಿಗಳಿಂದಾಗಿ 19ನೇ ಶತಮಾನದಲ್ಲಿ ಚಿನ್ನ ಭಾರತದಿಂದ ಹೊರಕ್ಕೆ ಹರಿಯಲಾರಂಭಿಸಿತು.

ಮಾರುಕಟ್ಟೆಯಲ್ಲಿ ಬೆಳ್ಳಿಯ ಬೆಲೆ ಕುಸಿಯತೊಡಗಿತು. ಭಾರತವು ಬೆಳ್ಳಿ ಮಾನದಂಡದಲ್ಲಿದ್ದ ಕಾರಣ, ರೂಪಾಯಿಯ ಮೌಲ್ಯವು ಪೌಂಡ್ ಎದುರು ಕುಸಿಯತೊಡಗಿತು. ಆಗ ಭಾರತದ ರೂಪಾಯಿ ಬ್ರಿಟನ್ನಿನ ಪೌಂಡ್ ಜೊತೆಗೆ ತೆಕ್ಕೆ ಹಾಕಿಕೊಂಡಿತ್ತು. ಬೆಳ್ಳಿಯ ಬೆಲೆ ಕುಸಿತವನ್ನು ತಡೆಯಲು ಬ್ರಿಟಿಷ್ ಸರ್ಕಾರವು 1893ರಲ್ಲಿ ಟಂಕಸಾಲೆಗಳನ್ನು ಮುಚ್ಚಿತು. ತಮಗೆ ಬೇಕಾದಂತೆ ನೋಟುಗಳನ್ನು ಮುದ್ರಿಸಲು ಶುರು ಮಾಡಿದರು. ಸರ್ಕಾರ ಹೀಗೆ ಅತಿಯಾಗಿ ಹಣ ಮುದ್ರಿಸಿದ್ದರಿಂದಲೇ ಭಾರತದಲ್ಲಿ ಬೆಲೆ ವಿಪರೀತ ಏರುತ್ತಿದೆ. ಬೆಲೆಯೇರಿಕೆಯಿಂದ ನಿಜವಾಗಿ ತೊಂದರೆ ಅನುಭವಿಸುತ್ತಿರುವವರು ಸಾಮಾನ್ಯ ಜನ. ಅವರು ಸಂಕಷ್ಟದಲ್ಲಿದ್ದಾರೆ ಎಂದು ಅಂಬೇಡ್ಕರ್ ಬಲವಾಗಿ ವಾದಿಸಿದ್ದರು. 1925ರ ಹಿಲ್ಟನ್ ಯಂಗ್ ಕಮಿಷನ್ ಮುಂದೆ ಸಾಕ್ಷ್ಯ ನೀಡುವಾಗಲೂ ಅಂಬೇಡ್ಕರ್ ಇದೇ ವಿಷಯವನ್ನು ಒತ್ತಿ ಹೇಳಿದರು. "ಸರ್ಕಾರದ ಕೈಗೆ ನೋಟು ಮುದ್ರಿಸುವ ಅಧಿಕಾರ ಕೊಟ್ಟುಬಿಟ್ಟರೆ ಅದು ಬೇಕಾಬಿಟ್ಟಿ ಖರ್ಚು ಮಾಡುತ್ತದೆ, ಇದು ದೇಶಕ್ಕೆ ಅಪಾಯಕಾರಿ" ಎಂಬುದು ಅವರ ಖಚಿತ ನಿಲುವಾಗಿತ್ತು. ನಾಣ್ಯದ ಮೌಲ್ಯವು ಸ್ಥಿರವಾಗಿರಬೇಕಾದರೆ ಸರ್ಕಾರದ ನೋಟು ಮುದ್ರಿಸುವ ಅಧಿಕಾರಕ್ಕೆ ಮಿತಿಯಿರಬೇಕು ಎಂದು ಅವರು ಪ್ರತಿಪಾದಿಸಿದರು. ಇದಕ್ಕೆ ಪರಿಹಾರವಾಗಿ ಅವರು ಭಾರತದಲ್ಲಿ ಚಿನ್ನದ ಮಾನದಂಡವನ್ನು Gold Standard) ಜಾರಿಗೆ ತರಬೇಕು ಎಂದು ವಾದಿಸಿದರು. ಈ ಪದ್ಧತಿಯಲ್ಲಿ ಒಂದು ದೇಶದ ಹತ್ತಿರ ಎಷ್ಟು ಬಂಗಾರವಿದೆಯೋ, ಅಷ್ಟೇ ಪ್ರಮಾಣದ ನೋಟುಗಳನ್ನು ಮಾತ್ರ ಮುದ್ರಿಸಲು ಅವಕಾಶವಿರುತ್ತದೆ. ಸರ್ಕಾರವು ತನಗೆ ಇಷ್ಟ ಬಂದಂತೆ ಹಣವನ್ನು ಮುದ್ರಿಸಲು



ಸಾಧ್ಯವಾಗುವುದಿಲ್ಲ. ಜೊತೆಗೆ ಇದು ಬ್ರಿಟಿಷ್ ಸರ್ಕಾರವು ಭಾರತದ ಸಂಪತ್ತನ್ನು (ಚಿನ್ನ) ಲಂಡನ್‌ನಲ್ಲಿ ಇಟ್ಟುಕೊಳ್ಳುವುದನ್ನು ತಪ್ಪಿಸುತ್ತದೆ. ಇದರಿಂದ ಬೆಲೆಗಳು ನಿಯಂತ್ರಣದಲ್ಲಿರುತ್ತವೆ. ಸಾಮಾನ್ಯ ಜನರ ಸಂಕಟ ಕಡಿಮೆಯಾಗುತ್ತದೆ.

ಅಗ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಕೇನ್ಸ್ 'ಗೋಲ್ಡ್ ಎಕ್ಸ್‌ಚೇಂಜ್ ಸ್ಟ್ಯಾಂಡರ್ಡ್'(ಚಿನ್ನದ ವಿನಿಯಮ ಮಾನದಂಡದ) ಪರವಾಗಿ ವಾದಿಸುತ್ತಿದ್ದರು. ಚಿನ್ನವನ್ನು ಚಲಾವಣೆಯಲ್ಲಿ ತೊಡಗಿಸುವ ಬದಲು ಮೀಸಲು ನಿಧಿಯಾಗಿ ಇಡುವುದು ಆರ್ಥಿಕವಾಗಿ ಲಾಭದಾಯಕ ಎನ್ನುವುದು ಕೇನ್ಸ್ ಅವರ ವಾದವಾಗಿತ್ತು. ಆದರೆ ಈ ವ್ಯವಸ್ಥೆಯಿಂದ ಚಿನ್ನ ಭಾರತದಲ್ಲಿ ಉಳಿಯುವುದಿಲ್ಲ. ಚಿನ್ನದ ಮೀಸಲು ನಿಧಿ ಲಂಡನ್ನಿಗೆ ವರ್ಗಾವಣೆಯಾಗುತ್ತಿತ್ತು ಎನ್ನುವುದು ಅಂಬೇಡ್ಕರ್ ಅವರ ಆತಂಕವಾಗಿತ್ತು. ಅಷ್ಟೇ ವಾಸ್ತವದಲ್ಲಿ ಆಗಿದ್ದು ಕೂಡ ಅದೆ. ಭಾರತದ ಚಿನ್ನದ ಮೀಸಲು ನಿಧಿಯನ್ನು ಲಂಡನ್‌ನಲ್ಲಿ ಇಡಲಾಗಿತ್ತು. ಅಂಬೇಡ್ಕರ್ ಅವರಿಗೆ ಚಿನ್ನದ ಮಾನದಂಡ ಕೇವಲ ಆರ್ಥಿಕ ವಾದವಾಗಿರಲಿಲ್ಲ. ಅದು ಬ್ರಿಟಿಷರ ಅಧಿಕಾರವನ್ನು ಮೊಟಕುಗೊಳಿಸುವ ಒಂದು ರಾಜಕೀಯ ತಂತ್ರವೂ ಆಗಿತ್ತು. ಬ್ರಿಟಿಷ್ ಸರ್ಕಾರಕ್ಕೆ ಹಣ ಮುದ್ರಿಸುವ ಅನಿಯಮಿತ ಅಧಿಕಾರವನ್ನು ನೀಡುವ ಬದಲು, ಅವರ ಕೈಗಳನ್ನು ಕಟ್ಟುವುದು ಭಾರತದ ಬಡಜನರಿಗೆ ಹೆಚ್ಚು ಸುರಕ್ಷಿತ ಎಂಬುದು ಅಂಬೇಡ್ಕರ್ ಅವರ ನಂಬಿಕೆಯಾಗಿತ್ತು. ಬ್ರಿಟಿಷ್ ಸರ್ಕಾರಕ್ಕೆ ತನ್ನ ಲಾಭವೇ ಮುಖ್ಯವಾಗಿತ್ತು. ಭಾರತದ ಸಂಪತ್ತನ್ನು ಬಳಸಿ ತನ್ನ ಸಾಮ್ರಾಜ್ಯವನ್ನು ಆರ್ಥಿಕವಾಗಿ ಬಲಪಡಿಸಿಕೊಳ್ಳುವ ಉದ್ದೇಶವೇ ಪ್ರಧಾನವಾಗಿತ್ತು.

ಅಂಬೇಡ್ಕರ್ ಅವರಿಗೆ 'ದ ಪ್ರಾಬ್ಲಮ್ ಆಫ್ ದ ರುಪಿ' ಪುಸ್ತಕದ ಮುಂದಿನ ಭಾಗವನ್ನು ಬರೆಯಬೇಕೆನ್ನುವ ಆಸೆ ಇತ್ತು. ಪುಸ್ತಕದ ಹೊಸ ಮುನ್ನುಡಿಯಲ್ಲಿ, ಅವರು ಎರಡನೇ ಸಂಪುಟವನ್ನು ಹೊರತರುವುದಾಗಿ ಭರವಸೆ ನೀಡಿದ್ದರು. ಅದರಲ್ಲಿ ನಂತರದ ದಿನಗಳಲ್ಲಿ ಹಣಕಾಸಿನ ವ್ಯವಸ್ಥೆಯಲ್ಲಿ ಆದ ಬದಲಾವಣೆಗಳನ್ನು ಮತ್ತು ಹೊಸ ಪರಿಹಾರಗಳನ್ನು ಚರ್ಚಿಸಬೇಕೆಂದುಕೊಂಡಿದ್ದರು. ರಾಜಕೀಯ ಸನ್ನಿವೇಶ ಬದಲಾಗಿತ್ತು. 1935ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾಗಿತ್ತು ಮತ್ತು ಬ್ರೆಟನ್ ವುಡ್ಸ್' ಎಂಬ ಹೊಸ ಜಾಗತಿಕ ಹಣಕಾಸು ಒಪ್ಪಂದಕ್ಕೆ ಜಾರಿಯಾಗಿತ್ತು. ಹಾಗಾಗಿ, ಈ ಬದಲಾದ ಪರಿಸ್ಥಿತಿಗೆ


ತಕ್ಕಂತೆ ಹೊಸ ಹಣಕಾಸು ಪರಿಹಾರವನ್ನು ನೀಡುವುದು ಆ ಎರಡನೇ ಸಂಪುಟದ ಉದ್ದೇಶವಾಗಿತ್ತು.

ಈ ಭರವಸೆಯ ಸಾಲುಗಳನ್ನು ಬರೆದ ಕೆಲವೇ ವಾರಗಳಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಅಂಬೇಡ್ಕರ್ ಅವರು ಸಂವಿಧಾನ ರಚನೆ ಮತ್ತು ದೇಶದ ಅತ್ಯುನ್ನತ ಮಟ್ಟದ ರಾಜಕೀಯದಲ್ಲಿ ಸಂಪೂರ್ಣವಾಗಿ ಮಗ್ನರಾದರು. ಅವರ ಸಂಶೋಧನೆಯ ಎರಡನೇ ಸಂಪುಟದ ರಚನೆ ಸಾಧ್ಯವಾಗಲೇ ಇಲ್ಲ. ಚಿನ್ನದ ಮಾನದಂಡದ ಆಚೆಗೆ, ಒಂದು ಪ್ರಜಾಪ್ರಭುತ್ವ ಸಂವಿಧಾನದ ಚೌಕಟ್ಟಿನಲ್ಲಿ ಅಂಬೇಡ್ಕರ್ ಅವರು ಹಣಕಾಸಿನ ರಾಜಕಾರಣವನ್ನು ಹೇಗೆ ಕಲ್ಪಿಸಿಕೊಂಡಿದ್ದರು ಎಂಬ ವಿವರಗಳು ನಮಗೆ ಲಭ್ಯವಾಗಲಿಲ್ಲ.

ಇಂದು ಹಣಕಾಸು ವ್ಯವಸ್ಥೆಯನ್ನು ಕೇವಲ ಆರ್ಥಿಕ ದೃಷ್ಟಿಯಿಂದ ನೋಡದೆ, ಜನರ ಹಕ್ಕು ಹಾಗೂ ನ್ಯಾಯದ ದೃಷ್ಟಿಯಿಂದ ನೋಡುವ ಅಗತ್ಯ ಇದೆ. ಅಂಬೇಡ್ಕರ್ ಅದಕ್ಕಾಗಿ ತಮ್ಮ ಈ ಪುಸ್ತಕದಲ್ಲಿ ನಮ್ಮನ್ನು



ಪ್ರೇರೇಪಿಸುತ್ತಿದ್ದಾರೆ.



ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಹಣಕಾಸಿನ ವಿಕಸನ

ಡಾ. ಬಿ.ಆರ್. ಅಂಬೇಡ್ಕರ್ ಅವರ "The Evolution of Provincial Finance in British India" (ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಹಣಕಾಸಿನ ವಿಕಸನ) ಪುಸ್ತಕವು ಭಾರತದ ಆರ್ಥಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅತ್ಯಂತ ಮಹತ್ವದ ಕೃತಿಗಳಲ್ಲಿ ಒಂದಾಗಿದೆ. ಇದು ಮೂಲತಃ ಅವರು ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್‌ಡಿ ಪ್ರಬಂಧವಾಗಿದೆ. ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ 1833 ರಿಂದ 1921 ರವರೆಗಿನ ನಡುವೆ ಭಾರತದ ಕೇಂದ್ರ ಸರ್ಕಾರ ಮತ್ತು ಪ್ರಾಂತೀಯ (ರಾಜ್ಯ) ಸರ್ಕಾರಗಳ ನಡುವೆ ಹಣಕಾಸಿನ ಸಂಬಂಧಗಳು ಹೇಗೆ ಬದಲಾದವು ಎಂಬುದನ್ನು ಅಂಬೇಡ್ಕರ್ ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ಅಧಿಕಾರವು ಅತ್ಯಂತ ಕೇಂದ್ರೀಕೃತವಾಗಿದ್ದ ವ್ಯವಸ್ಥೆಯಿಂದ ಹಣಕಾಸಿನ ವಿಕೇಂದ್ರೀಕರಣದತ್ತ ಭಾರತ ಸಾಗಿದ ಹಾದಿಯನ್ನು ಇದು ವಿಶ್ಲೇಷಿಸುತ್ತದೆ.

ಅಂಬೇಡ್ಕರ್ ಅವರು ಪ್ರಾಂತೀಯ ಹಣಕಾಸಿನ ವಿಕಸನವನ್ನು ಮೂರು ಪ್ರಮುಖ ಹಂತಗಳಲ್ಲಿ ಗುರುತಿಸುತ್ತಾರೆ.

1. ನಿಯೋಜನೆಯ ಮೂಲಕ ಬಜೆಟ್ (Budget by Assignment: 1871-1877)

1871ಕ್ಕಿಂತ ಮೊದಲು ಭಾರತದಲ್ಲಿ ಸಂಪೂರ್ಣವಾಗಿ ಕೇಂದ್ರೀಕೃತ ಹಣಕಾಸು ವ್ಯವಸ್ಥೆ ಇತ್ತು. ಸಾಕಷ್ಟು ಗೊಂದಲಗಳಿದ್ದವು. ಪ್ರಾಂತೀಯ ಸರ್ಕಾರಗಳಿಗೆ ಸ್ವಂತ ಆದಾಯದ ಮೂಲಗಳಿರಲಿಲ್ಲ. ಕಾನೂನಿನ ಪ್ರಕಾರ ಎಲ್ಲದಕ್ಕೂ ಕೇಂದ್ರವೇ ಜವಾಬ್ದಾರಿಯಾಗಿತ್ತು. ಆದರೆ ಆಡಳಿತವನ್ನು ಪ್ರಾಂತ್ಯಗಳು ನಡೆಸುತ್ತಿದ್ದವು. ರಾಜ್ಯಗಳಿಗೆ ಯಾವುದೇ ಕಾನೂನಾತ್ಮಕ ಜವಾಬ್ದಾರಿ ಇರಲಿಲ್ಲ. ರಾಜ್ಯಗಳು ತಮ್ಮ ಖರ್ಚಿನ ಪಟ್ಟಿಯನ್ನು ಕೇಂದ್ರಕ್ಕೆ ಕಳಿಸುತ್ತಿದ್ದವು. ಕೇಂದ್ರ ಸರ್ಕಾರಕ್ಕೆ ಸ್ಥಳೀಯ ಅಗತ್ಯಗಳ ಬಗ್ಗೆ ಅರಿವಿರಲಿಲ್ಲ.

ಹೆಚ್ಚು ಬೇಡಿಕೆ ಸಲ್ಲಿಸಿದ ಪ್ರಾಂತಗಳಿಗೆ ಹೆಚ್ಚು ಹಣ ಸಿಗುವಂತಾಗಿತ್ತು. ಇದನ್ನು ಅಂಬೇಡ್ಕರ್ "ಉಳಿತಾಯ ಮಾಡುವವರಿಗೆ ಶಿಕ್ಷೆ, ಹೆಚ್ಚು ಖರ್ಚು ಮಾಡುವವರಿಗೆ ಬಹುಮಾನ" ನೀಡುವ ವ್ಯವಸ್ಥೆ ಎಂದು ಟೀಕಿಸಿದರು. ಜೊತೆಗೆ ಹಣಕಾಸು ವ್ಯವಸ್ಥೆಯು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಹಿಡಿತದಲ್ಲಿತ್ತು. ಅಂಬೇಡ್ಕರ್ ಇದನ್ನು "ಹಣಕಾಸಿನ ಸರ್ವಾಧಿಕಾರ"ಎಂದು ಕರೆದಿದ್ದಾರೆ.

1871ರಲ್ಲಿ ಲಾರ್ಡ್ ಮೇಯೋ ಅವರು ಪ್ರಾಂತಗಳಿಗೆ ಕೆಲವು ಇಲಾಖೆಗಳ (ಶಿಕ್ಷಣ, ಆರೋಗ್ಯ, ರಸ್ತೆ ಇತ್ಯಾದಿ) ಜವಾಬ್ದಾರಿಯನ್ನು ನೀಡಿ, ಅವುಗಳ ನಿರ್ವಹಣೆಗಾಗಿ ಕೇಂದ್ರದಿಂದ ಒಂದು ನಿರ್ದಿಷ್ಟ ಮೊತ್ತವನ್ನು ನೀಡುವ ಪದ್ಧತಿ ಜಾರಿಗೆ ತಂದರು. ಪ್ರಾಂತ್ಯಗಳು ತಮ್ಮ ಸ್ವಂತ ಬಜೆಟ್ ಸಿದ್ಧಪಡಿಸಿಕೊಳ್ಳುತ್ತಿದ್ದವು. ಅಂಬೇಡ್ಕರ್ ಇದನ್ನು"ಬಜೆಟ್ ಬೈ ಅಸೈನ್‌ಮೆಂಟ್" ಎಂದು ಕರೆದಿದ್ದಾರೆ. ಇದರ ಪ್ರಕಾರ, ಪ್ರಾಂತ್ಯಗಳು ಈ ಇಲಾಖೆಗಳಿಂದ ಬರುವ ಆದಾಯ ಮತ್ತು ಕೇಂದ್ರ ಕೊಡುತ್ತಿದ್ದ ನಿರ್ದಿಷ್ಟ ನಿಧಿಯನ್ನು ಬಳಸಿಕೊಂಡು ಆಡಳಿತ ನಡೆಸಬೇಕಿತ್ತು.

2. ನಿಯೋಜಿತ ಆದಾಯದ ಮೂಲಕ ಬಜೆಟ್ (Budget by Assigned Revenues: 1877-1882)

ನಂತರದಲ್ಲಿ ಲಾರ್ಡ್ ಲಿಟನ್ ಸೂಚಿಸಿದಂತೆ ಪ್ರಾಂತೀಯ ಸರ್ಕಾರಗಳಿಗೆ ಕೇವಲ ನಿಗದಿತ ಹಣವನ್ನು ನೀಡುವ ಬದಲು, ಕೆಲವು ತೆರಿಗೆ ಮೂಲಗಳನ್ನೇ (ಉದಾಹರಣೆಗೆ: ಅಬಕಾರಿ, ಸ್ಟ್ಯಾಂಪ್ ಡ್ಯೂಟಿ) ವಹಿಸಿಕೊಡಲಾಯಿತು. ಇದನ್ನು 'ಬಜೆಟ್ ಬೈ ಅಸೈನ್ಡ್ ರೆವೆನ್ಯೂಸ್'ಅಂತ ಕರೆಯಲಾಯಿತು. ಹಿಂದಿನ ಹಲವು ವರ್ಷಗಳ ಸರಾಸರಿಯನ್ನು ತೆಗೆದುಕೊಂಡು, ಪ್ರಸ್ತುತ ವರ್ಷದ ಆದಾಯವನ್ನು ಅಂದಾಜಿಸಲಾಗುತ್ತಿತ್ತು. ಅಂದಾಜಿಗಿಂತ ತೆರಿಗೆ ಸಂಗ್ರಹದಲ್ಲಿ ಹೆಚ್ಚು ಕಮ್ಮಿಯಾದರೆ ಆ ವ್ಯತ್ಯಾಸವನ್ನು ಕೇಂದ್ರ ಮತ್ತು ರಾಜ್ಯಗಳು ಅರ್ಧ-ಅರ್ಧ (50/50) ಹಂಚಿಕೊಳ್ಳಬೇಕು. ಹಾಗಾಗಿ ಪ್ರಾಂತ್ಯಗಳು ಅನಗತ್ಯ ಖರ್ಚು ಮಾಡದೆ ಜಾಗರೂಕತೆಯಿಂದ ಹಣಕಾಸನ್ನು ನಿರ್ವಹಿಸುತ್ತಿದ್ದವು. ಜೊತೆಗೆ ಹೆಚ್ಚಿನ ಕಂದಾಯ ಸಂಗ್ರಹವಾದರೆ, ಅದರಲ್ಲಿ ಅರ್ಧ ಭಾಗ ಪ್ರಾಂತ್ಯಗಳಿಗೆ ಸಿಗುತ್ತಿದ್ದರಿಂದ ಅವು ಹೆಚ್ಚಿನ ಸಂಪನ್ಮೂಲದ ಸಂಗ್ರಹಣೆಗೆ ಪ್ರಯತ್ನಿಸುತ್ತಿದ್ದವು. ಹಾಗಾಗಿ ಈ ವ್ಯವಸ್ಥೆ ರಾಜ್ಯಗಳಿಗೆ ಹಣಕಾಸಿನ ಶಿಸ್ತನ್ನು ಕಾಪಾಡಿಕೊಳ್ಳುವುದಕ್ಕೆ ಪ್ರೋತ್ಸಾಹಿಸುತ್ತಿತ್ತು. ಆ ದೃಷ್ಟಿಯಿಂದ ಇದು ಉತ್ತಮ ಕ್ರಮ ಎಂದು ಅಂಬೇಡ್ಕರ್ ಇದನ್ನು ಮೆಚ್ಚಿಕೊಂಡಿದ್ದರು.

3. ಆದಾಯದ ಹಂಚಿಕೆಯನ್ನು ಆಧರಿಸಿದ ಬಜೆಟ್ (ಬಜೆಟ್ ಬೈ ಶೇರ್ಡ್ ರೆವೆನ್ಯೂಸ್)

ಹಳೆಯ ಬಜೆಟ್ ಪದ್ಧತಿಗಳಲ್ಲಿ ಇದ್ದ ಒಂದು ಸಮಸ್ಯೆಯೆಂದರೆ, ಪ್ರಾಂತ್ಯಗಳಿಗೆ ತಮ್ಮ ಆದಾಯ ಹೆಚ್ಚಿಸಿಕೊಳ್ಳುವುದಕ್ಕೆ ಯಾವುದೇ ಅವಕಾಶವಿರಲಿಲ್ಲ. ಪ್ರಾಂತ್ಯಗಳಿಗೆ ನಿರಂತರ ಬಂಡವಾಳದ ಕೊರತೆಯ ಸಮಸ್ಯೆ ಇರುತ್ತಿತ್ತು. ಇದನ್ನು ಸರಿಪಡಿಸಲು 'ಬಜೆಟ್ ಬೈ ಶೇರ್ಡ್ ರೆವೆನ್ಯೂಸ್' ಅಂದರೆ ಆದಾಯದ ಹಂಚಿಕೆಯನ್ನು ಆಧರಿಸಿದ ಬಜೆಟ್ ಪದ್ಧತಿ ಬಂದಿತು. ಕೆಲವು ತೆರಿಗೆಗಳನ್ನು ಕೇಂದ್ರ ಸಂಗ್ರಹಿಸಿದರೆ, ಇನ್ನು ಕೆಲವನ್ನು ರಾಜ್ಯಗಳು ಸಂಗ್ರಹಿಸುತ್ತಿದ್ದವು. ಲಾರ್ಡ್ ರಿಪ್ಪನ್ ಸೂಚಿಸಿದ ವ್ಯವಸ್ಥೆಯಲ್ಲಿ ಆದಾಯವನ್ನು ಮೂರು ಭಾಗಗಳಾಗಿ ವಿಂಗಡಿಸಲಾಯಿತು. ಕೇಂದ್ರೀಕೃತ ಆದಾಯ : ಕೇವಲ ಕೇಂದ್ರಕ್ಕೆ ಮಾತ್ರ ಸೇರುವ ಆದಾಯ (ಉದಾ: ರೈಲ್ವೆ, ಅಂಚೆ). ಪ್ರಾಂತೀಯ ಆದಾಯ: ಕೇವಲ ಪ್ರಾಂತ್ಯಗಳಿಗೆ ಸೇರುವ ಆದಾಯ. ಮೂರನೆಯದು ಕೇಂದ್ರ ಮತ್ತು ಪ್ರಾಂತ್ಯಗಳು ನಿರ್ದಿಷ್ಟ ಅನುಪಾತದಲ್ಲಿ ಹಂಚಿಕೊಳ್ಳುವ ಆದಾಯ (ಉದಾ: ಭೂಕಂದಾಯ).

ಅಂಬೇಡ್ಕರ್ ಬ್ರಿಟಿಷ್ ಸರ್ಕಾರದ ತೆರಿಗೆ ನೀತಿಯನ್ನು ಬಲವಾಗಿ ಖಂಡಿಸಿದ್ದರು. ಅದೊಂದು ಅತ್ಯಂತ ಅಸಮ ಪದ್ಧತಿಯೆಂದು ಟೀಕಿಸಿದ್ದರು. ಭಾರತದ ಬಡವರಿಂದ ತೆರಿಗೆಯನ್ನು ವಿಪರೀತ ಸಂಗ್ರಹಿಸಲಾಗುತ್ತಿತ್ತು. ಫಸಲು ಬರಲಿ ಬಿಡಲಿ ಭೂಕಂದಾಯವನ್ನು ಕಡ್ಡಾಯವಾಗಿ ವಸೂಲಿ ಮಾಡಲಾಗುತ್ತಿತ್ತು. ಪರಿಣಾಮವಾಗಿ ರೈತರು ಸಾಲದ ಸುಳಿಯಲ್ಲಿ ಸಿಕ್ಕಿದ್ದರು. ಇದಕ್ಕೆ ವ್ಯತಿರಿಕ್ತವಾಗಿ ವರಮಾನ ತೆರಿಗೆಯನ್ನು ರದ್ದುಗೊಳಿಸಿ ಶ್ರೀಮಂತರಿಗೆ ಅನುಕೂಲ ಮಾಡಿಕೊಡಲಾಯಿತು. ವರಮಾನ ತೆರಿಗೆಯ ರದ್ದತಿಯಿಂದ ಉಂಟಾದ ನಷ್ಟವನ್ನು ತುಂಬಿಕೊಳ್ಳಲು ರಾಜ್ಯ ಸರ್ಕಾರಗಳು ಈಗಾಗಲೇ ಕಷ್ಟದಲ್ಲಿದ್ದ ಕೃಷಿಕರ ಮೇಲೆ ಹೆಚ್ಚಿನ ತೆರಿಗೆ ಹಾಕಿದವು. ಪ್ರತಿಯೊಬ್ಬರೂ ಬಳಸುವ ಉಪ್ಪೂ ಸೇರಿದಂತೆ ದೈನಂದಿನ ಬಳಕೆಯ ವಸ್ತುಗಳ ಮೇಲೆ ವಿಪರೀತ ತೆರಿಗೆ ವಿಧಿಸಿದರು. ಇದು ನೈತಿಕವಾಗಿ ಹಾಗೂ ಆರ್ಥಿಕವಾಗಿ ಅನ್ಯಾಯ ಎಂದು ಅಂಬೇಡ್ಕರ್ ಖಂಡಿಸಿದರು.

ತೆರಿಗೆ ಸಂಗ್ರಹವಷ್ಟೇ ಅಲ್ಲ ಸಾರ್ವಜನಿಕ ವೆಚ್ಚಕ್ಕೆ ಸಂಬಂಧಿಸಿದ ಬ್ರಿಟಿಷ್ ಸರ್ಕಾರದ ಆದ್ಯತೆಗಳು ಕೂಡ ಭಾರತೀಯರಿಗೆ ಮತ್ತು ಭಾರತದ ಹಿತಾಸಕ್ತಿಗೆ ಮಾರಕವಾಗಿದ್ದವು. ಅಂಬೇಡ್ಕರ್ ಗುರುತಿಸುವಂತೆ ಸಂಗ್ರಹವಾದ ಸಂಪನ್ಮೂಲವನ್ನು ಭಾರತದ ಜನರ ಅಭಿವೃದ್ಧಿಗಾಗಿ ಬಳಸುವ ಬದಲು ತಮ್ಮ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳಿಗಾಗಿ ಬಳಸುತ್ತಿದ್ದರು. ಬಜೆಟ್‌ನ ಬಹುಪಾಲು ಹಣ ಸೈನ್ಯದ ನಿರ್ವಹಣೆಗೆ ಬಳಕೆಯಾಗುತ್ತಿತ್ತು. ಶಿಕ್ಷಣ, ಸಾರ್ವಜನಿಕ ಆರೋಗ್ಯ ಮತ್ತು ಕೃಷಿ ಸುಧಾರಣೆಗಳ ಮೇಲೆ ಬ್ರಿಟಿಷರು ಮಾಡುತ್ತಿದ್ದ ಖರ್ಚು ನಗಣ್ಯವಾಗಿತ್ತು. ಇದು ಭಾರತದ ಆರ್ಥಿಕ ಹಿನ್ನಡೆಗೆ ಮುಖ್ಯ ಕಾರಣವಾಯಿತು. ಭಾರತದ ತೆರಿಗೆ ಹಣವು ಬ್ರಿಟಿಷ್ ಅಧಿಕಾರಿಗಳ ಪೆನ್ಷನ್ ಮತ್ತು ಸಂಬಳದ ರೂಪದಲ್ಲಿ ಇಂಗ್ಲೆಂಡ್‌ಗೆ ಹರಿದು ಹೋಗುತ್ತಿತ್ತು. ಇವೆಲ್ಲವನ್ನು ಅಂಬೇಡ್ಕರ್ ಅಂಕಿಅಂಶಗಳ ಸಮೇತ ಸಾದರಪಡಿಸುತ್ತಾರೆ. ಕಟುವಾಗಿ ಖಂಡಿಸುತ್ತಾರೆ.

ಪುಸ್ತಕದ ಕೊನೆಯ ಭಾಗದಲ್ಲಿ ಅಂಬೇಡ್ಕರ್ 1919ರ ಮಾಂಟೆಗು-ಚೆಲ್ಮ್ಸ್‌ಫೋರ್ಡ್ ಸುಧಾರಣೆಗಳು ಮತ್ತು ಅದರಲ್ಲಿ ಪರಿಚಯಿಸಲಾದ ದ್ವಿಪ್ರಭುತ್ವ' (Dyarchy) ಪದ್ಧತಿಯನ್ನು ವಿಶ್ಲೇಷಿಸಿದ್ದಾರೆ. ಅಧಿಕಾರ ಮತ್ತು ಜವಾಬ್ದಾರಿಯ ವಿಭಜನೆಯನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ. ಹಣಕಾಸು, ಪೊಲೀಸ್, ನ್ಯಾಯಾಂಗ ಮತ್ತು ಭೂಕಂದಾಯ ಇವೆಲ್ಲಾ ಬ್ರಿಟಿಷ್ ಗವರ್ನರ್ ಮತ್ತು ಅವರ ಕಾರ್ಯಕಾರಿ ಮಂಡಳಿಯ ಅಧೀನದಲ್ಲಿದ್ದವು. ಅವರು ಶಾಸನಸಭೆಗೆ ಜವಾಬ್ದಾರರಾಗಿರಲಿಲ್ಲ.

ಶಿಕ್ಷಣ, ಸಾರ್ವಜನಿಕ ಆರೋಗ್ಯ, ಕೃಷಿ ಮತ್ತು ಸ್ಥಳೀಯ ಸ್ವಯಂ ಸರ್ಕಾರ ಇವುಗಳನ್ನು ಭಾರತೀಯ ಸಚಿವರಿಗೆ ವರ್ಗಾಯಿಸಲಾಗಿತ್ತು. ಇವರು ಶಾಸನಸಭೆಗೆ ಜವಾಬ್ದಾರರಾಗಿದ್ದರು. ಅಂಬೇಡ್ಕರ್ ಅವರ ಮುಖ್ಯ ಟೀಕೆಯೆಂದರೆ ಭಾರತೀಯ ಸಚಿವರಿಗೆ ಅಭಿವೃದ್ಧಿ ಇಲಾಖೆಗಳನ್ನು (ವರ್ಗಾಯಿಸಿದ ವಿಷಯಗಳು) ನೀಡಲಾಗಿತ್ತು, ಆದರೆ ಅದಕ್ಕೆ ಬೇಕಾದ ಹಣಕಾಸಿನ ಅಧಿಕಾರವನ್ನು ಬ್ರಿಟಿಷರೇ ಉಳಿಸಿಕೊಂಡಿದ್ದರು. ಪ್ರತಿಯೊಂದು ಯೋಜನೆಗೂ ಅವರು ಬ್ರಿಟಿಷ್ ಹಣಕಾಸು ಅಧಿಕಾರಿಯ ಅನುಮತಿ ಪಡೆಯಬೇಕಿತ್ತು. ಬ್ರಿಟಿಷ್ ಹಣಕಾಸು ಅಧಿಕಾರಿಗಳು ಹಣದ ಕೊರತೆಯ ನೆಪವೊಡ್ಡಿ ಅನುಮತಿಯನ್ನು ತಿರಸ್ಕರಿಸಬಹುದಾಗಿತ್ತು.

ಪ್ರಾಂತ್ಯದ ಎಲ್ಲಾ ಆದಾಯವು ಒಂದೇ ಕಡೆ ಜಂಟಿ ಬೊಕ್ಕಸದಲ್ಲಿ ಜಮೆಯಾಗುತ್ತಿತ್ತು. ಮೊದಲು ಬ್ರಿಟಿಷರ ಅಧೀನದಲ್ಲಿದ್ದ ಸೈನ್ಯ, ಪೋಲಿಸ್ ಇತ್ಯಾದಿ ಕಾಯ್ದಿರಿಸಿದ ಇಲಾಖೆಗಳ ಅಗತ್ಯಗಳನ್ನು ಪೂರೈಸಲಾಗುತ್ತಿತ್ತು. ಕೊನೆಯಲ್ಲಿ ಉಳಿದ ಅಲ್ಪ ಮೊತ್ತವನ್ನು ಭಾರತೀಯ ಸಚಿವರಿಗೆ ವರ್ಗಾಯಿಸಿದ ಇಲಾಖೆಗಳಿಗೆ ನೀಡಲಾಗುತ್ತಿತ್ತು. ಅದಕ್ಕೆ ಅಂಬೇಡ್ಕರ್ ಅವರು "ಭಾರತೀಯ ಸಚಿವರಿಗೆ ಅಧಿಕಾರ ನೀಡಲಾಗಿದೆ, ಆದರೆ ಆ ಅಧಿಕಾರವನ್ನು ಚಲಾಯಿಸಲು ಬೇಕಾದ ಇಂಧನವನ್ನು ನೀಡಲಾಗಿಲ್ಲ"ಎಂದು ಬಣ್ಣಿಸಿದ್ದಾರೆ. ಹಣಕಾಸಿನ ಸ್ವಾಯತ್ತತೆ ಇಲ್ಲದ ದ್ವಿಪ್ರಭುತ್ವವು ಕೇವಲ ಒಂದು "ವಂಚನೆ" ಎಂದು ಅವರು ಕರೆದರು. ಪ್ರಾಂತಗಳಿಗೆ ತಮ್ಮದೇ ಆದ ತೆರಿಗೆ ವಿಧಿಸುವ ಮತ್ತು ಆ ಹಣವನ್ನು ಖರ್ಚು ಮಾಡುವ ಸ್ವತಂತ್ರ ಅಧಿಕಾರ ನೀಡದ ಹೊರತು ನಿಜವಾದ ಪ್ರಜಾಪ್ರಭುತ್ವ ಸಾಧ್ಯವಿಲ್ಲ ಎಂದು ಅವರು ವಾದಿಸಿದರು.

ಅಮರ್ತ್ಯ ಸೇನ್- ಬದುಕು ಹಾಗು ಆಲೋಚನೆಗಳು-೪

ಅಮರ್ತ್ಯ ಸೇನ್ ನಮ್ಮ ನಡುವಿನ ಅಪರೂಪದ ಅರ್ಥಶಾಸ್ತ್ರಜ್ಞ, ತತ್ತ್ವಶಾಸ್ತ್ರಜ್ಞ, ಮತ್ತು ಚಿಂತಕ. ಅವರ ಅಧ್ಯಯನದ ಹರವು ತೀರಾ ವಿಶಾಲ. ಸೇನ್ ಅವರ ಅಧ್ಯಯನ ಒಂದು ವಿಷಯಕ್ಕೆ ಸೀಮಿತವಾಗಿಲ್ಲ. ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಸಮಾಜವು ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳುತ್ತದೆ ಎಂದು ಚಿಂತಿಸಲು ಸಾಮಾಜಿಕ ಆಯ್ಕೆಯ ಸಿದ್ಧಾಂತ, ಜನರ ಏಳಿಗೆಯನ್ನು ಅಳೆಯುವ ಕಲ್ಯಾಣ ಅರ್ಥಶಾಸ್ತ್ರ, ಹಸಿವು ಹಾಗು ಬಡತನಕ್ಕೆ ಆಹಾರದ ಕೊರತೆಯಲ್ಲ, ಜನರ ಆಯ್ಕೆ ಹಾಗೂ ಹಕ್ಕುಗಳ ಕೊರತೆ ಕಾರಣವೆನ್ನುವ ಕ್ಷಾಮ ಮತ್ತು ಬಡತನವನ್ನು ಕುರಿತ ಚಿಂತನೆ, ಒಬ್ಬ ವ್ಯಕ್ತಿಗೆ ಏನು ಮಾಡಲು ಸಾಧ್ಯ ಮತ್ತು ಅವನು ಏನಾಗಲು ಬಯಸುತ್ತಾನೆ ಎಂಬ ಸಾಮರ್ಥ್ಯವೇ ನಿಜವಾದ ಅಭಿವೃದ್ಧಿ ಎನ್ನುವ ಸಾಮರ್ಥ್ಯದ ದೃಷ್ಟಿಕೋನ ಹೀಗೆ ಹಲವು ಕ್ಷೇತ್ರಗಳಲ್ಲಿ ಮೌಲಿಕ ಸಂಶೋಧನೆ ಮಾಡಿದ್ದಾರೆ.

ವೈಯಕ್ತಿಕ ಮೌಲ್ಯಗಳನ್ನು ಸಮಾಜದ ಒಟ್ಟಾರೆ ನಿರ್ಧಾರಗಳಾಗಿ ಹೇಗೆ ಬದಲಿಸಬಹುದು ಎಂಬುದನ್ನು ಅವರು ವಿವರಿಸಿದರು. ವ್ಯಕ್ತಿಗಳ ಮೂಲಭೂತ ಹಕ್ಕುಗಳಿಗೆ ಧಕ್ಕೆ ಬಾರದಂತೆ ಸಮಾಜವು ಹೇಗೆ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು ಎಂಬ ನಿಯಮಗಳನ್ನು ರೂಪಿಸಿದರು. ಬಡತನ ಮತ್ತು ಕ್ಷಾಮವನ್ನು ಅಳೆಯುವ ಹೊಸ ದಾರಿಗಳನ್ನು ತೋರಿಸಿಕೊಟ್ಟರು. ಎನ್ನುವ ಕಾರಣಕ್ಕೆ ಅಮರ್ತ್ಯ ಸೇನ್ ಅವರಿಗೆ 1998ರಲ್ಲಿ ಅವರಿಗೆ ಅರ್ಥಶಾಸ್ತ್ರದಲ್ಲಿ ನೋಬೆಲ್ ಪ್ರಶಸ್ತಿ ನೀಡಲಾಯಿತು.
ಅವರ ಬಗ್ಗೆ ಕನ್ನಡದಲ್ಲಿರುವ ಬರಹಗಳು ತುಂಬಾ ಕಡಿಮೆ. ಅವರ ಬದುಕು ಚಿಂತನೆಗಳನ್ನು ಪರಿಚಯ ಮಾಡಿಕೊಳ್ಳುವ ದೃಷ್ಟಿಯಿಂದ ಪ್ರಾರಂಭವಾಗಿರುವ ಸರಣಿಯ ನಾಲ್ಕನೆಯ ಭಾಗ ಇದು. ಇದರಲ್ಲಿ ಸಮಾಜಿಕ ಆಯ್ಕೆಯನ್ನು ಕುರಿತ ಅವರ ಚಿಂತನೆಯನ್ನು ಪರಿಚಯಿಸಲಾಗಿದೆ.



ಅಮರ್ತ್ಯ ಸೇನ್ ಅವರ ಸಾಮಾಜಿಕ ಆಯ್ಕೆಯನ್ನು ಕುರಿತು

ಟಿ ಎಸ್ ವೇಣುಗೋಪಾಲ್

ಅಮರ್ತ್ಯ ಸೇನ್ ಕಲ್ಕತ್ತಾದ ಪ್ರಸಿಡೆನ್ಸಿ ಕಾಲೇಜಿನಲ್ಲಿ ಮೊದಲ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದರು. ಆಗಷ್ಟೆ ಕೆನ್ನೆತ್ ಆರೋ ಅವರ ಸಾಮಾಜಿಕ ಆಯ್ಕೆಯ ಸಿದ್ಧಾಂತವನ್ನು ಕುರಿತ ಸೋಷಿಯಲ್ ಚಾಯ್ಸ್ ಅಂಡ್ ಇಂಡಿವಿಜುವಲ್ ವ್ಯಾಲ್ಯೂಸ್' (Social Choice and Individual Values) ಕೃತಿ ನ್ಯೂಯಾರ್ಕ್‌ನಲ್ಲಿ ಪ್ರಕಟವಾಗಿತ್ತು. ಅದು ದೊಡ್ಡ ಸಂಚಲನವನ್ನೇ ಉಂಟುಮಾಡಿತ್ತು. ಸೇನ್ ಅವರ ಸಹಪಾಟಿ ಸುಖಮೋಯ್ ಚಕ್ರವರ್ತಿ ಅದನ್ನು ದಾಸ್‌ಗುಪ್ತ ಪುಸ್ತಕದ ಅಂಗಡಿಯಿಂದ ಎರವಲು ಪಡೆದು ಓದಿ ಮುಗಿಸಿದ್ದರು. ಸುಖಮೋಯ್ ಅವರೊಡನೆಯ ಚರ್ಚೆಯಿಂದ ಸೇನ್ ಪ್ರೇರಿತರಾಗಿ ಅವರಿಂದ ಎರವಲು ಪಡೆದು ಒಂದೇ ರಾತ್ರಿಯಲ್ಲಿ ಓದಿ ಮುಗಿಸಿದರು. ಅಂದಿನಿಂದ ಸಾಮಾಜಿಕ ಆಯ್ಕೆಯ ವಿಷಯದಲ್ಲಿ ಸೇನ್ ಅವರಿಗೆ ಆಸಕ್ತಿ ಪ್ರಾರಂಭವಾಯಿತು. ಸಾಮಾಜಿಕ ಆಯ್ಕೆ ಅನ್ನುವುದು ಸಮಾಜದ ಪ್ರತಿಯೊಬ್ಬ ವೈಯಕ್ತಿಕ ಆಸಕ್ತಿಗಳನ್ನು, ಎಲ್ಲರಿಗೂ ಒಪ್ಪಿಗೆಯಾಗುವ ಒಂದು 'ಸಾಮೂಹಿಕ ನಿರ್ಧಾರವನ್ನು ಹೇಗೆ ರೂಪಿಸಬಹುದು ಎಂಬುದರ ಅಧ್ಯಯನ."

ಸಾಮಾಜಿಕ ಆಯ್ಕೆಯ ಸಿದ್ಧಾಂತವು ಕೇವಲ ಒಂದು ಚಿಂತನೆಯಲ್ಲ, ನಮ್ಮನ್ನು ಕಾಡುವ ಹಲವು ಗಂಭೀರ ಪ್ರಶ್ನೆಗಳಿಗೆ ಸಮಾಧಾನವನ್ನು ನೀಡಬಹುದು. ಬಹುಮತವನ್ನು ಆಧರಿಸಿ ತೆಗೆದುಕೊಳ್ಳುವ ನಿರ್ಧಾರಗಳು ಯಾವಾಗಲೂ ಸರಿಯಿರುತ್ತವೆಯೇ? ಜನರ ಹಿತಾಸಕ್ತಿಗಳು ತೀರಾ ಭಿನ್ನವಾಗಿದ್ದಾಗ ಸಮಾಜದ ಪ್ರಗತಿಯನ್ನು ಅಳೆಯುವುದು ಹೇಗೆ? ಸಮಾಜದ ವಿವಿಧ ಸ್ತರದ ಜನರು ಅನುಭವಿಸುವ ನೋವುಗಳು ವಿಭಿನ್ನ ಬಗೆಯದು ಆಗಿದ್ದಾಗ ಸಮಾಜದ ಬಡತನವನ್ನು ಅಳೆಯುವುದು ಹೇಗೆ? ಜನರ ವೈಯಕ್ತಿಕ ಹಕ್ಕುಗಳನ್ನು ಕಾಪಾಡುತ್ತಲೇ ಅವರ ಇಷ್ಟಗಳನ್ನು ಪೂರೈಸುವುದು ಹೇಗೆ? ಜನರ ವೈಯಕ್ತಿಕ ಆಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು, ಇಡೀ ಗುಂಪಿಗೆ ಅಥವಾ ಸಮಾಜಕ್ಕೆ ಒಳ್ಳೆಯದಾಗುವ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಹೇಗೆ ಎಂಬುದೇ ಇದರ ಮುಖ್ಯ ಗುರಿ. ಒಟ್ಟಾರೆಯಾಗಿ ಹೇಳುವುದಾದರೆ, ಸಾಮಾಜಿಕ ಆಯ್ಕೆಯ ಚರ್ಚೆ ವ್ಯಕ್ತಿಯಿಂದ ಸಮಾಜದವರೆಗೆ ಹೋಗುವ ಒಂದು ತರ್ಕಬದ್ಧ ಹಾದಿಯ ಹುಡುಕಾಟ.

ಕಲ್ಕತ್ತದಲ್ಲಿ ಇದ್ದಾಗಲೇ ಸಾಮಾಜಿಕ ಆಯ್ಕೆಯ ವಿಷಯದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಸೇನ್ ಪದವಿ ಮುಗಿಸಿ ಉನ್ನತ ವ್ಯಾಸಂಗಕ್ಕೆ ಇಂಗ್ಲೆಂಡ್‌ಗೆ ಹೋದಾಗ, ಅಲ್ಲೂ ಇದನ್ನು ಕುರಿತೇ ಅಧ್ಯಯನ ಮುಂದುವರಿಸಬೇಕೆಂದು ಬಯಸಿದ್ದರು. ಆದರೆ ಕೇಂಬ್ರಿಡ್ಜ್‌ನ ಯಾವ ಪ್ರೊಫೆಸರ್‌ಗಳಿಗೂ ಈ ವಿಷಯದ ಬಗ್ಗೆ ಆಸಕ್ತಿ ಇರಲಿಲ್ಲ. ಅಲ್ಲಿ 'ಕಲ್ಯಾಣ ಅರ್ಥಶಾಸ್ತ್ರವನ್ನು (Welfare Economics) ಯಾರೂ ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಅವರೆಲ್ಲಾ ಕೆನ್ನೆತ್ ಆರೋ ಅವರ ಅಸಾಧ್ಯತೆಯ ಸಿದ್ಧಾಂತವನ್ನು ಒಂದು ಸವಾಲಾಗಿ ನೋಡುವ ಬದಲು, ಅದೊಂದು ಸೋಲು ಎಂದು ಭಾವಿಸಿದರು. ಕಲ್ಯಾಣ ಅರ್ಥಶಾಸ್ತ್ರವು ಒಂದು ಪ್ರಯೋಜನವಿಲ್ಲದ ವಿಷಯ ಎಂದು ಅವರು ನಿರ್ಧರಿಸಿಬಿಟ್ಟಿದ್ದರು. ಸೇನ್ ಅವರ ಮಾರ್ಗದರ್ಶಿಯಾಗಿದ್ದ ಜೋನ್ ರಾಬಿನ್ಸನ್ ಕೂಡ ಅದರಲ್ಲಿ ಏನೂ ಸತ್ವವಿಲ್ಲ. ಯಾವುದಾದರೂ ಉಪಯುಕ್ತವಾದ ಬೇರೆ ವಿಷಯವನ್ನು ಆರಿಸಿಕೊಂಡು ಕೆಲಸ ಮಾಡು ಮಾಡು ಎಂದು ಸೇನ್ ಅವರಿಗೆ ಸಲಹೆ ನೀಡಿದರು. ಸೇನ್ ಅವರಿಗೆ ಸಾಮಾಜಿಕ ಆಯ್ಕೆಯ ವಿಷಯ ಮತ್ತೆ ಅಧ್ಯಯನ ಮಾಡುವುದಕ್ಕೆ ಹಲವು ವರ್ಷ ಕಾಯಬೇಕಾಯಿತು. ತಮ್ಮ ಸಂಶೋಧನೆ ಹಾಗೂ ಬೋಧನೆಯ ಕರ್ತವ್ಯ ಮುಗಿದ ಮೇಲೆ ಮತ್ತೆ ಈ ಬಗ್ಗೆ ಅಧ್ಯಯನವನ್ನು ಪ್ರಾರಂಭಿಸಿದ್ದರು. ಆ ವೇಳೆಗೆ ಸಾಮಾಜಿಕ ಆಯ್ಕೆಯ ಬಗ್ಗೆ ಒಂದಿಷ್ಟು ಜನ ಆಸಕ್ತಿ ತೋರಿಸಲು ಪ್ರಾರಂಭಿಸಿದ್ದರು.

ಸಾಮಾಜಿಕ ಆಯ್ಕೆಯ ಸಿದ್ಧಾಂತದ ಹುಟ್ಟು:

ಸಾಮಾಜಿಕ ಆಯ್ಕೆಯ ಸಿದ್ದಾಂತ ಹೇಗೆ ಪ್ರಾರಂಭವಾಯಿತು?

ಸಮಾಜದಲ್ಲಿ ಜನರ ಆಸೆಗಳು, ಕಾಳಜಿಗಳು ಮತ್ತು ಪರಿಸ್ಥಿತಿಗಳು ತೀರಾ ವಿಭಿನ್ನವಾಗಿದ್ದಾಗ, ಇಡೀ ಸಮಾಜಕ್ಕೆ ಸಂಬಂಧಪಟ್ಟ ಸರಿಯಾದ ನಿರ್ಧಾರಗಳನ್ನು (ಉದಾಹರಣೆಗೆ: "ಸಮಾಜದ ಹಿತ", "ಜನರ ಕ್ಷೇಮ" ಅಥವಾ "ಒಟ್ಟು ಬಡತನದ ಬಗ್ಗೆ) ತಗೊಳ್ಳೋದು ಹೇಗೆ ಸಾಧ್ಯ? ಸಮಾಜಕ್ಕೆ ಇದೇ ಸರಿ, ಇದು ತಪ್ಪು ಅಂತ ನಿರ್ಧರಿಸೋದು ಹೇಗೆ ಅನ್ನುವ ಸವಾಲು ತುಂಬಾ ಹಿಂದಿನಿಂದಲೂ ಕಾಡುತ್ತಿತ್ತು. ಹೊರೇಸ್ ಯಾವುದೋ ಕಾಲದಲ್ಲಿ ಹೇಳಿದ ಹಾಗೆ ಎಷ್ಟು ಜನ ಇರ್ತಾರೋ ಅಷ್ಟೇ ತರಹದ ಆದ್ಯತೆಗಳು ಇರುತ್ತವೆ.

ಸಾಮಾಜಿಕ ಅಯ್ಕೆಯ ಸಿದ್ದಾಂತ ಸುಮಾರಾಗಿ ಫ್ರೆಂಚ್ ಕ್ರಾಂತಿಯ ಕಾಲದಲ್ಲಿ ಮೊದಲಿಗೆ ಒಂದು ವ್ಯವಸ್ಥಿತ ಸಿದ್ಧಾಂತವಾಗಿ ಬಂತು. ಮೊಟ್ಟಮೊದಲಿಗೆ ಹೆಚ್ಚು ವ್ಯವಸ್ಥಿತವಾಗಿ ಮಾಡಿದವರು ಜೀನ್-ಚಾರ್ಲ್ಸ್ ಡಿ ಬೋರ್ಡಾ (1781) ಮತ್ತು ಮಾರ್ಕ್ವಿಸ್ ಡಿ ಕಾಂಡೋರ್ಸೆಟ್ (1785). ಪ್ರಜಾಪ್ರಭುತ್ವದ ಮಾದರಿಯಲ್ಲಿ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳಬೇಕು ಅನ್ನುವುದನ್ನು ಕಂಡುಕೊಳ್ಳುವುದು ಇವರೆಲ್ಲರ ಮುಖ್ಯ ಉದ್ದೇಶವಾಗಿತ್ತು. ಇವರೆಲ್ಲಾ ವಿಶೇಷವಾಗಿ ಬಹುಮತವನ್ನು ಆಧರಿಸಿ (Majority Decision) ನಿರ್ಧಾರವನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಯೋಚಿಸುತ್ತಿದ್ದರು. ಆದರೆ ಅವರ ಸಂಶೋಧನೆಗಳು ಅಷ್ಟೊಂದು ಆಶಾದಾಯಕವಾದ ಫಲ ನೀಡಿರಲಿಲ್ಲ. ಕೊಂಡೋರ್ಸೆಟ್ ಬಹುಮತದ ಮಾರ್ಗವನ್ನು ಹಿಡಿದು ಸಾಗಿದರೆ ವಿಜಯಿಗಳನ್ನು ಗುರುತಿಸುವುದಕ್ಕೆ ಸಾಧ್ಯವಾಗದೇ ಹೋಗಬಹುದು ಎನ್ನುವ ತೀರ್ಮಾನಕ್ಕೆ ಬಂದಿದ್ದರು. ಅದನ್ನು ಕಾಂಡೋರ್ಸೆಟ್ ವಿರೋಧಬಾಸ (ಪ್ಯಾರಡಾಕ್ಸ್) ಎನ್ನಲಾಗುತ್ತದೆ.

ಒಂದು ಉದಾಹರಣೆಯ ಮೂಲಕ ಈ ವಿರೋಧಾಭಾಸವನ್ನು ಅರ್ಥಮಾಡಿಕೊಳ್ಳಬಹುದು. ರಾಮು, ಸೋಮು, ಭೀಮು ತಮ್ಮ ಮುಂದಿರುವ ಸೇಬು, ಬಾಳೆಹಣ್ಣು, ಮತ್ತು ಮಾವಿನ ಹಣ್ಣುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದಿಟ್ಟುಕೊಳ್ಳಿ. ಅವರ ಆದ್ಯತೆಗಳು ಕೆಳಕಂಡಂತೆ ಇರಬಹುದು.

ರಾಮು: ಸೇಬು > ಬಾಳೆಹಣ್ಣು > ಮಾವು (ಆಂದರೆ ರಾಮು ಸೇಬನ್ನು ಅತಿ ಹೆಚ್ಚು ಇಷ್ಟ ಪಡುತ್ತಾನೆ.)
ಸೋಮು: ಬಾಳೆಹಣ್ಣು > ಮಾವು > ಸೇಬು
ಭೀಮು: ಮಾವು > ಸೇಬು > ಬಾಳೆಹಣ್ಣು
ಈಗ ನಾವು ಬಹುಮತದ ಕ್ರಮವನ್ನು ಅನುಸರಿಸಿ ಎರಡು ಹಣ್ಣುಗಳನ್ನು ಹೋಲಿಸಿ ಯಾರು ವಿಜಯಿಗಳಾಗುತ್ತಾರೆ ನೋಡೋಣ:
ಸೇಬು ಮತ್ತು ಬಾಳೆಹಣ್ಣಿನ ನಡುವೆ: ರಾಮು ಮತ್ತು ಭೀಮು ಇಬ್ಬರೂ ಬಾಳೆಹಣ್ಣಿಗಿಂತ ಸೇಬನ್ನೇ ಇಷ್ಟಪಡುತ್ತಾರೆ. ಹಾಗಾಗಿ ಸೇಬು ಗೆದ್ದಿತು.
ಬಾಳೆಹಣ್ಣು ಮತ್ತು ಮಾವಿನ ನಡುವೆ: ರಾಮು ಮತ್ತು ಸೋಮು ಇಬ್ಬರೂ ಬಾಳೆಹಣ್ಣನ್ನೇ ಇಷ್ಟಪಡುತ್ತಾರೆ. ಹಾಗಾಗಿ ಬಾಳೆಹಣ್ಣು ಗೆದ್ದಿತು.
ಮಾವು ಮತ್ತು ಸೇಬಿನ ನಡುವೆ: ಸೋಮು ಮತ್ತು ಭೀಮು ಇಬ್ಬರೂ ಮಾವನ್ನೇ ಇಷ್ಟಪಡುತ್ತಾರೆ. ಹಾಗಾಗಿ ಮಾವು ಗೆದ್ದಿತು!
ಕೊಂಡೋರ್ಸೆಟ್ ಹೇಳುವ ಗೋಜಲು ಇದು. ಇಲ್ಲಿ ಯಾರು ಅಸಲಿ ವಿಜಯಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇದನ್ನು 'ವರ್ತುಲ ಆದ್ಯತೆ'

ಎನ್ನಲಾಗುತ್ತದೆ. ಆಯ್ಕೆಯನ್ನು ಮಾಡಿಕೊಳ್ಳುವುದಕ್ಕೆ ಬಹುಮತದ ನಿರ್ಧಾರ ಆಕರ್ಷಕ ವಿಧಾನವಾದರೂ ಇದರಲ್ಲಿ ನಿರ್ಧಾರವೇ ಸಾಧ್ಯವಾಗದೇ ಇರಬಹುದು ಅನ್ನುತ್ತದೆ ಕಾಂಡೋರ್ಸೆಟ್ ವಿರೋಧಭಾಸ.

ಕಲ್ಯಾಣ ಅರ್ಥಶಾಸ್ತ್ರ

ಸಮಾಜ ಆಯ್ಕೆಯ ಸಿದ್ಧಾಂತದಲ್ಲಿದ್ದ ನಿರಾಶಾವಾದ ಕಲ್ಯಾಣ ಅರ್ಥಶಾಸ್ತ್ರಕ್ಕೂ ಹರಡಿಕೊಂಡಿತು. ಸಾಂಪ್ರದಾಯಿಕ ಕಲ್ಯಾಣ ಅರ್ಥಶಾಸ್ತ್ರವನ್ನು ವ್ಯವಸ್ಥಿತವಾಗಿ ಒಂದು ವ್ಯವಸ್ಥಿತ ವಿಷಯವಾಗಿ 18ನೇ ಶತಮಾನದಲ್ಲಿ ಎಡ್ಜ್‌ವರ್ತ್, ಮಾರ್ಷಲ್ ಮತ್ತು ಪಿಗೂ ಅವರಂತಹ ಅರ್ಥಶಾಸ್ತ್ರಜ್ಞರು ಪ್ರಾರಂಭಿಸಿದ್ದರು. ಅವರು ಕಾಂಡೋರ್ಸೆಟ್ ಅವರೆಲ್ಲಾ ಹಿಡಿದ ದಾರಿಗಿಂತ ಭಿನ್ನವಾದ ದಾರಿಯನ್ನು ಹಿಡಿದಿದ್ದರು. ಅವರು ಬಹುಮತದ ಕ್ರಮವನ್ನು ಬಿಟ್ಟು ಸಮಾಜದ ಕಲ್ಯಾಣವನ್ನು ಅಳೆಯುವುದಕ್ಕೆ ಉಪಯುಕ್ತತತೆಯನ್ನು (Utility) ಮಾಪನವನ್ನಾಗಿ ಬಳಸಿದ್ದರು. ಅವರು ತಮ್ಮ ಸಮಕಾಲೀನ ಚಿಂತಕ ಜೆರೆಮಿ ಬೆಂಥೆಮ್ ಅವರಿಂದ ಪ್ರಭಾವಿತರಾಗಿದ್ದರು. ಇವರ ಪ್ರಕಾರ, ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ 'ಸುಖ' ಅಥವಾ ಉಪಯುಕ್ತತತೆಯನ್ನು ಕೂಡಿಸುವ ಮೂಲಕ ಇಡೀ ಸಮಾಜದ ಕಲ್ಯಾಣವನ್ನು ತಿಳಿಯಬಹುದು. ಇವರೆಲ್ಲರು ವ್ಯಕ್ತಿಗಳ ನಡುವಿನ ಸುಖದುಃಖಗಳನ್ನು ಪರಸ್ಪರ ಹೋಲಿಸಬಹುದು (Interpersonal Comparison) ಎಂದು ಒಪ್ಪಿಕೊಂಡಿದ್ದರು.

ಬೆಂತಮ್ ಒಟ್ಟು ಸಮಾಜದ ಹಿತಾಸಕ್ತಿಯನ್ನು ಕಂಡುಕೊಳ್ಳುವುದಕ್ಕೆ ಒಂದು ಕ್ರಮ ಸೂಚಿಸಿದ್ದರು. ಅವರ ಪ್ರಕಾರ, ಸಮಾಜದಲ್ಲಿರೋ ಪ್ರತಿಯೊಬ್ಬರ ತೃಪ್ತಿಯನ್ನು ಲೆಕ್ಕ ಹಾಕಿ, ಅದನ್ನೆಲ್ಲಾ ಒಟ್ಟಿಗೆ ಸೇರಿಸಿದರೆ ಸಮಾಜಕ್ಕೆ ಯಾವುದು ಒಳ್ಳೆಯದು ಅಂತ ಗೊತ್ತಾಗುತ್ತೆ. ಪಿಗು ಅವರೆಲ್ಲಾ ಬೆಂತಮ್ ಅವರಿಂದ ಪ್ರಭಾವಿತರಾಗಿ ಕಲ್ಯಾಣ ಅರ್ಥಶಾಸ್ತ್ರವನ್ನು ಬೆಳೆಸಿದರು. ಈ ಉಪಯುಕ್ತತೆಯ ಸಿದ್ಧಾಂತ ಕಲ್ಯಾಣ ಅರ್ಥಶಾಸ್ತ್ರದಲ್ಲಿ ಬಹಳ ಕಾಲ ಪ್ರಭಾವಶಾಲಿಯಾಗಿತ್ತು.

1930ರಲ್ಲಿ ಇದರ ಬಗ್ಗೆ ಟೀಕೆಗಳು ಪ್ರಾರಂಭವಾದವು. ಕಲ್ಯಾಣ ಅರ್ಥಶಾಸ್ತ್ರದಲ್ಲಿ ಒಂದು ರೀತಿಯ ಗೊಂದಲವಿತ್ತು. ಎಲ್ಲವೂ ಉಪಯುಕ್ತತೆಯನ್ನು ಆಧರಿಸಿಯೇ ನಡೆಯುತ್ತಿತ್ತು. ಆಗ ಯಾರೂ ಉಪಯುಕ್ತತತೆಯನ್ನೇ ಯಾಕೆ ಮಾಪನವನ್ನಾಗಿ ತೆಗೆದುಕೊಳ್ಳಬೇಕು ಎಂದು ಪ್ರಶ್ನಿಸಿರಲಿಲ್ಲ. ಸ್ವಾತಂತ್ರ್ಯವೋ ಇನ್ನೊಂದೋ ಯಾಕೆ ಆಗಬಾರದು ಅನ್ನುವ ಪ್ರಶ್ನೆ ಯಾರನ್ನೂ ಕಾಡಿರಲಿಲ್ಲ.

ಹಾಗೆಯೇ ಬೆಂತಮ್ ಅವರ ಈ 'ಯುಟಿಲಿಟೇರಿಯನಿಸಂ' ಸಿದ್ಧಾಂತದಲ್ಲಿ ಒಂದು ದೊಡ್ಡ ಕೊರತೆಯಿತ್ತು. ಅವರಿಗೆ ಇಡೀ ಸಮಾಜದ ಒಟ್ಟು ಖುಷಿ ಮುಖ್ಯವಾಗಿತ್ತೆ ಹೊರತು, ಆ ಖುಷಿ ಎಲ್ಲರಿಗೂ ಸಮನಾಗಿ ಹಂಚಿಕೆಯಾಗಿದೆಯಯ, ಇಲ್ಲವಾ ಅನ್ನೋದು ಮುಖ್ಯವಾಗಿರಲಿಲ್ಲ. ಇದು ರಾಜಕೀಯವಾಗಿ ಮತ್ತು ನ್ಯಾಯದ ದೃಷ್ಟಿಯಿಂದ ದೊಡ್ಡ ಸಮಸ್ಯೆ. ಆದರೆ ಯಾರೂ ನೀವು ಒಟ್ಟು ಲಾಭ ಅಥವಾ ಉಪಯುಕ್ತತತೆಯನ್ನು ಲೆಕ್ಕ ಹಾಕುತ್ತೀರಿ. ಆದರೆ ಅದು ಎಲ್ಲರಿಗೂ ಸರಿಯಾಗಿ ಹಂಚಿಕೆಯಾಗಿದೆಯಾ, ಇಲ್ಲವಾ ಎಂದು ಯಾಕೆ ನೋಡುವುದಿಲ್ಲ?" ಅಂತ ಕೇಳಲಿಲ್ಲ.

ಬದಲಿಗೆ ಆಗ ಹುಟ್ಟಿಕೊಂಡ ಟೀಕೆಯೇ ಬೇರೆ. ಲಿಯೋನೆಲ್ ರಾಬಿನ್ಸ್ ಮತ್ತು ಅವರ ತಂಡದವರು ಬೇರೆಯದೇ ನೆಲೆಯಲ್ಲಿ ಇದನ್ನು ಪ್ರಶ್ನಿಸಿದರು. ಅವರ ಪ್ರಕಾರ, ಒಬ್ಬರ ಖುಷಿಯನ್ನು ಅಥವಾ ತೃಪ್ತಿಯನ್ನು ಇನ್ನೊಬ್ಬರ ಜೊತೆ ಹೋಲಿಸೋದಕ್ಕೆ ಯಾವುದೇ ವೈಜ್ಞಾನಿಕ ಆಧಾರವಿಲ್ಲ. ಅವರ ಪ್ರಕಾರ ಒಬ್ಬ ಮನುಷ್ಯನ ಮನಸ್ಸು ಇನ್ನೊಬ್ಬರಿಗೆ ಯಾವತ್ತೂ ಅರ್ಥವಾಗುವುದಿಲ್ಲ. ಎಲ್ಲರ ತೃಪ್ತಿಯನ್ನು ಅಳೆಯೋದಕ್ಕೆ ಒಂದೇ ಅಳತೆಗೋಲು ಇರಲು ಸಾಧ್ಯವೇ ಇಲ್ಲ." ಅಂದರೆ, ನನಗೆ ಸಿಗೋ ಖುಷಿ ಮತ್ತು ನಿಮಗೆ ಸಿಗೋ ಖುಷಿ ಒಂದೇ ಅಂತ ಲೆಕ್ಕ ಹಾಕೋದು ತಪ್ಪು. ಅದರಿಂದಾಗಿ ಪರಸ್ಪರ ಜನರ ಸುಖದುಃಖಗಳನ್ನು ಹೋಲಿಸುವುದಕ್ಕೂ ಸಾಧ್ಯವಿಲ್ಲ ಎನ್ನುವುದು ಅವರ ವಾದವಾಗಿತ್ತು. ಇದು ಕಲ್ಯಾಣ ಅರ್ಥಶಾಸ್ತ್ರದ ಬುಡವನ್ನೇ ಅಲ್ಲಾಡಿಸಿತು.

ಸಮಾಜದ ಕಲ್ಯಾಣವನ್ನು ತಿಳಿಯುವುದಕ್ಕೆ ಕೇವಲ ಒಟ್ಟು ಉಪಯುಕ್ತತತೆಯನ್ನಷ್ಟೇ ಸಾಮಾಜಿಕ ಆಯ್ಕೆಯ ಸಿದ್ಧಾಂತ ನೆಚ್ಚಿಕೊಂಡಿತ್ತು. ಹಂಚಿಕೆಯನ್ನು ಕೈಬಿಟ್ಟಿತ್ತು. ವೈಯಕ್ತಿಕ ತೃಪ್ತಿಯ ಬಗ್ಗೆ ಮಾಹಿತಿಯನ್ನು ಕಳೆದುಕೊಂಡೆವು. ಆಗಲೇ ಮಾಹಿತಿಯ ವ್ಯಾಪ್ತಿ ಕಮ್ಮಿಯಾಗಿತ್ತು. ಈಗ ತೃಪ್ತಿಯನ್ನು ಪರಸ್ಪರ ಹೋಲಿಸುವುದಕ್ಕೂ ಸಾಧ್ಯವಿಲ್ಲ ಅನ್ನುವ ಮೂಲಕ ಬೋರ್ಡಾ ಮತ್ತು ಕಾಂಡೋರ್ಸೆಟ್ ಅವರ ಹಳೆಯ ಬಹುಮತದ ಪದ್ಧತಿಗೆ ಹಿಂತಿರುಗಿದೆವು. ಈಗ ಆದ್ಯತೆಗಳು ಮಾತ್ರ ತಿಳಿಯುತ್ತವೆ. ಅವರಿಗೆ ನಿರ್ದಿಷ್ಟ ಆಯ್ಕೆ ಇಷ್ಟ ಅಂತ ಗೊತ್ತಾಗುತ್ತದೆ. ಆದರೆ ಎಷ್ಟು ಇಷ್ಟ ಅಂದರೆ ಇಷ್ಟದ ತೀವ್ರತೆ ತಿಳಿಯುವುದಿಲ್ಲ. ಹಾಗಾಗಿ ಹೋಲಿಕೆ ಸಾಧ್ಯವಿಲ್ಲ ಅನ್ನುವ ಮೂಲಕ ಸಾಮಾಜಿಕ ನಿರ್ಧಾರಗಳನ್ನು ತೆಗೆದುಕೊಳ್ಳಲು ಬೇಕಾದ ಮಾಹಿತಿಯ ವ್ಯಾಪ್ತಿ (Informational Base) ಇನ್ನಷ್ಟು ಕುಸಿಯಿತು.

1940ರ ನಂತರ ಈ ಉಪಯುಕ್ತತತೆಯನ್ನು ಆಧರಿಸಿದ್ದ ಕಲ್ಯಾಣ ಅರ್ಥಶಾಸ್ತ್ರ ಹಿಂದೆ ಸರಿಯಿತು. ಹೊಸ ಕಲ್ಯಾಣ ಅರ್ಥಶಾಸ್ತ್ರ (New



Welfare Economics) ಬಂದಿತು. ಇದು ಒಂದು ಮುಖ್ಯವಾದ ಅಳತೆಗೋಲನ್ನ ಬಳಸಿತು, ಅದೇ 'ಪರೇಟೋ ಹೋಲಿಕೆ. ಸರಳವಾಗಿ ಹೇಳುವುದಾದರೆ ಅದು ಹೇಳುವುದು ಇಷ್ಟು: ಒಂದು ಬದಲಾವಣೆಯಿಂದ ಸಮಾಜದಲ್ಲಿರೋ ಯಾರಿಗೂ ತೊಂದರೆಯಾಗದೆ, ಕನಿಷ್ಠ ಒಬ್ಬರಿಗಾದರೂ ಲಾಭವಾಗುತ್ತದೆ ಅಂದರೆ ಅದನ್ನ "ಒಳ್ಳೆಯ ಬದಲಾವಣೆ" ಅಂತ ಕರೆಯಬಹುದು. ಆಮೇಲೆ ಬಂದ ಬಹಳಷ್ಟು ಆರ್ಥಿಕ ಸಿದ್ಧಾಂತಗಳು ಕೇವಲ ಈ 'ಪರೇಟೋ ದಕ್ಷತೆಯ (Pareto Efficiency) ಬಗ್ಗೆ ಮಾತ್ರ ತಲೆಕೆಡಿಸಿಕೊಂಡವು. ಅಂದರೆ, ನೀವು ಗರಿಷ್ಠ ದಕ್ಷತೆಯ ಸ್ಥಿತಿ ತಲುಪಿರುತ್ತೀರಿ. ಇನ್ನು ಯಾರಿಗಾದರೂ ಲಾಭ ಮಾಡಿಕೊಡಬೇಕಾದರೆ ಬೇರೆ ಯಾರಿಗಾದರೂ ತೊಂದರೆ ಕೊಡಲೇಬೇಕು. ಯಾರಿಗೂ ತೊಂದರೆ ಕೊಡದೆ ಯಾರಿಗೂ ಲಾಭ ಮಾಡಿಕೊಡಲು ಸಾಧ್ಯವಿಲ್ಲದ ಸ್ಥಿತಿ ತಲುಪುವುದೇ ಪಾರೆಟೋ ದಕ್ಷತೆ. ಆದರೆ ಇಲ್ಲಿ ಒಂದು ದೊಡ್ಡ ಸಮಸ್ಯೆಯಿದೆ. ಇದು "ಹಂಚಿಕೆ" (Distribution) ಬಗ್ಗೆ ತಲೆಕೆಡಿಸಿಕೊಳ್ಳುವುದೇ ಇಲ್ಲ. ಅಂದರೆ, ಒಬ್ಬ ಶ್ರೀಮಂತ ಇನ್ನೂ ಶ್ರೀಮಂತನಾಗಿ, ಬಡವ ಹಾಗೆಯೇ ಉಳಿದರೂ ಈ ಪದ್ಧತಿ ತಪ್ಪು ಎಂದು ಭಾವಿಸುವುದೇ ಇಲ್ಲ. ಜನರ ನಡುವಿನ ಹಿತಾಸಕ್ತಿಗಳ ಸಂಘರ್ಷವನ್ನು ಇದು ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ.

ಆ್ಯರೋ ಅವರ ಅಸಾಧ್ಯತೆಯ ಸಿದ್ಧಾಂತ

ಸಮಾಜಕ್ಕೆ ಯಾವುದು ಒಳ್ಳೆಯದು ಅಂತ ನಿರ್ಧಾರ ಮಾಡೋಕ್ಕೆ ಇನ್ನೂ ಸಶಕ್ತವಾದ ಕ್ರಮ ಬೇಕಿತ್ತು. ಇದನ್ನ ಅಬ್ರಾಮ್ ಬರ್ಗ್‌ಸನ್ ಮತ್ತು ಪಾಲ್ ಸ್ಯಾಮ್ಯುಯೆಲ್ಸನ್ ಅವರು ಆಳವಾಗಿ ಅಭ್ಯಾಸ ಮಾಡಿದರು. ಇದೇ ದಾರಿ ಮುಂದೆ ಕೆನೆತ್ ಆರೋ (Kenneth Arrow) ಅವರ ಸೋಷಿಯಲ್ ಚಾಯ್ಸ್ ಥಿಯರಿ" (Social Choice Theory) ಹುಟ್ಟಲು ಕಾರಣವಾಯಿತು. ಕೆನ್ನೆತ್ ಆರೋ ಅವರು ಕಾಂಡೋರ್ಸೆಟ್ ಅವರ ವಾದವನ್ನು ಇನ್ನೂ ಆಳವಾಗಿ ಅಧ್ಯಯನ ಮಾಡಿದರು. ಬಹುಮತದಿಂದ ವಿಜಯಿಯನ್ನು ಆರಿಸುವುದಕ್ಕೆ ಸಾಧ್ಯವಿಲ್ಲ ಅನ್ನುವ ಕಾಂಡೋರ್ಸೆಟ್ ಸಿದ್ಧಾಂತವನ್ನು ಆರೋ ಎಲ್ಲಾ ಆಯ್ಕೆಯ ವಿಷಯಕ್ಕೂ ಅನ್ವಯಿಸಿ ಸಾಮಾನ್ಯೀಕರಿಸಿದರು.

ಆ್ಯರೋ ಕಲ್ಯಾಣ ಅರ್ಥಶಾಸ್ತ್ರದಲ್ಲಿ ವಿಶೇಷವಾಗಿ ಸಾಮಾಜಿಕ ಆಯ್ಕೆಯ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆಯನ್ನೇ ತಂದರು. ಅಮರ್ತ್ಯ ಸೇನ್ ಆ ಮೂರು ಮುಖ್ಯ ಬದಲಾವಣೆಗಳನ್ನು ಗುರುತಿಸುತ್ತಾರೆ:

ಮೊದಲನೆಯದಾಗಿ, ಗಣಿತ ಹಾಗೂ ತರ್ಕಶಾಸ್ತ್ರದಲ್ಲಿ ಬಳಸುವ ಅಕ್ಸಿಯಾಮೆಟಿಕ್ ಅಪ್ರೋಚ್ ಅಂದರೆ ಆಧಾರ ಸೂತ್ರಗಳನ್ನು ಆಧರಿಸಿ ಸಿದ್ಧಾಂತಗಳನ್ನು ಸಾಬೀತು ಮಾಡುವ ಕ್ರಮವನ್ನು ಸಾಮಾಜಿಕ ಆಯ್ಕೆಯ ವಿಷಯಕ್ಕೆ ಕೆನ್ನೆತ್ ಅನ್ವಯಿಸಿದರು.

ಎರಡನೆಯದಾಗಿ, ಪರ್ಯಾಯ ಸ್ಥಿತಿಗಳ ಅಥವಾ ನೀತಿಗಳ ನಡುವೆ ಆಯ್ಕೆ ಮಾಡಿಕೊಳ್ಳುವುದಕ್ಕೆ ಬೇಕಾದ ಒಂದು ಚೌಕಟ್ಟನ್ನು ಆ್ಯರೋ ರೂಪಿಸಿದರು.

ಮೂರನೆಯದಾಗಿ, ಸಾಮಾಜಿಕ ಆಯ್ಕೆಗೆ ಅಗತ್ಯವಿರುವ ಈ ಕೆಲವು ಸಾಮಾನ್ಯ ನಿಯಮಗಳನ್ನು ಏಕಕಾಲದಲ್ಲಿ ಪೂರೈಸಲು ಸಾಧ್ಯವಿಲ್ಲ ಎಂಬ ಪ್ರಖ್ಯಾತ ಅಸಾಧ್ಯತೆಯ ಪ್ರಮೇಯವನ್ನು (Impossibility Theorem) ಪ್ರತಿಪಾದಿಸಿದರು. ವ್ಯಕ್ತಿಗಳ ನಡುವೆ ಹೋಲಿಕೆ ಮಾಡದೆ, ಕೇವಲ ಅವರ ಆದ್ಯತೆಗಳನ್ನು ಬಳಸಿಕೊಂಡು ಒಂದು ನ್ಯಾಯಯುತವಾದ ಮತ್ತು ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಾಮಾಜಿಕ ನಿರ್ಧಾರ ತೆಗೆದುಕೊಳ್ಳುವುದು ಗಣಿತದ ಪ್ರಕಾರ ಅಸಾಧ್ಯ ಎಂಬುದು ಅವರ ಪ್ರಮೇಯವಾಗಿತ್ತು. ಸಮಾಜದಲ್ಲಿ ನಿರ್ಧಾರ ತೆಗೆದುಕೊಳ್ಳಲು ನಾವು ಎಷ್ಟೇ ನ್ಯಾಯಯುತವಾದ ನಿಯಮಗಳನ್ನು ರೂಪಿಸಿದರೂ, ಅವು ಯಾವುದೋ ಒಂದು ಹಂತದಲ್ಲಿ ವಿಫಲವಾಗುತ್ತವೆ. "ಏಕ ವ್ಯಕ್ತಿ ಅಥವಾ ಸರ್ವಾಧಿಕಾರಿ ಆಡಳಿತವಿದ್ದಾಗಷ್ಟೇ ಸ್ಥಿರವಾದ ನಿರ್ಧಾರಗಳು ಸಾಧ್ಯ" ಎಂಬ ನಿರಾಶಾದಾಯಕ ಪ್ರಮೇಯವನ್ನು ಅವರು ಪ್ರತಿಪಾದಿಸಿದರು.

ಅವರ ಅಸಾಧ್ಯತೆಯ ಪ್ರಮೇಯ ಒಂದು ದೊಡ್ಡ ಸಂಚಲನವನ್ನೇ ಸೃಷ್ಟಿಸಿತು. ಜನರ ವೈಯಕ್ತಿಕ ಆದ್ಯತೆಗಳನ್ನು ಒಟ್ಟುಗೂಡಿಸಿ ಸಮಾಜದ



ಕೆನ್ನೆತ್ ಆ್ಯರೋ ಜೊತೆಯಲ್ಲಿ ಅಮರ್ತ್ಯ ಸೇನ್

ಆಯ್ಕೆಯನ್ನು (Social Welfare Function) ಹೇಗೆ ನಿರ್ಧರಿಸಬೇಕು ಅನ್ನುವುದನ್ನು ಕಂಡುಕೊಳ್ಳಲು ಅವರು ಪ್ರಯತ್ನಿಸಿದ್ದರು. ಆ್ಯರೋ ಅವರು ಇದಕ್ಕಾಗಿ ಸರಳವಾಗಿ ಕಾಣುವ ನಾಲ್ಕು ನಿಯಮಗಳನ್ನ (Conditions) ಹಾಕಿಕೊಟ್ಟರು:

ಪ್ಯಾರೆಟೋ ದಕ್ಷತೆ: ಪ್ಯಾರೆಟೋ ಎಫಿಷಿಯನ್ಸಿ: ಎಲ್ಲರಿಗೂ ಒಂದು ಆಯ್ಕೆ ಇಷ್ಟವಿದ್ದರೆ, ಸಮಾಜವೂ ಅದನ್ನೇ ಆರಿಸಬೇಕು.

ಸರ್ವಾಧಿಕಾರ ರಹಿತ ವ್ಯವಸ್ಥೆ: ನಾನ್-ಡಿಕ್ಟೇಟರ್‌ಶಿಪ್: ಯಾರೋ ಒಬ್ಬ ಸರ್ವಾಧಿಕಾರಿಯ ಇಷ್ಟವೇ ಇಡೀ ಸಮಾಜದ ಇಷ್ಟ ಆಗಬಾರದು.

ಆಯ್ಕೆಗಳ ಸ್ವಾತಂತ್ರ್ಯ: ಇಂಡಿಪೆಂಡೆನ್ಸ್: ಎರಡು ವಿಷಯಗಳ ನಡುವೆ ಉದಾಹರಣೆಗೆ A ಮತ್ತು B ಒಂದನ್ನ ಆರಿಸುವಾಗ, ಮೂರನೇ ಸಂಬಂಧವಿಲ್ಲದ ವಿಷಯ (C) ನಮ್ಮ ನಿರ್ಧಾರದ ಮೇಲೆ ಪ್ರಭಾವ ಬೀರಬಾರದು.

ಅನಿರ್ಬಂಧಿತ ವ್ಯಾಪ್ತಿ: ಅನ್‌ರೆಸ್ಟ್ರಿಕ್ಟೆಡ್ ಡೊಮೈನ್ ಜನರು ಎಷ್ಟೇ ವಿಚಿತ್ರವಾದ ಅಥವಾ ವಿಭಿನ್ನವಾದ ಇಷ್ಟಗಳನ್ನ ಹೊಂದಿದ್ದರೂ, ಎಲ್ಲಾ ರೀತಿಯ ವೈಯಕ್ತಿಕ ಆದ್ಯತೆಗಳಿಗೂ ಈ ಪದ್ಧತಿ ಅನ್ವಯವಾಗಬೇಕು.

ಆರೋ ಪ್ರಕಾರ ಈ ಎಲ್ಲಾ ನಿಯಮಗಳನ್ನು ಏಕಕಾಲದಲ್ಲಿ ಪಾಲಿಸುವುದು ಗಣಿತದ ಪ್ರಕಾರ ಅಸಾಧ್ಯ. ಇದು ನಿರಾಶವಾದವನ್ನು ಮೂಡಿಸಿತ್ತು. ಕಲ್ಯಾಣ ಅರ್ಥಶಾಸ್ತ್ರ ಮತ್ತು ಸಾಮಾಜಿಕ ಆಯ್ಕೆಯ ಕ್ಷೇತ್ರದಲ್ಲಿ ನಿರಾಶವಾದ ಒಂದು ಪ್ರಧಾನ ಲಕ್ಷಣವಾಗಿಬಿಟ್ಟಿತ್ತು.

ಅಮರ್ತ್ಯ ಸೇನ್ ಅವರ ಪ್ರವೇಶ

ಈ ನಿರಾಶಾವಾದದ ವಾತಾವರಣದ ನಡುವೆ ಅಮರ್ತ್ಯ ಸೇನ್ ಅವರು ಪ್ರವೇಶಿಸಿದರು. ಅಮರ್ತ್ಯ ಸೇನ್ ಅವರು ತಮ್ಮ ವಾದಕ್ಕೆ ಗಣಿತವನ್ನು ಬಳಸುತ್ತಾರೆ. ಅದು ಅವಶ್ಯಕ ಅಂತಲೂ ಭಾವಿಸುತ್ತಾರೆ. ಅರ್ಥಶಾಸ್ತ್ರದಲ್ಲಿ ಗಣಿತದ ಬಳಕೆಯನ್ನು ಬಲವಾಗಿ ಸಮರ್ಥಿಸುತ್ತಾರೆ. ಅವರ ಪ್ರಕಾರ, ಸಾಮಾಜಿಕ ಆಯ್ಕೆಯ ಸಿದ್ಧಾಂತವು ಕೇವಲ ಸಾಮಾನ್ಯ ಜ್ಞಾನ ಮತ್ತು ಅನೌಪಚಾರಿಕ ತರ್ಕವಷ್ಟೆ ಸಾಲುವುದಿಲ್ಲ. ಗಣಿತದ ಚೌಕಟ್ಟು ಬೇಕು. ಇಲ್ಲದೇ ಹೋದರೆ ದಾರಿ ತಪ್ಪಬಹುದು. ಸೇನ್ ಅವರ ಹೆಚ್ಚುಗಾರಿಕೆಯೆಂದರೆ ಗಣಿತದ ಸೂತ್ರಗಳ ಮೂಲಕ ಕಂಡುಕೊಂಡ ಸತ್ಯಗಳನ್ನು ಸಾರ್ವಜನಿಕ ಚರ್ಚೆಗೆ ಪೂರಕವಾಗುವಂತೆ ಸರಳವಾಗಿ ವಿವರಿಸುವುದಕ್ಕೆ ಅವರಿಗೆ ಸಾಧ್ಯವಾಯಿತು.

ಅವರು ಆ್ಯರೋ ಅವರ ಪ್ರಮೇಯವನ್ನು ಒಪ್ಪಿಕೊಳ್ಳುತ್ತಲೇ ಅದರ ಪ್ರಮುಖ ನಂಬಿಕೆಯನ್ನು ಪ್ರಶ್ನಿಸಿದರು.

ಬಹುಮತದ ಆಯ್ಕೆ

ಮೊದಲನೆಯದಾಗಿ ಸೇನ್ ಕಲ್ಯಾಣ ಅರ್ಥಶಾಸ್ತ್ರದ ಸಮಸ್ಯೆಯನ್ನು ಬಹುಮತದ ಅಥವಾ ವೋಟಿಂಗ್ ಸಮಸ್ಯೆಯಾಗಿ ನೋಡುವುದರ ಬಗ್ಗೆಯೇ ಅನುಮಾನವನ್ನು ವ್ಯಕ್ತಪಡಿಸಿದರು. ಚುನಾವಣೆ ಅಥವಾ ಸಮಿತಿಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗಿ ಬಂದಾಗ ಮತದಾನವು ಒಳ್ಳೆಯ ಕ್ರಮವಾಗಿರಬಹುದು. ಆದರೆ ಇಡೀ ಸಮಾಜದ ಕಲ್ಯಾಣವನ್ನು ಅಳೆಯಲು ಅದು ಸೇನ್ ಹೇಳುವಂತೆ ಎರಡು ಕಾರಣಗಳಿಗೆ ವಿಫಲವಾಗುತ್ತದೆ.

1. ಮತದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರ ಅಭಿಪ್ರಾಯವನ್ನಷ್ಟೇ ಪರಿಗಣಿಸಲಾಗುತ್ತದೆ. ಮತದಾನದಿಂದ ಹೊರಗುಳಿದ ಅಲ್ಪಸಂಖ್ಯಾತರು ಅಥವಾ ದಮನಿತ ವರ್ಗದವರು (ಉದಾಹರಣೆಗೆ ಅಮೇರಿಕಾದಲ್ಲಿ ಆಫ್ರಿಕನ್ ಅಮೇರಿಕನ್ನರು) ಮುಂತಾದವರ ಹಿತಾಸಕ್ತಿಗಳು ನಿರ್ಲಕ್ಷಿಸಲ್ಪಡುತ್ತವೆ. ಆದರೆ ಕಲ್ಯಾಣದ ದೃಷ್ಟಿಯಿಂದ ಅವರ ಹಿತವನ್ನೂ ಗಮನಿಸುವುದು ಅತ್ಯಗತ್ಯ.

ಎರಡನೆಯದಾಗಿ ಮತದಾನದ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬರೂ ಸಕ್ರಿಯವಾಗಿ ಪಾಲ್ಗೊಂಡರೂ ಸಹ, ಕಲ್ಯಾಣ ಅರ್ಥಶಾಸ್ತ್ರದ ಮೌಲ್ಯಮಾಪನಕ್ಕೆ ಅಗತ್ಯವಿರುವ ಪ್ರಮುಖ ಮಾಹಿತಿಯ ಕೊರತೆಯ ಸಮಸ್ಯೆ ಉಳಿಯುತ್ತದೆ. ಮತದಾನದ ಮೂಲಕ ಪ್ರತಿಯೊಬ್ಬ ವ್ಯಕ್ತಿಯ ವಿಭಿನ್ನ ಆಯ್ಕೆಗಳನ್ನು ಶ್ರೇಣೀಕರಿಸಬಹುದು (Rank). ಆದರೆ ಆ ಮತದಾನದ ಮಾಹಿತಿಯನ್ನು ಬಳಸಿಕೊಂಡು ವಿವಿಧ ವ್ಯಕ್ತಿಗಳ ಕ್ಷೇಮ ಅಥವಾ ಸುಖವನ್ನು ಪರಸ್ಪರ ಹೋಲಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸಂಪನ್ಮೂಲ ಹಂಚಿಕೆಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾದರೆ ನಾವು ಬೋರ್ಡಾ, ಕಾಂಡೋರ್ಸೆಟ್ ಮತ್ತು ಆ್ಯರೋ ಅವರು ಅನ್ವೇಷಿಸಿದ ಮತದಾನದ ನಿಯಮಗಳ ವ್ಯಾಪ್ತಿಯಿಂದ ಹೊರಗೆ ಬರುವುದು ಅನಿವಾರ್ಯ.

ನ್ಯೂಯಾರ್ಕ್ ನಗರದ ಎಲ್ಲಾ ಬಡವರ ಆದಾಯವನ್ನು ಅರ್ಧದಷ್ಟು ಕಡಿತಗೊಳಿಸಿ ಅದನ್ನು ಶ್ರೀಮಂತರಿಗೆ ಹಂಚುತ್ತೇವೆ ಎಂದು ಭಾವಿಸೋಣ. ಒಂದು ವೇಳೆ ಬಡವರಿಗಿಂತ ಶ್ರೀಮಂತರ ಸಂಖ್ಯೆ ಹೆಚ್ಚಿದ್ದರೆ, ಬಹುಮತದ ಆಧಾರದ ಮೇಲೆ ಇದು 'ಸರಿಯಾದ ನಿರ್ಧಾರ' ಎನಿಸಿಕೊಳ್ಳಬಹುದು. ಆದರೆ ಇದು ಸಾಮಾಜಿಕ ಕಲ್ಯಾಣದ ದೃಷ್ಟಿಯಿಂದ ಅತ್ಯಂತ ಕೆಟ್ಟ ನಿರ್ಧಾರವಾಗಿರುತ್ತದೆ. ಸಮಾಜದಲ್ಲಿ ಬಡವರು ಅಥವಾ ಸಂಕಷ್ಟದಲ್ಲಿರುವವರು ಯಾವಾಗಲೂ ಅಲ್ಪಸಂಖ್ಯಾತರಾಗಿರುತ್ತಾರೆ. ಒಂದು ವೇಳೆ ನಾವು ಕೇವಲ ಬಹುಮತದ ನಿರ್ಧಾರಗಳನ್ನೇ ಅವಲಂಬಿಸಿದರೆ, ಈ ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಅಗತ್ಯಗಳು ಕಡೆಗಣಿಸಲ್ಪಡುತ್ತವೆ. ಅಮೇರಿಕಾದಲ್ಲಿ 45 ಮಿಲಿಯನ್ ಜನರ ಬಳಿ ವೈದ್ಯಕೀಯ ವಿಮೆಯಿಲ್ಲ. ಇದು ದೊಡ್ಡ ಸಂಖ್ಯೆಯಾದರೂ, ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಅವರು ಅಲ್ಪಸಂಖ್ಯಾತರು. ಹಾಗೆಯೇ, ಸುಮಾರು 49 ಮಿಲಿಯನ್ ಜನರು ಅಮೇರಿಕಾದಲ್ಲಿ 'ಆಹಾರ ಅಭದ್ರತೆಯಿಂದ ಬಳಲುತ್ತಿದ್ದಾರೆ. ಅಂದರೆ ಅವರಿಗೆ ಮುಂದಿನ ಊಟ ಎಲ್ಲಿಂದ ಬರುತ್ತದೆ ಎಂದು ತಿಳಿದಿಲ್ಲ. ಬಹುಮತದ ನಿರ್ಧಾರಗಳು ಮಾತ್ರವೇ ನಮಗೆ ಮುಖ್ಯವಾದರೆ ಈ ಜನರ ಸಮಸ್ಯೆಗಳಿಗೆ ಬೆಲೆಯೇ ಇರುವುದಿಲ್ಲ. ಅಸಮಾನತೆಯು ಸಮಾಜದ ಒಂದು ದೊಡ್ಡ ಪಿಡುಗಾಗಿಯೇ ಉಳಿಯುತ್ತದೆ.


ವ್ಯಕ್ತಿಗಳ ನಡುವಿನ ಹೋಲಿಕೆ

ಕೆನ್ನೆತ್ ಆ್ಯರೋ ಅವರು ತಮ್ಮ ಸಿದ್ಧಾಂತದಲ್ಲಿ ವ್ಯಕ್ತಿಗಳ ನಡುವಿನ ಹೋಲಿಕೆಯನ್ನು "ಅರ್ಥಹೀನ" ಎಂದು ಹೊರಗಿಟ್ಟಿದ್ದರು. ಈ ಮಾಹಿತಿಯ ನಿರ್ಬಂಧವೇ ಅವರ ಸಿದ್ಧಾಂತವನ್ನು 'ಅಸಾಧ್ಯತೆಯ' ಕಡೆಗೆ ತಳ್ಳಿತು. ಸಾಮಾಜಿಕ ಆಯ್ಕೆಯು ಕೇವಲ ಮತದಾನದ ಮಾದರಿಯಲ್ಲೇ ಉಳಿಯುವಂತಾಯಿತು. ಆದರೆ ಸೇನ್ ಅವರು ಇದನ್ನು ವಿರೋಧಿಸಿದರು. ಒಬ್ಬ ವ್ಯಕ್ತಿಗೆ ಸಿಗುವ ಪ್ರಯೋಜನ ಅಥವಾ ಸಂತೋಷವನ್ನು ಇನ್ನೊಬ್ಬನಿಗೆ ಆಗುವ ಅನುಕೂಲದೊಂದಿಗೆ ಹೋಲಿಸದ ಹೊರತು, ನಾವು ಸಮಾಜದ ಕಲ್ಯಾಣವನ್ನು ಅಳೆಯಲು ಸಾಧ್ಯವೇ ಇಲ್ಲ ಎಂದು ಸೇನ್ ವಾದಿಸಿದರು.



ವೈಯಕ್ತಿಕ ಹೋಲಿಕೆಗೆ ಅವಕಾಶ ಇಲ್ಲ ಅಂತಾದರೆ ಬಡವ ಮತ್ತು ಶ್ರೀಮಂತರ ನಡುವಿನ ಹೋಲಿಕೆಯೇ ಸಾಧ್ಯವಾಗುವುದಿಲ್ಲ. ಶ್ರೀಮಂತನಿಗಿಂತ ಬಡವನಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎನ್ನುವುದನ್ನು ಅರ್ಥಮಾಡಿಕೊಳ್ಳುವುದಕ್ಕೆ ವ್ಯಕ್ತಿಗಳ ನಡುವೆ ಹೋಲಿಕೆ ಮಾಡಬೇಕಾಗುತ್ತದೆ. ಬಡವನಿಗೆ ಒಂದು ರೂಪಾಯಿ ಸಿಕ್ಕರೆ ಆಗುವ ಲಾಭವು ಒಬ್ಬ ಶ್ರೀಮಂತನಿಗೆ ಒಂದು ರೂಪಾಯಿ ಕಳೆದುಕೊಳ್ಳುವುದರಿಂದ ಆಗುವ ನಷ್ಟಕ್ಕಿಂತ ದೊಡ್ಡದು ಎಂದು ಹೇಳಿದರೆ ಅದು ವೈಯಕ್ತಿಕ ಹೋಲಿಕೆಯಾಗುತ್ತದೆ. ಶ್ರೀಮಂತನ ಬಳಿ ಹೆಚ್ಚು ಹಣವಿದೆ ಅಥವಾ ಬಡವನ ಬಳಿ ಏನೂ ಇಲ್ಲ ಅಂದರೂ ಹೋಲಿಕೆಯಾಗುತ್ತದೆ. ಜನರ ಕಲ್ಯಾಣವನ್ನು ಗಮನಿಸುವಾಗ ಇಂತಹ ಹೋಲಿಕೆ ಅನಿವಾರ್ಯ ಎಂದು ವಾದಿಸುವ ಮೂಲಕ ಸೇನ್ ವೈಯಕ್ತಿಕ ಹೋಲಿಕೆಯನ್ನು ಸಾಮಾಜಿಕ ಆಯ್ಕೆಯ ವ್ಯಾಪ್ತಿಗೆ ತರುವಲ್ಲಿ ಯಶಸ್ವಿಯಾದರು. ಈಗ ಅದು ಕಲ್ಯಾಣ ಅರ್ಥಶಾಸ್ತ್ರದ ಭಾಗವಾಗಿದೆ.

ವ್ಯಕ್ತಿಗಳ ನಡುವಿನ ಉಪಯುಕ್ತತೆಯನ್ನು



ನಿಖರವಾಗಿ ಹೋಲಿಸುವುದಕ್ಕೆ ಸಾಧ್ಯವೆ? ನಮಗೆ ವ್ಯಕ್ತಿಗಳ ನಡುವೆ ನೂರಕ್ಕೆ ನೂರರಷ್ಟು ನಿಖರವಾದ ಹೋಲಿಕೆ ಬೇಕಿಲ್ಲ ಎನ್ನುತ್ತಾರೆ. ಉದಾಹರಣೆಗೆ, ರೋಮ್ ನಗರ ಉರಿಯುವಾಗ ಚಕ್ರವರ್ತಿ ನಿರೋನಿಗೆ ಸಿಕ್ಕ 'ಸುಖವು ಇಡೀ ನಗರದ ಜನ ಅನುಭವಿಸಿದ 'ದುಃಖಕ್ಕಿಂತ ಕಡಿಮೆ ಎಂದು ಹೇಳಲು ನಮಗೆ ಸಾಮಾನ್ಯ ಜ್ಞಾನ ಸಾಕು. ಇಂತಹ 'ಆಂಶಿಕ ಹೋಲಿಕೆ' ಕೂಡ ಸಮಾಜದ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಕಾಗುತ್ತದೆ ಎಂದು ಸೇನ್ ವಾದಿಸುತ್ತಾರೆ.

ವ್ಯಕ್ತಿಗಳ ನಡುವಿನ ಹೋಲಿಕೆಗೆ ಅವಕಾಶ ಮಾಡಿಕೊಟ್ಟಿದ್ದರಿಂದ ಅರ್ಥಶಾಸ್ತ್ರವು ಕೇವಲ ಲಾಭ–ನಷ್ಟದ ಲೆಕ್ಕಾಚಾರವಾಗದೆ, ಸಮಾನತೆ, ಹಂಚಿಕೆ ಮತ್ತು ನ್ಯಾಯದ ಕಳಕಳಿಗಳನ್ನು ಒಳಗೊಳ್ಳಲು ಸಾಧ್ಯವಾಯಿತು. ಈ ಬದಲಾವಣೆಯಿಂದಲೇ ಬಡತನ, ಅಸಮಾನತೆ ಮತ್ತು ಪರಿಸರ ಮೌಲ್ಯಮಾಪನದಂತಹ ಕ್ಷೇತ್ರಗಳಲ್ಲಿ ಹೊಸ ಸಂಶೋಧನೆಗಳು ಸಾಧ್ಯವಾದವು.

ಸಾಮಾಜಿಕ ಆಯ್ಕೆಯ ಸಿದ್ಧಾಂತದಲ್ಲಿ ವ್ಯಕ್ತಿಗಳ ನಡುವಿನ ಹೋಲಿಕೆ ಸಾಧ್ಯ ಎಂದು ಒಪ್ಪಿಕೊಂಡ ಸೇನ್ ಯಾವುದನ್ನು ಹೋಲಿಸಬೇಕು ಅನ್ನುವ ಪ್ರಶ್ನೆಯನ್ನು ಹಾಕಿಕೊಳ್ಳುತ್ತಾರೆ. ಸಾಮಾನ್ಯವಾಗಿ ಅರ್ಥಶಾಸ್ತ್ರಜ್ಞರು ವ್ಯಕ್ತಿಗಳ ನಡುವಿನ ಮಾನಸಿಕ ಸ್ಥಿತಿ ಮತ್ತು ಸಂತೋಷವನ್ನು ಹೋಲಿಸುತ್ತಿದ್ದರು. ಆದರೆ ಸೇನ್ ಅದನ್ನು ವಿರೋಧಿಸಿದರು. ಕೇವಲ ಸಂತೋಷ ಜನರ ಬಡತನ ಮತ್ತು ವಂಚನೆಯನ್ನು ಸರಿಯಾಗಿ ಪ್ರತಿಬಿಂಬಿಸುವುದಿಲ್ಲ. ಬಹಳ ಕಾಲದಿಂದ ಬಡತನದಲ್ಲಿರುವ ವ್ಯಕ್ತಿ, ಶೋಷಿತ ಕಾರ್ಮಿಕ ಅಥವಾ ಲಿಂಗ ತಾರತಮ್ಯಕ್ಕೆ ಒಳಗಾದ ಮಹಿಳೆ ತನ್ನ ಕಷ್ಟದ ಸ್ಥಿತಿಗೇ ಹೊಂದಿಕೊಂಡಿರುತ್ತಾರೆ. ಅವರು ಸಣ್ಣ ಸಣ್ಣ ಅನುಕೂಲಕ್ಕೆ ಸಂತೋಷ ಪಡಲು ಕಲಿಯುತ್ತಾರೆ. ಹಾಗೆಂದು ಅವರು 'ಕ್ಷೇಮವಾಗಿದ್ದಾರೆ ಎಂದು ತೀರ್ಮಾನಿಸುವುದು ತಪ್ಪು. ಅವರ ಮಾನಸಿಕ ಸಂತೋಷವು ಅವರ ನೈಜ ವಂಚನೆಯನ್ನು ಮರೆಮಾಚುತ್ತದೆ. ಆದ್ದರಿಂದ, ಕಲ್ಯಾಣವನ್ನು ಅಳೆಯಲು ಕೇವಲ 'ಉಪಯುಕ್ತತೆ' ಅಥವಾ 'ಸುಖ' ಸರಿಯಾದ ಮಾಪನವಲ್ಲ.

ಪ್ರಖ್ಯಾತ ದಾರ್ಶನಿಕ ಜಾನ್ ರಾಲ್ಸ್ ಅವರು ವ್ಯಕ್ತಿಯ ಏಳಿಗೆಯನ್ನು ಅಳೆಯಲು 'ಪ್ರಾಥಮಿಕ ಸರಕುಗಳು ಅಂದರೆ ಆದಾಯ, ಸಂಪತ್ತು ಮತ್ತು ಅವಕಾಶಗಳು ಎಲ್ಲರಿಗೂ ಸಿಗಬೇಕು ಎಂದು ವಾದಿಸಿದ್ದರು. ಸೇನ್ ಇನ್ನು ಮುಂದುವರೆದು ಕೇವಲ ಸಂಪನ್ಮೂಲಗಳನ್ನು ನೀಡುವುದಷ್ಟೇ ಮುಖ್ಯವಲ್ಲ, ಆ ಸಂಪನ್ಮೂಲಗಳನ್ನು ಬಳಸಿಕೊಂಡು ಉತ್ತಮ ಜೀವನ ನಡೆಸುವ 'ಸಾಮರ್ಥ್ಯ'ಆ ವ್ಯಕ್ತಿಗೆ ಇದೆಯೇ ಎಂದು ನೋಡಬೇಕು ಎಂದು ವಾದಿಸಿದರು. ಉದಾಹರಣೆಗೆ, ಒಬ್ಬ ಅಂಗವಿಕಲ ವ್ಯಕ್ತಿ ಮತ್ತು ಸದೃಢ ವ್ಯಕ್ತಿಗೆ ಸಮಾನ ಆದಾಯ ನೀಡಿದರೂ, ಅಂಗವಿಕಲ ವ್ಯಕ್ತಿಗೆ ಆ ಆದಾಯವನ್ನು ಅಭಿವೃದ್ಧಿಗೆ ಬಳಸಿಕೊಳ್ಳಲು ಹೆಚ್ಚಿನ ಅಡೆತಡೆಗಳಿರುತ್ತವೆ. ಆದ್ದರಿಂದ, ನಾವು ಜನರ 'ನೈಜ ಸ್ವಾತಂತ್ರ್ಯ' ಮತ್ತು ಸಾಮರ್ಥ್ಯವನ್ನು ಹೋಲಿಕೆ ಮಾಡಬೇಕು.

ಸೇನ್ ಅವರ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅಧ್ಯಯನದಿಂದ ಹಿಂದೆ ಸಾಮಾಜಿಕ ಆಯ್ಕೆ ಮತ್ತು ಕಲ್ಯಾಣ ಅರ್ಥಶಾಸ್ತ್ರವನ್ನು ಆವರಿಸಿಕೊಂಡಿದ್ದ ನಿರಾಶಾವಾದದ ಮಂಜು ಹರಿಯಲು ಸಾಧ್ಯವಾಗಿದೆ. ಸೇನ್ ಅವರು ಕೆನ್ನೆತ್ ಆ್ಯರೋ ಅವರ ಅಸಾಧ್ಯತೆಯ ಸಿದ್ಧಾಂತವನ್ನು ಒಂದು ಎಚ್ಚರಿಕೆಯಾಗಿ ನೋಡಿದರು. ಕೇವಲ ಅಂಕಿ–ಅಂಶ ಅಥವಾ ಬಹುಮತದ ಆಧಾರದ ಮೇಲೆ ಸಾಮಾಜಿಕ ನ್ಯಾಯವನ್ನು ಒದಗಿಸಲು ಸಾಧ್ಯವಿಲ್ಲ. ಸಮಾಜದಲ್ಲಿ ಅಸಮಾನತೆ, ಬಡತನ, ಇತ್ಯಾದಿ ಪಿಡುಗುಗಳನ್ನು ಹೋಗಲಾಡಿಸಲು ನಾವು ವ್ಯಕ್ತಿಗಳ ನಡುವಿನ ಸುಖ–ದುಃಖಗಳನ್ನು ಹೋಲಿಕೆ ಮಾಡುವುದು ಅನಿವಾರ್ಯ. ಹಾಗಾಗಿಯೇ ಸೇನ್ ವೈಯಕ್ತಿಕ ಹೋಲಿಕೆಯನ್ನು ಸಾಮಾಜಿಕ ಆಯ್ಕೆಯ ಚರ್ಚೆಯ ವ್ಯಾಪ್ತಿಗೆ ತಂದರು. ಸಮಾಜದ ಸುಧಾರಣೆಗೆ ಪ್ರಯತ್ನಿಸುವಾಗ, ವಿವಿಧ ಸಾಮಾಜಿಕ ಆಸಕ್ತಿಗಳ ನಡುವೆ ಆಯ್ಕೆ ಮಾಡಿಕೊಳ್ಳಬೇಕಾಗಿ ಬಂದಾಗ ಕೇವಲ ಜನರ ಇಷ್ಟ–ಕಷ್ಟಗಳ ಆದ್ಯತೆಗಳನ್ನು ನೋಡುವುದಕ್ಕೆ ಸೀಮಿತವಾಗಬಾರದು. ಜನರ ಕ್ಷೇಮವನ್ನು ಆಳೆಯುವ ವಿಭಿನ್ನ ಮಾಪನಗಳನ್ನು ಬಳಸುವುದು ಹೆಚ್ಚು ಉತ್ತಮ ಕ್ರಮವಾಗುತ್ತದೆ. ಹಾಗಾಗಿಯೇ ಸೇನ್ ಸಾಮಾಜಿಕ ಒಳಿತನ್ನು ಅಳೆಯಲು ಉಪಯುಕ್ತತತೆಯ ಬದಲಿಗೆ ಸ್ವಾತಂತ್ರ್ಯವನ್ನು ಮಾಪನವನ್ನಾಗಿ ತಂದರು.

ಅಸಮಾನತೆಯನ್ನು ಕೇವಲ ಬ್ಯಾಂಕ್ ಬ್ಯಾಲೆನ್ಸ್‌ನ ವ್ಯತ್ಯಾಸವಾಗಿ ನೋಡಬಾರದು. ಅದು ಒಬ್ಬ ವ್ಯಕ್ತಿಗೆ ತನ್ನ ವೈವಿಧ್ಯಮಯ ಅಗತ್ಯಗಳನ್ನು ಪೂರೈಸಿಕೊಳ್ಳಲು ಇರುವ ಅಡೆತಡೆಗಳು ಎಂದು ಸೇನ್ ಭಾವಿಸಿದ್ದರು. ಆರ್ಥಿಕ ನೀತಿಗಳು ಜನರ ವೈವಿಧ್ಯತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹಣವೊಂದೇ ಬಡತನವನ್ನು ನೀಗಿಸುವುದಿಲ್ಲ. ವಯಸ್ಸು, ಜಾತಿ, ಲಿಂಗ (ಮಹಿಳೆಯರಿಗೆ ಪುರುಷರಿಗಿಂತ ಹೆಚ್ಚಿನ ಆದಾಯದ ಅಗತ್ಯವಿರುತ್ತದೆ), ಇರುವ ಸ್ಥಳ ಮತ್ತು ಆರೋಗ್ಯದ ವಾತಾವರಣ ಇವೆಲ್ಲಾ ಒಬ್ಬ ವ್ಯಕ್ತಿಯು ಹಣವನ್ನು ಉತ್ತಮ ಬದುಕಾಗಿ ಬದಲಾಯಿಸಿಕೊಳ್ಳುವ ಸಾಮರ್ಥ್ಯದ ಮೇಲೆ ಪ್ರಭಾವ ಬೀರುತ್ತವೆ. ಅಮರ್ತ್ಯ ಸೇನ್ ತಂದ ಈ ಬದಲಾವಣೆಗಳಿಂದಾಗಿ ಅರ್ಥಶಾಸ್ತ್ರ ಕೇವಲ ಅಂಕಿಅಂಶಗಳ ಅಧ್ಯಯನವಾಗಿ ಉಳಿಯದೆ, ಮನುಷ್ಯನ ಬದುಕನ್ನು ಸುಧಾರಿಸುವ ಉನ್ನತ ಕಲೆಯಾಗಿ ಬದಲಾಯಿತು.

References

Amartya sen, The possibility of Social choice in Rationality and freedom
Amartya Sen, Collective Choice and Social welfare

Amartya Sen, Home in the World, A memoir

Lawrence Hamilton, Amartya Sen

16ನೇ ಹಣಕಾಸು ಆಯೋಗ –ನ್ಯೂನತೆಗಳು ಮತ್ತು ಆತಂಕಗಳು

ಸಿ. ರಂಗರಾಜನ್ ಮತ್ತು ಡಿ.ಕೆ. ಶ್ರೀವಾಸ್ತವ

ಮಾರ್ಚ್ 02, 2026

ಹಿಂದಿನ ಆಯೋಗಗಳಿಗೆ ಹೋಲಿಸಿದರೆ 16ನೇ ಹಣಕಾಸು ಆಯೋಗಕ್ಕೆ ಹೆಚ್ಚಿನ ಸ್ವಾತಂತ್ರವಿತ್ತು. ಅದಕ್ಕೆ ತನ್ನ ಉದ್ದೇಶ ಮತ್ತು ಕ್ರಮವನ್ನು ನಿರ್ಧರಿಸುವ ಅವಕಾಶವಿತ್ತು. ಏಕೆಂದರೆ ಇದರ ಉಲ್ಲೇಖಿತ ನಿಯಮಗಳು (Terms of Reference) ನೇರವಾಗಿ ಸಾಂವಿಧಾನಿಕ ನಿಬಂಧನೆಗಳಿಗೆ ಅನುಗುಣವಾಗಿತ್ತು. ಈ ಆಯೋಗವು ಸಹ ಹಿಂದಿನ ಆಯೋಗಗಳಂತೆ ಹಣಕಾಸು ವರ್ಗಾವಣೆಯ ಎರಡು ಪ್ರಮುಖ ಆಯಾಮಗಳನ್ನು ಪರಿಶೀಲಿಸಿದೆ. ಲಂಬ (ಗಿಜಡಿಣಬಥಿಚಿಟ) ವಿತರಣೆ, ಅಂದರೆ ಕೇಂದ್ರದಿಂದ ರಾಜ್ಯಗಳಿಗೆ ಹಣಕಾಸು ವಿತರಣೆ ಹಾಗೂ ಸಮತಲ(Horizontal) ವಿತರಣೆ, ಅಂದರೆ ಒಟ್ಟಾರೆ ಹಣವನ್ನು ರಾಜ್ಯಗಳ ನಡುವೆ ಮಾಡುವ ವಿತರಣೆ. ಈ ಎರಡೂ ಆಯಾಮಗಳನ್ನು ಪರಿಶೀಲಿಸಿದೆ.

ಲಂಬ ವಿತರಣೆ (The Vertical Dimension)

ಕೇಂದ್ರದಲ್ಲಿ ಸಂಗ್ರಹವಾದ ತೆರಿಗೆಯಲ್ಲಿ ರಾಜ್ಯಗಳಿಗೆ ಒಂದು ಪಾಲು ಹಂಚಿಕೆಯಾಗುತ್ತದೆ. 14ನೇ ಹಣಕಾಸು ಆಯೋಗವು ಹೀಗೆ ಹಂಚಿಕೆ ಮಾಡುವುದಕ್ಕೆ ಮೀಸಲಿಟ್ಟ ನಿಧಿಯಲ್ಲಿ (ಆುಝುಭಟಜ ಕಠಠಟ) ರಾಜ್ಯಗಳ ಪಾಲನ್ನು 32% ರಿಂದ 42%ಕ್ಕೆ ಏರಿಸಿತ್ತು. ಜಮ್ಮು ಮತ್ತು ಕಾಶ್ಮೀರದ ಸ್ಥಾನಮಾನ ಬದಲಾದ ಕಾರಣ ಇದು ನಂತರ 41%ಕ್ಕೆ ಇಳಿಕೆಯಾಯಿತು. ಆದರೆ ಕೇಂದ್ರ ಸರ್ಕಾರವು ಇದರಿಂದಾಗಿ ತನ್ನ ಹಣಕಾಸಿನ ಸಾಮರ್ಥ್ಯ (Fiscal Space) ಕಡಿಮೆಯಾಗುತ್ತಿದೆ ಎನ್ನುವ ಕಳವಳ ವ್ಯಕ್ತಪಡಿಸಿತ್ತು.

ಇದಕ್ಕೆ ಪ್ರತಿಕ್ರಿಯೆಯಾಗಿ ಕೇಂದ್ರವು ಮೂರು ಕ್ರಮಗಳನ್ನು ಕೈಗೊಂಡಿತ್ತು: ಸೆಸ್ ಮತ್ತು ಹೆಚ್ಚುವರಿ ಶುಲ್ಕಗಳ ಪ್ರಮಾಣವನ್ನು ಹೆಚ್ಚಿಸಿತು. ಇವೆರಡನ್ನೂ ರಾಜ್ಯಗಳ ಜೊತೆ ಹಂಚಿಕೊಳ್ಳಬೇಕಾಗಿಲ್ಲ. ಕೇಂದ್ರ ಆಯೋಜಿತ ಯೋಜನೆಗಳಲ್ಲಿ ತನ್ನ ಪಾಲನ್ನು ಕಡಿಮೆ ಮಾಡಿತು. ಮೂರನೆಯದರು 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ್ದ ರಾಜ್ಯ–ನಿರ್ದಿಷ್ಟ ಅನುದಾನಗಳನ್ನು ತಿರಸ್ಕರಿಸಿತ್ತು.

ಆದಾಗ್ಯೂ, 16ನೇ ಹಣಕಾಸು ಆಯೋಗವು ರಾಜ್ಯಗಳ ಪಾಲನ್ನು 41%ರಲ್ಲೇ ಉಳಿಸಿಕೊಂಡಿದೆ, ಆ ಮೂಲಕ ಈ ಕ್ರಮಕ್ಕೆ ಒಂದು ರೀತಿಯಲ್ಲಿ ಸ್ಥಿರತೆಯನ್ನು ನೀಡಿದೆ.

ಸೆಸ್ ಮತ್ತು ಹೆಚ್ಚುವರಿ ಶುಲ್ಕಗಳ ಬಗ್ಗೆ:


16ನೇ ಹಣಕಾಸು ಆಯೋಗವು ರಾಜ್ಯಗಳ ಜೊತೆ ಹಂಚಿಕೆಯಾಗದ ಸೆಸ್ ಮತ್ತು ಹೆಚ್ಚುವರಿ ಶುಲ್ಕಗಳನ್ನು ಕುರಿತಂತೆ ಯಾವುದೇ ನೇರ

[ಸಾಮಾನ್ಯವಾಗಿ ಭಾರತದ ಹಣಕಾಸು ಆಯೋಗವು (Finance Commission) ಕೇಂದ್ರ ಮತ್ತು ರಾಜ್ಯಗಳ ನಡುವೆ ಹಣ ಹೇಗೆ ಹಂಚಿಕೆಯಾಗಬೇಕು ಎಂದು ನಿರ್ಧರಿಸುವಾಗ, ಕೇಂದ್ರ ಸರ್ಕಾರವು ಕೆಲವು 'ಮಾರ್ಗಸೂಚಿಗಳನ್ನು' ಅಥವಾ 'ನಿರ್ದೇಶನಗಳನ್ನು' (Directives) ನೀಡುತ್ತದೆ. ಇದನ್ನು 'Terms of Reference' (ToR) ಎನ್ನಲಾಗುತ್ತದೆ.

ಹಿಂದಿನ ಕೆಲವು ಆಯೋಗಗಳಿಗೆ ಕೇಂದ್ರ ಸರ್ಕಾರವು "ನೀವು ಈ ವಿಷಯಗಳನ್ನೇ ಗಮನಿಸಬೇಕು" ಅಥವಾ "ಹೀಗೆಯೇ ಮಾಡಬೇಕು" ಎಂದು ಬಹಳ ವಿವರವಾದ ಮತ್ತು ಕಟ್ಟುನಿಟ್ಟಾದ ಸೂಚನೆಗಳನ್ನು ನೀಡುತ್ತಿತ್ತು. ಇದು ಆಯೋಗದ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಶಕ್ತಿಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುತ್ತಿತ್ತು.]







ಶಿಫಾರಸು ಮಾಡಿಲ್ಲ. ಅವಕ್ಕೆ ಒಂದು ಮಿತಿ ಇರಬೇಕು ಮತ್ತು ಅದು ಒಂದು ನಿರ್ದಿಷ್ಟ ಅವಧಿಗೆ ಸೀಮಿತವಾಗಿರಬೇಕು. ಅವನ್ನು ಒಂದು ನಿರ್ದಿಷ್ಟ ಉದ್ದೇಶಕ್ಕೆ ಬಳಸಬೇಕು. ಕೇಂದ್ರದ ಸಾಮಾನ್ಯ ನಿಧಿಯೊಂದಿಗೆ ಸೇರಿಸಬಾರದು. ಈ ಬಗ್ಗೆ ಯಾವುದೇ ಶಿಫಾರಸ್ಸನ್ನು ಮಾಡದೆ ಆಯೋಗವು, ಕೇಂದ್ರ ಮತ್ತು ರಾಜ್ಯಗಳೆರಡೂ ಒಂದು 'ದೊಡ್ಡ ಒಪ್ಪಂದ'ಕ್ಕೆ (Grand Bargain) ಬರಲು ಸಲಹೆ ನೀಡಿದೆ. ಅದರ ಸಲಹೆಯ ಪ್ರಕಾರ "ಕೇಂದ್ರವು ಸೆಸ್ ಮತ್ತು ಸರ್‌ಚಾರ್ಜ್‌ಗಳ ದೊಡ್ಡ ಪಾಲನ್ನು ಸಾಮಾನ್ಯ ತೆರಿಗೆಗಳ ಜೊತೆ ವಿಲೀನಗೊಳಿಸಲು ಒಪ್ಪಿಕೊಂಡರೆ ರಾಜ್ಯಗಳು ಒಟ್ಟಾರೆ ಹಂಚಿಕೆಯ ನಿಧಿಯಲ್ಲಿ ತನ್ನ ಪಾಲನ್ನು ಕಡಿಮೆ ಮಾಡಿಕೊಳ್ಳಲು ಒಪ್ಪಿಕೊಳ್ಳಬಹುದು. ಇದರಿಂದ ಇಬ್ಬರಿಗೂ ಆದಾಯ ಕಡಿಮೆಯಾಗದಂತೆ ಹಂಚಿಕೆಯನ್ನು ನಿರ್ವಹಿಸಬಹುದು." ಎಂದು ತಿಳಿಸಿದೆ.

ಕೇಂದ್ರದ ತೆರಿಗೆಗಳ ಹಂಚಿಕೆಯಲ್ಲಿ ರಾಜ್ಯಗಳ ಪಾಲನ್ನು ವಸ್ತುನಿಷ್ಠವಾಗಿ ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ ಆಯೋಗಕ್ಕೆ ಸಂವಿಧಾನತ್ಮಕ ಕರ್ತವ್ಯಗಳಿವೆ. ಇದನ್ನು ಸಂವಿಧಾನದ 270 ಮತ್ತು 280ನೇ ವಿಧಿಗಳಲ್ಲಿ ಉಲ್ಲೇಖಿಸಲಾಗಿದೆ. ಸೆಸ್ (cess) ಮತ್ತು ಸರ್‌ಚಾರ್ಜ್‌ಗಳ (surcharge) ಕುರಿತು ತನ್ನ ಅಭಿಪ್ರಾಯಗಳನ್ನು ನೀಡುವಾಗ, ಆಯೋಗವು ತನಗೆ ವಿಧಿಸಲಾಗಿರುವ ಈ ಸಂವಿಧಾನಾತ್ಮಕ ಕರ್ತವ್ಯವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಸೆಸ್ ಮತ್ತು ಸರ್‌ಚಾರ್ಜ್‌ಗಳ ಈ ವಿಪರೀತ ಹೆಚ್ಚಳವು ಸಮರ್ಥನೀಯವಲ್ಲ ಮತ್ತು ಇದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ ಎಂಬುದನ್ನು ಆಯೋಗವು ಕನಿಷ್ಠ ಪಕ್ಷ ಕೇಂದ್ರಕ್ಕೆ ಸೂಚಿಸಬೇಕಿತ್ತು. ಇದಲ್ಲದೆ, ಆಯೋಗವು 'ಕಂದಾಯ ಕೊರತೆ'ಯ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದಕ್ಕೆ ಅನುದಾನ' ನೀಡುವುದನ್ನು (revenue deficit grants) ನಿಲ್ಲಿಸಲು ತೀರ್ಮಾನಿಸಿದೆ. ಜೊತೆಗೆ ಹಣಕಾಸು ಆಯೋಗವು ಯಾವುದೇ ರಾಜ್ಯ ಅಥವಾ ಕ್ಷೇತ್ರ–ನಿರ್ದಿಷ್ಟ ಅನುದಾನಗಳನ್ನು ಶಿಫಾರಸು ಮಾಡಲಿಲ್ಲ. ಈ ಮೂಲಕ ಕೇಂದ್ರದಿಂದ ರಾಜ್ಯಗಳಿಗೆ ಬರಬೇಕಾದ ಪಾಲನ್ನು ಕಡಿಮೆ ಮಾಡಲಾಗಿದೆ. ಹದಿನೈದನೇ ಹಣಕಾಸು ಆಯೋಗಕ್ಕೆ ಹೋಲಿಸಿದರೆ ಈಗ ರಾಜ್ಯಗಳಿಗೆ ಸಿಗುವ ಪಾಲು ಕಡಿಮೆಯಾಗುತ್ತದೆ.

ರಾಜ್ಯಗಳಿಗೆ ಹಂಚುವ ತೆರಿಗೆ ಮತ್ತು ಹಣಕಾಸು ಆಯೋಗದ ಅನುದಾನಗಳು ಎರಡನ್ನೂ ಸೇರಿಸಿ ಒಟ್ಟಾರೆಯಾಗಿ ಪರಿಣಾಮಕಾರಿ ವರ್ಗಾವಣೆ ಎನ್ನಲಾಗುತ್ತದೆ. ಇದರ ಪ್ರಮಾಣ 11, 12 ಮತ್ತು 13ನೇ ಹಣಕಾಸು ಆಯೋಗದ ಅವಧಿಗಳಲ್ಲಿ ಕ್ರಮವಾಗಿ 27.0%, 27.2% ಮತ್ತು 28.3% ರಷ್ಟಿತ್ತು. ಹದಿನಾಲ್ಕನೇ ಹಣಕಾಸು ಆಯೋಗದ ಸಮಯದಲ್ಲಿ ಇದರ ಪ್ರಮಾಣವನ್ನು ತೀವ್ರವಾಗಿ ಏರಿಸಲಾಯಿತು. ಆಗ ಇದು ಶೇಕಡ 35.6ರಷ್ಟಾಯಿತು. 2020–21 ರಿಂದ 2024–25ರ ತನಕದ ಹದಿನೈದನೇ ಹಣಕಾಸು ಆಯೋಗದ ಅವಧಿಯಲ್ಲಿ, ಇದರ ಪಾಲು ಸ್ವಲ್ಪ ಕಡಿಮೆಯಾಗಿತ್ತು. ಅಂದರೆ 34.4%ಕ್ಕೆ ಇಳಿದಿತ್ತು. ಆದರೂ ಇದು 11 ಮತ್ತು 13ನೇ ಹಣಕಾಸು ಆಯೋಗದ ಅವಧಿಗೆ ಹೋಲಿಸಿದರೆ ಗಣನೀಯವಾಗಿ ಹೆಚ್ಚಾಗಿದೆ. ಕೇಂದ್ರದ ಒಟ್ಟು ಕಂದಾಯ ಸಂಗ್ರಹಣೆಯ ದೃಷ್ಟಿಯಿಂದ ಈ ಹೆಚ್ಚಳ ತೀವ್ರವೆಂದೇ ಹೇಳಬೇಕು.

ಹದಿನಾರನೇ ಹಣಕಾಸು ಆಯೋಗದ ಅವಧಿಯ ಮೊದಲ ವರ್ಷ ಅಂದರೆ 2026–27ನ್ನು ಗಮನಿಸೋಣ. ಕೇಂದ್ರದ ಬಜೆಟ್ ಅಂದಾಜಿನ ಪ್ರಕಾರ ರಾಜ್ಯಗಳಿಗೆ ಹಂಚಿಕೆಯಾಗುವ ಪಾಲು 32.7% ಆಗಿದೆ. ಮುಂದಿನ ವರ್ಷಗಳಿಗೆ ಸಂಬಂಧಿಸಿದಂತೆ 16ನೇ ಹಣಕಾಸು ಆಯೋಗವು ಮಾಡಿರುವ ಅಂದಾಜುಗಳು ಉತ್ಪ್ರೇಕ್ಷಿತವೂ ಆಗಿರಬಹುದು. ಏಕೆಂದರೆ 2026–27ರ ನಾಮಿನಲ್ ಜಿಡಿಪಿಯಲ್ಲಿ ಶೇಕಡ 11ರಷ್ಟು ಬೆಳವಣಿಗೆಯಾಗಬಹುದೆಂದು ಅಂದಾಜಿಸಲಾಗಿದೆ. ಆದರೆ ಬಜೆಟ್ಟಿನಲ್ಲಿ ಇದು ಶೇಕಡ 10ರಷ್ಟಿರಬಹುದೆಂದು ಅಂದಾಜು ಮಾಡಲಾಗಿದೆ. ಅದಕ್ಕಿಂತ ಆಯೋಗದ ಅಂದಾಜು ಹೆಚ್ಚಿದೆ. ಅಲ್ಲದೆ, ಸೆಪ್ಟೆಂಬರ್ 2025ರಲ್ಲಿ ಜಿಎಸ್‌ಟಿಯಲ್ಲಿ ಹಲವಾರು ಸುಧಾರಣೆಗಳನ್ನು ತರಲಾಗಿದೆ. ಇದರಿಂದ ಕಂದಾಯ ಸಂಗ್ರಹಣೆಯ ಪ್ರಮಾಣ ಕಡಿಮೆಯಾಗಬಹುದು. ಇವೆಲ್ಲಾ ಆಯೋಗವು ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲೇ ಆಗಿರುವ ಸುಧಾರಣೆಗಳು. ಆದರೂ ಆಯೋಗವೂ ಇದನ್ನು ಗಣನೆಗೆ ತೆಗೆದುಕೊಂಡಿಲ್ಲ.

'ತೂಕ' ಅಥವಾ ವೇಯ್‌ಟೇಜ್ ಅಂದರೇನು?

ಸರಳವಾಗಿ ಹೇಳುವುದಾದರೆ, ಒಂದು ನಿರ್ಧಾರವನ್ನು ತೆಗೆದುಕೊಳ್ಳುವಾಗ ಅಥವಾ ಒಟ್ಟು ಮೊತ್ತವನ್ನು ಲೆಕ್ಕ ಹಾಕುವಾಗ, ಬೇರೆ ಬೇರೆ ಅಂಶಗಳಿಗೆ ನೀಡುವ ಪ್ರಾಮುಖ್ಯತೆ (Importance) ಅಥವಾ ಆದ್ಯತೆಯನ್ನೇ 'ತೂಕ' ಎನ್ನಲಾಗುತ್ತದೆ.

ಯಾವ ಅಂಶಕ್ಕೆ ಅತಿ ಹೆಚ್ಚು ತೂಕ ಇರುತ್ತದೆಯೋ, ಆ ಅಂಶವು ಅಂತಿಮ ಫಲಿತಾಂಶದ ಮೇಲೆ ಅತಿ ಹೆಚ್ಚು ಪ್ರಭಾವ ಬೀರುತ್ತದೆ.

ಸಮತಲ ಹಂಚಿಕೆ (Horizontal Dimension)

ಹದಿನಾರನೇ ಹಣಕಾಸು ಆಯೋಗವು ರಾಜ್ಯಗಳ ದಕ್ಷತೆಯನ್ನು ಗಣನೆಗೆ ತೆಗೆದುಕೊಳ್ಳುವ ದೃಷ್ಟಿಯಿಂದ ಆ ರಾಜ್ಯಗಳ 'ಕೊಡುಗೆ'ಯನ್ನು ಒಂದು ಹೊಸ ಮಾನದಂಡವಾಗಿ ತೆಗೆದುಕೊಂಡಿದೆ. ಆದರೆ, ಇದನ್ನು ಎಲ್ಲಾ ರಾಜ್ಯಗಳ ಒಟ್ಟು ಆಂತರಿಕ ಉತ್ಪನ್ನದಲ್ಲಿ (GSDP) ಒಂದು ನಿರ್ದಿಷ್ಟ ರಾಜ್ಯದ ಜಿಎಸ್‌ಡಿಪಿ ಎಷ್ಟಿದೆ ಎನ್ನುವುದನ್ನು ಆಧರಿಸಿ ಲೆಕ್ಕ ಹಾಕಲಾಗಿದೆ.

ಆದಾಗ್ಯೂ, ಉತ್ಪಾದನಾ ವ್ಯವಸ್ಥೆಯ ದಕ್ಷತೆಯೇ ಬೇರೆ ಮತ್ತು ವಿತ್ತೀಯ ವ್ಯವಸ್ಥೆಯ ದಕ್ಷತೆಯೇ ಬೇರೆ. ಇವೆರಡರ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕು. ಉತ್ಪಾದನಾ ವ್ಯವಸ್ಥೆಯಲ್ಲಿ, ರಾಜ್ಯಗಳ ನಡುವಿನ ಜಿಎಸ್‌ಡಿಪಿ ಹಂಚಿಕೆಯು ಹಲವು ಅಂಶಗಳನ್ನು ಆಧರಿಸಿರುತ್ತದೆ. ಅದರಲ್ಲಿ ರಾಜ್ಯಗಳ ನಡುವಿನ ಹಣಕಾಸು ಮತ್ತು ಮಾನವ ಸಂಪನ್ಮೂಲಗಳ ಚಲನೆಯೂ ಒಂದು. ಇದು ಹೆಚ್ಚಾಗಿ ಮಾರುಕಟ್ಟೆ ಶಕ್ತಿಯನ್ನು ಅವಲಂಬಿಸಿರುತ್ತದೆ. ಹಾಗಾಗಿ ಉತ್ಪಾದನಾ ಬಂಡವಾಳವು ಕೆಲವು ಸೀಮಿತ ರಾಜ್ಯಗಳಷ್ಟೇ ಕೇಂದ್ರೀಕೃತವಾಗಿರುತ್ತದೆ. ಮಾನವ ಸಂಪನ್ಮೂಲ ಕೂಡ ಅಷ್ಟಾಗಿ ಅಭಿವೃದ್ಧಿಯಾಗದ ರಾಜ್ಯಗಳಿಂದ ಹೆಚ್ಚು ಅಭಿವೃದ್ಧಿ ಹೊಂದಿದ ರಾಜ್ಯಗಳಿಗೆ ವಲಸೆ ಹೋಗುತ್ತದೆ.

ಆಯೋಗ ತಂದಿರುವ ಬದಲಾವಣೆಯಿಂದಾಗಿ ಜಿಎಸ್‌ಡಿಪಿ ಎರಡು ವಿರುದ್ಧ ರೀತಿಯಲ್ಲಿ ಬಳಕೆಯಾಗುತ್ತಿದೆ. ಮೊದಲನೆಯದಾಗಿ ರಾಜ್ಯಗಳ ಪಾಲನ್ನು ನಿರ್ಧರಿಸಲು ಆದಾಯದ ಅಂತರದ ಸೂತ್ರವನ್ನು ಬಳಸಲಾಗುತ್ತದೆ. ಅದರ ಪ್ರಕಾರ ತಲಾ ಜಿಎಸ್‌ಡಿಪಿ ಕಡಿಮೆ ಇರುವ ರಾಜ್ಯಗಳಿಗೆ ಅನುದಾನದ ಹೆಚ್ಚಿನ ಪಾಲು ಸಿಗುತ್ತದೆ. ಅಂದರೆ ಈ ಸೂತ್ರದ ಪ್ರಕಾರ ಜಿಎಸ್‌ಡಿಪಿ ಪ್ರಮಾಣ ಕಡಿಮೆ ಇದ್ದಷ್ಟು ಆ ರಾಜ್ಯಕ್ಕೆ ಸಿಗುವ ಪಾಲು ಹೆಚ್ಚು. ಆದರೆ ರಾಜ್ಯಗಳ ಕೊಡುಗೆಯನ್ನು ಮಾನದಂಡವನ್ನಾಗಿ ತೆಗೆದುಕೊಂಡಾಗ ಇದು ಇದಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತದೆ. ಅಂದರೆ ರಾಜ್ಯದ ಜಿಎಸ್‌ಡಿಪಿ ಹೆಚ್ಚಿದಷ್ಟು ಅದರ ಪಾಲೂ ಹೆಚ್ಚುತ್ತದೆ. ಆದರೆ, ಈ ಲೆಕ್ಕಾಚಾರ ಮಾಡುವುದಕ್ಕೆ ಆಯೋಗವು ಜಿಎಸ್‌ಡಿಪಿಯನ್ನು ನೇರವಾಗಿ ಬಳಸಿಕೊಂಡಿಲ್ಲ. ಬದಲಿಗೆ ಜಿಎಸ್‌ಡಿಪಿಯ 'ವರ್ಗಮೂಲ'ವನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ನೇರವಾಗಿ ಜಿಎಸ್‌ಡಿಪಿಯ ಆಧರಿಸಿ ಕೊಡುಗೆಯನ್ನು ಲೆಕ್ಕಹಾಕುವುದರಿಂದ ಕೆಲವು ರಾಜ್ಯಗಳ ಮೇಲೆ ಆಗಬಹುದಾದ ಪರಿಣಾಮಗಳನ್ನು ತೀವ್ರತೆಯನ್ನು ಕಡಿಮೆ ಮಾಡಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಹೊಸ ತೆರಿಗೆ ವಿತರಣೆಯ ಸೂತ್ರದಲ್ಲಿ, ಕೆಲವು ಮಾನದಂಡಗಳ ತೂಕವನ್ನು ಬದಲಿಸಲಾಗಿದೆ. ಕೇವಲ ವಿವೇಚನೆಯನ್ನು ಆಧರಿಸಿ ಈ ಬದಲಾವಣೆಗಳನ್ನು ಮಾಡಲಾಗಿದೆ. ರಾಜ್ಯಗಳು 'ತೆರಿಗೆ ಸಂಗ್ರಹಕ್ಕೆ ಮಾಡುವ ಪ್ರಯತ್ನವನ್ನು ಅಥವಾ ವಿತ್ತೀಯ ಶಿಸ್ತನ್ನು ಕಾಪಾಡಿಕೊಳ್ಳಲು ಮಾಡುವ ಪ್ರಯತ್ನವನ್ನು ಕೈಬಿಡಲಾಗಿದೆ. ಇದು ವಿತ್ತೀಯ ದಕ್ಷತೆಗೆ ಅಳತೆಗೋಲಾಗಿತ್ತು. ಈ ಕ್ರಮ ಆಯೋಗದ ಉದ್ದೇಶಕ್ಕೆ ಹೊಂದಿಕೆಯಾಗುವುದಿಲ್ಲ.

ಲಾಭ ಮತ್ತು ನಷ್ಟಗಳು (Losses and Gains)

ಹದಿನೈದನೇ ಹಣಕಾಸು ಆಯೋಗದ ಹಂಚಿಕೆ ಯೋಜನೆಗೆ ಹೋಲಿಸಿದರೆ, 16ನೇ ಹಣಕಾಸು ಆಯೋಗದ ಶಿಫಾರಸ್ಸಿನಿಂದಾಗಿ, ಕೆಲವು ರಾಜ್ಯಗಳಿಗೆ ನಷ್ಟವಾಗಿದೆ. ಹಾಗೆ ನಷ್ಟಕ್ಕೆ ಒಳಗಾದ ಪ್ರಮುಖ ರಾಜ್ಯಗಳೆಂದರೆ ಮಧ್ಯಪ್ರದೇಶ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ, ಒಡಿಶಾ, ಛತ್ತೀಸ್‌ಗಢ ಮತ್ತು ರಾಜಸ್ತಾನ. ಹಾಗೆಯೇ ಇನ್ನೊಂದು ಗುಂಪಿನ ರಾಜ್ಯಗಳಿಗೂ ನಷ್ಟವಾಗಿದೆ. ಅವುಗಳು ಅರುಣಾಚಲ ಪ್ರದೇಶ, ಮೇಘಾಲಯ, ಮಣಿಪುರ, ನಾಗಾಲ್ಯಾಂಡ್, ತ್ರಿಪುರ, ಸಿಕ್ಕಿಂ ಮತ್ತು ಗೋವಾ (ಈಶಾನ್ಯ ರಾಜ್ಯಗಳು ಅಥವಾ ಅತ್ಯಂತ ಸಣ್ಣ ರಾಜ್ಯಗಳು). ಇತರ ಶ್ರೀಮಂತ ರಾಜ್ಯಗಳಿಗೆ ಸಿಕ್ಕಿರುವ ಲಾಭ ಒಂದೇ ರೀತಿಯಲ್ಲಿಲ್ಲ.

ಹದಿನಾರನೇ ಹಣಕಾಸು ಆಯೋಗದ ಹೊಸ ಹಂಚಿಕೆ ಸೂತ್ರದಿಂದ ಕೆಲವು ರಾಜ್ಯಗಳಿಗೆ ಆಗಿರುವ ನಷ್ಟವನ್ನು ಸರಿತೂಗಿಸಬಹುದಿತ್ತು ಕೆಲವು ಮಾನದಂಡಗಳನ್ನು ಇಟ್ಟುಕೊಂಡು ನಷ್ಟ ಅನುಭವಿಸಿದ ರಾಜ್ಯಗಳಿಗೆ ವಿಶೇಷ ಅನುದಾನವನ್ನು ನೀಡಬಹುದಿತ್ತು.

ಭಾರತದಂತಹ ವೈವಿಧ್ಯಮಯ ರಾಜ್ಯಗಳ ವೆಚ್ಚ ಮತ್ತು ಅಗತ್ಯತೆಗಳ ನಡುವಿನ ಸೂಕ್ಷ್ಮ ವ್ಯತ್ಯಾಸಗಳನ್ನು ಕೇವಲ 'ತೆರಿಗೆ ಹಂಚಿಕೆ'ಯ ಮೂಲಕವೇ ಸರಿದೂಗಿಸಲು ಸಾಧ್ಯವಿಲ್ಲ. ಇದಲ್ಲದೆ, ಒಂದು ಹಣಕಾಸು ಆಯೋಗವು ತೆರಿಗೆ ಹಂಚಿಕೆಯ ಸೂತ್ರವನ್ನು ಬದಲಾಯಿಸಿದಾಗ, ಕೆಲವು ರಾಜ್ಯಗಳಿಗೆ ಉಂಟಾಗುವ ನಷ್ಟವನ್ನು ಸೂಕ್ತ ಅನುದಾನಗಳ ಮೂಲಕ ಸರಿತೂಗಿಸಬಹುದು.

ವಾಸ್ತವವಾಗಿ, ಸಂವಿಧಾನದ 275ನೇ ವಿಧಿ ರಾಜ್ಯಗಳ ನಿರ್ದಿಷ್ಟ 'ಅಗತ್ಯತೆಗಳನ್ನು' ಪೂರೈಸುವ ಉದ್ದೇಶದಿಂದಲೇ ವಿತ್ತೀಯ ವರ್ಗಾವಣೆಗೆ ಅವಕಾಶ ಮಾಡಿಕೊಡುತ್ತದೆ. ಇದನ್ನು ಕೇವಲ 'ಕಂದಾಯ ಕೊರತೆ" ಎಂದು ತಪ್ಪಾಗಿ ಭಾವಿಸಬಾರದು. ಆರೋಗ್ಯ ಮತ್ತು ಶಿಕ್ಷಣದಂತಹ ಅತ್ಯಂತ ಅವಶ್ಯಕ ಸೇವೆಗಳ ಗುಣಮಟ್ಟವನ್ನು ಎಲ್ಲಾ ರಾಜ್ಯಗಳಲ್ಲಿ ಸಮಾನವಾಗಿ ಕಾಪಾಡಿಕೊಳ್ಳಲು ಬೇಕಾದ ಅವಶ್ಯಕತೆಯನ್ನು ರಾಜ್ಯಗಳ 'ಅಗತ್ಯ'ಗಳ ಲೆಕ್ಕಕ್ಕೆ ಸೇರಿಸಬಹುದು.

ಇದರಿಂದ ಶ್ರೀಮಂತ ರಾಜ್ಯಗಳ 'ಉತ್ತಮ ಸಾಧನೆಯ'ನ್ನು ಗುರುತಿಸಬೇಕೆನ್ನುವ ವಾದವನ್ನು ಪುರಸ್ಕರಿಸಿದಂತೆಯೂ ಆಗುತ್ತಿತ್ತು. ಜೊತೆಗೆ, ರಾಜ್ಯಗಳ ನಡುವೆ ಸಮಾನತೆಯನ್ನು ಸಾಧಿಸುವ ಗುರಿಯನ್ನು ಸಾಧಿಸಿದಂತೆಯೂ ಆಗುತ್ತಿತ್ತು. ನಿಜ, ಕಂದಾಯದ ಕೊರತೆಯನ್ನು ಅಂದಾಜು ಮಾಡುವುದು ಕಷ್ಟ. ಯಾಕೆಂದರೆ ರಾಜ್ಯಗಳ ಅಗತ್ಯತೆಗಳು ಮತ್ತು ಸಂಪನ್ಮೂಲಗಳ ಮೌಲ್ಯಮಾಪನ ಮಾಡುವುದು ಕಷ್ಟ. ಆದರೆ ಅದೇ ಕಾರಣಕ್ಕೆ ಇದನ್ನು ಸಂಪೂರ್ಣವಾಗಿ ಕೈಬಿಡುವ ಸುಲಭದ ದಾರಿಯನ್ನು ಹದಿನಾರನೇ ಹಣಕಾಸು ಆಯೋಗವು ತುಳಿಯಬಾರದಿತ್ತು. ಯಾವುದೇ ನಿರ್ದಿಷ್ಟ ಉದ್ದೇಶವಿಲ್ಲದೆ ರಾಜ್ಯಗಳಿಗೆ ವಿಶೇಷ ಅನುದಾನ ಕೊಡುವುದು ಸೂಕ್ತವಲ್ಲ. ಆದರೆ ಸಮಾನತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ನೀಡುವ ಅನುದಾನಗಳಿಗೆ ಇಂದಿಗೂ ಮಹತ್ವವಿದೆ.

The article was originally published in The Hindu

C. Rangarajan is a former Governor of the Reserve Bank of India and Chairman of the Twelfth Finance Commission. D.K. Srivastava is Chief Policy Adviser, EY India, a former Director of the Madras School of Economics and Member, Twelfth Finance Commission. The views expressed are personal

ಮಹಿಳೆಯರಿಗೆ ಸಮಾನ ಅವಕಾಶಗಳ ಆರ್ಥಿಕ ಮ್ಯಾಜಿಕ್



ಇಂದರ್ಮಿತ್ ಗಿಲ್ ಮತ್ತು ಟೀ ಟ್ರಂಬಿಕ್

'ಟುಮಾರೋಸ್ ಅಫೇರ್ ಎನ್ನುವ ಪೋರ್ಟಲ್‌ನಲ್ಲಿ ಮಹಿಳೆಯರ ಸಾಮರ್ಥ್ಯ ಮತ್ತು ಅದು ಅಭಿವ್ಯಕ್ತಿಯಾಗಲು ಇರುವ ತೊಡಕುಗಳು ಮತ್ತು ಅವುಗಳನ್ನು ಹೇಗೆ ನಿವಾರಿಸಬಹುದು. ಈ ಕುರಿತು ಸರ್ಕಾರಗಳ ಮುಂದಿರುವ ಸವಾಲುಗಳೇನು ಎನ್ನುವುದನ್ನು ಕುರಿತು ಇಂದ್ರಮಿತ್ ಗಿಲ್ ಮತ್ತು ಟೀ ಟ್ರಂಬಕ್ ತುಂಬಾ ಹೃದಯಸ್ಪರ್ಶಿಯಾಗಿ ಬರೆದಿದ್ದಾರೆ. 2026ರ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಅದರಲ್ಲಿ ಚರ್ಚಿಸಿರುವ ಮುಖ್ಯ ವಿಚಾರಗಳನ್ನು ಹಂಚಿಕೊಳ್ಳುವುದು ಸೂಕ್ತವೆನಿಸುತ್ತದೆ.
ಅವರು 'ಮಹಿಳೆಯರು, ವ್ಯವಹಾರ ಮತ್ತು ಕಾನೂನು 2026' (Women, Business, and the Law 2026) ಎಂಬ ವಿಶ್ವಬ್ಯಾಂಕಿನ ವರದಿಯ ವಿವರಗಳನ್ನು ಪ್ರಸ್ತಾಪಿಸುತ್ತಾರೆ. ಆ ವರದಿ ಒಳಗೊಂಡಿರುವ 190 ದೇಶಗಳಲ್ಲಿ ಒಂದೇ ಒಂದು ದೇಶವೂ ಮಹಿಳೆಯರಿಗೆ ಪುರುಷರಷ್ಟೇ ಸಮಾನವಾದ ಕಾನೂನು ಪರಿಸರವನ್ನು ಒದಗಿಸುತ್ತಿಲ್ಲ. ಮುಖ್ಯವಾಗಿ ಸುರಕ್ಷತೆ, ಉದ್ಯಮಶೀಲತೆ ಮತ್ತು ಮಕ್ಕಳ ಆರೈಕೆಯ ವಿಷಯಗಳಲ್ಲಿ ಪುರುಷರಿಗೂ ಮತ್ತು ಮಹಿಳೆಯರಿಗೂ ಇರುವ ಕಾನೂನುಗಳ ಅಂತರ ತುಂಬಾ ದೊಡ್ಡದಾಗಿದೆ ಎನ್ನುತ್ತಾರೆ. ಈ ಅಂತರದ ಪರಿಣಾಮವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಅಭಿವೃದ್ಧಿ ಮತ್ತು ಉದ್ಯೋಗಗಳಲ್ಲಿ ದೊಡ್ಡ ಪ್ರಮಾಣದ ನಷ್ಟ ಉಂಟಾಗುತ್ತಿದೆ ಎನ್ನುವುದರತ್ತ ಗಮನ ಸೆಳೆಯುತ್ತಾರೆ. ಈ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಕಾನೂನು ಸುಧಾರಣೆಗಳನ್ನು ತಂದರೆ ಅದು ಇಡೀ ಆರ್ಥಿಕತೆಯ ಮೇಲೆ ಧನಾತ್ಮಕವಾದ ಪರಿಣಾಮ ಬೀರುತ್ತದೆ ಎನ್ನುವುದನ್ನು ಜಪಾನಿನ ಉದಾಹರಣೆಯ ಮೂಲಕ ವಿವರಿಸುತ್ತಾರೆ.

2012ರಲ್ಲಿ ಕುಸಿಯುತ್ತಿರುವ ಕಾರ್ಮಿಕ ಶಕ್ತಿ ಮತ್ತು ಆರ್ಥಿಕ ಸ್ಥಗಿತವನ್ನು ಜಪಾನ್ ಎದುರಿಸುತ್ತಿತ್ತು. ಆಗಿನ ಜಪಾನ್ ಪ್ರಧಾನಿ ಅಬೆ ಶಿಂಜೊ ಅವರು ಆ ಸಂದರ್ಭದಲ್ಲಿ ಮಹಿಳೆಯರ ಸಾಮರ್ಥ್ಯವನ್ನು ನಂಬಿದರು. ಹೆಚ್ಚಿನ ಮಹಿಳೆಯರು ಕೆಲಸಕ್ಕೆ ಬರುವಂತೆ ಪ್ರೋತ್ಸಾಹಿಸಲು ಅವರ ಸರ್ಕಾರ ಹಲವು ಸುಧಾರಣೆಗಳನ್ನು ಜಾರಿಗೊಳಿಸಿತು. ಈ ಸುಧಾರಣೆಗಳು ಮಕ್ಕಳ ಆರೈಕೆಯ ವಿಸ್ತರಣೆ, ಪೋಷಕರ ರಜೆ ಹೆಚ್ಚಳ ಮತ್ತು ಮಹಿಳೆಯರಿಗೆ ಬಡ್ತಿ ನೀಡುವ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ ಸೇರಿದಂತೆ ಹಲವು ವಿಚಾರಗಳನ್ನು ಒಳಗೊಂಡಿತ್ತು. ಇದರಿಂದಾಗಿ 2019ರ ವೇಳೆಗೆ, ಹೆಚ್ಚುವರಿಯಾಗಿ 2.5 ಮಿಲಿಯನ್ ಮಹಿಳೆಯರು ಉದ್ಯೋಗಕ್ಕೆ ಸೇರಿದರು. ಮಹಿಳಾ ಕಾರ್ಮಿಕರ ಭಾಗವಹಿಸುವಿಕೆ ಶೇ.67ಕ್ಕೆ ತಲುಪಿತು. ಬಹುತೇಕ ಎಲ್ಲ ಪದವೀಧರರಿಗೂ ಉದ್ಯೋಗ ದೊರಕಿತು. ಹಾಗಾಗಿ ಮಹಿಳೆಯರು ಉದ್ಯೋಗ ಮಾರುಕಟ್ಟೆಗೆ ಪ್ರವೇಶಿಸಲು ಇರುವ ಅಡೆತಡೆಗಳನ್ನು ನಿವಾರಿಸಿದಾಗ, ಆರ್ಥಿಕ ಫಲಿತಾಂಶಗಳು ಸುಧಾರಿಸುತ್ತವೆ ಎನ್ನುವುದನ್ನು ಇದರಿಂದ ಅರಿವಾಗುತ್ತದೆ ಎಂದು ಅವರು ಹೇಳುತ್ತಾರೆ.

ಆದರೆ ಇಂದು, ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಗಳು ಇದಕ್ಕೆ ವಿರುದ್ಧವಾದ ಸವಾಲನ್ನು ಎದುರಿಸುತ್ತಿವೆ ಎಂದು ಅವರು ಗುರುತಿಸುತ್ತಾರೆ. ಅದು ಯುವಜನರ ಸಂಖ್ಯೆಯಲ್ಲಿ ಇಂದು ಆಗಿರುವ ದೊಡ್ಡ ಪ್ರಮಾಣದ ಹೆಚ್ಚಳ. ಈ ಆರ್ಥಿಕತೆಗಳಲ್ಲಿ ಮುಂದಿನ 10–15 ವರ್ಷಗಳಲ್ಲಿ 1.2 ಶತಕೋಟಿ ಯುವಜನರು ಉದ್ಯೋಗ ಮಾರುಕಟ್ಟೆಗೆ ಬರಲಿದ್ದಾರೆ. ಆದರೆ ಆ ಅವಧಿಯಲ್ಲಿ ಕೇವಲ 400 ಮಿಲಿಯನ್ ಉದ್ಯೋಗಗಳು ಮಾತ್ರ ಸೃಷ್ಟಿಯಾಗುವ ನಿರೀಕ್ಷೆಯಿದೆ. ಇದು ಬೃಹತ್ ಉದ್ಯೋಗದ ಕೊರತೆಯನ್ನು ಸೂಚಿಸುತ್ತದೆ.

ಈ ಯುವಜನರಲ್ಲಿ ಯುವತಿಯರು ಅರ್ಧದಷ್ಟಿದ್ದಾರೆ. ಅವರಿಗೆ ಪುರುಷರಷ್ಟೇ ಸಮಾನ ಅವಕಾಶಗಳನ್ನು ನೀಡುವುದು ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೆ ಅತ್ಯಗತ್ಯ. ಹೀಗೆ ಸಮಾನ ಅವಕಾಶಗಳೊಂದಿಗೆ ಉದ್ಯೋಗ ಮಾರುಕಟ್ಟೆಯನ್ನು ಪ್ರವೇಶಿಸಿದಾಗ ಮಾತ್ರ ಮಹಿಳೆಯರು ಉದ್ಯೋಗದಲ್ಲಿ ಮತ್ತು ಅತಿ ವೇಗವಾಗಿ ಆಗುತ್ತಿರುವ ಅಭಿವೃದ್ಧಿಯಲ್ಲಿ ಒಂದು ನಿರ್ಣಾಯಕ ಪಾತ್ರವನ್ನು ವಹಿಸಬಲ್ಲರು. ಇದು ಹಲವು ಲೇಖಕರು ಗುರುತಿಸುತ್ತಾರೆ. ಹೀಗೆ ಸಮಾನ ನೆಲೆಯಲ್ಲಿ ಉದ್ಯೋಗಕ್ಷೇತ್ರಕ್ಕೆ ಕಾಲಿಟ್ಟಾಗ ಮಾತ್ರ ಅವರು ಹೆಚ್ಚೆಚ್ಚು ಉದ್ದಿಮೆಗಳನ್ನು ಪ್ರಾರಂಭಿಸಬಹುದು ಮತ್ತು ನೌಕರಿಗಳನ್ನು ಸೃಷ್ಟಿಸಬಹುದು. ಹೆಚ್ಚಿನ ದೇಶಗಳಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಅವಕಾಶಗಳಲ್ಲಿ ಇರುವ ಈ ಅಂತರವನ್ನು ಕಡಿಮೆ ಮಾಡುವುದರಿಂದ ಜಿಡಿಪಿಯನ್ನು ಶೇ.20ರಷ್ಟು ಹೆಚ್ಚಿಸಬಹುದು ಎನ್ನುವುದು ಸಂಶೋಧನೆಗಳಿಂದ ತಿಳಿದು ಬಂದಿದೆ ಎನ್ನುತ್ತಾರೆ.

ಕಳೆದ ದಶಕಗಳಲ್ಲಿ ಹಲವಾರು ದೇಶಗಳು ಮಹಿಳೆಯರ ಆರ್ಥಿಕ ಭಾಗವಹಿಸುವಿಕೆಗೆ ಬೆಂಬಲ ನೀಡುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯನ್ನು ಇಟ್ಟಿವೆ. ಇವು ಕುಟುಂಬ, ಕಾರ್ಮಿಕ ಮತ್ತು ಆರ್ಥಿಕ ಕಾನೂನುಗಳಲ್ಲಿ ಸುಧಾರಣೆಗಳನ್ನು ತಂದಿವೆ ಎನ್ನುತ್ತಾರೆ. ಈ ಸುಧಾರಣೆಗಳ ಪರಿಣಾಮವಾಗಿ ಈ ಶತಮಾನದ ಆರಂಭದಲ್ಲಿ ಪುರುಷರಗಿದ್ದ ಕಾನೂನು ಹಕ್ಕುಗಳಿಗೆ ಹೋಲಿಸಿದರೆ ಮಹಿಳೆಯರು ಕೇವಲ ಅದರ ಅರ್ಧದಷ್ಟು ಕಾನೂನು ಹಕ್ಕುಗಳನ್ನು ಮಾತ್ರ ಹೊಂದಿದ್ದರು. ಆದರೆ ಇಂದು ಪುರುಷರಿಗೆ ಹೋಲಿಸಿದರೆ ಮೂರನೇ ಎರಡು ಭಾಗದಷ್ಟು (2/3) ಕಾನೂನು ಹಕ್ಕುಗಳನ್ನು ಮಹಿಳೆಯರು ಹೊಂದಿದ್ದಾರೆ.

ಆದರೆ ಹೆಚ್ಚಿನ ದೇಶಗಳು ಇದರ ಮುಂದಿನ ಹೆಜ್ಜೆ ಇರಿಸಲು ವಿಫಲವಾಗಿವೆ ಎನ್ನುವ ವಿಷಾದದ ಸಂಗತಿಯನ್ನೂ ಅವರು ಗುರುತಿಸುತ್ತಾರೆ.
'ಮಹಿಳೆಯರು, ವ್ಯವಹಾರ ಮತ್ತು ಕಾನೂನು 2026' ವರದಿಯ ಪ್ರಕಾರ, ಕಾಗದದ ಮೇಲಿರುವ ರಕ್ಷಣೆಗಳನ್ನು ಸೂಕ್ತವಾಗಿ ಜಾರಿಗೊಳಿಸಲು ಅವಶ್ಯಕವಾದ ನೀತಿಗಳು ಮತ್ತು ಸೇವೆಗಳು ಮಾತ್ರ ಶೇ. 50ಕ್ಕಿಂತಲೂ ಕಡಿಮೆ ಇವೆ. ಈ ಕಾನೂನುಗಳಲ್ಲಿ ಕೇವಲ ಅರ್ಧದಷ್ಟನ್ನು ಮಾತ್ರ ಜಾರಿಗೊಳಿಸಲಾಗಿದೆ. ಹಾಗಾಗಿ ಕಾನೂನು ಹಕ್ಕುಗಳು ಮತ್ತು ವಾಸ್ತವಿಕ ಬದುಕಿನ ನಡುವೆ ದೊಡ್ಡ ಕಂದಕವಿದೆ ಎನ್ನುವುದನ್ನು ಹೊಸ ಜಾರಿ ಸೂಚ್ಯಂಕವು (enforcement index) ಬಹಿರಂಗಪಡಿಸಿದೆ ಎನ್ನುವ ಅಂಶವನ್ನು ಅವರು ಸ್ಪಷ್ಟ ಪಡಿಸುತ್ತಾರೆ. ಹಾಗೆಯೇ ಇಂದು ಜಗತ್ತಿನಲ್ಲಿ ಸಂಪೂರ್ಣ ಕಾನೂನು ಸಮಾನತೆ ಇರುವ ದೇಶಗಳಲ್ಲಿ ವಾಸಿಸುತ್ತಿರುವ ಮಹಿಳೆಯರ ಸಂಖ್ಯೆ ಕೇವಲ ಶೇ.4ರಷ್ಟು ಮಾತ್ರ.

ಈ ವರದಿಯು ಹತ್ತು ಪ್ರಮುಖ ಕ್ಷೇತ್ರಗಳನ್ನು ಪ್ರಸ್ತಾಪಿಸುತ್ತದೆ. ಆದರೆ ಈ ವರದಿ ಒಳಗೊಂಡಿರುವ 190 ದೇಶಗಳಲ್ಲಿ ಒಂದೇ ಒಂದು ದೇಶವೂ ವರದಿಯಲ್ಲಿ ಪ್ರಸ್ತಾಪಿಸಲಾಗಿರುವ ಈ 10 ಪ್ರಮುಖ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಪುರುಷರಷ್ಟೇ ಸಮಾನ ಕಾನೂನು ಹಕ್ಕುಗಳನ್ನು ನೀಡುತ್ತಿಲ್ಲ ಎನ್ನುವ ಬಹುಮುಖ್ಯ ಅಂಶದತ್ತ ಗಮನ ಸೆಳೆಯುತ್ತಾರೆ.
ಈ ಪ್ರಮುಖ ಕ್ಷೇತ್ರಗಳಲ್ಲಿ ಅತಿ ದೊಡ್ಡ ಅಂತರವಿರುವುದು ಸುರಕ್ಷತೆಗೆ ಸಂಬಂಧಿಸಿದಂತೆ. ಲಿಂಗಾಧಾರಿತ ಹಿಂಸೆ ಮತ್ತು ಕಿರುಕುಳದಿಂದ ರಕ್ಷಣೆ ಇಲ್ಲದಿರುವುದು ಮಹಿಳೆಯರು ಉದ್ಯೋಗಕ್ಕೆ ಸೇರಲು ಮತ್ತು ಅಲ್ಲಿ ಮುಂದುವರಿಯಲು ದೊಡ್ಡ ತೊಡಕಾಗಿದೆ. ಲೈಂಗಿಕ ಕಿರುಕುಳದ ವಿರುದ್ಧದ ಕಾನೂನುಗಳು ಸಹ ಸ್ಥಳದಿಂದ ಸ್ಥಳಕ್ಕೆ



ಬದಲಾಗುತ್ತವೆ. 143 ದೇಶಗಳಲ್ಲಿ ಕೆಲಸದ ಸ್ಥಳದಲ್ಲಿ ಕಿರುಕುಳವನ್ನು ನಿಷೇಧಿಸಲಾಗಿದೆ. ಇನ್ನು ಆನ್‌ಲೈನ್ ಕಿರುಕುಳದ ಬಗ್ಗೆ ಕೇವಲ 90 ದೇಶಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿನ ಕಿರುಕುಳಕ್ಕೆ ಸಂಬಂಧಿಸಿದಂತೆ 63 ದೇಶಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿನ ಕಿರುಕುಳಕ್ಕೆ ಸಂಬಂಧಿಸಿದಂತೆ ಕೇವಲ 36 ದೇಶಗಳಲ್ಲಿ ಮಾತ್ರ ಕಾನೂನುಗಳಿವೆ.

ಮಹಿಳೆಯರಿಗೆ ಸಂಬಂಧಿಸಿದಂತೆ ಮತ್ತೊಂದು ದುರ್ಬಲ ಕ್ಷೇತ್ರವೆಂದರೆ 'ಮಕ್ಕಳ ಆರೈಕೆ'. ಕಡಿಮೆ ವೆಚ್ಚದ ಮತ್ತು ಉತ್ತಮ ಗುಣಮಟ್ಟದ ಶಿಶುಪಾಲನಾ ಕೇಂದ್ರಗಳಿಲ್ಲದೇ ಇರುವುದರಿಂದ ಅನೇಕ ಮಹಿಳೆಯರು ಕೆಲಸಕ್ಕೆ ಹೋಗಲು ಸಾಧ್ಯವಾಗುತ್ತಿಲ್ಲ. 146 ದೇಶಗಳಲ್ಲಿ ಮೂರು ವರ್ಷದ ಒಳಗಿನ ಮಕ್ಕಳ ಆರೈಕೆ ಸೇವೆಗಳನ್ನು ನಿಯಂತ್ರಿಸುವ ಕಾನೂನುಗಳು ಇವೆ. ಹಾಗಿದ್ದಾಗ್ಯೂ ಕೇವಲ 66 ದೇಶಗಳು ಮಾತ್ರ ಶುಶ್ರೂಕರು–ಮಕ್ಕಳ ಅನುಪಾತ, ಶಿಕ್ಷಣ ಅಥವಾ ತರಬೇತಿಯ ಅವಶ್ಯಕತೆಗಳು ಮತ್ತು ಕಡ್ಡಾಯವಾದ ನಿಯಮಿತ ಪರಿಶೀಲನೆ ಇವುಗಳಿಗೆ ಸಂಬಂಧಿಸಿದಂತೆ ಸಮಗ್ರ ಗುಣಮಟ್ಟದ ಮಾನದಂಡಗಳನ್ನು ನಿಗದಿಪಡಿಸಿವೆ. ಕೇವಲ 78 ದೇಶಗಳು ಮಾತ್ರ ಕುಟುಂಬಗಳಿಗೆ ಆರ್ಥಿಕ ಅಥವಾ ತೆರಿಗೆ ಬೆಂಬಲ ನೀಡುತ್ತವೆ ಎನ್ನುವ ಶೋಚನೀಯ ವಿಚಾರವನ್ನು ಲೇಖಕರು ಮುನ್ನೆಲೆಗೆ ತರುತ್ತಾರೆ.

ಈ ಕೊರತೆಗಳು ಮಹಿಳೆಯರ ಭಾಗವಹಿಸುವಿಕೆಯನ್ನು ಕುಂಠಿತಗೊಳಿಸುತ್ತವೆ, ಕೆಲಸದ ಅವಧಿಯನ್ನು ಕಡಿಮೆ ಮಾಡುತ್ತವೆ, ಔಪಚಾರಿಕ ಉದ್ಯೋಗ ಮತ್ತು ವ್ಯಾಪಾರಿ ಸಂಸ್ಥೆಗಳ ನಿರ್ಮಾಣವನ್ನು ನಿಧಾನಗೊಳಿಸುತ್ತವೆ. ಇವೆಲ್ಲವೂ ದೀರ್ಘಕಾಲೀನ ಬೆಳವಣಿಗೆಗೆ, ತೆರಿಗೆ ಆದಾಯ ಮತ್ತು ಸ್ಥಿತಿಸ್ಥಾಪಕತ್ವ ಮುಂತಾದವುಗಳಿಗೆ ತುಂಬಾ ಮಹತ್ವದ ಅಂಶಗಳು. ಹಾಗೆಯೇ ಬೆರ್‌ಗ್ರೂಯೆನ್ ಇನ್ಸ್ಟಿಟ್ಯೂಟ್‌ನ (Berggruen Institute) ಸಹಯೋಗದೊಂದಿಗೆ ಸಿದ್ಧಪಡಿಸಿರುವ ಹೊಸ 'ಇನ್ಸೈಡರ್ ಇಂಟರ್ವ್ಯೂ'ನಲ್ಲಿ (Insider Interview), ಡ್ಯಾರನ್ ಅಸೆಮೊಗ್ಲು ಮತ್ತು ಮೈಕೆಲ್ ಜೆ. ಸ್ಯಾಂಡಲ್ ಅವರು ಗುಣಾಧರಿತ ವ್ಯವಸ್ಥೆಯ (Meritocracy) ಕರಾಳ ಮುಖ, ಮಾರುಕಟ್ಟೆಗಳ ಮಿತಿಗಳು, ಸ್ವಾತಂತ್ರ್ಯದ ಅರ್ಥ ಮತ್ತು ಸಾರ್ವಜನಿಕ ವಲಯದ ಮೇಲೆ ತಂತ್ರಜ್ಞಾನ ಕಂಪನಿಗಳು ಸಾಧಿಸುತ್ತಿರುವ ಬಿಗಿ ಹಿಡಿತದ ಬಗ್ಗೆ ನಡೆಸಿರುವ ಪರಿಶೀಲನೆಯನ್ನೂ ಕುರಿತು ಪ್ರಸ್ತಾಪಿಸಿದ್ದಾರೆ.

ಅದೇ ಹೊತ್ತಿಗೆ ಜಗತ್ತಿನಲ್ಲಿ ಸಕಾರಾತ್ಮಕವಾಗಿ ಆಗುತ್ತಿರುವ ಬದಲಾವಣೆಗಳನ್ನೂ, ಒಳ್ಳೆಯ ವಿಷಯಗಳನ್ನೂ ಅವರು ದಾಖಲಿಸುತ್ತಾರೆ. ಅದೇನೆಂದರೆ, ಕಳೆದ ಕೆಲವು ವರ್ಷಗಳಲ್ಲಿ ಹಲವು ಸರ್ಕಾರಗಳು ಅತ್ಯಂತ ಸಮಸ್ಯಾತ್ಮಕವಾದ ಕ್ಷೇತ್ರಗಳನ್ನು ಸರಿಪಡಿಸಲು ಮುಂದಾಗಿವೆ. ಲ್ಯಾಟಿನ್ ಅಮೇರಿಕಾ ಮತ್ತು ಕೆರೀಬಿಯನ್ ಸೇರಿದಂತೆ 22 ದೇಶಗಳು ಮಹಿಳೆಯರ ಸುರಕ್ಷತೆಗಾಗಿ ಸುಧಾರಣೆಗಳನ್ನು ಜಾರಿಗೊಳಿಸಿವೆ. ಬೆಲೀಜ್, ಬೊಲಿವಿಯಾ ಮತ್ತು ಜಾಂಬಿಯಾ ಸೇರಿದಂತೆ ಆರು ದೇಶಗಳು ವಿವಾಹದ ಕನಿಷ್ಠ ವಯಸ್ಸನ್ನು ಹೆಚ್ಚಿಸುವ ಮೂಲಕ ಬಾಲ್ಯವಿವಾಹ ತಡೆಗೆ ಕ್ರಮ ಕೈಗೊಂಡಿವೆ. ಅರ್ಜೆಂಟೀನ, ಬ್ರೆಜಿಲ್, ಮಾಲಿ, ಸ್ಯಾನ್ ಮರಿನೊ, ಶ್ರೀಲಂಕಾ ಮತ್ತು ಯುನೈಟೆಡ್ ಕಿಂಗ್‌ಡಂ ಸೇರಿದಂತೆ ಏಳು ದೇಶಗಳು ಸೈಬರ್ ಕಿರುಕುಳದ ವಿರುದ್ಧ ಕಾನೂನುಗಳನ್ನು ಜಾರಿಗೊಳಿಸಿವೆ ಅಥವಾ ಬಲಪಡಿಸಿವೆ.

ಉದ್ಯಮಶೀಲತೆಯಲ್ಲೂ ಪ್ರಗತಿಯಾಗಿದ್ದು, 19 ದೇಶಗಳಲ್ಲಿ 21 ಸುಧಾರಣೆಗಳಾಗಿವೆ. ಸುರಿನಾಮ್‌ನಲ್ಲಿ ಮಹಿಳೆಯರು ಪುರುಷರಂತೆಯೇ ವ್ಯವಹಾರ ನೋಂದಾಯಿಸಲು ಟ್ರೇಡ್ ರಿಜಿಸ್ಟರ್ ಕಾನೂನು ಅವಕಾಶ ನೀಡಿದೆ. ಇದರಿಂದ ಬಹಳ ವರ್ಷಗಳಿಂದ ಇದ್ದ ರಚನಾತ್ಮಕ ಅಡ್ಡಿಯನ್ನು ನಿವಾರಿಸಲಾಗಿದೆ. "ಎಕ್ವೆಡಾರ್‌ನ ಮಹಿಳಾ ಉದ್ಯಮಿಗಳ ಆರ್ಥಿಕತೆಯನ್ನು ಉತ್ತೇಜಿಸುವ ಎಕ್ವೆಡಾರ್‌ನ ಸಾವಯವ ಕಾನೂನು, ಸಾಲದ ಮೌಲ್ಯಮಾಪನದಲ್ಲಿ ಲಿಂಗಾಧಾರಿತ ತಾರತಮ್ಯವನ್ನು ನಿಷೇಧಿಸುತ್ತದೆ, ಮೇಲ್ವಿಚಾರಣೆಯನ್ನು ಹೆಚ್ಚಿಸಿದೆ, ಮತ್ತು ನಿಯಮ ಉಲ್ಲಂಘಿಸುವವರ ವಿರುದ್ಧ ದಂಡನೆಯ ಕ್ರಮಗಳನ್ನು ಜಾರಿಗೆ ತಂದಿದೆ. ಹದಿಮೂರು ಆರ್ಥಿಕತೆಗಳು ಕಾರ್ಪೊರೇಟ್ ಬೋರ್ಡುಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಬಲಪಡಿಸಿವೆ. ಆದರೆ ಒಟ್ಟಾರೆಯಾಗಿ ಕಾನೂನುಗಳು ಮತ್ತು ಸುಧಾರಣೆಗಳ ಜಾರಿಗೊಳಿಸುವಿಕೆ ಅಸಮವಾಗಿವೆ.

ಮಹಿಳೆ, ಉದ್ಯೋಗ, ಸಮಾನತೆ, ಬೆಳವಣಿಗೆ ಇವುಗಳಿಗೆ ಸಂಬಂಧಿಸಿದಂತೆ ಸರ್ಕಾರಗಳ ಮುಂದಿರುವ ಬಹುಮುಖ್ಯ ಸವಾಲನ್ನು ಈ ಸಂದರ್ಭದಲ್ಲಿ ಲೇಖಕರು ಮುನ್ನೆಲೆಗೆ ತರುತ್ತಾರೆ. "ಹೆಚ್ಚಿನ ಉದ್ಯೋಗ ಮತ್ತು ಬೆಳವಣಿಗೆಯನ್ನು ಬಯಸುವ ಸರ್ಕಾರಗಳ ಮುಂದಿರುವ ಪ್ರಶ್ನೆ ಮಹಿಳೆಯರ ಅವಕಾಶಗಳಿಗೆ ಸಂಬಂಧಿಸಿದಂತೆ ಇರುವ ಅಂತರವನ್ನು ಸರಿಪಡಿಸಲು ನಮ್ಮಿಂದ ಸಾಧ್ಯವೇ, ಎನ್ನುವುದಲ್ಲ. ಬದಲಾಗಿ ಅವರಿಗೆ ಸಮಾನ ಅವಕಾಶ ನೀಡದಿದ್ದರೆ ಉಂಟಾಗುವ ನಷ್ಟವನ್ನು ಭರಿಸಲು ನಮ್ಮಿಂದ ಸಾಧ್ಯವೇ, ಎನ್ನುವುದು. ಮಹಿಳೆಯರನ್ನು ಸಶಕ್ತಗೊಳಿಸುವ ಕಾನೂನುಗಳನ್ನು ವ್ಯವಸ್ಥಿತ ಬದಲಾವಣೆ ಮತ್ತು ಕಟ್ಟುನಿಟ್ಟಿನ ಜಾರಿ ವ್ಯವಸ್ಥೆ, ಸಾರ್ವಜನಿಕ ವರದಿ ಇವುಗಳೊಂದಿಗೆ ಒಟ್ಟುಗೂಡಿಸಿದಾಗ ಮಾತ್ರ ಲಿಂಗಸಮಾನತೆಯು ಗಣನೀಯವಾದ ಆರ್ಥಿಕ ಲಾಭಗಳನ್ನು ನೀಡುತ್ತದೆ ಎಂಬುದನ್ನು ಸಾಬೀತುಪಡಿಸಬಹುದು," ಎನ್ನುತ್ತಾರೆ.

ಕನ್ನಡ ರೂಪ: ಶೈಲಜ

ಇಂದರ್ಮಿತ್ ಗಿಲ್: ವಿಶ್ವಬ್ಯಾಂಕ್‌ನ ಡೆವಲಪ್‌ಮೆಂಟ್ ಅರ್ಥಶಾಸ್ತ್ರದ ಹಿರಿಯ ಉಪಾಧ್ಯಕ್ಷರು ಮತ್ತು ಮುಖ್ಯ ಅರ್ಥಶಾಸ್ತ್ರಜ್ಞರು

ಟೀ ಟ್ರಂಬಿಕ್ : ವಿಶ್ವಬ್ಯಾಂಕಿನ ಮಹಿಳೆ, ವಾಣಿಜ್ಯ ಮತ್ತು ಕಾನೂನು ಪ್ರಾಜೆಕ್ಟ್‌ನ ಮುಖ್ಯಸ್ಥರು

ಬಜೆಟ್ – ದೂರ, ಬಹು ದೂರ – ಜನರ ಕಲ್ಯಾಣದಿಂದ

ಭಾರತದ ಆರ್ಥಿಕತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಕೆಲವಕ್ಕೆ ಜಾಗತಿಕ ಬೆಳವಣಿಗೆಗಳು ಕಾರಣವಾದರೆ, ಇನ್ನೊಂದಿಷ್ಟಕ್ಕೆ ಆಂತರಿಕ ಪರಿಸ್ಥಿತಿ ಕಾರಣ. ಟ್ರಂಪ್ ಕಾರಣಕ್ಕೋ ಅಥವಾ ಜಾಗತಿಕ ರಾಜಕೀಯ ಪರಿಸ್ಥಿತಿಯಿಂದಾಗಿಯೋ ಜಾಗತಿಕ ಆರ್ಥಿಕತೆ ಗೊಂದಲದಲ್ಲಿದೆ. ಭಾರತಕ್ಕೆ ಹರಿದು ಬರುತ್ತಿರುವ ವಿದೇಶಿ ಬಂಡವಾಳ ಕಡಿಮೆಯಾಗುತ್ತಿದೆ. ಭಾರತೀಯ ಬಂಡವಾಳಿಗರು ಸೇರಿದಂತೆ ಹೆಚ್ಚಿನ ಬಂಡವಾಳಿಗರಿಗೆ ದೇಶದ ಆರ್ಥಿಕತೆಯ ಬಗ್ಗೆ ನಂಬಿಕೆ ಕಡಿಮೆಯಾಗಿದೆ. ಪಾವತಿ ಸಮತೋಲನ (ಬ್ಯಾಲೆನ್ಸ್ ಆಫ್ ಪೇಮೆಂಟ್) ಆಯತಪ್ಪಿದೆ. ಡಾಲರ್ ಎದುರು ರೂಪಾಯಿ ಕುಸಿಯುತ್ತಿದೆ. ಅಸಮಾನತೆ ತೀವ್ರವಾಗಿದೆ. ನಿರುದ್ಯೋಗ ವಿಪರೀತವಾಗಿದೆ. ಬಹುತೇಕ ಜನರಲ್ಲಿ ಕೊಳ್ಳುವ ಶಕ್ತಿ ಸೊರಗುತ್ತಿದೆ. ಬೇಡಿಕೆ ಕಡಿಮೆಯಾಗಿದೆ. ಸಹಜವಾಗಿಯೇ ಭಾರತದ ಹಾಗೂ ವಿದೇಶಿ ಬಂಡವಾಳಿಗರು ಹೂಡಿಕೆಗೆ ಬೇರೆ ದೇಶಗಳನ್ನು ಹುಡುಕಿಕೊಂಡು ಹೊರಟಿದ್ದಾರೆ. ಹೂಡಿಕೆಯ ಕೊರತೆಯನ್ನು ಸರ್ಕಾರ ತುಂಬಬೇಕಾಗಿದೆ. ಉತ್ಪಾದನಾ ವಲಯದಲ್ಲಿ ಚೇತರಿಕೆ ಕಾಣಿಸುತ್ತಿಲ್ಲ. ಇವೆಲ್ಲವೂ ಸರ್ಕಾರಕ್ಕೆ ಗೊತ್ತಿದೆ. ಈ ವರ್ಷದ ಆರ್ಥಿಕ ಸಮೀಕ್ಷೆಯೂ ಇವುಗಳನ್ನು ಗಮನಿಸಿದೆ.
ಆದರೆ ನಮ್ಮ ವಿತ್ತ ಮಂತ್ರಿಗಳು ಈ ಕುರಿತು ದಿವ್ಯ ನಿರ್ಲಕ್ಷ್ಯ ತೋರಿದ್ದಾರೆ. ಭಾರತ ಸುಸ್ಥಿತಿಯಲ್ಲಿದೆ ಎನ್ನುವ ಭ್ರಮೆಯನ್ನೇ ಸ್ಥಾಪಿಸ ಹೊರಟಿದ್ದಾರೆ. ಈ ವರ್ಷದ ಬಜೆಟ್ ಪ್ರಸ್ತಾವನೆಯೂ ಆ ಕಥೆಯನ್ನು ಹೇಳಿಕೊಂಡೇ ಪ್ರಾರಂಭವಾಗುತ್ತದೆ. ಈ ಹಣಕಾಸು ವರ್ಷದಲ್ಲಿ ಜಿಡಿಪಿ 7.4% ರಷ್ಟು ಏರುತ್ತಿದೆ, ಹಣದುಬ್ಬರ ಶೇಕಡಾ 2ರಷ್ಟಿದೆ, ಬೆಲೆ ಏರಿಕೆಯ ಬಗ್ಗೆ ಜನಕ್ಕೆ ಆತಂಕ ಬೇಕಾಗಿಲ್ಲ, ನಿರುದ್ಯೋಗ ಕಡಿಮೆಯಾಗಿದೆ, ಕೋಟ್ಯಂತರ ಜನ ಬಡತನ ರೇಖೆಯನ್ನು ದಾಟಿ ಬಂದಿದ್ದಾರೆ, ಸ್ವಲ್ಪವೇ ದೂರದಲ್ಲಿ ವಿಕಸಿತ್ ಭಾರತ ಇದೆ ಅಂತ ನಿರ್ಮಲ ಮೇಡಂ ಹೇಳುತ್ತಿದ್ದಾರೆ.

ನಮ್ಮ ನಿಜವಾದ ಜಿಡಿಪಿ ಎಷ್ಟು ಎನ್ನುವುದರ ಬಗ್ಗೆ ಸಾಕಷ್ಟು ವಿವಾದ ಇದೆ. ಅರವಿಂದ್ ಸುಬ್ರಮಣಿಯನ್ ಅಂತಹವರು ಸರ್ಕಾರದ ಲೆಕ್ಕಾಚಾರ ಕನಿಷ್ಠ ಶೇಕಡಾ 3.5 ರಷ್ಟು ಹೆಚ್ಚಿದೆ ಎಂದು ಅಂದಾಜು ಮಾಡಿದ್ದಾರೆ. ನಮ್ಮ ನಾಮಿನಲ್ ಜಿಡಿಪಿಯನ್ನು (ಅಂದರೆ ದೇಶದ ಆರ್ಥಿಕತೆಯಲ್ಲಿ ನಡೆಯುವ ಒಟ್ಟು ವ್ಯವಹಾರಗಳ ರೂಪಾಯಿ ಮೌಲ್ಯ) 8% ಎನ್ನುವುದನ್ನು ಒಪ್ಪಿಕೊಂಡು, ಅದರಲ್ಲಿ ಹಣದುಬ್ಬರದ ದರವನ್ನು ಕಳೆದು ನಮ್ಮ ನೈಜ ಜಿಡಿಪಿ ದರ ಲೆಕ್ಕ ಹಾಕಿದರೆ ಅದು ತುಂಬಾ ಕಡಿಮೆಯಾಗಿಬಿಡುತ್ತದೆ. ಸರ್ಕಾರದ ಕಂದಾಯ ಸಂಗ್ರಹಣೆ ನಾಮಿನಲ್ ಜಿಡಿಪಿಯನ್ನು ಆಧರಿಸಿರುತ್ತದೆ. ಜನರ ಸಂಪಾದನೆ ಹೆಚ್ಚಾದರೆ, ಆರ್ಥಿಕ ಚಟುವಟಿಕೆಗಳು ಚೆನ್ನಾಗಿ ನಡೆದರೆ, ಸರ್ಕಾರದ ತೆರಿಗೆ ಸಂಗ್ರಹಣೆ ಹೆಚ್ಚುತ್ತದೆ. ಅದು ಕಡಿಮೆಯಾದರೆ ತೆರಿಗೆಯೂ ಕಡಿಮೆಯಾಗುತ್ತದೆ. ಆರ್ಥಿಕ ಅಭಿವೃದ್ಧಿ ಕುಸಿದರೆ ಕಲ್ಯಾಣ ಕಾರ್ಯಕ್ರಮಗಳಿಗೂ ಹಣ ಹೊಂದಿಸುವುದಕ್ಕೆ ಸರ್ಕಾರಕ್ಕೆ ಕಷ್ಟವಾಗುತ್ತದೆ. ಸಾಲ ಕೂಡ ಜಿಡಿಪಿಯ ನಿರ್ದಿಷ್ಟ ಪ್ರಮಾಣವನ್ನು ಮೀರದಂತೆ ನೋಡಿಕೊಳ್ಳುತ್ತೇವೆ ಅಂತ ಒಪ್ಪಿಕೊಂಡಿದ್ದೇವೆ. ಹಾಗಾಗಿ ಇಷ್ಟ ಬಂದ ಹಾಗೆ ಸಾಲ ಮಾಡುವುದಕ್ಕೆ ಆಗುವುದಿಲ್ಲ. ಜೊತೆಗೆ ವಿತ್ತೀಯ ಕೊರತೆಯನ್ನು ಶೇಕಡಾ 3ಕ್ಕೆ ಇಳಿಸುವುದಕ್ಕೂ ಬದ್ಧರಾಗಿದ್ದೇವೆ. ಈಗ ಅದು ಶೇಕಡಾ 4.5% ಇದೆ. ಅದನ್ನು ಇಳಿಸಬೇಕಾದರೆ ಖರ್ಚನ್ನು ತಗ್ಗಿಸಿಕೊಳ್ಳುವುದು ಅನಿವಾರ್ಯ.

'ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ' ಅಂದರೆ ಆರ್ಥಿಕತೆಯಲ್ಲಿ ಸರ್ಕಾರ ತನ್ನ ಭಾಗವಹಿಸುವಿಕೆಯನ್ನು ಕಡಿಮೆ ಮಾಡಿಕೊಂಡು ದೇಶದ ಬೆಳವಣಿಗೆಯ ಹಾದಿಯನ್ನು ರೂಪಿಸುವುದಕ್ಕೆ ಖಾಸಗಿಯವರಿಗೆ ಅವಕಾಶ ಮಾಡಿಕೊಡಲಾಗುತ್ತದೆ ಅಂತ ಸರ್ಕಾರ ಘೋಷಿಸಿ ದಶಕಗಳೇ ಆಗಿವೆ. ಖಾಸಗಿ ಬಂಡವಾಳಿಗರನ್ನು ಉತ್ತೇಜಿಸುವುದಕ್ಕೆ ಕಾರ್ಪೊರೇಟ್ ತೆರಿಗೆಯಲ್ಲಿ ಕಡಿತ ಮಾಡಲಾಯಿತು, ಪಿಎಲ್ಐ (ಉತ್ಪಾದನೆ ಆಧಾರಿತ ಉತ್ತೇಜನ) ಅಂತಹ ಯೋಜನೆಗಳನ್ನು ತರಲಾಯಿತು. ಜಿಎಸ್‌ಟಿ ಸುಧಾರಿಸಲಾಯಿತು. ಮೂಲಸೌಕರ್ಯ ಹೆಚ್ಚಿಸುವುದಕ್ಕೆ ಹಣ ತೊಡಗಿಸಲಾಯಿತು. ಆದರೂ ಖಾಸಗಿಯವರಿಗೆ ಬಂಡವಾಳ ತೊಡಗಿಸುವುದಕ್ಕೆ ಉತ್ಸಾಹ ಬರುತ್ತಿಲ್ಲ. ಬಂಡವಾಳ ಹೂಡಿಕೆ ಅವರಿಂದ ಆಗುತ್ತಿಲ್ಲ. ಬೇಡಿಕೆಯ ಕೊರತೆ ಅದಕ್ಕೆ ಬಹುಮುಖ್ಯ ಕಾರಣ. ಜೊತೆಗೆ ಜಾಗತಿಕ ಆರ್ಥಿಕತೆಯಲ್ಲಿ ಅನಿಶ್ಚಿತತೆ ಇದೆ. ವಿದೇಶಿ ನೇರ ಹೂಡಿಕೆ, ರಫ್ತು ಇವೆಲ್ಲವನ್ನೂ ನೆಚ್ಚಿಕೊಂಡು ನಮ್ಮ ಆರ್ಥಿಕತೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆಂತರಿಕ ಮಾರುಕಟ್ಟೆಯನ್ನು ಬೆಳೆಸಬೇಕು. ಖಾಸಗಿಯವರು ಹೂಡಿಕೆ ಮಾಡುತ್ತಿಲ್ಲ, ಹಾಗಾಗಿ ಸರ್ಕಾರಕ್ಕೆ ಬೇರೆ ದಾರಿಯೇ ಇಲ್ಲ; ತಾನೇ ಬಂಡವಾಳ ಹೂಡಬೇಕು. ಸರ್ಕಾರ ಪ್ರಾರಂಭದಲ್ಲಿ ಹೆಚ್ಚಾಗಿಯೇ ಹೂಡಿಕೆ ಮಾಡಿತು, ಈಗಲೂ ಮಾಡುತ್ತಿದೆ. ಆದರೆ ಸರ್ಕಾರದ ವೆಚ್ಚ ಒಟ್ಟು ಮೊತ್ತದಲ್ಲಿ ಹೆಚ್ಚಾಗುತ್ತಿದ್ದರೂ, ಜಿಡಿಪಿಗೆ ಹೋಲಿಸಿದರೆ ಕ್ರಮೇಣ ಕಡಿಮೆಯಾಗುತ್ತಿದೆ. 2024–25ರಲ್ಲಿ ಬಜೆಟ್ಟಿನ ಒಟ್ಟು ವೆಚ್ಚ ಜಿಡಿಪಿಯ 14.3% ಇತ್ತು. 25–26ರಲ್ಲಿ ಅದು 14.2% ಆಯಿತು. ಈ ವರ್ಷ ಅದು 13.6% ಆಗಿದೆ. ಅಂದರೆ ಅದು ಕಡಿಮೆಯಾಗುತ್ತಿದೆ.

ಸರ್ಕಾರ ಪ್ರತಿ ವರ್ಷ ತನ್ನ ಒಟ್ಟು ಖರ್ಚಿನಲ್ಲಿ ರೆವೆನ್ಯೂ ಖರ್ಚನ್ನು ಅಂದರೆ ಸಂಬಳ, ಪಿಂಚಣಿ ಇತ್ಯಾದಿ ತನ್ನ ದೈನಂದಿನ ಖರ್ಚನ್ನು ಕಡಿಮೆ ಮಾಡಿಕೊಳ್ಳುತ್ತಿದೆ. ರಸ್ತೆ, ಬ್ರಿಡ್ಜ್ ಇತ್ಯಾದಿ ದೀರ್ಘಕಾಲೀನ ಉತ್ಪಾದಕ ಸ್ವತ್ತುಗಳ ನಿರ್ಮಾಣಕ್ಕೆ ಹೆಚ್ಚೆಚ್ಚು ಹಣ ಹೂಡತೊಡಗಿದೆ. 2014–15ರಲ್ಲಿ ರೆವೆನ್ಯೂ ವೆಚ್ಚ ಒಟ್ಟು ಬಜೆಟ್ಟಿನ ಶೇಕಡಾ 88 ರಷ್ಟಿತ್ತು. 2026–27ರಲ್ಲಿ ಅದು 77% ಗೆ ಇಳಿದಿದೆ. ಈ 11% ಇಳಿತದಲ್ಲಿ ಸಬ್ಸಿಡಿಯ ಖರ್ಚಿನಲ್ಲಿ ಅತಿ ಹೆಚ್ಚು ಅಂದರೆ 7% ಕಡಿತವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಬಂಡವಾಳ ಖರ್ಚು 13% ಇದ್ದುದು 23% ಆಗಿದೆ. ಆದರೆ ಅದರ ಏರುತ್ತಿರುವ ಪ್ರಮಾಣವೂ ವರ್ಷದಿಂದ ವರ್ಷಕ್ಕೆ ತಗ್ಗುತ್ತಿದೆ. 2023–24ರಲ್ಲಿ 28.3% ರಷ್ಟು ಏರಿಕೆಯಾಗಿತ್ತು. ಕಳೆದ ವರ್ಷ ಏರಿಕೆಯಾಗಿದ್ದು ಕೇವಲ 4.2%. ಆದರೆ ಬಜೆಟ್ಟಿನ ಅಂದಾಜಿನ ಪ್ರಕಾರ 10.5% ಇರಬೇಕಿತ್ತು. ಈ ವರ್ಷ ಅದು 11.5% ಏರಿಕೆಯಾಗುತ್ತದೆ ಎನ್ನುವ ಅಂದಾಜಿದೆ. ಹಿಂದಿನ ವರ್ಷಗಳಂತೆಯೇ ಈ ವರ್ಷವೂ ಆದರೆ ಅಂತಿಮವಾಗಿ ಅದು 5% ರಿಂದ 6% ರಷ್ಟಾಗಬಹುದು.

ಬಂಡವಾಳ ವೆಚ್ಚವನ್ನು ಹೆಚ್ಚಿಸಿದರೆ ಅಂದರೆ ಮೂಲಸೌಕರ್ಯ ಒದಗಿಸಿದರೆ ಖಾಸಗಿಯವರು ಹೂಡಿಕೆ ಮಾಡಲು ಮುಂದೆ ಬರುತ್ತಾರೆ ಎನ್ನುವುದು ಸಾಮಾನ್ಯ ನಂಬಿಕೆ. ಆದರೆ ಹಾಗೆ ಆಗುತ್ತಿಲ್ಲ. ಖಾಸಗಿ ವಲಯದವರು ಹೂಡಿಕೆ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಬಂಡವಾಳ ತೊಡಗಿಸುವುದಕ್ಕೆ ಅವರ ಸರಕುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿರಬೇಕು. ಆದರೆ ನಮ್ಮ ಆರ್ಥಿಕತೆಯಲ್ಲಿ ಬೇಡಿಕೆ ಹೆಚ್ಚುತ್ತಿಲ್ಲ. ನಿರುದ್ಯೋಗ, ನೈಜ ಕೂಲಿಯ ಇಳಿತ ಇತ್ಯಾದಿ ಅಂಶಗಳು ಸೇರಿಕೊಂಡು ಜನರ ಕೊಳ್ಳುವ ಶಕ್ತಿಯನ್ನು ಅಂದರೆ ಬೇಡಿಕೆಯನ್ನು ಕುಗ್ಗಿಸಿವೆ. ಜನರಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬಹುದು ಅಂದುಕೊಂಡು ವರಮಾನ ತೆರಿಗೆ ಮಿತಿಯನ್ನು 7 ಲಕ್ಷದಿಂದ 12 ಲಕ್ಷಕ್ಕೆ ಏರಿಸಲಾಗಿತ್ತು. ಆದರೆ ಇಂತಹ ಕಾರ್ಯಕ್ರಮಗಳಿಂದ ಅನುಕೂಲವಾಗುವುದು ಮೇಲಿನ ಶೇಕಡಾ 7 ರಿಂದ 8% ಜನರಿಗೆ ಮಾತ್ರ. ನಿಜವಾಗಿ ಬೇಡಿಕೆ ಏರಬೇಕಾದರೆ ಸಾಮಾನ್ಯ ಜನರ ಕೊಳ್ಳುವ ಶಕ್ತಿ ಹೆಚ್ಚಬೇಕು, ಅಸಂಘಟಿತ ವಲಯ ಬಲಗೊಳ್ಳಬೇಕು.

ಇದು ಖರ್ಚಿನ ಕಥೆಯಾಯಿತು. ಇನ್ನು ಖರ್ಚಿಗೆ ಬೇಕಾದ ಹಣವನ್ನು ಒಟ್ಟು ಮಾಡುವ ಕೆಲಸ. ತೆರಿಗೆ ಸಂಗ್ರಹಣೆಯೂ ನಿರೀಕ್ಷಿತ ಪ್ರಮಾಣದಲ್ಲಿ ಆಗುತ್ತಿಲ್ಲ. ಕಳೆದ ವರ್ಷ ಬಜೆಟ್ ಅಂದಾಜಿಗಿಂತ ಸುಮಾರು 120 ಸಾವಿರ ಕೋಟಿಯಷ್ಟು ಕಡಿಮೆ ಸಂಗ್ರಹವಾಗಿತ್ತು. ಜಿಎಸ್‌ಟಿ ಸಂಗ್ರಹವೂ ಸಂಭ್ರಮ ಪಡುವ ಸ್ಥಿತಿಯಲ್ಲಿಲ್ಲ. ಪ್ರತಿ ವರ್ಷ ಹೆಚ್ಚುತ್ತಿದೆ, ಆದರೆ ಹೆಚ್ಚಳದ ಪ್ರಮಾಣ ಕಡಿಮೆಯಾಗುತ್ತಿದೆ. 2026ರಲ್ಲಿ ಜಿಎಸ್‌ಟಿ ಹಿಂದಿನ ವರ್ಷಕ್ಕಿಂತ 22.1 ಲಕ್ಷ ಕೋಟಿಯಷ್ಟು ಹೆಚ್ಚು ಸಂಗ್ರಹವಾಗಿತ್ತು. 2024ರಲ್ಲಿ 2023ಕ್ಕಿಂತ 11.7% ರಷ್ಟು ಹೆಚ್ಚು ಸಂಗ್ರಹವಾಗಿತ್ತು. 2025ರಲ್ಲಿ ಅದು 9.1% ಆಗಿತ್ತು. 2026ರಲ್ಲಿ ಅದು 6.7% ಆಗಿದೆ. ಅಂದರೆ ಜಿಎಸ್‌ಟಿ ಸಂಗ್ರಹದ ಏರಿಕೆಯೂ ಸುಮಾರಾಗಿ

ಜಿಡಿಪಿಯಷ್ಟೇ ಆಗುತ್ತಿದೆ. ಅಂದರೆ ಕಂದಾಯ ಹೆಚ್ಚಿನ ವಿತ್ತೀಯ ಅವಕಾಶವನ್ನು ಸರ್ಕಾರಕ್ಕೆ ನೀಡುತ್ತಿಲ್ಲ.

ಸಂಗ್ರಹ ಕಡಿಮೆಯಾದರೆ ಸರ್ಕಾರ ಖರ್ಚು ಕಡಿಮೆ ಮಾಡುತ್ತದೆ. ಅದರ ಹೊಡೆತ ಬೀಳುವುದು ಅಂತಿಮವಾಗಿ ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ಗ್ರಾಮೀಣ ಬೆಳವಣಿಗೆ ಇತ್ಯಾದಿ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ. ಕಳೆದ ವರ್ಷವೂ ಇದೇ ಆಗಿತ್ತು. 2025–26ರ ಬಜೆಟ್ಟಿನಲ್ಲಿ ಗ್ರಾಮೀಣ ಅಭಿವೃದ್ಧಿಗೆ 2.65 ಲಕ್ಷ ಕೋಟಿ ಘೋಷಿಸಲಾಗಿತ್ತು, ಆದರೆ ಖರ್ಚಾಗಿದ್ದುದು 2.12 ಲಕ್ಷ ಕೋಟಿ. ಅಂದರೆ 20% ಕಡಿತ ಮಾಡಲಾಗಿತ್ತು. ಜಲ ಜೀವನ್ ಯೋಜನೆಗೆ 67,000 ಕೋಟಿ ಅಂದಾಜಿತ್ತು, ಆದರೆ ನಿಜವಾಗಿ ಖರ್ಚು ಮಾಡಿದ್ದು ಕೇವಲ 17,000 ಕೋಟಿ. ಈ ವರ್ಷವೂ ಅದೇ ಆಗುತ್ತಿದೆ.

ನಮ್ಮಲ್ಲಿ ಕೃಷಿ ತುಂಬಾ ಮುಖ್ಯವಾದ ಕ್ಷೇತ್ರ. ಬಡವರು ಅಲ್ಲಿ ಹೆಚ್ಚಿಗೆ ಇದ್ದಾರೆ. ಅದು ಅತಿ ಹೆಚ್ಚು ಉದ್ಯೋಗವನ್ನು ಸೃಷ್ಟಿಸುತ್ತಿರುವ ಕ್ಷೇತ್ರ. ಇಂದು ಜಿಡಿಪಿ ಉತ್ತಮವಾಗಿ ಕಾಣುವುದಕ್ಕೆ, ಹಣದುಬ್ಬರ ನಿಯಂತ್ರಣದಲ್ಲಿರುವಂತೆ ತೋರುವುದಕ್ಕೆ ಕಾರಣ ಕೃಷಿಯಲ್ಲಿ ಉತ್ತಮ ಫಸಲು ಬಂದಿರುವುದು ಹಾಗೂ ರೈತರು ಕನಿಷ್ಠ ಬೆಲೆಗಿಂತ ಕಡಿಮೆ ಬೆಲೆಗೆ ಮಾರಿ ಸಂಕಷ್ಟದಲ್ಲಿರುವುದು. ಕೃಷಿ ಕ್ಷೇತ್ರವನ್ನು ಇಂದು ಹೆಚ್ಚೆಚ್ಚು ಜನ ಉದ್ಯೋಗಕ್ಕಾಗಿ ಆಶ್ರಯಿಸುತ್ತಿದ್ದಾರೆ ಅಂದರೆ ಕೃಷಿಯೇತರ ಕ್ಷೇತ್ರಗಳು ದುರ್ಬಲವಾಗಿವೆ ಎಂದೇ ಅರ್ಥ. ಆರ್ಥಿಕತೆಗೆ ಬೆನ್ನೆಲುಬಾಗಿರುವ ಕೃಷಿ ಸಂಕಷ್ಟದಲ್ಲಿರುವ ಕ್ಷೇತ್ರವೂ ಹೌದು. ಕೃಷಿಗೆ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಕೇವಲ ಶೇಕಡಾ 2ರಿಂದ 3ರಷ್ಟು ಮೊತ್ತವನ್ನು ಹೆಚ್ಚಿಸಲಾಗಿದೆ. ಹಣದುಬ್ಬರದ ದರವನ್ನು ಗಣನೆಗೆ ತೆಗೆದುಕೊಂಡರೆ ಇದು ಕಡಿತವೆಂದೇ ಹೇಳಬೇಕು.

ಈ ವರ್ಷ ಮನರೇಗಾಕ್ಕೆ 95,692 ಕೋಟಿ ಘೋಷಿಸಿದ್ದಾರೆ. ಈಗ ಮನರೇಗಾ ಇಲ್ಲ, ಬದಲಿಗೆ ವಿಬಿ ಜಿ ರಾಂ ಜಿ ತರಲಾಗಿದೆ. ಹಣಕಾಸು ಸಚಿವರು ತಮ್ಮ 90 ನಿಮಿಷಗಳ ಬಜೆಟ್ ಭಾಷಣದಲ್ಲಿ ಇದರ ಹೆಸರನ್ನು ಒಮ್ಮೆಯೂ ಉಲ್ಲೇಖಿಸಲಿಲ್ಲ. 125 ದಿನಗಳ ಕೆಲಸ ನೀಡಲು ಕನಿಷ್ಠ 3.84 ಲಕ್ಷ ಕೋಟಿ ಬೇಕಾಗುತ್ತದೆ. ಕೇಂದ್ರದ ಪಾಲು 60% ಅಂದರೆ ಬಜೆಟ್ಟಿನಲ್ಲಿ 2.3 ಲಕ್ಷ ಕೋಟಿ ರೂಪಾಯಿ ಇಡಬೇಕಿತ್ತು. ಆದರೆ ಈಗ ನಿಗದಿ ಮಾಡಿರುವ ಹಣದಿಂದ ವರ್ಷಕ್ಕೆ ಕೇವಲ 52 ದಿನಗಳ ಕೆಲಸವನ್ನು ನೀಡಬಹುದು. ಅಷ್ಟೇ ಅಲ್ಲ, ರಾಜ್ಯ ಸರ್ಕಾರಗಳು ಶೇಕಡಾ 40 ರಷ್ಟು ಖರ್ಚನ್ನು ಭರಿಸಬೇಕು. ಬಹುತೇಕ ರಾಜ್ಯಗಳಿಗೆ ಅಷ್ಟು ಹಣ ಹೊಂದಿಸುವುದಕ್ಕೆ ಆಗುವುದಿಲ್ಲ. ಹಾಗಾಗಿ ಇದು ಯಶಸ್ವಿಯಾಗುವುದು ಕಷ್ಟ. ಮನರೇಗಾದಿಂದ ಅದರ ಎಲ್ಲಾ ಮಿತಿಗಳ ನಡುವೆಯೂ ಒಂದಿಷ್ಟು ಒಳ್ಳೆಯ ಕೆಲಸ ಆಗಿತ್ತು. ಕಷ್ಟ ಕಾಲದಲ್ಲಿ ಜನರಿಗೆ ಉದ್ಯೋಗ ಸಿಕ್ಕಿತ್ತು. ಇಷ್ಟೊಂದು ದೊಡ್ಡ ಜನಪರ ಕಲ್ಯಾಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಾಧಿಸಬಹುದು ಎನ್ನುವುದಕ್ಕೆ ಅದು ದೊಡ್ಡ ಪುರಾವೆಯಾಗಿತ್ತು.

ಇನ್ನು ಅತ್ಯಂತ ಪ್ರಮುಖ ಕ್ಷೇತ್ರಗಳಾದ ಶಿಕ್ಷಣ ಹಾಗೂ ಆರೋಗ್ಯದ ಕಥೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಈ ವರ್ಷ ಬಜೆಟ್ಟಿನಲ್ಲಿ ಶಿಕ್ಷಣಕ್ಕೆ 1.39 ಲಕ್ಷ ಕೋಟಿ ಗೊತ್ತು ಮಾಡಲಾಗಿದೆ. ಅದು ಜಿಡಿಪಿಯ ಶೇಕಡಾ 0.35 ರಷ್ಟಾಗುತ್ತದೆ. ಖಾಸಗಿ ಹೂಡಿಕೆಯೂ ಸೇರಿದರೆ 4.5% ರಷ್ಟಾಗುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಅದು ಕನಿಷ್ಠ 6% ಆದರೂ ಇರಬೇಕು. ಜನರ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಶಿಕ್ಷಣ ಹಾಗೂ ಆರೋಗ್ಯ ಎರಡನ್ನೂ ಅನಿವಾರ್ಯವಾಗಿ ಸುಧಾರಿಸಬೇಕು.

ಆರೋಗ್ಯಕ್ಕಾಗಿ ಸರ್ಕಾರ ಮಾಡುತ್ತಿರುವ ಖರ್ಚು ಕೂಡ ತುಂಬಾ ಕಡಿಮೆ. ಅಷ್ಟೇ ಅಲ್ಲ, ಅದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಅದು 2021ರಲ್ಲಿ ಜಿಡಿಪಿಯ 0.37% ಅಷ್ಟಿತ್ತು. ಈ ವರ್ಷದ ಬಜೆಟ್ಟಿನಲ್ಲಿ ಅದು 0.27% ಆಗಿದೆ. ಇನ್ನೂ ಕಡಿಮೆಯಾದರೆ ಆಶ್ಚರ್ಯವಿಲ್ಲ. ಅದರಲ್ಲೂ ಜನಸಾಮಾನ್ಯರಿಗೆ ಅನುಕೂಲವಾಗಬಹುದಾದ ರಾಷ್ಟ್ರೀಯ ಆರೋಗ್ಯ ಮಿಷನ್, ಪ್ರಧಾನಮಂತ್ರಿ ಸ್ವಾಸ್ತ್ಯ ಸುರಕ್ಷಾ ಯೋಜನೆ, ಪೌಷ್ಟಿಕತೆಗೆ ಸಂಬಂಧಿಸಿದ ಯೋಜನೆಗಳು, ಆರೋಗ್ಯ ಸಂಶೋಧನೆ ಇವೆಲ್ಲಕ್ಕೂ ಅನುದಾನದಲ್ಲಿ ಕಡಿತವಾಗಿದೆ. ವಾಣಿಜ್ಯ ಹಿತಾಸಕ್ತಿ ಇರುವ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ, ಡಿಜಿಟಲ್ ಆರೋಗ್ಯ ಮಿಷನ್ ಇವೆಲ್ಲಕ್ಕೂ ಹೆಚ್ಚಿನ ಹಣವನ್ನು ಒದಗಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ಅವುಗಳಿಗೆ ಮೀಸಲಿಟ್ಟಿದ್ದ ಹಣವನ್ನು ಪೂರ್ಣವಾಗಿ ಬಳಸಿಯೂ ಇರಲಿಲ್ಲ. ರಾಷ್ಟ್ರೀಯ ಆರೋಗ್ಯ ಮಿಷನ್‌ಗೆ ಹೆಚ್ಚಿನ ಬೇಡಿಕೆ ಇದೆ. ಆಶಾ ಕಾರ್ಯಕರ್ತೆಯರಿಗೆ ವೇತನವನ್ನು ನೀಡುವುದಕ್ಕೂ ಅದು ಬಳಕೆಯಾಗುತ್ತದೆ. ಅದರಲ್ಲಿ ಕಡಿತ ಮಾಡಲಾಗಿದೆ. ಜನ ಕಲ್ಯಾಣ ಕಾರ್ಯಕ್ರಮಕ್ಕೆ ಸಂಬಂಧಿಸಿದ 18 ಕಾರ್ಯಕ್ರಮಗಳಲ್ಲಿ 17ಕ್ಕೆ ಹಣ ಕಡಿತ ಮಾಡಲಾಗಿದೆ.

ಸರ್ಕಾರದ ಸಮಸ್ಯೆ ಅಂದರೆ ಜನರನ್ನು 'ಖರ್ಚು' ಅಂತ ನೋಡಲಾಗುತ್ತದೆ. ಅವರನ್ನು 'ಆಸ್ತಿ' ಅಂತ ನೋಡಬೇಕು. ಬೇಡಿಕೆ ಸೃಷ್ಟಿಯಾಗುವುದೇ ಅವರಿಂದ. ಅವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಕಡೆ ಗಮನಕೊಡಬೇಕು. ಬೇಡಿಕೆ ಹೆಚ್ಚದಿದ್ದರೆ ಬಂಡವಾಳ ಹೂಡುವುದಕ್ಕೆ ಉತ್ತೇಜನವಿರುವುದಿಲ್ಲ. ಕೇವಲ ತೆರಿಗೆ ಕಡಿತ ಮಾಡಿದರೆ, ರಸ್ತೆಗಳನ್ನು ನಿರ್ಮಿಸಿದರೆ ಹೂಡಿಕೆ ಹೆಚ್ಚುವುದಿಲ್ಲ. ವರಮಾನ ತೆರಿಗೆ ರಿಯಾಯಿತಿಯಂತಹ ಕ್ರಮಗಳು ತಲುಪುವುದು ಕೇವಲ ಮೇಲಿನ ಶೇಕಡಾ 8ರಷ್ಟು ಜನಕ್ಕೆ ಮಾತ್ರ. ವರಮಾನ ತೆರಿಗೆ ಕಟ್ಟುವವರೇ ಅವರು. ಹಣ ಉಳಿದರೆ ಅವರು ಕೊಳ್ಳುವುದು ಆಮದು ಪದಾರ್ಥಗಳನ್ನು. ಅದರಿಂದ ಆಮದು ಹೆಚ್ಚುತ್ತದೆ. ದೇಶದ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಬೇಕಾದರೆ ಸಾಮಾನ್ಯ ಜನರ ಕೊಳ್ಳುವ ಶಕ್ತಿ ಹೆಚ್ಚಬೇಕು, ಅವರ ವರಮಾನ ಹೆಚ್ಚಬೇಕು. ಶಿಕ್ಷಣ ಮತ್ತು ಆರೋಗ್ಯ ಇವೆಲ್ಲವೂ ಕೈಗೆಟುಕುವಂತಾಗಬೇಕು. ಸರ್ಕಾರ ಅದಕ್ಕೆ ಹೆಚ್ಚು ಗಮನಕೊಡಬೇಕು. ಅದನ್ನು ಸರ್ಕಾರ ಮಾಡಿಲ್ಲ.

ಈ ಸರ್ಕಾರದ ಮತ್ತೊಂದು ಸಮಸ್ಯೆ ಅಂದರೆ ಎಲ್ಲವನ್ನೂ ಕೇಂದ್ರೀಕರಿಸುವುದು. ಅಧಿಕಾರ, ಹಣ, ಆಡಳಿತ ಎಲ್ಲವನ್ನೂ ತನ್ನ ಕೈಯಲ್ಲೇ ಇಟ್ಟುಕೊಳ್ಳುವ ಬಯಕೆ. ಬಹುತೇಕ ಯೋಜನೆಗಳನ್ನು ರೂಪಿಸುವುದು ಅದೇ, ಕೊನೆಗೆ ಜಾರಿಗೊಳಿಸುವ ಜವಾಬ್ದಾರಿಯನ್ನು ರಾಜ್ಯಗಳ ಹೆಗಲಿಗೆ ಹಾಕುತ್ತದೆ. ಮನರೇಗಾ ಉದಾಹರಣೆ ಗಮನಿಸಿದರೆ ಕೇಂದ್ರದ ಮನಸ್ಥಿತಿ ತಿಳಿಯುತ್ತದೆ. ಈವರೆಗೆ ಕೂಲಿಯ ಸಂಪೂರ್ಣ ಖರ್ಚನ್ನು ಕೇಂದ್ರ ನೋಡಿಕೊಳ್ಳುತ್ತಿತ್ತು, ಈಗ ರಾಜ್ಯಗಳಿಗೆ 40% ಖರ್ಚನ್ನು ವಹಿಸಿದೆ. ಈವರೆಗೆ ಏನು ಮಾಡಬೇಕು, ಎಲ್ಲಿ ಮಾಡಬೇಕು ಮತ್ತು ಹೇಗೆ ಮಾಡಬೇಕು ಎನ್ನುವುದನ್ನು ರಾಜ್ಯಗಳು ನಿರ್ಧರಿಸುತ್ತಿದ್ದವು, ಈಗ ಕೇಂದ್ರ ನಿರ್ಧರಿಸುತ್ತದೆ. ಈವರೆಗೆ ಉದ್ಯೋಗ ಜನರ ಹಕ್ಕಾಗಿತ್ತು, ಈಗ ಭಿಕ್ಷೆಯಾಗಿದೆ. ಬಹುತೇಕ ಯೋಜನೆಗಳು, ನಿರ್ಧಾರಗಳ ಪರಿಣಾಮ ರಾಜ್ಯಗಳ ಮೇಲೆ ಆಗುತ್ತದೆ. ಆದರೆ ಯಾವುದಕ್ಕೂ ರಾಜ್ಯಗಳೊಂದಿಗೆ ಚರ್ಚಿಸುವುದಿಲ್ಲ. ಕಾರ್ಪೊರೇಟ್ ತೆರಿಗೆ ಕಡಿತ ಮಾಡಿದಾಗ ರಾಜ್ಯಗಳಿಗೂ ತೆರಿಗೆ 40% ಕಡಿಮೆಯಾಗುತ್ತದೆ. ಅದನ್ನು ರಾಜ್ಯಗಳು ಹೊಂದಿಸಿಕೊಳ್ಳಬೇಕು. ಸಾಮಾಜಿಕ ಕಾರ್ಯಕ್ರಮಗಳನ್ನು ಕೇಂದ್ರ ಕಡಿತ ಮಾಡಿದಾಗ ರಾಜ್ಯಗಳೇ ಅವನ್ನು ನಡೆಸಬೇಕಾಗುತ್ತದೆ. ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಹಣ ಕಡಿತ ಮಾಡಿದರೆ ಮತ್ತೆ ರಾಜ್ಯಗಳಿಗೆ ತೊಂದರೆಯಾಗುತ್ತದೆ. ರಾಜ್ಯಗಳಿಗೆ ನಿಭಾಯಿಸುವುದಕ್ಕೆ ಆಗದಿದ್ದರೆ ಅಂತಿಮವಾಗಿ ಜನರಿಗೆ ತೊಂದರೆಯಾಗುತ್ತದೆ. ರಾಜ್ಯಗಳ ಹಾಗೂ ಜನರ ಬೆಳವಣಿಗೆಯಾದರಷ್ಟೇ ರಾಷ್ಟ್ರದ ಬೆಳವಣಿಗೆ ಸಾಧ್ಯ ಎನ್ನುವ ಸರಳ ಸತ್ಯ ಕೇಂದ್ರಕ್ಕೆ ಪಥ್ಯವಾಗುತ್ತಿಲ್ಲ. ಒಂದು ಆರ್ಥಿಕತೆ ಬೆಳೆಯುತ್ತಿದೆ ಅಂದರೆ ಜನರ ನೈಜ ವರಮಾನ ಹೆಚ್ಚಬೇಕು, ಉದ್ಯೋಗ ಹೆಚ್ಚಬೇಕು, ಆರೋಗ್ಯ ಸುಧಾರಿಸಬೇಕು, ರಾಜ್ಯಗಳು ಅಭಿವೃದ್ಧಿಯಾಗಬೇಕು ಮತ್ತು ಗ್ರಾಮಗಳು ಬೆಳೆಯಬೇಕು. ಆದರೆ ಬಜೆಟ್ಟುಗಳು ಪ್ರತಿ ವರ್ಷ ಸಾಮಾನ್ಯರ ಹಿತಾಸಕ್ತಿಯಿಂದ ದೂರ ದೂರ ಸರಿಯುತ್ತಿವೆ.

ಟಿ ಎಸ್ ವೇಣುಗೋಪಾಲ್

ಬಜೆಟ್ – ದೂರ, ಬಹು ದೂರ – ಜನರ ಕಲ್ಯಾಣದಿಂದ

ಭಾರತದ ಆರ್ಥಿಕತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಕೆಲವಕ್ಕೆ ಜಾಗತಿಕ ಬೆಳವಣಿಗೆಗಳು ಕಾರಣವಾದರೆ, ಇನ್ನೊಂದಿಷ್ಟಕ್ಕೆ ಆಂತರಿಕ ಪರಿಸ್ಥಿತಿ ಕಾರಣ. ಟ್ರಂಪ್ ಕಾರಣಕ್ಕೋ ಅಥವಾ ಜಾಗತಿಕ ರಾಜಕೀಯ ಪರಿಸ್ಥಿತಿಯಿಂದಾಗಿಯೋ ಜಾಗತಿಕ ಆರ್ಥಿಕತೆ ಗೊಂದಲದಲ್ಲಿದೆ. ಭಾರತಕ್ಕೆ ಹರಿದು ಬರುತ್ತಿರುವ ವಿದೇಶಿ ಬಂಡವಾಳ ಕಡಿಮೆಯಾಗುತ್ತಿದೆ. ಭಾರತೀಯ ಬಂಡವಾಳಿಗರು ಸೇರಿದಂತೆ ಹೆಚ್ಚಿನ ಬಂಡವಾಳಿಗರಿಗೆ ದೇಶದ ಆರ್ಥಿಕತೆಯ ಬಗ್ಗೆ ನಂಬಿಕೆ ಕಡಿಮೆಯಾಗಿದೆ. ಪಾವತಿ ಸಮತೋಲನ (ಬ್ಯಾಲೆನ್ಸ್ ಆಫ್ ಪೇಮೆಂಟ್) ಆಯತಪ್ಪಿದೆ. ಡಾಲರ್ ಎದುರು ರೂಪಾಯಿ ಕುಸಿಯುತ್ತಿದೆ. ಅಸಮಾನತೆ ತೀವ್ರವಾಗಿದೆ. ನಿರುದ್ಯೋಗ ವಿಪರೀತವಾಗಿದೆ. ಬಹುತೇಕ ಜನರಲ್ಲಿ ಕೊಳ್ಳುವ ಶಕ್ತಿ ಸೊರಗುತ್ತಿದೆ. ಬೇಡಿಕೆ ಕಡಿಮೆಯಾಗಿದೆ. ಸಹಜವಾಗಿಯೇ ಭಾರತ ಹಾಗೂ ವಿದೇಶಿ ಬಂಡವಾಳಿಗರು ಹೂಡಿಕೆಗೆ ಬೇರೆ ದೇಶಗಳನ್ನು ಹುಡುಕಿಕೊಂಡು ಹೊರಟಿದ್ದಾರೆ. ಹೂಡಿಕೆಯ ಕೊರತೆಯನ್ನು ಸರ್ಕಾರ ತುಂಬಬೇಕಾಗಿದೆ. ಉತ್ಪಾದನಾ ವಲಯದಲ್ಲಿ ಚೇತರಿಕೆ ಕಾಣಿಸುತ್ತಿಲ್ಲ. ಇವೆಲ್ಲವೂ ಸರ್ಕಾರಕ್ಕೆ ಗೊತ್ತಿದೆ. ಈ ವರ್ಷದ ಆರ್ಥಿಕ ಸಮೀಕ್ಷೆಯೂ ಇವುಗಳನ್ನು ಗಮನಿಸಿದೆ.

ಆದರೆ ನಮ್ಮ ವಿತ್ತ ಮಂತ್ರಿಗಳು ಈ ಕುರಿತು ದಿವ್ಯ ನಿರ್ಲಕ್ಷ್ಯ ತೋರಿದ್ದಾರೆ. ಭಾರತ ಸುಸ್ಥಿತಿಯಲ್ಲಿದೆ ಎನ್ನುವ ಭ್ರಮೆಯನ್ನೇ ಸ್ಥಾಪಿಸ ಹೊರಟಿದ್ದಾರೆ. ಈ ವರ್ಷದ ಬಜೆಟ್ ಪ್ರಸ್ತಾವನೆಯೂ ಆ ಕಥೆಯನ್ನು ಹೇಳಿಕೊಂಡೇ ಪ್ರಾರಂಭವಾಗುತ್ತದೆ. ಈ ಹಣಕಾಸು ವರ್ಷದಲ್ಲಿ ಜಿಡಿಪಿ 7.4% ರಷ್ಟು ಏರುತ್ತಿದೆ, ಹಣದುಬ್ಬರ ಶೇಕಡಾ 2ರಷ್ಟಿದೆ, ಬೆಲೆ ಏರಿಕೆಯ ಬಗ್ಗೆ ಜನಕ್ಕೆ ಆತಂಕ ಬೇಕಾಗಿಲ್ಲ, ನಿರುದ್ಯೋಗ ಕಡಿಮೆಯಾಗಿದೆ, ಕೋಟ್ಯಂತರ ಜನ ಬಡತನ ರೇಖೆಯನ್ನು ದಾಟಿ ಬಂದಿದ್ದಾರೆ, ಸ್ವಲ್ಪವೇ ದೂರದಲ್ಲಿ ವಿಕಸಿತ್ ಭಾರತ ಇದೆ ಅಂತ ನಿರ್ಮಲ ಮೇಡಂ ಹೇಳುತ್ತಿದ್ದಾರೆ.

ನಮ್ಮ ನಿಜವಾದ ಜಿಡಿಪಿ ಎಷ್ಟು ಎನ್ನುವುದರ ಬಗ್ಗೆ ಸಾಕಷ್ಟು ವಿವಾದ ಇದೆ. ಅರವಿಂದ್ ಸುಬ್ರಮಣಿಯನ್ ಅಂತಹವರು ಸರ್ಕಾರದ ಲೆಕ್ಕಾಚಾರ ಕನಿಷ್ಠ ಶೇಕಡಾ 3.5ರಷ್ಟು ಹೆಚ್ಚಿದೆ ಎಂದು ಅಂದಾಜು ಮಾಡಿದ್ದಾರೆ. ನಮ್ಮ ನಾಮಿನಲ್ ಜಿಡಿಪಿಯನ್ನು (ಅಂದರೆ ದೇಶದ ಆರ್ಥಿಕತೆಯಲ್ಲಿ ನಡೆಯುವ ಒಟ್ಟು ವ್ಯವಹಾರಗಳ ರೂಪಾಯಿ ಮೌಲ್ಯ) 8% ಎನ್ನುವುದನ್ನು ಒಪ್ಪಿಕೊಂಡು, ಅದರಲ್ಲಿ ಹಣದುಬ್ಬರದ ದರವನ್ನು ಕಳೆದು ನಮ್ಮ ನೈಜ ಜಿಡಿಪಿ ದರ ಲೆಕ್ಕ ಹಾಕಿದರೆ ಅದು ತುಂಬಾ ಕಡಿಮೆಯಾಗಿಬಿಡುತ್ತದೆ. ಸರ್ಕಾರದ ಕಂದಾಯ ಸಂಗ್ರಹಣೆ ನಾಮಿನಲ್ ಜಿಡಿಪಿಯನ್ನು ಆಧರಿಸಿರುತ್ತದೆ. ಜನರ ಸಂಪಾದನೆ ಹೆಚ್ಚಾದರೆ, ಆರ್ಥಿಕ ಚಟುವಟಿಕೆಗಳು ಚೆನ್ನಾಗಿ ನಡೆದರೆ, ಸರ್ಕಾರದ ತೆರಿಗೆ ಸಂಗ್ರಹಣೆ ಹೆಚ್ಚುತ್ತದೆ. ಅದು ಕಡಿಮೆಯಾದರೆ ತೆರಿಗೆಯೂ ಕಡಿಮೆಯಾಗುತ್ತದೆ. ಆರ್ಥಿಕ ಅಭಿವೃದ್ಧಿ ಕುಸಿದರೆ ಕಲ್ಯಾಣ ಕಾರ್ಯಕ್ರಮಗಳಿಗೂ ಹಣ ಹೊಂದಿಸುವುದಕ್ಕೆ ಸರ್ಕಾರಕ್ಕೆ ಕಷ್ಟವಾಗುತ್ತದೆ. ಸಾಲ ಕೂಡ ಜಿಡಿಪಿಯ ನಿರ್ದಿಷ್ಟ ಪ್ರಮಾಣವನ್ನು ಮೀರದಂತೆ ನೋಡಿಕೊಳ್ಳುತ್ತೇವೆ ಅಂತ ಒಪ್ಪಿಕೊಂಡಿದ್ದೇವೆ. ಹಾಗಾಗಿ ಇಷ್ಟ ಬಂದ ಹಾಗೆ ಸಾಲ ಮಾಡುವುದಕ್ಕೆ ಆಗುವುದಿಲ್ಲ. ಜೊತೆಗೆ ವಿತ್ತೀಯ ಕೊರತೆಯನ್ನು ಶೇಕಡಾ 3ಕ್ಕೆ ಇಳಿಸುವುದಕ್ಕೂ ಬದ್ಧರಾಗಿದ್ದೇವೆ. ಈಗ ಅದು ಶೇಕಡಾ 4.5% ಇದೆ. ಅದನ್ನು ಇಳಿಸಬೇಕಾದರೆ ಖರ್ಚನ್ನು ತಗ್ಗಿಸಿಕೊಳ್ಳುವುದು ಅನಿವಾರ್ಯ.

'ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ' ಅಂದರೆ ಆರ್ಥಿಕತೆಯಲ್ಲಿ ಸರ್ಕಾರ ತನ್ನ ಭಾಗವಹಿಸುವಿಕೆಯನ್ನು ಕಡಿಮೆ ಮಾಡಿಕೊಂಡು ದೇಶದ ಬೆಳವಣಿಗೆಯ ಹಾದಿಯನ್ನು ರೂಪಿಸುವುದಕ್ಕೆ ಖಾಸಗಿಯವರಿಗೆ ಅವಕಾಶ ಮಾಡಿಕೊಡಲಾಗುತ್ತದೆ ಅಂತ ಸರ್ಕಾರ ಘೋಷಿಸಿ ದಶಕಗಳೇ ಆಗಿವೆ. ಖಾಸಗಿ ಬಂಡವಾಳಿಗರನ್ನು ಉತ್ತೇಜಿಸುವುದಕ್ಕೆ ಕಾರ್ಪೊರೇಟ್ ತೆರಿಗೆಯಲ್ಲಿ ಕಡಿತ ಮಾಡಲಾಯಿತು, ಪಿಎಲ್ಐ (ಉತ್ಪಾದನೆ ಆಧಾರಿತ ಉತ್ತೇಜನ) ಅಂತಹ ಯೋಜನೆಗಳನ್ನು ತರಲಾಯಿತು. ಜಿಎಸ್‌ಟಿ ಸುಧಾರಿಸಲಾಯಿತು. ಮೂಲಸೌಕರ್ಯ ಹೆಚ್ಚಿಸುವುದಕ್ಕೆ ಹಣ ತೊಡಗಿಸಲಾಯಿತು. ಆದರೂ ಖಾಸಗಿಯವರಿಗೆ ಬಂಡವಾಳ ತೊಡಗಿಸುವುದಕ್ಕೆ ಉತ್ಸಾಹ ಬರುತ್ತಿಲ್ಲ. ಬಂಡವಾಳ ಹೂಡಿಕೆ ಅವರಿಂದ ಆಗುತ್ತಿಲ್ಲ. ಬೇಡಿಕೆಯ ಕೊರತೆ ಅದಕ್ಕೆ ಬಹುಮುಖ್ಯ ಕಾರಣ. ಜೊತೆಗೆ ಜಾಗತಿಕ ಆರ್ಥಿಕತೆಯಲ್ಲಿ ಅನಿಶ್ಚಿತತೆ ಇದೆ. ವಿದೇಶಿ ನೇರ ಹೂಡಿಕೆ, ರಫ್ತು ಇವೆಲ್ಲವನ್ನೂ ನೆಚ್ಚಿಕೊಂಡು ನಮ್ಮ ಆರ್ಥಿಕತೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆಂತರಿಕ ಮಾರುಕಟ್ಟೆಯನ್ನು ಬೆಳೆಸಬೇಕು. ಖಾಸಗಿಯವರು ಹೂಡಿಕೆ ಮಾಡುತ್ತಿಲ್ಲ, ಹಾಗಾಗಿ ಸರ್ಕಾರಕ್ಕೆ ಬೇರೆ ದಾರಿಯೇ ಇಲ್ಲ; ತಾನೇ ಬಂಡವಾಳ ಹೂಡಬೇಕು. ಸರ್ಕಾರ ಪ್ರಾರಂಭದಲ್ಲಿ ಹೆಚ್ಚಾಗಿಯೇ ಹೂಡಿಕೆ ಮಾಡಿತು, ಈಗಲೂ ಮಾಡುತ್ತಿದೆ. ಆದರೆ ಸರ್ಕಾರದ ವೆಚ್ಚ ಒಟ್ಟು ಮೊತ್ತದಲ್ಲಿ ಹೆಚ್ಚಾಗುತ್ತಿದ್ದರೂ, ಜಿಡಿಪಿಗೆ ಹೋಲಿಸಿದರೆ ಕ್ರಮೇಣ ಕಡಿಮೆಯಾಗುತ್ತಿದೆ. 2024–25ರಲ್ಲಿ ಬಜೆಟ್ಟಿನ ಒಟ್ಟು ವೆಚ್ಚ ಜಿಡಿಪಿಯ 14.3% ಇತ್ತು. 25–26ರಲ್ಲಿ ಅದು 14.2% ಆಯಿತು. ಈ ವರ್ಷ ಅದು 13.6% ಆಗಿದೆ. ಅಂದರೆ ಅದು ಕಡಿಮೆಯಾಗುತ್ತಿದೆ.

ಸರ್ಕಾರ ಪ್ರತಿ ವರ್ಷ ತನ್ನ ಒಟ್ಟು ಖರ್ಚಿನಲ್ಲಿ ರೆವೆನ್ಯೂ ಖರ್ಚನ್ನು ಅಂದರೆ ಸಂಬಳ, ಪಿಂಚಣಿ ಇತ್ಯಾದಿ ತನ್ನ ದೈನಂದಿನ ಖರ್ಚನ್ನು ಕಡಿಮೆ ಮಾಡಿಕೊಳ್ಳುತ್ತಿದೆ. ರಸ್ತೆ, ಬ್ರಿಡ್ಜ್ ಇತ್ಯಾದಿ ದೀರ್ಘಕಾಲೀನ ಉತ್ಪಾದಕ ಸ್ವತ್ತುಗಳ ನಿರ್ಮಾಣಕ್ಕೆ ಹೆಚ್ಚೆಚ್ಚು ಹಣ ಹೂಡತೊಡಗಿದೆ. 2014–15ರಲ್ಲಿ ರೆವೆನ್ಯೂ ವೆಚ್ಚ ಒಟ್ಟು ಬಜೆಟ್ಟಿನ ಶೇಕಡಾ 88 ರಷ್ಟಿತ್ತು. 2026–27ರಲ್ಲಿ ಅದು 77% ಗೆ ಇಳಿದಿದೆ. ಈ 11% ಇಳಿತದಲ್ಲಿ ಸಬ್ಸಿಡಿಯ ಖರ್ಚಿನಲ್ಲಿ ಅತಿ ಹೆಚ್ಚು ಅಂದರೆ 7% ಕಡಿತವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಬಂಡವಾಳ ಖರ್ಚು 13% ಇದ್ದುದು 23% ಆಗಿದೆ. ಆದರೆ ಅದರ ಏರುತ್ತಿರುವ ಪ್ರಮಾಣವೂ ವರ್ಷದಿಂದ ವರ್ಷಕ್ಕೆ ತಗ್ಗುತ್ತಿದೆ. 2023–24ರಲ್ಲಿ 28.3% ರಷ್ಟು ಏರಿಕೆಯಾಗಿತ್ತು. ಕಳೆದ ವರ್ಷ ಏರಿಕೆಯಾಗಿದ್ದು ಕೇವಲ 4.2%. ಆದರೆ ಬಜೆಟ್ಟಿನ ಅಂದಾಜಿನ ಪ್ರಕಾರ 10.5% ಇರಬೇಕಿತ್ತು. ಈ ವರ್ಷ ಅದು 11.5% ಏರಿಕೆಯಾಗುತ್ತದೆ ಎನ್ನುವ ಅಂದಾಜಿದೆ. ಹಿಂದಿನ ವರ್ಷಗಳಂತೆಯೇ ಈ ವರ್ಷವೂ ಆದರೆ ಅಂತಿಮವಾಗಿ ಅದು 5% ರಿಂದ 6% ರಷ್ಟಾಗಬಹುದು.

ಬಂಡವಾಳ ವೆಚ್ಚವನ್ನು ಹೆಚ್ಚಿಸಿದರೆ ಅಂದರೆ ಮೂಲಸೌಕರ್ಯ ಒದಗಿಸಿದರೆ ಖಾಸಗಿಯವರು ಹೂಡಿಕೆ ಮಾಡಲು ಮುಂದೆ ಬರುತ್ತಾರೆ ಎನ್ನುವುದು ಸಾಮಾನ್ಯ ನಂಬಿಕೆ. ಆದರೆ ಹಾಗೆ ಆಗುತ್ತಿಲ್ಲ. ಖಾಸಗಿ ವಲಯದವರು ಹೂಡಿಕೆ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಬಂಡವಾಳ ತೊಡಗಿಸುವುದಕ್ಕೆ ಅವರ ಸರಕುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿರಬೇಕು. ಆದರೆ ನಮ್ಮ ಆರ್ಥಿಕತೆಯಲ್ಲಿ ಬೇಡಿಕೆ ಹೆಚ್ಚುತ್ತಿಲ್ಲ.

ನಿರುದ್ಯೋಗ, ನೈಜ ಕೂಲಿಯ ಇಳಿತ ಇತ್ಯಾದಿ ಅಂಶಗಳು ಸೇರಿಕೊಂಡು ಜನರ ಕೊಳ್ಳುವ ಶಕ್ತಿಯನ್ನು ಅಂದರೆ ಬೇಡಿಕೆಯನ್ನು ಕುಗ್ಗಿಸಿವೆ. ಜನರಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬಹುದು ಅಂದುಕೊಂಡು ವರಮಾನ ತೆರಿಗೆ ಮಿತಿಯನ್ನು 7 ಲಕ್ಷದಿಂದ 12 ಲಕ್ಷಕ್ಕೆ ಏರಿಸಲಾಗಿತ್ತು. ಆದರೆ ಇಂತಹ ಕಾರ್ಯಕ್ರಮಗಳಿಂದ ಅನುಕೂಲವಾಗುವುದು ಮೇಲಿನ ಶೇಕಡಾ 7 ರಿಂದ 8% ಜನರಿಗೆ ಮಾತ್ರ. ನಿಜವಾಗಿ ಬೇಡಿಕೆ ಏರಬೇಕಾದರೆ ಸಾಮಾನ್ಯ ಜನರ ಕೊಳ್ಳುವ ಶಕ್ತಿ ಹೆಚ್ಚಬೇಕು, ಅಸಂಘಟಿತ ವಲಯ ಬಲಗೊಳ್ಳಬೇಕು.

ಇದು ಖರ್ಚಿನ ಕಥೆಯಾಯಿತು. ಇನ್ನು ಖರ್ಚಿಗೆ ಬೇಕಾದ ಹಣವನ್ನು ಒಟ್ಟು ಮಾಡುವ ಕೆಲಸ. ತೆರಿಗೆ ಸಂಗ್ರಹಣೆಯೂ ನಿರೀಕ್ಷಿತ ಪ್ರಮಾಣದಲ್ಲಿ ಆಗುತ್ತಿಲ್ಲ. ಕಳೆದ ವರ್ಷ ಬಜೆಟ್ ಅಂದಾಜಿಗಿಂತ ಸುಮಾರು 120 ಸಾವಿರ ಕೋಟಿಯಷ್ಟು ಕಡಿಮೆ ಸಂಗ್ರಹವಾಗಿತ್ತು. ಜಿಎಸ್‌ಟಿ ಸಂಗ್ರಹವೂ ಸಂಭ್ರಮ ಪಡುವ ಸ್ಥಿತಿಯಲ್ಲಿಲ್ಲ. ಪ್ರತಿ ವರ್ಷ ಹೆಚ್ಚುತ್ತಿದೆ, ಆದರೆ ಹೆಚ್ಚಳದ ಪ್ರಮಾಣ ಕಡಿಮೆಯಾಗುತ್ತಿದೆ. 2026ರಲ್ಲಿ ಜಿಎಸ್‌ಟಿ ಹಿಂದಿನ ವರ್ಷಕ್ಕಿಂತ 22.1 ಲಕ್ಷ ಕೋಟಿಯಷ್ಟು ಹೆಚ್ಚು ಸಂಗ್ರಹವಾಗಿತ್ತು. 2024ರಲ್ಲಿ 2023ಕ್ಕಿಂತ 11.7% ರಷ್ಟು ಹೆಚ್ಚು ಸಂಗ್ರಹವಾಗಿತ್ತು. 2025ರಲ್ಲಿ ಅದು 9.1% ಆಗಿತ್ತು. 2026ರಲ್ಲಿ ಅದು 6.7% ಆಗಿದೆ. ಅಂದರೆ ಜಿಎಸ್‌ಟಿ ಸಂಗ್ರಹದ ಏರಿಕೆಯೂ ಸುಮಾರಾಗಿ ಜಿಡಿಪಿಯಷ್ಟೇ ಆಗುತ್ತಿದೆ. ಅಂದರೆ ಕಂದಾಯ ಹೆಚ್ಚಿನ ವಿತ್ತೀಯ ಅವಕಾಶವನ್ನು ಸರ್ಕಾರಕ್ಕೆ ನೀಡುತ್ತಿಲ್ಲ.

ಸಂಗ್ರಹ ಕಡಿಮೆಯಾದರೆ ಸರ್ಕಾರ ಖರ್ಚು ಕಡಿಮೆ ಮಾಡುತ್ತದೆ. ಅದರ ಹೊಡೆತ ಬೀಳುವುದು ಅಂತಿಮವಾಗಿ ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ಗ್ರಾಮೀಣ ಬೆಳವಣಿಗೆ ಇತ್ಯಾದಿ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ. ಕಳೆದ ವರ್ಷವೂ ಇದೇ ಆಗಿತ್ತು. 2025–26ರ ಬಜೆಟ್ಟಿನಲ್ಲಿ ಗ್ರಾಮೀಣ ಅಭಿವೃದ್ಧಿಗೆ 2.65 ಲಕ್ಷ ಕೋಟಿ ಘೋಷಿಸಲಾಗಿತ್ತು, ಆದರೆ ಖರ್ಚಾಗಿದ್ದು 2.12 ಲಕ್ಷ ಕೋಟಿ. ಅಂದರೆ 20% ಕಡಿತ ಮಾಡಲಾಗಿತ್ತು. ಜಲ ಜೀವನ್ ಯೋಜನೆಗೆ 67,000 ಕೋಟಿ ಅಂದಾಜಿತ್ತು, ಆದರೆ ನಿಜವಾಗಿ ಖರ್ಚು ಮಾಡಿದ್ದು ಕೇವಲ 17,000 ಕೋಟಿ. ಈ ವರ್ಷವೂ ಅದೇ ಆಗುತ್ತಿದೆ.

ನಮ್ಮಲ್ಲಿ ಕೃಷಿ ತುಂಬಾ ಮುಖ್ಯವಾದ ಕ್ಷೇತ್ರ. ಬಡವರು ಅಲ್ಲಿ ಹೆಚ್ಚಿಗೆ ಇದ್ದಾರೆ. ಅದು ಅತಿ ಹೆಚ್ಚು ಉದ್ಯೋಗವನ್ನು ಸೃಷ್ಟಿಸುತ್ತಿರುವ ಕ್ಷೇತ್ರ. ಇಂದು ಜಿಡಿಪಿ ಉತ್ತಮವಾಗಿ ಕಾಣುವುದಕ್ಕೆ, ಹಣದುಬ್ಬರ ನಿಯಂತ್ರಣದಲ್ಲಿರುವಂತೆ ತೋರುವುದಕ್ಕೆ ಕಾರಣ ಕೃಷಿಯಲ್ಲಿ ಉತ್ತಮ ಫಸಲು ಬಂದಿರುವುದು ಹಾಗೂ ರೈತರು ಕನಿಷ್ಠ ಬೆಲೆಗಿಂತ ಕಡಿಮೆ ಬೆಲೆಗೆ ಮಾರಿ ಸಂಕಷ್ಟದಲ್ಲಿರುವುದು. ಕೃಷಿ ಕ್ಷೇತ್ರವನ್ನು ಇಂದು ಹೆಚ್ಚೆಚ್ಚು ಜನ ಉದ್ಯೋಗಕ್ಕಾಗಿ ಆಶ್ರಯಿಸುತ್ತಿದ್ದಾರೆ ಅಂದರೆ ಕೃಷಿಯೇತರ ಕ್ಷೇತ್ರಗಳು ದುರ್ಬಲವಾಗಿವೆ ಎಂದೇ ಅರ್ಥ. ಆರ್ಥಿಕತೆಗೆ ಬೆನ್ನೆಲುಬಾಗಿರುವ ಕೃಷಿ ಸಂಕಷ್ಟದಲ್ಲಿರುವ ಕ್ಷೇತ್ರವೂ ಹೌದು. ಕೃಷಿಗೆ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಕೇವಲ ಶೇಕಡಾ 2ರಿಂದ 3ರಷ್ಟು ಮೊತ್ತವನ್ನು ಹೆಚ್ಚಿಸಲಾಗಿದೆ. ಹಣದುಬ್ಬರದ ದರವನ್ನು ಗಣನೆಗೆ ತೆಗೆದುಕೊಂಡರೆ ಇದು ಕಡಿತವೆಂದೇ ಹೇಳಬೇಕು. ಈ ವರ್ಷ ಮನರೇಗಾಕ್ಕೆ 95,692 ಕೋಟಿ ಘೋಷಿಸಿದ್ದಾರೆ. ಈಗ ಮನರೇಗಾ ಇಲ್ಲ, ಬದಲಿಗೆ ವಿಬಿ ಜಿ ರಾಂ ಜಿ ತರಲಾಗಿದೆ. ಹಣ–ಕಾಸು ಸಚಿವರು ತಮ್ಮ 90 ನಿಮಿಷಗಳ ಬಜೆಟ್ ಭಾಷಣದಲ್ಲಿ ಇದರ ಹೆಸರನ್ನು ಒಮ್ಮೆಯೂ ಉಲ್ಲೇಖಿಸಲಿಲ್ಲ. 125 ದಿನಗಳ ಕೆಲಸ ನೀಡಲು ಕನಿಷ್ಠ 3.84 ಲಕ್ಷ ಕೋಟಿ ಬೇಕಾಗುತ್ತದೆ. ಕೇಂದ್ರದ ಪಾಲು 60% ಅಂದರೆ ಬಜೆಟ್ಟಿನಲ್ಲಿ 2.3 ಲಕ್ಷ ಕೋಟಿ ರೂಪಾಯಿ ಇಡಬೇಕಿತ್ತು. ಆದರೆ ಈಗ ನಿಗದಿ ಮಾಡಿರುವ ಹಣದಿಂದ ವರ್ಷಕ್ಕೆ ಕೇವಲ 52 ದಿನಗಳ ಕೆಲಸವನ್ನು ನೀಡಬಹುದು. ಅಷ್ಟೇ ಅಲ್ಲ, ರಾಜ್ಯ ಸರ್ಕಾರಗಳು ಶೇಕಡಾ 40ರಷ್ಟು ಖರ್ಚನ್ನು ಭರಿಸಬೇಕು. ಬಹುತೇಕ ರಾಜ್ಯಗಳಿಗೆ ಅಷ್ಟು ಹಣ ಹೊಂದಿಸುವುದಕ್ಕೆ ಆಗುವುದಿಲ್ಲ. ಹಾಗಾಗಿ ಇದು ಯಶಸ್ವಿಯಾಗುವುದು ಕಷ್ಟ. ಮನರೇಗಾದಿಂದ ಅದರ ಎಲ್ಲಾ ಮಿತಿಗಳ ನಡುವೆಯೂ ಒಂದಿಷ್ಟು ಒಳ್ಳೆಯ ಕೆಲಸ ಆಗಿತ್ತು. ಕಷ್ಟ ಕಾಲದಲ್ಲಿ ಜನರಿಗೆ ಉದ್ಯೋಗ ಸಿಕ್ಕಿತ್ತು. ಇಷ್ಟೊಂದು ದೊಡ್ಡ ಜನಪರ ಕಲ್ಯಾಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಾಧಿಸಬಹುದು ಎನ್ನುವುದಕ್ಕೆ ಅದು ದೊಡ್ಡ ಪುರಾವೆಯಾಗಿತ್ತು.

ಇನ್ನು ಅತ್ಯಂತ ಪ್ರಮುಖ ಕ್ಷೇತ್ರಗಳಾದ ಶಿಕ್ಷಣ ಹಾಗೂ ಆರೋಗ್ಯದ ಕಥೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಈ ವರ್ಷ ಬಜೆಟ್ಟಿನಲ್ಲಿ ಶಿಕ್ಷಣಕ್ಕೆ 1.39 ಲಕ್ಷ ಕೋಟಿ ಗೊತ್ತು ಮಾಡಲಾಗಿದೆ. ಅದು ಜಿಡಿಪಿಯ ಶೇಕಡಾ 0.35 ರಷ್ಟಾಗುತ್ತದೆ. ಖಾಸಗಿ ಹೂಡಿಕೆಯೂ ಸೇರಿದರೆ 4.5%ರಷ್ಟು ಆಗುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಅದು ಕನಿಷ್ಠ 6% ಆದರೂ ಇರಬೇಕು. ಜನರ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಶಿಕ್ಷಣ ಹಾಗೂ ಆರೋಗ್ಯ ಎರಡನ್ನೂ ಅನಿವಾರ್ಯವಾಗಿ ಸುಧಾರಿಸಬೇಕು.

ಆರೋಗ್ಯಕ್ಕಾಗಿ ಸರ್ಕಾರ ಮಾಡುತ್ತಿರುವ ಖರ್ಚು ಕೂಡ ತುಂಬಾ ಕಡಿಮೆ. ಅಷ್ಟೇ ಅಲ್ಲ, ಅದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಅದು 2021ರಲ್ಲಿ ಜಿಡಿಪಿಯ 0.37% ಅಷ್ಟಿತ್ತು. ಈ ವರ್ಷದ ಬಜೆಟ್ಟಿನಲ್ಲಿ ಅದು 0.27% ಆಗಿದೆ. ಇನ್ನೂ ಕಡಿಮೆಯಾದರೆ ಆಶ್ಚರ್ಯವಿಲ್ಲ. ಅದರಲ್ಲೂ ಜನಸಾಮಾನ್ಯ–ರಿಗೆ ಅನುಕೂಲವಾಗಬಹುದಾದ ರಾಷ್ಟ್ರೀಯ ಆರೋಗ್ಯ ಮಿಷನ್, ಪ್ರಧಾನಮಂತ್ರಿ ಸ್ವಾಸ್ತ್ಯ ಸುರಕ್ಷಾ ಯೋಜನೆ, ಪೌಷ್ಟಿಕತೆಗೆ ಸಂಬಂಧಿಸಿದ ಯೋಜನೆಗಳು, ಆರೋಗ್ಯ ಸಂಶೋಧನೆ ಇವೆಲ್ಲಕ್ಕೂ ಅನುದಾನದಲ್ಲಿ ಕಡಿತವಾಗಿದೆ. ವಾಣಿಜ್ಯ ಹಿತಾಸಕ್ತಿ ಇರುವ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ, ಡಿಜಿಟಲ್ ಆರೋಗ್ಯ ಮಿಷನ್ ಇವೆಲ್ಲಕ್ಕೂ ಹೆಚ್ಚಿನ ಹಣವನ್ನು ಒದಗಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ಅವುಗಳಿಗೆ ಮೀಸಲಿಟ್ಟಿದ್ದ ಹಣವನ್ನು ಪೂರ್ಣವಾಗಿ ಬಳಸಿಯೂ ಇರಲಿಲ್ಲ. ರಾಷ್ಟ್ರೀಯ ಆರೋಗ್ಯ ಮಿಷನ್‌ಗೆ ಹೆಚ್ಚಿನ ಬೇಡಿಕೆ ಇದೆ. ಆಶಾ ಕಾರ್ಯಕರ್ತೆಯರಿಗೆ ವೇತನವನ್ನು ನೀಡುವುದಕ್ಕೂ ಅದು ಬಳಕೆಯಾಗುತ್ತದೆ. ಅದರಲ್ಲಿ ಕಡಿತ ಮಾಡಲಾಗಿದೆ. ಜನ ಕಲ್ಯಾಣ ಕಾರ್ಯಕ್ರಮಕ್ಕೆ ಸಂಬಂಧಿಸಿದ 18 ಕಾರ್ಯಕ್ರಮಗಳಲ್ಲಿ 17ಕ್ಕೆ ಹಣ ಕಡಿತ ಮಾಡಲಾಗಿದೆ.

ಸರ್ಕಾರದ ಸಮಸ್ಯೆ ಅಂದರೆ ಜನರನ್ನು 'ಖರ್ಚು' ಅಂತ ನೋಡಲಾಗುತ್ತದೆ. ಅವರನ್ನು 'ಆಸ್ತಿ' ಅಂತ ನೋಡಬೇಕು. ಬೇಡಿಕೆ ಸೃಷ್ಟಿಯಾಗುವುದೇ ಅವರಿಂದ. ಅವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಕಡೆ ಗಮನಕೊಡಬೇಕು. ಬೇಡಿಕೆ ಹೆಚ್ಚದಿದ್ದರೆ ಬಂಡವಾಳ ಹೂಡುವುದಕ್ಕೆ ಉತ್ತೇಜನವಿರುವುದಿಲ್ಲ. ಕೇವಲ ತೆರಿಗೆ ಕಡಿತ ಮಾಡಿದರೆ, ರಸ್ತೆಗಳನ್ನು ನಿರ್ಮಿಸಿದರೆ ಹೂಡಿಕೆ ಹೆಚ್ಚುವುದಿಲ್ಲ. ವರಮಾನ ತೆರಿಗೆ ರಿಯಾಯಿತಿಯಂತಹ ಕ್ರಮಗಳು ತಲುಪುವುದು ಕೇವಲ ಮೇಲಿನ ಶೇಕಡಾ 8ರಷ್ಟು ಜನಕ್ಕೆ ಮಾತ್ರ. ವರಮಾನ ತೆರಿಗೆ ಕಟ್ಟುವವರೇ ಅವರು. ಹಣ ಉಳಿದರೆ ಅವರು ಕೊಳ್ಳುವುದು ಆಮದು ಪದಾರ್ಥಗಳನ್ನು. ಅದರಿಂದ ಆಮದು ಹೆಚ್ಚುತ್ತದೆ. ದೇಶದ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಬೇಕಾದರೆ ಸಾಮಾನ್ಯ ಜನರ ಕೊಳ್ಳುವ ಶಕ್ತಿ ಹೆಚ್ಚಬೇಕು, ಅವರ ವರಮಾನ ಹೆಚ್ಚಬೇಕು. ಶಿಕ್ಷಣ ಮತ್ತು ಆರೋಗ್ಯ ಇವೆಲ್ಲವೂ ಕೈಗೆಟುಕುವಂತಾಗಬೇಕು. ಸರ್ಕಾರ ಅದಕ್ಕೆ ಹೆಚ್ಚು ಗಮನಕೊಡಬೇಕು. ಅದನ್ನು ಸರ್ಕಾರ ಮಾಡಿಲ್ಲ.

ಈ ಸರ್ಕಾರದ ಮತ್ತೊಂದು ಸಮಸ್ಯೆಯೆಂದರೆ ಎಲ್ಲವನ್ನೂ ಕೇಂದ್ರೀಕರಿಸುವುದು. ಅಧಿಕಾರ, ಹಣ, ಆಡಳಿತ ಎಲ್ಲವನ್ನೂ ತನ್ನ ಕೈಯಲ್ಲೇ ಇಟ್ಟುಕೊಳ್ಳುವ ಬಯಕೆ. ಬಹುತೇಕ ಯೋಜನೆಗಳನ್ನು ರೂಪಿಸುವುದು ಅದೇ, ಕೊನೆಗೆ ಜಾರಿಗೊಳಿಸುವ ಜವಾಬ್ದಾರಿಯನ್ನು ರಾಜ್ಯಗಳ ಹೆಗಲಿಗೆ ಹಾಕುತ್ತದೆ. ಮನರೇಗಾ ಉದಾಹರಣೆ

ಗಮನಿಸಿದರೆ ಕೇಂದ್ರದ ಮನಸ್ಥಿತಿ ತಿಳಿಯುತ್ತದೆ. ಈವರೆಗೆ ಕೂಲಿಯ ಸಂಪೂರ್ಣ ಖರ್ಚನ್ನು ಕೇಂದ್ರ ನೋಡಿಕೊಳ್ಳುತ್ತಿತ್ತು, ಈಗ ರಾಜ್ಯಗಳಿಗೆ 40% ಖರ್ಚನ್ನು ವಹಿಸಿದೆ. ಈವರೆಗೆ ಏನು ಮಾಡಬೇಕು, ಎಲ್ಲಿ ಮಾಡಬೇಕು ಮತ್ತು ಹೇಗೆ ಮಾಡಬೇಕು ಎನ್ನುವುದನ್ನು ರಾಜ್ಯಗಳು ನಿರ್ಧರಿಸುತ್ತಿದ್ದವು, ಈಗ ಕೇಂದ್ರ ನಿರ್ಧರಿಸುತ್ತದೆ. ಈವರೆಗೆ ಉದ್ಯೋಗ ಜನರ ಹಕ್ಕಾಗಿತ್ತು, ಈಗ ಭಿಕ್ಷೆಯಾಗಿದೆ. ಬಹುತೇಕ ಯೋಜನೆಗಳು, ನಿರ್ಧಾರಗಳ ಪರಿಣಾಮ ರಾಜ್ಯಗಳ ಮೇಲೆ ಆಗುತ್ತದೆ. ಆದರೆ ಯಾವುದಕ್ಕೂ ರಾಜ್ಯಗಳೊಂದಿಗೆ ಚರ್ಚಿಸುವುದಿಲ್ಲ. ಕಾರ್ಪೊರೇಟ್ ತೆರಿಗೆ ಕಡಿತ ಮಾಡಿದಾಗ ರಾಜ್ಯಗಳಿಗೂ ತೆರಿಗೆ 40% ಕಡಿಮೆಯಾಗುತ್ತದೆ. ಅದನ್ನು ರಾಜ್ಯಗಳು ಹೊಂದಿಸಿಕೊಳ್ಳಬೇಕು. ಸಾಮಾಜಿಕ ಕಾರ್ಯಕ್ರಮಗಳನ್ನು ಕೇಂದ್ರ ಕಡಿತ ಮಾಡಿದಾಗ ರಾಜ್ಯಗಳೇ ಅವನ್ನು ನಡೆಸಬೇಕಾಗುತ್ತದೆ. ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಹಣ ಕಡಿತ ಮಾಡಿದರೆ ಮತ್ತೆ ರಾಜ್ಯಗಳಿಗೆ ತೊಂದರೆಯಾಗುತ್ತದೆ. ರಾಜ್ಯಗಳಿಗೆ ನಿಭಾಯಿಸುವುದಕ್ಕೆ ಆಗದಿದ್ದರೆ ಅಂತಿಮವಾಗಿ ಜನರಿಗೆ ತೊಂದರೆಯಾಗುತ್ತದೆ. ರಾಜ್ಯಗಳ ಹಾಗೂ ಜನರ ಬೆಳವಣಿಗೆಯಾದರಷ್ಟೇ ರಾಷ್ಟ್ರದ ಬೆಳವಣಿಗೆ ಸಾಧ್ಯ ಎನ್ನುವ ಸರಳ ಸತ್ಯ ಕೇಂದ್ರಕ್ಕೆ ಪಥ್ಯವಾಗುತ್ತಿಲ್ಲ. ಒಂದು ಆರ್ಥಿಕತೆ ಬೆಳೆಯುತ್ತಿದೆ ಅಂದರೆ ಜನರ ನೈಜ ವರಮಾನ ಹೆಚ್ಚಬೇಕು, ಉದ್ಯೋಗ ಹೆಚ್ಚಬೇಕು, ಆರೋಗ್ಯ ಸುಧಾರಿಸಬೇಕು, ರಾಜ್ಯಗಳು ಅಭಿವೃದ್ಧಿಯಾಗಬೇಕು ಮತ್ತು ಗ್ರಾಮಗಳು ಬೆಳೆಯಬೇಕು. ಆದರೆ ಬಜೆಟ್ಟುಗಳು ಪ್ರತಿ ವರ್ಷ ಸಾಮಾನ್ಯರ ಹಿತಾಸಕ್ತಿಯಿಂದ ದೂರ ದೂರ ಸರಿಯುತ್ತಿವೆ.

ಟಿ ಎಸ್ ವೇಣುಗೋಪಾಲ್